ಭಾನುವಾರ, ಮೇ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 125 | ಪುಟ 22

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಲಕ್ಷಾಂತರ ಪ್ರವಾಸಿಗರು ಕಾಲಿಟ್ಟರುವ ಮಡಿಕೇರಿಯ ರಾಜಾಸೀಟ್‌ನ ಒಡಲು ಬಚ್ಚಿಟ್ಟುಕೊಂಡಿರುವ ಅಚ್ಚರಿ ಏನು ಗೊತ್ತೇ?



ನಿಜ್ಜರ್ ಹತ್ಯೆ: ಮೂವರು ಭಾರತೀಯರ ಬಂಧನ 8

ಟನ್‌ಗೆ ಕನಿಷ್ಠ ರಫ್ತು ದರ ₹45,860: ಶೇ 40ರಷ್ಟು ಸುಂಕ ನಿಗದಿ
ಈರುಳ್ಳಿ ರಫ್ತು ನಿಷೇಧ ವಾಪಸ್ 8

ಸಂತ್ರಸ್ತೆಯರ ಬೆಂಬಲಕ್ಕೆ ನಿಲ್ಲಿ: ರಾಹುಲ್ ಪತ್ರ 5

ಮಗ ಪ್ರಜ್ವಲ್ ರಕ್ಷಣೆಗೆ ತಂದೆಯ ಸಂಚು • ಪತ್ನಿ ಭವಾನಿಗೂ ನೋಟಿಸ್ ಸಾಧ್ಯತೆ

ಗೌಡರ ಮನೆಯಲ್ಲೇ ರೇವಣ್ಣ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿ, ಅಕ್ರಮ ಬಂಧನದಲ್ಲಿಟ್ಟು ಹಲ್ಲೆ ಮಾಡಿದ್ದರು' ಎಂಬ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ (65) ಅವರನ್ನು ಎಸ್‌ಐಟಿ ಅಧಿಕಾರಿಗಳು ಶನಿವಾರ ಸಂಜೆ ಬಂಧಿಸಿದ್ದಾರೆ.

ಮೈಸೂರು ಜಿಲ್ಲೆಯ ಕೆ.ಆರ್. ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧನ ಭೀತಿಯಲ್ಲಿದ್ದ ಎಚ್.ಡಿ. ರೇವಣ್ಣ ಗುರುವಾರದಿಂದಲೇ ತಲೆಮರೆಸಿಕೊಂಡಿದ್ದರು. ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ತಂದೆ ಎಚ್.ಡಿ.ದೇವೇಗೌಡ ಅವರ ಪದ್ಮನಾಭನಗರ ಮನೆಯಲ್ಲಿ ರೇವಣ್ಣ ಆಶ್ರಯ ಪಡೆದುಕೊಂಡಿದ್ದರು.

5ನೇ ಪುಟ ನೋಡಿ

ಬೆಂಗಳೂರಿನಲ್ಲಿ ಬಂಧಿಸಲಾದ ಎಚ್‌ಡಿ.ರೇವಣ್ಣ ಅವರನ್ನು ಅಧಿಕಾರಿಗಳು ಎಸ್‌ಐಟಿ ಕಚೇರಿಗೆ ಕರೆದೊಯ್ದರು – ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ರೇವಣ್ಣ ಆಪ್ತನ ಮನೆಯಲ್ಲೇ ಮಹಿಳೆ ಪತ್ತೆ

ಮೈಸೂರು/ಹುಣಸೂರು: ಎಚ್.ಡಿ. ರೇವಣ್ಣ ಮನೆಯಲ್ಲಿ ಕೆಲಸಕ್ಕಿದ್ದ ಕೆ.ಆರ್. ನಗರದ ಮಹಿಳೆಯ ಅಪಹರಣ ಪ್ರಕರಣ ತಿರುವು ಪಡೆದುಕೊಂಡಿದ್ದು, ಆಕೆಯನ್ನು, ರೇವಣ್ಣ ಆಪ್ತ ರಾಜಗೋಪಾಲ್ ಅವರ ಹುಣಸೂರು ತಾಲ್ಲೂಕಿನ ಕಾಳೇನಹಳ್ಳಿಯ ತೋಟದ ಮನೆಯಲ್ಲಿ ಶನಿವಾರ ಎಸ್‌ಐಟಿ ತಂಡ ಪತ್ತೆ ಮಾಡಿದೆ.

5ನೇ ಪುಟ ನೋಡಿ

ಪ್ರಜ್ವಲ್‌ಗಾಗಿ ಬ್ಲೂ ಕಾರ್ನರ್ ನೋಟಿಸ್?

ಪ್ರಜ್ವಲ್ ರೇವಣ್ಣ

ಹಲವು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ಆರೋಪ ಎದುರಿಸುತ್ತಿದ್ದು, ತಲೆಮರೆಸಿಕೊಂಡಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪತ್ತೆಗೆ ಸಿಬಿಐ ನೆರವಿನಲ್ಲಿ 'ಬ್ಲೂ ಕಾರ್ನರ್ ನೋಟಿಸ್' ಜಾರಿಗೊಳಿಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ಮುಂದಾಗಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ತನಿಖೆಯಲ್ಲಿನ ಪ್ರಗತಿ ಕುರಿತು ಮಾಹಿತಿ ಪಡೆದರು. ಪ್ರಜ್ವಲ್ ಪತ್ತೆಗೆ ಮಾಹಿತಿ ಕೋರಿ ಸಿಬಿಐ ಮೂಲಕ ಬ್ಲೂ ಕಾರ್ನರ್ ನೋಟಿಸ್ ಜಾರಿಗೊಳಿಸುವುದಾಗಿ ಎಸ್‌ಐಟಿ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯ ಹೇಳಿದೆ.

'ಪ್ರಜ್ವಲ್ ನಾಪತ್ತೆಯಾಗಿದ್ದು, ಪತ್ತೆಗಾಗಿ ಲುಕ್ ಔಟ್ ನೋಟಿಸ್ ಜಾರಿಗೊಳಿಸಲಾಗಿದೆ. ಬ್ಲೂ ಕಾರ್ನರ್ ನೋಟಿಸ್ ಜಾರಿಯಾದರೆ ತನಿಖೆಗೆ ಮತ್ತಷ್ಟು ವೇಗ ದೊರಕುತ್ತದೆ. ವಿಮಾನ ನಿಲ್ದಾಣಗಳಲ್ಲೇ ಬಂಧಿಸಿ ಕರೆತರಬಹುದು ಎಂಬ ಮಾಹಿತಿಯನ್ನು ಎಸ್‌ಐಟಿ ಹಂಚಿಕೊಂಡಿದೆ' ಎಂದು ಮುಖ್ಯಮಂತ್ರಿ ಸಚಿವಾಲಯ ಹೇಳಿದೆ. 'ಪ್ರಜ್ವಲ್‌ನನ್ನು ತ್ವರಿತವಾಗಿ ಬಂಧಿಸಬೇಕು. ಈ ಪ್ರಕರಣದ ತನಿಖೆಯಲ್ಲಿ ನಿರ್ಲಕ್ಷ್ಯ, ವಿಳಂಬ ಧೋರಣೆ ಅನುಸರಿಸಿದರೆ ಕಠಿಣ ಕ್ರಮ ಜರುಗಿಸಲಾಗುವುದು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರಾಯಚೂರಲ್ಲಿ ಗರಿಷ್ಠ ಉಷ್ಣಾಂಶ 45 ಡಿಗ್ರಿ ಸೆ. ದಾಖಲು

ಬಿಸಿಲಿನ ಝಳ: ಐವರ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯಲ್ಲಿ ಗರಿಷ್ಠ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ಶನಿವಾರವೂ ಮುಂದುವರಿದಿದ್ದು, ಕಳೆದ 24 ಗಂಟೆಗಳಲ್ಲಿ ಪ್ರಖರ ಬಿಸಿಲಿನ ಝಳದಿಂದ ಬಳಲಿ ಐದು ಜನರು ಮೃತಪಟ್ಟಿದ್ದಾರೆ.

ಸಿಂಧನೂರು ತಾಲ್ಲೂಕಿನ ಹುಡಾ ಗ್ರಾಮದಲ್ಲಿ ವೀರೇಶ ಕನಕಪ್ಪ (70), ಗಂಗಮ್ಮ ಹನುಮಂತ (57), ಪ್ರದೀಪ ತಿಮ್ಮಣ್ಣ ಪೂಜಾರಿ (19) ಮಲಗಿದ್ದಲ್ಲೇ ಮೃತಪಟ್ಟಿದ್ದಾರೆ.

6ನೇ ಪುಟ ನೋಡಿ

ರಣ ಬಿಸಿಲು: ಜನಜೀವನ ಅಸ್ತವ್ಯಸ್ತ

ಅತಿಯಾದ ಬಿಸಿಲಿನಿಂದಾಗಿ ಜಿಲ್ಲೆಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಕೃಷ್ಣಾ, ತುಂಗಭದ್ರಾ ನದಿಗಳು ಬತ್ತಿವೆ. ಸಾವಿರಾರು ಎಕರೆ ಕೃಷಿ ಭೂಮಿ ಮರುಭೂಮಿಯಂತೆ ಕಾಣುತ್ತಿದೆ.

ಬಿಸಿಲಿನ ಧಗೆ ಜಿಲ್ಲೆಯ ಜನರನ್ನು ಹಿಂಡಿ ಹಿಪ್ಪೆ ಮಾಡಿದೆ. ಬೆಳಗಾಗುತ್ತಲೇ ಪ್ರಖರ ಬಿಸಿಲು ಕಾಣಿಸಿಕೊಳ್ಳುತ್ತಿದೆ. 10 ಗಂಟೆಯ ನಂತರ ಜನ ಮನೆಗಳಿಂದ ಹೊರಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ನಗರದಲ್ಲಿ ಮಾರುಕಟ್ಟೆ ಪ್ರದೇಶಗಳು ಬಿಕೋ ಎನ್ನುತ್ತಿವೆ.

ಗ್ರಾಮೀಣ ಪ್ರದೇಶದಲ್ಲಿ ತಗಡಿನ ಶೆಡ್‌ಗಳಲ್ಲಿ ವಾಸವಾಗಿರುವ ಬಡವರು ಬೃಹತ್ ಮರಗಳು, ಮಂದಿರಗಳ ಆವರಣದಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ನಗರಪ್ರದೇಶದಲ್ಲಿ ಕಾಂಕ್ರೀಟ್ ಕಟ್ಟಡಗಳು ಬಿಸಿಹಬೆ ಹೊರ ಸೂಸುತ್ತಿವೆ. ಎಷ್ಟು ನೀರು ಕುಡಿದರೂ ಜನರ ಬಾಯಾರಿಕೆ ಕಡಿಮೆಯಾಗುತ್ತಿಲ್ಲ.

ಒಳನೋಟ

ಬದುಕಿಗೆ ಕೂದಲೇ ಆಸರೆ

ಕೊಪ್ಪಳ: ಕೂದಲು ಅನೇಕರ ಪಾಲಿಗೆ 'ಲೆಕ್ಕ'ಕ್ಕೇ ಇಲ್ಲದಿರಬಹುದು. ಇದೇ ಕಾರಣಕ್ಕೆ ತಿಪ್ಪೆ, ಅಕ್ಕಪಕ್ಕದ ಖಾಲಿ ನಿವೇಶನ ಅಥವಾ ಕಸ ಸಂಗ್ರಹಿಸುವ ವಾಹನಕ್ಕೆ ಎಸೆಯಬಹುದು. ಆದರೆ, ಈ ಮಹಿಳೆಯರ ಪಾಲಿಗೆ ಕೂದಲೇ ಅನ್ನದ ಮೂಲ. ಇದೇ ಬದುಕು. 4

ನೆಲಕ್ಕುರುಳಿದ ಜಾಹೀರಾತು ಫಲಕ

ಆನೇಕಲ್: ತಾಲ್ಲೂಕಿನ ಅತ್ತಿಬೆಲೆ ಸಮೀಪದ ಗೆಸ್ಟ್ ಲೈನ್ ಬಳಿ ಕಟ್ಟಡ ಒಂದರ ಮೇಲೆ ಅಳವಡಿಸಿದ್ದ ಬೃಹತ್ ಜಾಹೀರಾತು ಫಲಕ ಶನಿವಾರ ಸಂಜೆ ಗಾಳಿಗೆ ಉರುಳಿ ಬಿದ್ದಿದೆ. ಯಾವುದೇ ಅಪಾಯ ಸಂಭವಿಸಿಲ್ಲ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ: ಸರ್ಕಾರಿ ಆದೇಶದಂತೆ ಸೇವೆಯಿಂದ ಬಿಡುಗಡೆಯಾಗಿದ್ದ ವೈದ್ಯರು

ನಿವೃತ್ತ ವೈದ್ಯರ ಸೇವೆಗೆ ಬೇಡಿಕೆ!

• ವರುಣ ಹೆಗಡೆ

ಬೆಂಗಳೂರು: ಸರ್ಕಾರಿ ಆದೇಶದ ಅನ್ವಯ ಸೇವೆಯಿಂದ ಬಿಡುಗಡೆ ಹೊಂದಿದ್ದ ನಿವೃತ್ತ ವೈದ್ಯರನ್ನು ಮತ್ತೆ ಕರೆತರಬೇಕೆಂಬ ಬೇಡಿಕೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವೈದ್ಯರು ಹಾಗೂ ಸಿಬ್ಬಂದಿ ವಲಯದಲ್ಲಿ ವ್ಯಕ್ತವಾಗಿದೆ.

ಗುತ್ತಿಗೆ ಹಾಗೂ ಹೊರಗುತ್ತಿಗೆಯಡಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡಬೇಕೆಂದು ವೈದ್ಯಕೀಯ ಶಿಕ್ಷಣ ಇಲಾಖೆಯು ಜನವರಿ ತಿಂಗಳಲ್ಲಿ ಆದೇಶ ಹೊರಡಿಸಿತ್ತು. ಇಲಾಖೆಯಡಿ ಬರುವ ಎಲ್ಲಾ ವೈದ್ಯಕೀಯ ವಿಜ್ಞಾನ ಕಾಲೇಜು, ವಿಶ್ವವಿದ್ಯಾಲಯ ಹಾಗೂ ಆಸ್ಪತ್ರೆಗಳಲ್ಲಿ ಆದೇಶವನ್ನು ಜಾರಿಗೊಳಿಸಲಾಗಿತ್ತು. ಅದರಿಂದ ಆಸ್ಪತ್ರೆಗಳು ವೈದ್ಯರನ್ನು ಕಡ್ಡಾಯದಿಂದ ಬಿಡುಗಡೆ ಮಾಡಿದ್ದವು.

ಇದರಲ್ಲಿ ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವೈದ್ಯರೂ ಸೇರಿದ್ದರು. ತಮ್ಮ ಕಾರ್ಯಶೈಲಿ ಮೂಲಕವೇ ಹೆಸರಾಗಿದ್ದ ಡಾ.ಅಪ್ಪಾಜಿ ಎಲ್. ಹಾಗೂ ಡಾ.ಅರುಣ ಕುಮಾರಿ ಅವರನ್ನು ಮತ್ತೆ ಕರೆತರಬೇಕೆಂಬ ಕೂಗು ಎದ್ದಿದೆ.

ಈ ಇಬ್ಬರು ವೈದ್ಯರು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಕ್ಕಳ ಗಂಥಿಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಿವೃತ್ತಿ ನಂತರವೂ ಕ್ಯಾನ್ಸರ್ ಪೀಡಿತ ಮಕ್ಕಳ ಆರೈಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಇವರಿಬ್ಬರ ಸೇವೆ ಹಾಗೂ ಕರ್ತವ್ಯವನ್ನು ಪರಿಗಣಿಸಿದ ಸರ್ಕಾರ, ನಿವೃತ್ತಿ ಬಳಿಕವೂ ಅವರನ್ನು ಮುಂದುವರಿಸಿತ್ತು. ಆದರೆ, ಈಗ ಅವರ ಅನುಪಸ್ಥಿತಿ ಸಂಸ್ಥೆಗೆ ಕಾಡುತ್ತಿದೆ.

ಬೋಧಕರ ಕೊರತೆ: ಸಂಸ್ಥೆಯಲ್ಲಿ ಚಿಕಿತ್ಸೆ ಜತೆಗೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧನೆಯನ್ನೂ ಮಾಡಲಾಗುತ್ತಿದೆ. ಸಂಸ್ಥೆಗೆ ಮಂಜೂರಾಗಿದ್ದ 202 ಹುದ್ದೆಗಳಲ್ಲಿ 111 ಹುದ್ದೆಗಳು ಭರ್ತಿಯಾಗಿದ್ದು, ಇನ್ನುಳಿದ 91 ಹುದ್ದೆಗಳಿಗೆ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಭರ್ತಿ ಮಾಡಿಕೊಳ್ಳಲಾಗಿತ್ತು. ಈಗ ನಿವೃತ್ತರನ್ನು ಕೈಬಿಟ್ಟದ್ದರಿಂದ ವೈದ್ಯರ ಕೊರತೆ ಎದುರಾಗಿದೆ.

'ಸಂಸ್ಥೆಗೆ ಕ್ಯಾನ್ಸರ್ ಚಿಕಿತ್ಸೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ಚಿಕ್ಕ ಮಕ್ಕಳಲ್ಲಿಯೂ ಕ್ಯಾನ್ಸರ್ ಕಾಣಿಸಿ ಕೊಳ್ಳುತ್ತಿದೆ. ಡಾ.ಅಪ್ಪಾಜಿ ಹಾಗೂ ಡಾ.ಅರುಣ ಕುಮಾರಿ ಅವರು ಕಾಳಜಿಯಿಂದ ಚಿಕಿತ್ಸೆ ಒದಗಿಸುತ್ತಿದ್ದರು. ಅವರ ಮಾರ್ಗದರ್ಶನ, ಅನುಭವ ಸಂಸ್ಥೆಗೆ ಅಗತ್ಯವಿದೆ. ಅವರನ್ನು ಮತ್ತೆ ಕರೆತರಬೇಕು' ಎಂದು ಸಂಸ್ಥೆಯ ವೈದ್ಯರು ಮತ್ತು ಸಿಬ್ಬಂದಿ ಒತ್ತಾಯಿಸಿದ್ದಾರೆ.

'ವೈದ್ಯಕೀಯ ಶಿಕ್ಷಣ ಇಲಾಖೆಯ ಆದೇಶದ ಅನುಸಾರ ನಿವೃತ್ತ ವೈದ್ಯರನ್ನು ಬಿಡುಗಡೆ ಮಾಡಲಾಗಿದೆ. ಇಲ್ಲವಾದಲ್ಲಿ ಅವರನ್ನು ಮುಂದುವರಿಸಲಾಗುತ್ತಿತ್ತು. ಅವರ ಸೇವೆ ಅಗತ್ಯವಿತ್ತು' ಎಂದು ಸಂಸ್ಥೆಯ ವೈದ್ಯರೊಬ್ಬರು ಹೇಳಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಹೊರ ರೋಗಿಗಳ ಸಂಖ್ಯೆ ಏರಿಕೆ

ಕ್ಯಾನ್ಸರ್ ಚಿಕಿತ್ಸೆಗಾಗಿ ಸಂಸ್ಥೆಗೆ ಸ್ಥಳೀಯ ರೋಗಿಗಳ ಜತೆಗೆ ವಿವಿಧ ರಾಜ್ಯಗಳು, ವಿದೇಶಗಳಿಂದಲೂ ಬರುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ನೆರವಿನಿಂದ ಆಧುನಿಕ ಸೌಲಭ್ಯ ಹೊಂದಿದ ಹೊರರೋಗಿ ಘಟಕ (ಒಪಿಡಿ), ವಿವಿಧ ಚಿಕಿತ್ಸಾ ಘಟಕಗಳು ಸಂಸ್ಥೆಗೆ ಇತ್ತೀಚಿನ ವರ್ಷಗಳಲ್ಲಿ ಸೇರ್ಪಡೆಗೊಂಡಿವೆ. ಇದರಿಂದಾಗಿ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ನಿತ್ಯ ಸರಾಸರಿ 1,400 ಹೊರರೋಗಿಗಳು ಚಿಕಿತ್ಸೆಗೆ ಬರುತ್ತಿದ್ದಾರೆ. ಆದರೆ, ಅಗತ್ಯ ಪ್ರಮಾಣದಲ್ಲಿ ವೈದ್ಯರ ಜತೆಗೆ ಸಿಬ್ಬಂದಿ ಇಲ್ಲದಿರುವುದರಿಂದ ರೋಗಿಗಳ ನಿರ್ವಹಣೆ ಸಂಸ್ಥೆಗೆ ಸವಾಲಾಗಿದೆ.

ಸಂಸ್ಥೆಯಲ್ಲಿ ಪ್ರತಿವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಬಾಯಿ, ಜಠರ, ಸ್ತನ, ಅನ್ನನಾಳ ಸೇರಿ ವಿವಿಧ ಪ್ರಕಾರಗಳ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಪಡೆದು ಕೊಳ್ಳುತ್ತಿದ್ದಾರೆ. ಸಂಸ್ಥೆಗೆ ಚಿಕಿತ್ಸೆ ಸಂಬಂಧ ದಾಖಲಾಗಿದ್ದವರಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 3,294 ಮಂದಿ ಮೃತಪಟ್ಟಿದ್ದಾರೆ.

ಅಂಕಿ ಅಂಶಗಳು

850 ಕಿದ್ವಾಯಿ ಸಂಸ್ಥೆಯಲ್ಲಿನ ಹಾಸಿಗೆಗಳ ಸಂಖ್ಯೆ

1,767 ಸಂಸ್ಥೆಗೆ ಮಂಜೂರಾಗಿದ್ದ ಒಟ್ಟು ಹುದ್ದೆ

1,106 ಸಂಸ್ಥೆಯಲ್ಲಿ ಖಾಲಿಯಿರುವ ಒಟ್ಟು ಹುದ್ದೆ

ಸುದ್ದಿ 2 ನಿಮಿಷ

ಬೆಸ್ಕಾಂ ಎಂ.ಡಿ.ಗೆ 'ಲೋಕಾಯುಕ್ತ' ಹೆಸರಿನಲ್ಲಿ ಬೆದರಿಕೆ– ದೂರು

ಬೆಂಗಳೂರು: ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಮಹಾಂತೇಶ ಬೀಳಗಿ ಹಾಗೂ ಇತರ ಅಧಿಕಾರಿಗಳಿಗೆ ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ಬೆದರಿಕೆ ಕರೆಗಳು ಬಂದಿದ್ದು, ಈ ಬಗ್ಗೆ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬೆಸ್ಕಾಂ ಅಧಿಕಾರಿ ಮೃತ್ಯುಂಜಯ ಅವರು ಬೆದರಿಕೆ ಕರೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೇ 1ರಂದು ಮೃತ್ಯುಂಜಯ ಅವರಿಗೆ ಕರೆ ಮಾಡಿದ್ದ ಅಪರಿಚಿತ, ತಾನು ಲೋಕಾಯುಕ್ತ ಪೊಲೀಸ್ ಎಂಬುದಾಗಿ ಹೇಳಿದ್ದ. ತಮ್ಮ ಕಚೇರಿಯಲ್ಲಿರುವ ಎಲ್ಲರ ಮೇಲೆ ದಾಳಿ ಮಾಡುವುದಾಗಿ ಹೇಳಿ ಬೆದರಿಸಿದ್ದ. ಮಹಾಂತೇಶ ಬೀಳಗಿ, ಆಡಳಿತ ಅಧಿಕಾರಿ ಪಿ. ಚಂದ್ರಶೇಖರ್, ತಾಂತ್ರಿಕ ಸಹಾಯಕ ಎಸ್.ವಿ. ನವೀನ್ ಕೃಷ್ಣನ್ ಅವರಿಗೂ ಕರೆ ಮಾಡಿ ಆರೋಪಿ ಮಾತನಾಡಿದ್ದ.'

'ಲೋಕಾಯುಕ್ತ ಪೊಲೀಸರ ಹೆಸರು ಹೇಳಿಕೊಂಡು ವಿನಾಕಾರಣ ಕರೆ ಮಾಡುತ್ತಿರುವ ಅಪರಿಚಿತ ಕಿರುಕುಳ ನೀಡುತ್ತಿರುವುದಾಗಿ ದೂರುದಾರರು ಆರೋಪಿಸಿದ್ದಾರೆ. ಕೃತ್ಯ ಎಸಗಿರುವ ಆರೋಪಿ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಭಾರಿ ಮಳೆ: ಬೆಸ್ಕಾಂಗೆ ₹1.18 ಕೋಟಿ ನಷ್ಟ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಗುರುವಾರ ಸುರಿದ ಭಾರಿ ಮಳೆಗೆ 305 ವಿದ್ಯುತ್ ಕಂಬಗಳು ಧರೆಗುರುಳಿದ್ದು, 57 ವಿದ್ಯುತ್ ಪರಿವರ್ತಕಗಳಿಗೆ (ಟಿ.ಸಿ) ಹಾನಿಯಾಗಿದೆ.

ವಿದ್ಯುತ್ ಮೂಲಸೌಕರ್ಯ ಹಾನಿಗೊಂಡಿದ್ದು, ದುರಸ್ತಿ ಕಾರ್ಯ ನಡೆಯುತ್ತಿದೆ. 305 ವಿದ್ಯುತ್ ಕಂಬಗಳು ಧರೆಗುರುಳಿದ ಪರಿಣಾಮ ₹25.62 ಲಕ್ಷ, ಟಿಸಿಗಳ ಹಾನಿಯಿಂದ ₹86.20 ಲಕ್ಷ ಮತ್ತು 18 ಡಬಲ್ ಪೋಲ್ ಸ್ಟ್ರಕ್ಚರ್‌ಗಳಿಗೆ ಹಾನಿಯಾಗಿದ್ದು ₹6.67 ಲಕ್ಷ ನಷ್ಟವಾಗಿದೆ. ಒಟ್ಟು ₹1.18 ಕೋಟಿ ನಷ್ಟವಾಗಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ತಮಿಳುನಾಡು: ಕಾಂಗ್ರೆಸ್ ಮುಖಂಡನ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ಎರಡು ದಿನಗಳ ಹಿಂದೆ ಕಾಣೆಯಾಗಿದ್ದ ತಮಿಳುನಾಡಿನ ತಿರುನೆಲ್ವೇಲಿ (ಪೂರ್ವ) ಜಿಲ್ಲೆಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಪಿ.ಕೆ. ಜಯಕುಮಾರ್ ದನಸಿಂಗ್ ಅವರ ಮೃತದೇಹವು ಅರ್ಧ ಸುಟ್ಟ ಸ್ಥಿತಿಯಲ್ಲಿ ಅವರ ಜಮೀನಿನಲ್ಲಿ ಶನಿವಾರ ಪತ್ತೆಯಾಗಿದೆ.

ಈ ಹಿನ್ನೆಲೆಯಲ್ಲಿ ತಮಿಳುನಾಡಿನಲ್ಲಿ ರಾಜಕೀಯ ಕೆಸರೆರಚಾಟ ಆರಂಭವಾಗಿದ್ದು, ಡಿಎಂಕೆ ಆಡಳಿತದಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ತೀರಾ ಹದಗೆಟ್ಟಿದೆ ಎಂದು ವಿರೋಧ ಪಕ್ಷಗಳು ಟೀಕಾಪ್ರಹಾರ ನಡೆಸಿವೆ.

ತಿರುನೆಲ್ವೇಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಸಿಲಂಬರಸನ್ ಅವರು, 'ಎಂಟು ಮಂದಿ ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಜಯಕುಮಾರ್ ಏಪ್ರಿಲ್ 30ರಂದು ಪತ್ರ ಬರೆದಿದ್ದರು. ಪಕ್ಷದ ಮುಖಂಡರ ಹೆಸರನ್ನೂ ಪತ್ರದಲ್ಲಿ ಉಲ್ಲೇಖಿಸಿದ್ದರು' ಎಂದು ಹೇಳಿದ್ದಾರೆ.

ವಿಐಟಿಇಇಇ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ (ವಿಐಟಿಇಇಇ) ಫಲಿತಾಂಶ ಪ್ರಕಟವಾಗಿದೆ. ಒಂದು ಲಕ್ಷ ಶ್ರೇಣಿಯೊಳಗಿನ ಅರ್ಜಿದಾರರು ಬಿ.ಟೆಕ್ ಪ್ರವೇಶಕ್ಕಾಗಿ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಬಹುದಾಗಿದೆ.

ಬಿ.ಟೆಕ್ ಕೋರ್ಸ್‌ಗೆ ಪ್ರವೇಶಕ್ಕಾಗಿ ಏಪ್ರಿಲ್ 19ರಿಂದ 30ರವರೆಗೆ ವೆಲ್ಲೂರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯನ್ನು ವಿಐಟಿ ವೆಲ್ಲೂರು, ವಿಐಟಿ ಚೆನ್ನೈ, ವಿಐಟಿ ಆಂಧ್ರಪ್ರದೇಶ ಮತ್ತು ವಿಐಟಿ ಭೋಪಾಲ್‌ಗಳಲ್ಲಿ ನಡೆಸಲಾಗಿತ್ತು.

ಪರೀಕ್ಷೆ ಭಾರತದ 125 ನಗರಗಳು ಮತ್ತು ದುಬೈ, ಕುವೈತ್, ಮಸ್ಕತ್, ಕತಾರ್, ಕೌಲಾಲಂಪುರ, ಸಿಂಗಾಪುರಗಳಲ್ಲಿ ನಡೆಸಲಾಗಿತ್ತು. ಭಾರತದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅರ್ಜಿದಾರರು ಭಾಗವಹಿಸಿದ್ದರು. ಫಲಿತಾಂಶ https://ugresults.vit.ac.in/ viteee ಪೋರ್ಟಲ್, ವೆಬ್‌ಸೈಟ್ www.vit.ac.in ನಲ್ಲಿ ಲಭ್ಯವಿದೆ.


ರೂಪಿಂದರ್ (ರ್‍ಯಾಂಕ್–1)

ಭಾನು ಮಹೇಶ್ (ರ್‍ಯಾಂಕ್–2)

ವೇದಾಂತ್ (ರ್‍ಯಾಂಕ್–3)

ಆಯುಷಿ ಬೈದ್ (ರ್‍ಯಾಂಕ್–4)

ಸಾನ್ವಿ ಸಿಂಗ್ (ರ್‍ಯಾಂಕ್–5)

ಅಭಿರಾಜ್ (ರ್‍ಯಾಂಕ್–6)

ಚೈತನ್ಯ ರಮೇಶ್ (ರ್‍ಯಾಂಕ್–7)

ವಿಕ್ಕಿ ಕುಮಾರ್ (ರ್‍ಯಾಂಕ್–8)

ಸೋಹನ್ ಹಜ್ರಾ (ರ್‍ಯಾಂಕ್–9)

ಸಾಹಿಲ್ (ರ್‍ಯಾಂಕ್–10)

ವಿವಿಧ 3 ವರ್ಷಗಳ ಪದವಿಪೂರ್ವ ತರಗತಿಗಳಿಗೆ ಅರ್ಜಿಗಳು, 4 ವರ್ಷಗಳ ಬಿ.ಎಸ್‌ಸಿ, ಗೌರವಾನ್ವಿತ (ಕೃಷಿ), ಬಿ.ಆರ್ಚ್, ಬಿ.ಡಿಇಎಸ್ (ಇಂಡಸ್ಟ್ರಿಯಲ್ ಡಿಸೈನ್) ಮತ್ತು 5 ವರ್ಷಗಳ ಸಂಯೋಜಿತ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಬಹುದು. ವಿವರಗಳಿಗಾಗಿ ವಿಐಟಿ ವೆಬ್‌ಸೈಟ್ 'www.vit.ac.in'ಗೆ ಭೇಟಿ ನೀಡಬಹುದು.



ವಾಹನ ದಟ್ಟಣೆ

ಐಪಿಎಲ್ ಕ್ರಿಕೆಟ್ ಪಂದ್ಯದ ಪರಿಣಾಮ ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದ ಸುತ್ತಮುತ್ತ ಭಾರೀ ವಾಹನ ದಟ್ಟಣೆ ಕಂಡುಬಂತು

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ರಾಜಾಜಿನಗರದ ಒಂದನೇ ಬ್ಲಾಕ್‌ನಲ್ಲಿ ಇತ್ತೀಚೆಗೆ ನಟಿ ಶ್ರೀನಿಧಿ ಶೆಟ್ಟಿ ಹಾಗೂ ಶಾಸಕ ಕೆ. ಗೋಪಾಲಯ್ಯ ಅವರು, ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನವೀಕೃತ ಮಳಿಗೆಯನ್ನು ಉದ್ಘಾಟಿಸಿದರು. ಕರ್ನಾಟಕ ವಿಭಾಗದ ಮುಖ್ಯಸ್ಥ ಫಿಲ್ಸರ್ ಬಾಬು ಹಾಗೂ ಸಿಬ್ಬಂದಿ ಹಾಜರಿದ್ದರು

ರಾಜಾಜಿನಗರ: ಮಲಬಾರ್ ನವೀಕೃತ ಮಳಿಗೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜಾಜಿನಗರ ಒಂದನೇ ಬ್ಲಾಕ್‌ನ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಇತ್ತೀಚೆಗೆ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನವೀಕೃತ ಮಳಿಗೆಯನ್ನು ಉದ್ಘಾಟಿಸಲಾಯಿತು.

ನಟಿ ಶ್ರೀನಿಧಿ ಶೆಟ್ಟಿ ಹಾಗೂ ಶಾಸಕ ಕೆ. ಗೋಪಾಲಯ್ಯ ಅವರು ಈ ಮಳಿಗೆಯನ್ನು ಉದ್ಘಾಟಿಸಿದರು. ಕರ್ನಾಟಕ ವಿಭಾಗದ ಮುಖ್ಯಸ್ಥ ಫಿಲ್ಸರ್ ಬಾಬು ಹಾಗೂ ಸಿಬ್ಬಂದಿ ಹಾಜರಿದ್ದರು.

ನವೀಕೃತ ಮಳಿಗೆಯು ವಿಶಾಲವಾಗಿದ್ದು, ಹೆಚ್ಚು ಆಭರಣಗಳ ಸಂಗ್ರಹವನ್ನು ಹೊಂದಿದೆ. ಗ್ರಾಹಕರಿಗೆ ವಿಶ್ವದರ್ಜೆಯ ಶಾಪಿಂಗ್ ಅನುಭವವನ್ನು ನೀಡಲಿದೆ. ಮೈನ್ ಡೈಮಂಡ್ಸ್, ಎರಾ ಅನ್‌ಕಟ್ ಡೈಮಂಡ್ಸ್, ಡಿವೈನ್ ಇಂಡಿಯನ್ ಹೆರಿಟೇಜ್ ಸೇರಿ ಪ್ರತಿಯೊಂದು ಸಂದರ್ಭಕ್ಕೂ ಒಪ್ಪುವಂತಹ ಆಭರಣಗಳ ಸಂಗ್ರಹವಿದೆ ಎಂದು ಕಂಪನಿಯು ತಿಳಿಸಿದೆ.

ರಿಯಾಯಿತಿ ಸೌಲಭ್ಯ ಪ್ರಕಟ: ಅಕ್ಷಯ ತೃತೀಯ ಹಬ್ಬದ ಅಂಗವಾಗಿ ಗ್ರಾಹಕರಿಗೆ ವಿಶೇಷ ರಿಯಾಯಿತಿ ಪ್ರಕಟಿಸಿದೆ. ಚಿನ್ನಾಭರಣದ ಮೇಕಿಂಗ್ ಮೇಲೆ ಶೇ 25ರ ವರೆಗೆ ಶುಲ್ಕ ವಿನಾಯಿತಿ ಇದೆ. ಪ್ರೆಸಿಯಾ/ಎರಾ ಆಭರಣಗಳ ಮೇಕಿಂಗ್ ಶುಲ್ಕದಲ್ಲಿ ಶೇ 25ರಷ್ಟು ರಿಯಾಯಿತಿ ದೊರೆಯಲಿದೆ. ಡೈಮಂಡ್ಸ್ ಆಭರಣಗಳ ಖರೀದಿ ಮೇಲೆಯೂ ಈ ಸೌಲಭ್ಯವಿದೆ. ಮೇ 12ರ ವರೆಗೆ ಈ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದೆ.

'ದೊಡ್ಡ ಆಲದ ಮರ ಉಳಿಸಿ' ಮ್ಯಾರಥಾನ್ ಜೂನ್ 16ಕ್ಕೆ

ಬೆಂಗಳೂರು: ನಗರದ ಕೇತೋಹಳ್ಳಿ ಗ್ರಾಮದಲ್ಲಿರುವ ದೊಡ್ಡ ಆಲದಮರವನ್ನು ಉಳಿಸಲು ಯುನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್ ವತಿಯಿಂದ 'ಯುನಿವರ್ಸಲ್ ಮ್ಯಾರಥಾನ್' ಅನ್ನು ಜೂನ್ 16ರಂದು ಬೆಳಿಗ್ಗೆ 6.30ಕ್ಕೆ ಹಮ್ಮಿಕೊಳ್ಳಲಾಗಿದೆ.

'ದೊಡ್ಡ ಆಲದ ಮರವನ್ನು ಉಳಿಸಿ' ಘೋಷವಾಕ್ಯದಡಿ ನಡೆಯಲಿರುವ ಈ ಮ್ಯಾರಥಾನ್ ಮೈಸೂರು ರಸ್ತೆಯ ರಾಮೋಹಳ್ಳಿ ಕ್ರಾಸ್‌ನಿಂದ ಆರಂಭಗೊಳ್ಳಲಿದೆ. ದೊಡ್ಡ ಆಲದ ಮರದ ಬಳಿ ಕೊನೆಗೊಳ್ಳಲಿದೆ.

ಆಲದ ಮರ ಮತ್ತು ಆ ಪ್ರದೇಶದ ಅಭಿವೃದ್ಧಿಗಾಗಿ ವರದಿ ಸಲ್ಲಿಸಲು 2019ರಲ್ಲಿ ಪರಿಸರವಾದಿ ಅ.ನ.ಯಲ್ಲಪ್ಪ ರೆಡ್ಡಿ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಲಾಗಿತ್ತು. ಆಲದ ಮರದ ಆಸುಪಾಸಿನಲ್ಲಿ ಕನಿಷ್ಠ 2.5 ಎಕರೆ ಭೂಮಿ ಸ್ವಾಧೀನ ಪಡೆದು ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಬೇಕು. ತೋಟಗಾರಿಕೆ ಇಲಾಖೆ 400 ವರ್ಷಗಳ ಇತಿಹಾಸ ಇರುವ ದೊಡ್ಡ ಆಲದ ಮರ ಮತ್ತು ಸುತ್ತಲಿನ ಪ್ರದೇಶವನ್ನು ಸಂರಕ್ಷಿಸಬೇಕು ಎಂದು ಸಮಿತಿ ಸರ್ಕಾರಕ್ಕೆ ವರದಿ ನೀಡಿತ್ತು.

ವರದಿಯ ಶಿಫಾರಸು ಜಾರಿಗೊಳಿಸಿ ಪಾರಂಪರಿಕ ಮರ ಉಳಿಸಲು ತೋಟಗಾರಿಕೆ ಇಲಾಖೆ ಮತ್ತು ಡಿಪಿಎಆರ್ (ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ) ಇಲಾಖೆಯ ಗಮನ ಸೆಳೆಯುವುದು ಈ ಮ್ಯಾರಥಾನ್ ಉದ್ದೇಶವಾಗಿದೆ.

ನಗರದಲ್ಲಿ ಇಂದು

ಪ್ರತಿಭಾ ವೇದಿಕೆ ಸೀಜನ್–4 ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸತೀಶ್ ಹಂಪಿಹೊಳಿ, ಅತಿಥಿಗಳು: ಮಹೇಂದ್ರ ಮುನ್ನೋತ್ ಜೈನ್, ವಿ.ಎಸ್.ನಾಯಕ ಬಳಕೂರು, ಲತಾ ಎಸ್., 'ಕಲಾದರ್ಪಣ' ಪ್ರಶಸ್ತಿ ಪುರಸ್ಕೃತರು: ಗೋ.ನಾ. ಸ್ವಾಮಿ, ಅನಸೂಯಾ ದ್ವಾರಕನಾಥ, ಆಯೋಜನೆ: ಕಲಾ ದರ್ಪಣ–ಆರ್ಟ್‌ರಿಪ್ಲೆಕ್ಸ್, ಸ್ಥಳ: ಕಲಾಗ್ರಾಮ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಎನ್.ಜಿ.ಇ.ಎಫ್ ಲೇಔಟ್, 2ನೇ ಹಂತ ನಾಗರಬಾವಿ, ಬೆಳಿಗ್ಗೆ 9

ಪದ್ಮರಾಜ ದಂಡಾವತಿ ಅವರ 'ಉಳಿದಾವ ನೆನಪು', ಉದಯಕುಮಾರ ಹಬ್ಬು ಅವರ 'ಚಂದ್ರಗುಪ್ತ ಮೌರ್ಯ', ವೈ.ಜಿ.ಮುರಳೀಧರನ್ ಅವರ 'ವಿಕ್ಟರ್ ಫ್ರಾಂಕಲ್', ಮಹಾಬಲ ಸೀತಾಳಭಾವಿ ಅವರ 'ಕಾಳಿದಾಸ ಮಹಾಕವಿಯ ಮೇಘದೂತ' ಪುಸ್ತಕಗಳ ಬಿಡುಗಡೆ: ಕೆ.ಎನ್.ಶಾಂತಕುಮಾರ್, ಅತಿಥಿಗಳು: ಬಸವರಾಜ ಕಲ್ಗುಡಿ, ಜಗದೀಶ ಶರ್ಮಾ ಸಂಪ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಜಿ.ಬಿ.ಹರೀಶ ಅವರ 'ಎಲ್ಲರಿಗೂ ಬೇಕಾದ ಅಂಬೇಡ್ಕರ್' ಪುಸ್ತಕ ಬಿಡುಗಡೆ: ರೋಹಿಣಾಕ್ಷ ಶಿರ್ಲಾಲು, ಆಯೋಜನೆ: ಮಂಥನ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಅಶ್ವಿನಿ ಮದನಕರ ಅವರು ಅನುವಾದಿಸಿದ 'ರಮಾಬಾಯಿ ಅಂಬೇಡ್ಕರ್' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಪುಸ್ತಕ ಪರಿಚಯ: ವಿ.ಎಲ್. ನರಸಿಂಹಮೂರ್ತಿ, ಅಧ್ಯಕ್ಷತೆ: ಎಂ.ಎಸ್. ಮೂರ್ತಿ, 'ನಯನ ರಾಜಣ್ಣ' ಅವರಿಗೆ ಅಭಿನಂದನೆ: ಮಾವಳ್ಳಿ ಶಂಕರ್, ಅತಿಥಿಗಳು: ಎಚ್.ಎಲ್. ಪುಷ್ಪ, ದು. ಸರಸ್ವತಿ, ಭೀಮಾ ಗಾಯನ: ಕೆ.ಎಸ್. ಮಂಜುನಾಥ ಮತ್ತು ತಂಡ, 'ಮಿಸೆಸ್ ಅಂಬೇಡ್ಕರ್' ನಾಟಕ ಪ್ರದರ್ಶನ: ರಚನೆ: ಸಿದ್ಧರಾಮ ಕಾರಣಿಕ, ನಿರ್ದೇಶನ: ಪ್ರದೀಪ್ ತಿಪಟೂರು, ಆಯೋಜನೆ: ಕರ್ನಾಟಕ ರಂಗ ಪರಿಷತ್ತು ಕೇಂದ್ರ ಸಮಿತಿ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ(ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಗಿರೀಶ ಕಾಸರವಳ್ಳಿ ಅವರ 'ಸಿನಿಮಾಗಳ ಬಹುಮುಖಿ ಸಂರಚನೆ' ಕುರಿತು ಚರ್ಚೆ: ಬೆಳಿಗ್ಗೆ 11ಕ್ಕೆ 'ಗುಲಾಬಿ ಟಾಕೀಸ್' ಚಲನಚಿತ್ರ ಪ್ರದರ್ಶನ, ಮಧ್ಯಾಹ್ನ 2.30ಕ್ಕೆ 'ಕೂರ್ಮಾವತಾರ' ಚಲನಚಿತ್ರ ಪ್ರದರ್ಶನ, ಸಂಜೆ 5.30ಕ್ಕೆ ಸಂವಾದ: ಗಿರೀಶ ಕಾಸರವಳ್ಳಿ, ನಿಖಿಲ್ ಎಚ್., ಸಂಜೆ 6.45ಕ್ಕೆ 'ಕನಸೆಂಬ ಕುದುರೆಯನೇರಿ' ಚಲನಚಿತ್ರದ ಪ್ರದರ್ಶನ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು

'ಪುರಂದರದಾಸರ ನವರತ್ನ ಮಾಲಿಕೆ ಕೃತಿಗಳ' ಕುರಿತು ಸಂಗೀತ ಕಾರ್ಯಾಗಾರದ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ಪೂರ್ವಿ ಸಂಗೀತ ಅಕಾಡೆಮಿ, ಮಲ್ಲೇಶ್ವರ, ಸಂಜೆ 4

ರಾಮನವಮಿ ಸಂಗೀತೋತ್ಸವ: ಗಾಯನ: ಪಿಟೀಲು: ಶ್ರೇಯಾ ದೇವನಾಥ್, ನಾಗಸ್ವರ: ಮೈಲೈ ಎಂ. ಕಾರ್ತಿಕೇಯನ್, ಮೃದಂಗ: ಪ್ರವೀಣ್ ಸ್ಪರ್ಶ್, ತವಿಲ್: ಅಡ್ಯಾರ್ ಜಿ. ಸಿಲಾಂಬರಸನ್, 'ವಾಗೇಯ ಮಂಜರಿ' ಭರತನಾಟ್ಯ ಪ್ರದರ್ಶನ: ಪಿ. ಪ್ರವೀಣ್ ಕುಮಾರ್ ಮತ್ತು ಚಿತ್ಕಲಾ ತಂಡ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15ರಿಂದ

ರಾಮನವಮಿ ಸಂಗೀತೋತ್ಸವ–2024: ವಿಶೇಷ ಸಂಗೀತ ಕಛೇರಿ: ಆರ್. ವಾಣಿಶ್ರೀ ಮತ್ತು ತಂಡ, ವಿಶೇಷ ಕರ್ನಾಟಕ ಶಾಸ್ತ್ರೀಯ ಸಂಗೀತ: ಅಕ್ಕರೆ ಸಹೋದರಿಯರು, ಎಚ್.ಎಂ.ಸ್ಮಿತಾ, ಅರ್ಜುನ್ ಕುಮಾರ್, ಓಂಕಾರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ದೆ ನಟನೆ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಅನಘ ಶ್ರೀನಿವಾಸ್ ಮತ್ತು ಅದಿತಿ ಶ್ರೀನಿವಾಸ್

ಯುಗಳ ಭರತನಾಟ್ಯ ರಂಗಪ್ರವೇಶ: ಅನಘ ಶ್ರೀನಿವಾಸ್ ಮತ್ತು ಅದಿತಿ ಶ್ರೀನಿವಾಸ್, ಅತಿಥಿಗಳು: ರೇವತಿ ನರಸಿಂಹನ್, ಸೌಂದರ್ಯ ಶ್ರೀವತ್ಸ, ಟಿ.ಎಸ್. ವಸುಂಧರ, ಶೇಷಾದ್ರಿ ಮೋಕ್ಷಗುಂಡಂ, ಆಯೋಜನೆ: ನಾಟ್ಯನಿಕೇತನ ನೃತ್ಯ ಶಾಲೆ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 6

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/3/2024 ದಿನಾಂಕ : 25–04–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ತುಮಕೂರು – ಚಿತ್ರದುರ್ಗ – ದಾವಣಗೆರೆ ಯೋಜನೆಯಲ್ಲಿ ತಿಮ್ಮರಾಜನಹಳ್ಳಿ (ಹೊರತುಪಡಿಸಿ) ಮತ್ತು ತಾವರೆಕೆರೆ (ಒಳಗೊಂಡು) ನಿಲ್ದಾಣಗಳ ನಡುವೆ ಚೈನೇಜ್ 25.400 ಮತ್ತು ಚೈನೇಜ್ 66.400 (41.000 ಕಿಮೀ) ನಡುವೆ ವಿದ್ಯುತ್, ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳನ್ನು ಒಳಗೊಂಡಂತೆ ಹೊಸ ಬ್ರಾಡ್ ಗೇಜ್ ಮಾರ್ಗದ ನಿರ್ಮಾಣ (ಟೆಂಡರ್ ಉಲ್ಲೇಖ ಸಂ.: ಟಿಕೆ–ಡಿವಿಜಿ–ಇಪಿಸಿ–03)	ರೂ. 631,24,35,065/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23–08–2024 ರಂದು 11:00 ಗಂಟೆಯವರೆಗೆ.

ವಿವರಗಳಿಗೆ www.ireps.gov.in ಗೆ ಲಾಗ್ ಆನ್ ಮಾಡಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/43/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/4/2024 ದಿನಾಂಕ : 02–05–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1) ಯಲಹಂಕ – ಪೆನುಕೊಂಡ ಡಬ್ಲಿಂಗ್ : ದೊಡ್ಡಬಳ್ಳಾಪುರ ಯಾರ್ಡ್‌ನಲ್ಲಿ ಸಂಪರ್ಕಗಳು, ಗೂಡ್ಸ್ ಪ್ಲಾಟ್‌ಫಾರಂನ (ಅಂದಾಜು 45ಮೀ ಉದ್ದ) ನಿರ್ಮಾಣ ಮತ್ತು ಸಂಬಂಧಿಸಿದ ಪಿ.ವೇ ಕಾಮಗಾರಿಗಳನ್ನು ಒಳಗೊಂಡಂತೆ ಹಾಲಿ ಇರುವ 1 x 6 x 3.80 ಮೀ ಅಳತೆಯ ಆರ್‌ಸಿಸಿ ಬಾಕ್ಸ್ ರಸ್ತೆ ಕೆಳಸೇತುವೆ ಸಂ. 476ರ ವಿಸ್ತರಣೆ ಮತ್ತು ಅಗಲೀಕರಣಕ್ಕಾಗಿ ಬಾಕಿ ಉಳಿದ ಕಾಮಗಾರಿಯನ್ನು ನಡೆಸುವುದು. 2) ಚನ್ನಸಂದ್ರ – ಯಲಹಂಕ ಸೆಕ್ಷನ್ ನಡುವೆ ಎಲ್‌ಸಿ 6 ಗಾಗಿ ಲೇಯಿಂಗ್ ವೇರಿಂಗ್ ಕೋಟ್. 3) ಯಲಹಂಕ – ಹಿಂದೂಪುರ ಸೆಕ್ಷನ್ ನಡುವೆ ರಸ್ತೆ ಕೆಳಸೇತುವೆ ಸಂ. 313 ಮತ್ತು 336 ಗಾಗಿ ರಸ್ತೆ ಕೆಳಸೇತುವೆ ಸಂಪರ್ಕ ರಸ್ತೆ ರೂಫ್ ಕವರಿಂಗ್ (ಟೆಂಡರ್ ಉಲ್ಲೇಖ ಸಂ. ವೈಎನ್‌ಕೆ–ಪಿಕೆಡಿ–ಆರ್‌ಯುಬಿಎಸ್–ಎಂಐಎಸ್‌ಸಿ)	ರೂ. 4,99,26,209/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–05–2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/53/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 09/ಎಸ್‌ಬಿಸಿ/24 ದಿನಾಂಕ : 29–04–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು – ಧರ್ಮಾವರಂ ಸೆಕ್ಷನ್ : ಸೆಕ್ಷನಲ್ ಸ್ಪೀಡ್‌ನ್ನು 110 ಕೆಎಂಪಿಹೆಚ್ ನಿಂದ 130 ಕೆಎಂಪಿಹೆಚ್ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಟ್ರ್ಯಾಕ್‌ನ ಪಕ್ಕದಲ್ಲಿ 63.4 ಕಿಮೀ ಉದ್ದಕ್ಕಾಗಿ ಡ್‌ಬ್ಲ್ಯು–ಬೀಮ್ ಮೆಟಲ್ ಬ್ಯಾರಿಯರ್‌ಗಳೊಂದಿಗೆ ಸುರಕ್ಷತಾ ಫೆನ್ಸಿಂಗ್ ಒದಗಿಸುವುದು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 24,60,46,965/-
2	ಬೆಂಗಳೂರು – ಸಂಪಿಗೆ ರೋಡ್ ಸೆಕ್ಷನ್ : ಸೆಕ್ಷನಲ್ ಸ್ಪೀಡ್‌ನ್ನು 110 ಕೆಎಂಪಿಹೆಚ್ ನಿಂದ 130 ಕೆಎಂಪಿಹೆಚ್ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಟ್ರ್ಯಾಕ್‌ನ ಪಕ್ಕದಲ್ಲಿ 36.50 ಕಿಮೀ ಉದ್ದಕ್ಕಾಗಿ ಡ್‌ಬ್ಲ್ಯು–ಬೀಮ್ ಮೆಟಲ್ ಬ್ಯಾರಿಯರ್‌ಗಳೊಂದಿಗೆ ಸುರಕ್ಷತಾ ಫೆನ್ಸಿಂಗ್ ಒದಗಿಸುವುದು. ನಿರ್ವಹಣಾ ಅವಧಿಯು 12 ತಿಂಗಳು.	ರೂ. 14,16,41,899/-
3	ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : ಬೆಂಗಳೂರು – ಜೋಲಾರಪೇಟೆ – ಸೆಕ್ಷನಲ್ ಸ್ಪೀಡ್‌ನ್ನು 110 ಕೆಎಂಪಿಹೆಚ್ ನಿಂದ 130 ಕೆಎಂಪಿಹೆಚ್ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಬಂಗಾರಪೇಟೆ – ಜೋಲಾರಪೇಟೆ ಸೆಕ್ಷನ್‌ನಲ್ಲಿ 79.7 ಕಿಮೀ ಉದ್ದಕ್ಕಾಗಿ ಡಬ್ಲ್ಯು–ಬೀಮ್ ಮೆಟಲ್ ಬ್ಯಾರಿಯರ್‌ಗಳೊಂದಿಗೆ ಸುರಕ್ಷತಾ ಫೆನ್ಸಿಂಗ್ ಒದಗಿಸುವುದು. (ಒಟ್ಟು ಉದ್ದ 120 ಕಿಮೀ) ನಿರ್ವಹಣಾ ಅವಧಿಯು 12 ತಿಂಗಳು.	ರೂ. 30,90,46,508/-
4	ಬೆಂಗಳೂರು – ಜೋಲಾರಪೇಟೆ ಸೆಕ್ಷನ್ : ಬೆಂಗಳೂರು – ಜೋಲಾರಪೇಟೆ – ಸೆಕ್ಷನಲ್ ಸ್ಪೀಡ್‌ನ್ನು 110 ಕೆಎಂಪಿಹೆಚ್ ನಿಂದ 130 ಕೆಎಂಪಿಹೆಚ್ ಗೆ ಹೆಚ್ಚಿಸುವ ಕಾಮಗಾರಿಗೆ ಸಂಬಂಧಿಸಿದಂತೆ ವೈಟ್‌ಫೀಲ್ಡ್ – ಬಂಗಾರಪೇಟೆ ಸೆಕ್ಷನ್‌ನಲ್ಲಿ 40.3 ಕಿಮೀ ಉದ್ದಕ್ಕಾಗಿ ಡ್‌ಬ್ಲ್ಯು–ಬೀಮ್ ಮೆಟಲ್ ಬ್ಯಾರಿಯರ್‌ಗಳೊಂದಿಗೆ ಸುರಕ್ಷತಾ ಫೆನ್ಸಿಂಗ್ ಒದಗಿಸುವುದು. (ಒಟ್ಟು ಉದ್ದ 120 ಕಿಮೀ) ನಿರ್ವಹಣಾ ಅವಧಿಯು 12 ತಿಂಗಳು.	ರೂ. 15,62,61,871/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20–05–2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ

ಪಿಯುಬಿ/51/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಬೆಂಗಳೂರು

South Western Railway - SWR | SWRRLY | SWRRLY

PUBLIC NOTICE

My client intends to enter into a Joint Development Agreement with respect to the properties mentioned in the Schedule hereunder with its owner, **Shri. Vinay Krishna H.V.** ("Owner"). The Owner represents and warrants that he is the absolute Owner of the Schedule Properties and that, he has neither conveyed nor has entered into any Agreement of Sale/Development Agreement/ Memorandum of Understanding nor has entered into any sort of arrangement with any person/s for sale/transfer/development of the Schedule Properties. The Owner further represents that he has not encumbered, mortgaged, created any charge or lien on the Schedule Properties in any manner and apart from him there are no other person/s, firm/s or company/s having any sort of right, title or claim over the Schedule Properties. Any person/s having objection/s or claim/s, shall with documentary evidence, lodge their objection(s)/claim(s) **within (15) Fifteen** days from the date of this Notice with the Undersigned failing which, my client shall proceed with the above-mentioned transaction.

SCHEDULE

All that piece and parcel of the Agricultural lands bearing Survey No.84 measuring 7 acres 30 guntas (including 1 acre 11 guntas kharab) and Survey No.83, measuring 1 acre 11 guntas (including 7 guntas kharab), measuring in total **9 acres 01 guntas**, situated at **Uttarahalli Village, Uttarahalli Hobli, Bengaluru South Taluk, Bengaluru** and is bounded on the:

East by : Property bearing Survey Nos.81 and 82;
West by : Channasandra Village Boundary;
North by : Road and Property bearing Survey No.85; and
South by : Turahalli Village Boundary.

Jayanth M Pattanshetti, Advocate,
Jayanth Pattanshetti Associates LLP
102, Ground Floor, "Rams Infantry Manor",
No.70, Infantry Road, Bengaluru-560001.
Ph: 080 25593195/41238516

Bengaluru
Date: 03-05-2024

IN THE HIGH COURT OF KARNATAKA AT BENGALURU

FORM NO. IV (RULE-IV)

Notice to the Respondent vide Court Order dated 15.04.2024

STRP No. 25/2018

The State of Karnataka, Rep. by the Secretary, Finance Department

... **Petitioner**

(Government advocate for Petitioner)

-/VS/-

M/s Dinesh Associates

... **Respondent**

To: RESPONDENT

M/s Dinesh Associates, No. 663, Mallappa New Market, Chikkapete, Bengaluru-560 053.

Notice is hereby given to you to appear in this Court in person or through an Advocate duly instructed or through someone authorized by Law to act for you in the **STRP 25/2018** on **28.05.2024 at 10.30 a.m.** on which date the case will be posted for orders/hearing, in case you intend to contest the petition. If you fail to appear the same will be dealt with, heard and decided in your absence.

Issued under my hand and the seal of the Court, this the **15th day of April 2024.**

BY ORDER OF THE COURT,
Sd/-
ASSISTANT REGISTRAR

DIPR/DD-C.P/52/KSMCA/2024-25

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 08/ಎಸ್‌ಬಿಸಿ/24 ದಿನಾಂಕ : 25–04–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಸಹಾಯಕ ವಿಭಾಗೀಯ ಇಂಜಿನಿಯರ್ / ಹಿಂದೂಪುರ : ವಲಯ ಐ : ಸತ್ಯ ಸಾಯಿ ಪ್ರಶಾಂತಿ ನಿಲಯಂ ಮಾರ್ಗವಾಗಿ ಧರ್ಮಾವರಂ (ಹೊರತುಪಡಿಸಿ) – ಪೆನುಕೊಂಡ ಮತ್ತು ಮಕಾಜಪಲ್ಲಿ ಮಾರ್ಗವಾಗಿ ಪೆನುಕೊಂಡ – ಧರ್ಮಾವರಂ ನಡುವೆ ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 3,66,90,050/-
2	ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ : ವಲಯ ಜೆ : ಬೆಂಗಳೂರು (ಹೊರತುಪಡಿಸಿ) – ಯಶವಂತಪುರ – ಯಲಹಂಕ (ಒಳಗೊಂಡು) ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 3,37,69,300/-
3	ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ : ವಲಯ ಕೆ : ಯಶವಂತಪುರ (ಹೊರತುಪಡಿಸಿ) – ಸಂಪಿಗೆ ರೋಡ್ (ಒಳಗೊಂಡು) ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 2,79,47,040/-
4	ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ : ವಲಯ ಎನ್ : ಚನ್ನಸಂದ್ರ – ದೊಡ್ಡಬಳ್ಳಾಪುರ (ಹೊರತುಪಡಿಸಿ) ಮತ್ತು ಯಲಹಂಕ (ನಿಲ್ದಾಣ ಒಳಗೊಂಡು) – ಚಿಕ್ಕಬಳ್ಳಾಪುರ ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 1,89,72,040/-
5	ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ : ವಲಯ ಸಿ : ಚಿಕ್ಕಬಾಣಾವರ (ಹೊರತುಪಡಿಸಿ) – ಹಾಸನ (ಹೊರತುಪಡಿಸಿ) ವ್ಯಾಪ್ತಿಯ ಅಡಿಯಲ್ಲಿ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 2,78,91,040/-
6	ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ : ವಲಯ ಎಲ್ : ಓಮಲೂರು – ಕೇಲಮಂಗಲಂ ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 3,12,42,040/-
7	ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ : ವಲಯ ಎಂ : ಕೇಲಮಂಗಲಂ – ಲೊಟ್ಟೆಗೊಲ್ಲಹಳ್ಳಿ ವ್ಯಾಪ್ತಿಯ ಅಡಿಯಲ್ಲಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 3,12,42,040/-
8	ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ : ವಲಯ ಎ : ಹೆಜ್ಜಾಲದ ಐಆರ್‌ಐಡಿಎಂ ನಲ್ಲಿ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ನಿರ್ವಹಣೆ.	ರೂ. 60,46,830/-
9	ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ : ವಲಯ ಜಿ : ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ವ್ಯಾಪ್ತಿಯ ಅಡಿಯಲ್ಲಿ ಬೆಂಗಳೂರು (ಹೊರತುಪಡಿಸಿ) – ಎಲಿಯೂರು (ಒಳಗೊಂಡು) ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 1,68,70,025/-
10	ಸಹಾಯಕ ವಿಭಾಗೀಯ ಇಂಜಿನಿಯರ್ / ಜಿ / ಬೆಂಗಳೂರು : ವಲಯ ಎಸ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಜಿ / ಬೆಂಗಳೂರು ವ್ಯಾಪ್ತಿಯ ಅಡಿಯಲ್ಲಿ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳು – ಬೆಂಗಳೂರು ಸಿಟಿ ನಿಲ್ದಾಣ ಪ್ರದೇಶದ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 5,25,51,520/-
11	ಸಹಾಯಕ ವಿಭಾಗೀಯ ಇಂಜಿನಿಯರ್ / ಜಿ / ಬೆಂಗಳೂರು : ವಲಯ ಹೆಚ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಜಿ / ಬೆಂಗಳೂರು ವ್ಯಾಪ್ತಿಯ ಅಡಿಯಲ್ಲಿ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳು – ಕೆಎಸ್‌ಆರ್ ಬೆಂಗಳೂರು, ಬೆಂಗಳೂರು ದಂಡು ಮತ್ತು ಎಸ್‌ಎಸ್‌ಇ/ಡಬ್ಲ್ಯು/ಎ/ಎಸ್‌ಬಿಸಿ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 6,23,91,520/-
12	ಸಹಾಯಕ ವಿಭಾಗೀಯ ಇಂಜಿನಿಯರ್ / ಬಂಗಾರಪೇಟೆ : ವಲಯ ಎಫ್ : ಸಹಾಯಕ ವಿಭಾಗೀಯ ಇಂಜಿನಿಯರ್ / ಬಂಗಾರಪೇಟೆ ವ್ಯಾಪ್ತಿಯ ಅಡಿಯಲ್ಲಿ ಜೋಲಾರಪೇಟೆ (ಹೊರತುಪಡಿಸಿ) – ಮಾಲೂರು (ಹೊರತುಪಡಿಸಿ), ಮಾರಿಕುಪ್ಪಂ – ಬಂಗಾರಪೇಟೆ – ಕೋಲಾರ – ಚಿಂತಾಮಣಿ ಇಲ್ಲಿನ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 2,94,22,040/-
13	ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು : ವಲಯ ಡಿ : ಸಹಾಯಕ ವಿಭಾಗೀಯ ಇಂಜಿನಿಯರ್ / ಬೆಂಗಳೂರು ವ್ಯಾಪ್ತಿಯ ಅಡಿಯಲ್ಲಿ ಸಿಬ್ಬಂದಿ ವಸತಿಗೃಹಗಳು ಮತ್ತು ಸೇವಾ ಕಟ್ಟಡಗಳು – ಬೆಂಗಳೂರು ಪೂರ್ವ ದಿಂದ ಮಾಲೂರು (ಒಳಗೊಂಡು), ಕೃಷ್ಣರಾಜಪುರಂ ಶೆಡ್ ಮತ್ತು ಕಾಲೋನಿ ವಾರ್ಷಿಕ ದುರಸ್ತಿಗಳು / ನಿರ್ವಹಣೆ.	ರೂ. 2,80,47,150/-
14	ವಲಯ ಬಿ : ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು ನಿಲ್ದಾಣ ಕಟ್ಟಡ, ಸೇವಾ ಕಟ್ಟಡ ಮತ್ತು ಪ್ಲಾಟ್‌ಫಾರಂಗಳು ಮತ್ತು ಸರ್ಕ್ಯುಲೇಟಿಂಗ್ ಪ್ರದೇಶದ ನಿರ್ವಹಣೆ.	ರೂ. 1,54,75,540/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20–05–2024 ರಂದು 15:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/50/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಬೆಂಗಳೂರು

South Western Railway - SWR | southwesternrailway_swr | SWRRLY | southwesternrailway | SWRRLY

"THE LEADER IN RURAL EDUCATION EXCELLENCE"
ನಮ್ಮ ಎಕ್ಸೆಲ್ ಅಕಾಡೆಮಿಕ್ಸ್®
ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್,
ನಂ.326, ಪೀಪಲ್ ಟೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ,
ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277
REG. OPEN FOR REGULAR
NEET, K-CET, IIT-JEE
LONG TERM COURSE
2ND PUC/12TH, +2 STUDYING / PASSED STUDENTS
POSTAL COACHING
1ST PUC & 2ND PUC, 11TH & 12, +1 & +2 STUDYING STUDENTS

FIRST BATCH 03RD JUNE, 2024
SECOND BATCH 01ST JULY, 2024
CELEBRATING 15 SUCCESSFUL YEARS with Hardwork & Dedication
EXCEL ACADAMICS
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ಐರಾವತ ಯೋಜನೆ: ನಕಲಿ ಆದೇಶ ಸೃಷ್ಟಿ– ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಅರ್ಹ ಫಲಾನುಭವಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ರೂಪಿಸಿರುವ ‘ಐರಾವತ ಯೋಜನೆ’ ಹೆಸರಿನಲ್ಲಿ ನಕಲಿ ಆದೇಶ ಸೃಷ್ಟಿಸಲಾಗಿದ್ದು, ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರವೀಣ್ ಬಾಗೇವಾಡಿ ಅವರು ದೂರು ನೀಡಿದ್ದಾರೆ. ‘ಕೆಲ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಿಗಮದಿಂದ ಅರ್ಹ ಫಲಾನುಭವಿಗಳಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ನೀಡಲು ಯೋಜನೆ ರೂಪಿಸಲಾಗಿದೆ. 2018–19 ಹಾಗೂ 2019–20ನೇ ಸಾಲಿನಲ್ಲಿ ಪ್ರವಾಸಿ ಟ್ಯಾಕ್ಸಿಗಳಿಗಾಗಿ ₹ 5 ಲಕ್ಷ ಮಂಜೂರಾಗಿರುವ ಬಗ್ಗೆ ನಕಲಿ ಆದೇಶಗಳನ್ನು ಸೃಷ್ಟಿಸಿ ಯಾದಗಿರಿ ಜಿಲ್ಲೆಯ 17 ಜನರಿಗೆ ವಿತರಿಸಲಾಗಿದೆ. ಆದೇಶ ಬಗ್ಗೆ ಅನುಮಾನಗೊಂಡ ಅಧಿಕಾರಿಗಳು ಪರಿಶೀಲಿಸಿದಾಗ ಅವು ನಕಲಿ ಎಂಬುದು ಗೊತ್ತಾಗಿದೆ’ ಎಂದು ತಿಳಿಸಿದರು.

‘ಜನರಿಂದ ಹಣ ಪಡೆದಿರುವ ಕೆಲವರು, ನಕಲಿ ಆದೇಶ ನೀಡಿ ವಂಚಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಕೃತ್ಯದಲ್ಲಿ ಕೆಲ ಚಾಲಕರು, ಸಿಬ್ಬಂದಿ ಭಾಗಿಯಾಗಿರುವ ಶಂಕೆಯು ಇದೆ. ವಿಚಾರಣೆ ಬಳಿಕ, ನಿಖರ ಮಾಹಿತಿ ಲಭ್ಯವಾಗಲಿದೆ’ ಎಂದರು.

ಮಗನಿಗೆ ಈಜು ಕಲಿಸಲು ಹೋಗಿ ತಂದೆ ಸಾವು

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಎಸ್. ರಾಗುಟ್ಟಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋನಪ್ಪಲ್ಲಿ ಗ್ರಾಮದಲ್ಲಿ ಶನಿವಾರ ವ್ಯಕ್ತಿಯೊಬ್ಬರು ಪುತ್ರನಿಗೆ ಈಜು ಕಲಿಸಲು ಹೋಗಿ ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಬಾಬು (42) ಮೃತಪಟ್ಟ ವ್ಯಕ್ತಿ.

ಮುಂಗಾರು ಹಿನ್ನೆಲೆ: ಮುಂಜಾಗ್ರತೆಗೆ ಬಿಬಿಎಂಪಿ ಒತ್ತು

‘ಸ್ವಚ್ಛತಾ ಕಾರ್ಯ ಚುರುಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪೂರ್ವ ಮುಂಗಾರು ಆರಂಭದ ಮುನ್ಸೂಚನೆ ದೊರೆತಿದ್ದು, ಮೇ 10ರವರೆಗೆ ಎಲ್ಲೆಡೆ ‘ತೀವ್ರತರ ಸ್ವಚ್ಛತಾ ಕಾರ್ಯ’ ನಡೆಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಮೇನಲ್ಲಿ ನಿರೀಕ್ಷೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಮೇ 3ರವರೆಗೆ ಕೈಗೊಳ್ಳಲಾಗಿದ್ದ ‘ಮಾಸಾರ್ಧ ಸ್ವಚ್ಛತಾ ಕಾರ್ಯಕ್ರಮ’ ಮುಂದುವರಿಸಲಾಗಿದೆ. ಈಗಾಗಲೇ ಶೇ 75ರಷ್ಟು ಚರಂಡಿಗಳನ್ನು ಸ್ವಚ್ಛಗೊಳಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಬೆಸ್ಕಾಂ, ಜಲಮಂಡಳಿ ಸೇರಿದಂತೆ ಎಲ್ಲ ಇಲಾಖೆಗಳೂ ನಗರದಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಮೇ ಅಂತ್ಯದೊಳಗೆ ಮುಗಿಸಲು ಸೂಚಿಸಲಾಗಿದೆ. ರಸ್ತೆ, ಚರಂಡಿ, ರಾಜಕಾಲುವೆಗಳ ಸ್ವಚ್ಛತೆಯನ್ನು ತೀವ್ರರೂಪದಲ್ಲಿ ಕೈಗೊಳ್ಳಲು ಮುಖ್ಯ ಎಂಜಿನಿಯರ್‌ಗಳು ಹಾಗೂ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದಿದ್ದಾರೆ.

ಪ್ರತಿ ತಿಂಗಳ ಮೂರನೇ ವಾರವೂ ‘ತೀವ್ರತರ ಸ್ವಚ್ಛತಾ ಕಾರ್ಯ’ ಕೈಗೊಳ್ಳಲೂ ಸೂಚಿಸಲಾಗಿದೆ. ಎಲ್ಲ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತದೆ. ಬಿಬಿಎಂಪಿಯ 63 ಉಪ ವಿಭಾಗಗಳಿಗೆ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಲಾಗಿದ್ದು, ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಗೆ ಸೂಚಿಸಲಾಗಿದೆ. ಮಳೆಗಾಲದಲ್ಲಿ ಯಾವುದೇ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ನಗರದ ನಾಗರಿಕರು ಜವಾಬ್ದಾರಿಯುತವಾಗಿ ವರ್ತಿಸಬೇಕು. ಚರಂಡಿಗೆ ತ್ಯಾಜ್ಯ ಸೇರಿ ಅನುಪಯುಕ್ತ ವಸ್ತುಗಳನ್ನು ಹಾಕಬಾರದು. ರಾಜಕಾಲುವೆಗಳಲ್ಲಿ ಹಾಸಿಗೆ, ಬಳಸಿದ ಗೃಹೋಪಯೋಗಿ ವಸ್ತುಗಳು ಸಿಗುತ್ತಿವೆ. ಯಾವುದೇ ರೀತಿಯ ತ್ಯಾಜ್ಯವನ್ನು ಚರಂಡಿಗೆ ಹಾಕುವುದು ದಂಡನೀಯ ಅಪರಾಧ ಎಂದು ಹೇಳಿದ್ದಾರೆ.

ಪತ್ರಿಕೋದ್ಯಮ ಡಿಪ್ಲೊಮಾ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವಿದ್ಯಾಭವನವು ಪತ್ರಿಕೋದ್ಯಮದ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಒಂದು ವರ್ಷ ಅವಧಿಯ ಈ ಕೋರ್ಸ್‌ನಲ್ಲಿ ಮುದ್ರಣ ಮಾಧ್ಯಮ, ದೃಶ್ಯ ಮಾಧ್ಯಮ ಹಾಗೂ ಕಾರ್ಪೊರೇಟ್ ಮಾಧ್ಯಮ ವಿಭಾಗದಲ್ಲಿ ತರಬೇತಿ ನೀಡಲಾಗುತ್ತದೆ. ಆಯಾ ಕ್ಷೇತ್ರದ ಪರಿಣತರು ತರಬೇತಿ ನೀಡುವರು. ಪತ್ರಿಕೋದ್ಯಮದ ಇತ್ತೀಚಿನ ಬೆಳವಣಿಗೆಗಳ ಕುರಿತೂ ಅರಿವು ಮೂಡಿಸಲಾಗುತ್ತದೆ ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದ್ದಾರೆ.

ವಿವರಗಳಿಗೆ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾ ಭವನದ ಕೇಂದ್ರ ಕಚೇರಿಗೆ ಭೇಟಿ ನೀಡಬಹುದು. ಇಲ್ಲವೆ, 9538181140ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಉತ್ತರ ತಾಲ್ಲೋಕು, ಯಶವಂತಪುರ ಹೋಬಳಿ, ಮಲ್ಲತ್ತಹಳ್ಳಿ, ಗ್ರಾಮದ ಸರ್ವೆ ನಂ. 28/1 ರಲ್ಲಿ 5 ಎಕರೆ 10 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯ ಮೂಲಕ ಸರ್ಕಾರ ತನ್ನ ಸುಬರ್ದು ಪಡೆದುಕೊಂಡು ಸದರಿ ಜಮೀನನ್ನು ನಮ್ಮ ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್‌ಗೆ 1997ರಲ್ಲಿ ಹಸ್ತಾಂತರ ಮಾಡಿದೆ. ಸದರಿ ಜಮೀನು ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್ ಸ್ವಾಧೀನಾನುಭವದಲ್ಲಿದೆ. ಹುಚ್ಚಮ್ಮ ಎಂಬುವರು ಸದರಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ರಾಜ್ಯದ ಘನ ಉಚ್ಚ ನ್ಯಾಯಾಲಯದಲ್ಲಿ (HIGH COURT OF KARNATAKA) WP-NO-32714/2013 ದಾವೆ ಹೂಡಿದ್ದರು. ಈ ದಾವೆಯು ದಿನಾಂಕ 25.08.2021 ರಂದು ವಜಾಗೊಂಡಿರುತ್ತದೆ. ದಿನಾಂಕ 25.08.2021ರ ಘನ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ರಾಜ್ಯದ ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು WA-NO-1201/2021 ಸಲ್ಲಿಸಿದ್ದರು. ಸದರಿ ಮೇಲ್ಮನವಿಯು ಕೂಡ ದಿನಾಂಕ 04.07.2022 ರಂದು ವಜಾಗೊಂಡಿರುತ್ತದೆ. ಮೇಲ್ಕಂಡ ಸದರಿ ಘನ ನ್ಯಾಯಾಲಯದ ಆದೇಶಗಳಿಂದ ಹುಚ್ಚಮ್ಮನವರಿಗೆ ಸದರಿ ಜಮೀನಿನ ಮೇಲೆ ಯಾವ ಅಧಿಕಾರವು ಹಾಗೂ ಹಕ್ಕು ಇರುವುದಿಲ್ಲವೆಂದು ತಿಳಿಸುತ್ತಾ ಒಂದು ವೇಳೆ ಈ ಆದೇಶಗಳನ್ನು ಉಲ್ಲಂಘಿಸಿ ಸದರಿ ಹುಚ್ಚಮ್ಮನವರಿಂದ ಯಾವುದೇ ರೀತಿಯಿಂದ ಸ್ವತ್ತನ್ನು ಪರಭಾರೆ ವಗೈರೆಗಳ ವ್ಯವಹಾರ ಮಾಡಿದಲ್ಲಿ ನಮ್ಮ ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್ ಜವಬ್ದಾರಿಯಾಗಿರುವುದಿಲ್ಲವೆಂದು ತಿಳಿಸುತ್ತಾ ಈ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇವೆ.

ಸಹಿ/– ಆಡಳಿತ ಮಂಡಳಿ ಪರವಾಗಿ,
ಕಾರ್ಯದರ್ಶಿ/ಮ್ಯಾನೇಜಿಂಗ್ ಟ್ರಸ್ಟಿ, ಪಾಂಚಜನ್ಯ ವಿದ್ಯಾಪೀಠ ವೆಲ್‌ಫೇರ್ ಟ್ರಸ್ಟ್, ಬೆಂಗಳೂರು.

‘ಎಸ್ಟಿ ಪಟ್ಟಿ: ಕೋಲಿ ಸಮಾಜ ಸೇರ್ಪಡೆಗೆ ಕ್ರಮ’

ಕಲಬುರಗಿ: ‘ಕೇಂದ್ರದಲ್ಲಿ ಪಕ್ಷದ ಸರ್ಕಾರ ಬರುವುದು ನಿಶ್ಚಿತವಾಗಿದ್ದು, ಕೋಲಿ ಸಮಾಜವನ್ನು ಎಸ್ಟಿ ಪಟ್ಟಿಗೆ ಸೇರಿಸಲು ಎಲ್ಲ ಪ್ರಯತ್ನ ಮಾಡುತ್ತೇನೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೋಲಿ ಸಮಾಜದವರಿಗೆ ಅಭಯ ನೀಡಿದರು.

ಇಲ್ಲಿ ಶನಿವಾರ ನಡೆದ ಕೋಲಿ, ಕಬ್ಬಲಿಗ ಸಮಾಜದ ರಾಜ್ಯಮಟ್ಟದ ಸಮಾವೇಶಕ್ಕೆ ಚಾಲನೆ ನೀಡಿದ ಅವರು, ‘ಕಲಬುರಗಿ ಭಾಗದಲ್ಲಿ ಹೆಚ್ಚಾಗಿರುವ ಕೋಲಿ ಸಮಾಜದವರನ್ನು ಎಸ್ಟಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆ ಹಳೆಯದು’ ಎಂದು ಅಭಿಪ್ರಾಯಪಟ್ಟರು.

Kühl®
Stylish Fans
Kühl ಸ್ಟೈಲೀಶ್ BLDC ಫ್ಯಾನ್‌ಗಳ ಮೂಲಕ ನಿಮ್ಮ ಮನೆಯ ಅಂದವನ್ನು ಹೆಚ್ಚಿಸಿ

• ವಿದ್ಯುತ್ ಉಳಿಸುತ್ತದೆ • ಅಧಿಕ ಗಾಳಿಯ ಹರಿವು
• ಕಡಿಮೆ ಶಬ್ದ • ವಿಶಾಲ ವ್ಯಾಪ್ತಿಯ ಫ್ಯಾನ್‌ಗಳು

*T&C Apply
ಸ್ಮಾರ್ಟ್ ವೈಶಿಷ್ಟ್ಯತೆಗಳು
• BLDC - 65% ವಿದ್ಯುತ್ ಉಳಿಸುತ್ತದೆ
• ಅಧಿಕ ಗಾಳಿಯ ಹರಿವು
• ಕಡಿಮೆ ಶಬ್ದ
• IoT ಒಪಳಗೊಂಡಿದೆ
ಸ್ಟೈಲಿಶ್ ವಿನ್ಯಾಸ
• ವ್ಯಾಪಕ ವಿನ್ಯಾಸ ಶ್ರೇಣಿ
• ಕೆಳಗಿನ ಮತ್ತು ರಾತ್ರಿಯ ಬೆಳಕು
• ಏರೋಡೈನಾಮಿಕ್ ಬ್ಲೇಡ್‌ಗಳು
• ಆಕರ್ಷಕ ಬಣ್ಣಗಳು
MORE STARS MORE SAVINGS POWER SAVINGS GUIDE BEE 5 STAR
IS 374:2019 CM/L- 8800112515
Warranty* 5 YEARS ON BLDC MOTOR 2 YEARS Comprehensive
GOOGLE/ALEXA VOICE CONTROLLED
For Free Demo: 9582 123 456 | www.kuhl.in | For Full Product Range, Scan the QR Code Below
Central Bangalore: **Distributor**: RM Trading Corp–9590222262; **Dealer**: Manish Electricals – 9986419127, Paramjyothi Electricals – 8310334850; Bharat Radio & Electric Co. – 9740314200, Mayank Marketing – 8884181907, Vijay Electric Corporation – 9886377214, Shiva Electricals – 743066660, Hari Electric – 9916049319, Manglik Marketing – 8095222768, Srinivasa Enterprises – 9886636003, Navkar Electricals – 9620008437, Chinraj Enterprises – 9964458007 **North Bangalore**: **Distributor**: Abirami B2b Trading Co. – 9972873609 **Dealer**: Lighting Palace – 9845355005, Varalakshmi Electricals – 9880186113; Sri Manjunatha Electricals – 9845932212; IK Enterprises – 9513263111; Kaveri Electronics – 7975761611; Chamundeshwari Electricals – 9008058407; Kavery Electricals – 9571174009; Light Source – 9845083494; Krishna Electricals – 8073550861; Mutha Electricals and Appliances – 8553331030; Hilight Lamps & Appliances; Ravi Electricals – 9845695530; Mahadev Electricals – 9880238732; Classic Electronics – 080 2357888 **West Bangalore: Dealer**: Aerolite lighting – 9844029966, Maharudra Lights – 7411100074; Shiva Sai Marketing – 8747886925; Rajesh Electricals – 9448974401; Bright Lights – 9945195911; SLV Electricals and Hardware – 9986052498; Sri Venkateshwara Electricals – 9845462695; Shri Shyam Electricals and Electronics – 9844787819; Prem Light House – 9945409031 **East Bangalore**: **Distributor**: S D N Electricals – 9972215422; **Dealer**: Essay Lamps and Engineering Co. – 8431923019; Seema Electrical - 9448851078 • Hindustan Electric Bazar – 9590910003, Suresh Electric Co- 9845108940 **South Bangalore**: **Distributor**: Bangalore Electrical Distributors – 9886422916; **Dealer**: Saini World – 7795581106; Priority Concepts – 9900044811; Dhurga Build Pro– 9591447861; Rajkamal Electricals and Lightings – 9886428307; Lighting Emporio – 9900035618; RK Electricals – 9886428210, Kailash Enterprises – 9632179905, Minchu – 8105733339, Arambh Studio – 9986365669, JV Electricals – 9886846157, Jayshree Enterprises – 9845047048; Sunlight – 9886033866, New SK Light House – 9880132398; Mathaji Electricals – 8197889656; Mahesh Electricals and Lightings-9986587007; Max Light and Décor- 9161424942; Arrham lights n beyond -7892156483; Ninjas Electricals and Mobile Zone-8277833388; Dinesh Lighting Palace-9886091119; Shivshankari Tiles and Electricals-8951708168; Kailash Enterprises – 9632179905; Badrinarayan Electricals – 8290976654; Kiran Light House – 9632376901; Prem Light House – 9945409031; Vaishnavi Light House – 9740480215 • **Mysore: Distributor:** Sandhya Enterprises – 9740029224; Shree Mahaveer:- 9845353626 **Dealer**: Arihant Electricals – 8197077706; Kaveri Appliances and Lightings – 9448978346; Manipal Electronics – 9448274300; Sri Mookambika Enterprises – 8660599454; Sagar Electric – 997963071, Mangaldeep- 9900630007, Rajadhani Home Appliances- 7899124261, Rajans Appliances- 9886222020, Manoj Electricals- 9448273368, GR Electricals- 7829987717, Mysore Electrical and Appliances – 6366504602, Prithvi Sales Corporation- 9663365799 • **Belgaum Distributor**: Enerzi Innotek Solutions Pvt ltd - 9606487817 • Gulbarga: Solar City Enterprises – 7829867765 • **Dharwad: Distributor**: Mark Marketing Corporation – 9845213354 • **Bijapur**: **Distributor:** Raj Electronics – 7795183163 • **Shimoga**: **Distributor:** G R Enterprises – 6364437861 • **Kumta Distributor:** Jayashree Inc – 9449955955; **Rajankunte** - Eco Shades - 9008302595.
For Distributors/Dealers Enquiry, please email at: trade@kuhl.in
Buy Online on

ಮೂರು ತಲೆಮಾರುಗಳಿಗಿಂತ ಹೆಚ್ಚು ಅನುಭವ ಸಾಬೀತಾಗಿದೆ
ಹೋಮಿಯೋ ಪ್ರಯೋಗಾಲಯಗಳ ಗುಣಮಟ್ಟ ಉತ್ಪಾದನೆ
ಹಲ್ಲುಗಳು ಸುಲಭವಾಗಿ ಬರಲು ಸೂಕ್ತ ಹೋಮಿಯೋಪತಿ ಮಾತ್ರೆಗಳು

ಡೆನ್ ಟಾನಿಕ್®
ನಕಲಿ ಬಗ್ಗೆ ಎಚ್ಚರದಿಂದಿರಿ
ಅರಿವಿಲ್ಲದೆ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವ ಮಕ್ಕಳಿಗೆ ಉಪಯುಕ್ತ ಹೋಮಿಯೋಪತಿ ಮಾತ್ರೆಗಳು

ಎ ಪಿಲ್ಸ್®
Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Sumit Pharma, Bangalore : 8379019941
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Saneha, Mysore : 8212432796
Deepak Pharma Agency, Mysore : 988672264
For Product information contact :
Bhargavi Bhatt : 6363477044

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU
NAAC A+ GRADE ACCREDITED
nirf 34th UNIVERSITY CATEGORY
ADMISSIONS OPEN
FOR THE YEAR 2024-25
APPLY NOW @
www.jssuni.edu.in

FACULTY OF DENTISTRY*
• Bachelor of Dental Surgery (BDS)

FACULTY OF MEDICINE
Fellowship
• Psychosexual Medicine
• Neonatology
• Pain Medicine
• Critical Care Medicine
Diploma
• Diploma in Psychosexual Health
B.Sc (Allied Health Sciences)
• Medical Laboratory Technology
• Medical Imaging Technology
• Anaesthesia & Operation Theatre Technology
• Renal Dialysis Technology
• Respiratory Therapy
• Cardiac Care Technology
• Perfusion Technology
• Emergency Medicine Technology
• Physician Assistant
• Optometry
• Forensic Sciences
• Medical Genetics & Counseling (Hon's)
• Bachelor of Occupational Therapy
MPH/ M.Phil/ M.Sc (Medical/ Biomedical)
• Medical Microbiology
• Medical Biochemistry
• Medical Physiology
• Medical Anatomy
• Medical Pharmacology
• Clinical Psychology
• Clinical Embryology
• Medical Genetics and Counseling
• Echocardiography
• Forensic Odontology
• Master of Public Health (MPH)
• M.Phil Rehabilitation Psychology
• M.Phil Clinical Psychology
PhD
• Medicine / Dentistry / Pharmacy / Management Studies / Yoga / Life Sciences/ Biomedical Sciences

FACULTY OF PHARMACY (MYSURU & OOTY)
Diploma/UG/PG Programmes
• D Pharm
• B Pharm
• B Pharm (Lateral Entry)
• Pharm D
• Pharm D (PB)
M.Pharm
• Pharmaceutics
• Pharmaceutical Quality Assurance
• Regulatory Affairs
• Industrial Pharmacy
• Pharmacy Practice
• Pharmacology
• Pharmaceutical Chemistry
• Pharmaceutical Analysis
• Pharmacognosy
• Pharmaceutical Biotechnology
Note: The Schedule for Entrance Test & Counselling is hosted at the Website.
DEPARTMENT OF YOGA
• B.Sc. Yoga
• M.Sc. Yoga
• Yoga Teachers Course (YTC) (3 months)
DEPARTMENT OF HEALTH SYSTEM MANAGEMENT STUDIES
• BBA Hospital & Health System Management (Hon's)
• MBA Hospital Administration
• MBA Pharmacy Administration
• MBA Information Technology
SCHOOL OF LIFE SCIENCES (MYSURU & OOTY)
B.Sc Courses
• Biotechnology
• Microbiology
• Environmental Sciences
• Food, Nutrition & Dietetics
• Psychology
• Biochemistry
• Statistics & Data Analytics
• Computational Biology & Bioinformatics

M.Sc Courses
• Cognitive Neuroscience
• Environmental Science
• Geoinformatics
• Nanoscience & Technology
• Nutrition & Dietetics
• Molecular Biology
• Biochemistry
• Microbiology
• Medical Statistics
• Bioinformatics
• Cosmetic Science
• Sports, Nutrition & Management
• Biotechnology
• Medical Physics
Diploma
• Tissue Culture
• Nutraceutical Technology
• Environment, Health & Safety Management
DISTANCE / ONLINE LEARNING PROGRAMS
Distance Learning
• Diploma in Environment Health & Safety Management
• Diploma in Tissue Culture
• Certificate Program in Statistical Methods & Research Methodology
Online Learning
• MBA Hospital Administration
• MBA Pharmacy Administration
• BBA Hospital and Health System Management
• B.Sc Psychology
• Certificate Programme in Dental Ethics & Jurisprudence
• Certificate Programme in Yoga Instructor
Diploma in
• Pharmacovigilance/ Quality Control/ Bioinformatics/ Regulatory Affairs/ Medical Device

Note: The guidance for counselling/ admissions will be given to BDS Program. Candidates may apply to NEET entrance test. For online counselling/ seat allotment, candidates may apply at Medical Counselling Committee (MCC) website @ www.mcc.nic.in. For more guidance, Please visit JSS AHER Campus or E-mail at - admissions@jssuni.edu.in.
JSS ACADEMY OF HIGHER EDUCATION & RESEARCH
Sri Shivarathreeshwara Nagara, Bannimantap, Mysuru- 570 015, Karnataka, India. | T:0821-2548416/ 400/ 014/ +91 99808 41859
E: admissions@jssuni.edu.in | W: www.jssuni.edu.in | FB: www.fb.com/jssuniversity

ಮೊದಲ ಮತದ ಸಂಭ್ರಮ

ಕೆ. ಮೇಘರಾಜ, ಹಿರೇಹಡಗಲಿ, ಬಳ್ಳಾರಿ ಜಿಲ್ಲೆ
ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಚುನಾವಣೆಯಲ್ಲಿ ನಾನು ಮೊದಲ ಬಾರಿ ಮತ ಚಲಾಯಿಸುವೆ. ಇದು ನನಗೆ ಸಂತೋಷ ತಂದಿದೆ. ಆ ದಿನಕ್ಕಾಗಿ ಕಾಯುತ್ತಿರುವೆ. ಪಕ್ಷ, ಜಾತಿ, ಮತ ನೋಡದೇ ಯೋಗ್ಯ ವ್ಯಕ್ತಿಗೆ ಮತ ನೀಡುವೆ. ಆಸೆ, ಆಮಿಷಗಳಿಗೆ ಒಳಗಾಗದೇ ನನ್ನ ಮೊದಲ ಮತ ಚಲಾಯಿಸುವೆ. ಎಲ್ಲ ಮತದಾರರು ನೈತಿಕತೆಯಿಂದ ಮತ ಚಲಾಯಿಸಿ ಜನತಂತ್ರವನ್ನು ಗೆಲ್ಲಿಸಬೇಕು.

ಮತ ಆಮಿಷ: ಆಯೋಗದ ವಶ

₹98.86 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹82.01 ಕೋಟಿ
ಮದ್ಯ	₹179.16 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.79 ಕೋಟಿ (626.07 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

₹77.85 ಕೋಟಿ ಚಿನ್ನ (138.94 ಕೆ.ಜಿ.)

ಮತ ಬ್ಯಾಂಕ್ ರಾಜಕಾರಣ ಸಹಿಸಲ್ಲ

ಹುಬ್ಬಳ್ಳಿ: ಧಾರವಾಡ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಪ್ರಲ್ಹಾದ ಜೋಶಿ ಐದನೇ ಬಾರಿ ಕಣಕ್ಕಿಳಿದಿದ್ದಾರೆ. ಸತತ ನಾಲ್ಕು ಚುನಾವಣೆಗಳಲ್ಲಿ ಗೆದ್ದಿರುವ ಅವರು ಕೇಂದ್ರ ಸಚಿವರಾಗಿ ಹಲವು ಖಾತೆಗಳನ್ನು ನಿರ್ವಹಿಸಿದ್ದಾರೆ. 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಸಾರಾಂಶ ಇಲ್ಲಿದೆ.



● ಶ್ರೀಕಾಂತ ಕಲ್ಲಮ್ಮನವರ

● ಚುನಾವಣಾ ವಾತಾವರಣ ಹೇಗಿದೆ?
ಎಲ್ಲಾ ಕಡೆ ಜನರಿಂದ ಉತ್ತಮ ಸ್ಪಂದನೆ ಸಿಕ್ಕಿದೆ. ಪ್ರಧಾನಿ ಮೋದಿ ಆಡಳಿತದಲ್ಲಿ ಅಭಿವೃದ್ಧಿ ಕೆಲಸಗಳು ಆಗಿವೆ. ರೈಲ್ವೆ, ಹೆದ್ದಾರಿ ಸೇರಿ ಮೂಲಸೌಲಭ್ಯಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ದೇಶದ ಸುರಕ್ಷತೆ ಮತ್ತು ಸುಭದ್ರ ಸರ್ಕಾರದ ದೃಷ್ಟಿಯಿಂದ ಜನರು ಸಮರ್ಥ ನಾಯಕತ್ವದ ನಿರೀಕ್ಷೆಯಲ್ಲಿ ಇದ್ದಾರೆ.

● ಕ್ಷೇತ್ರದ ಅಭಿವೃದ್ಧಿಗೆ ನಿಮ್ಮ ಕೊಡುಗೆ ಏನು?
ಶಿಕ್ಷಣ ರಂಗದಲ್ಲಿ ಐಐಟಿ, ಐಐಐಟಿ, ವಿಧಿವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪಿಸಿದ್ದೇವೆ. ಹಲವು ಕಡೆ ರಸ್ತೆ ನಿರ್ಮಿಸಿದ್ದೇವೆ. ಹುಬ್ಬಳ್ಳಿ– ಗದಗ, ಹುಬ್ಬಳ್ಳಿ– ಚಿತ್ರದುರ್ಗ ಆರು ಪಥ ಹೆದ್ದಾರಿ ಮಾಡಿದ್ದೇವೆ. ಹುಬ್ಬಳ್ಳಿ, ಧಾರವಾಡ ರೈಲ್ವೆ ನಿಲ್ದಾಣ ಮೇಲ್ದರ್ಜೆಗೆ ಏರಿಸಿದ್ದೇವೆ. ವಂದೇಭಾರತ್ ರೈಲು ಓಡಿಸಿದ್ದೇವೆ. ಹುಬ್ಬಳ್ಳಿಯಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ₹ 350 ಕೋಟಿ ಕೊಡಿಸಿದ್ದೇವೆ. ಕಿಮ್ಸ್ ಆಸ್ಪತ್ರೆಯಲ್ಲಿ ಪಿಎಂಎಸ್‌ಎಸ್‌ವೈ ಯೋಜನೆಯಡಿ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಿದ್ದೇವೆ.

● ದಿಂಗಾಲೇಶ್ವರ ಸ್ವಾಮೀಜಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ಇದರಿಂದ ನಿಮಗೆ ಅನುಕೂಲವೇ?
ದಿಂಗಾಲೇಶ್ವರ ಸ್ವಾಮೀಜಿಯವರ ಬಗ್ಗೆ ಏನೂ ಹೇಳಲ್ಲ. ನನಗೆ ಕಾಂಗ್ರೆಸ್ ನೇರ ಸ್ಪರ್ಧಿ ಎಂದು ಮೊದಲಿನಿಂದಲೂ ಹೇಳಿದ್ದೇನೆ. ಕಾಂಗ್ರೆಸ್‌ಗೆ ಹೋಲಿಸಿದರೆ ಬಿಜೆಪಿ ಸಾಕಷ್ಟು ಮುಂದಿದೆ. ಜನ ಆಶೀರ್ವದಿಸುವರು ಎಂಬ ವಿಶ್ವಾಸವಿದೆ.

● ನೇಹಾ ಹಿರೇಮಠ ಕೊಲೆ ಪ್ರಕರಣವನ್ನು ಬಿಜೆಪಿಯು ರಾಜಕೀಯಕ್ಕೆ ಬಳಸಿಕೊಂಡಿದ್ದು ಸರಿಯೇ?
ಮತ ಬ್ಯಾಂಕ್‌ಗಾಗಿ ಕಾಂಗ್ರೆಸ್ ಬೇಜವಾಬ್ದಾರಿಯಿಂದ ನಡೆದುಕೊಂಡಿದೆ. ನಮ್ಮ ಸ್ಪಂದನೆ, ಪ್ರತಿಸ್ಪಂದನೆಗೆ ನೀವು ರಾಜಕೀಯ ಎನ್ನುವುದಾದರೆ, ಅದನ್ನೇ 10 ಸಲ ಮಾಡುತ್ತೇವೆ. ವಿದ್ಯಾರ್ಥಿನಿಯ ತಂದೆ ಸ್ವತಃ ಕಾಂಗ್ರೆಸ್ ಕಾರ್ಯಕರ್ತ. ಆದರೆ, ಅವರೇ ರಾಜ್ಯ ಸರ್ಕಾರದಿಂದ ನ್ಯಾಯ ಸಿಗಲ್ಲ ಎಂದು ಹೇಳಿದ್ದಾರೆ. ನೇಹಾಳನ್ನು ಇಸ್ಲಾಂಗೆ ಪರಿವರ್ತಿಸಲು ಪ್ರಯತ್ನಿಸಲಾಯಿತು. ನಿರಾಕರಿಸಿದ್ದಕ್ಕೆ ಆಕೆಯನ್ನು ಕೊಲ್ಲಲಾಯಿತು ಎಂದು ತಂದೆಯೇ ಆರೋಪಿಸಿದ್ದಾರೆ. ಇದು ಗಂಭೀರ ಆರೋಪ ಅಲ್ಲವೇ? ಮತ ಬ್ಯಾಂಕ್ ರಾಜಕಾರಣ ಕಾಂಗ್ರೆಸ್ ಮಾಡಿದ್ದರಿಂದ ಜನ ಮುಗಿ ಬಿದ್ದರು.

● ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿಗೆ ಎಷ್ಟು?
ಕಳೆದ ಸಲ 25 ಕ್ಷೇತ್ರಗಳನ್ನು ಗೆದ್ದಿದ್ದೆವು. ಈ ಸಲವೂ ಅಷ್ಟೇ ಸ್ಥಾನ ಗೆಲ್ಲುತ್ತೇವೆ. ಒಂದು ಸ್ಥಾನ ಹೆಚ್ಚು ಆಗುವ ವಿಶ್ವಾಸವಿದೆ.

● ಮಹದಾಯಿ ಯೋಜನೆ ಭರವಸೆಗಳ ಗೆರೆ ದಾಟಿ, ಜಾರಿಯಾಗುವುದು ಯಾವಾಗ?
ಮಹದಾಯಿ ಯೋಜನೆ ಯೋಜನೆ ಪ್ರಸ್ತಾಪಿಸಿದ್ದೇ ನಾನು. ಕಾಂಗ್ರೆಸ್‌ನವರು ಎತ್ತಿರಲಿಲ್ಲ. 2009ರಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ, ಅನಂತಕುಮಾರ್ ಜೊತೆ ಸೇರಿ ಮನಮೋಹನ್ ಸಿಂಗ್ ಅವರನ್ನು ಭೇಟಿಯಾಗಿ ಈ ಯೋಜನೆಗೆ ಅನುಮೋದನೆ ನೀಡುವಂತೆ ಕೋರಿದ್ದೆವು. ಆದರೆ, ಅವರು ಜಲ ನ್ಯಾಯಮಂಡಳಿಗೆ ನೀಡಿ ಕೈತೊಳೆದುಕೊಂಡರು. ನಂತರ ನಾವು ಅಧಿಕಾರಕ್ಕೆ ಬಂದ ಬಳಿಕ ಜಲಮಂಡಳಿಗೆ ಸಿಬ್ಬಂದಿ, ಕಚೇರಿ ನೀಡಿದೆವು. ವರದಿ ಪಡೆದು, ಅಧಿಸೂಚನೆ ಹೊರಡಿಸಿದೆವು. ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಿದೆ. ರಾಜ್ಯ ಸರ್ಕಾರ ಕಳುಹಿಸಿದ್ದ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರದಿಂದ ಒಪ್ಪಿಗೆ ಕೊಡಿಸಿದೆ.
ಯೋಜನಾ ಪ್ರದೇಶದಲ್ಲಿ 55 ಹೆಕ್ಟೇರ್ ದಟ್ಟ ಅರಣ್ಯ ಇದೆ. ಹುಲಿಗಳ ತಾಣವೂ ಇದೆ. ಹುಲಿಗಳ ರಕ್ಷಣೆ ಹೇಗೆ ಎಂಬುದಕ್ಕೆ ವನ್ಯಜೀವಿ ಮಂಡಳಿಗೆ (ವೈಲ್ಡ್ ಲೈಫ್ ಬೋರ್ಡ್) ಹುಲಿ ಸಂರಕ್ಷಣಾ ಪ್ರಾಧಿಕಾರ ಮತ್ತು ಕರ್ನಾಟಕ ಸರ್ಕಾರ ಉತ್ತರ ಕೊಟ್ಟಿದೆಯಂತೆ. ಇಷ್ಟರಲ್ಲಿಯೇ ಅನುಮೋದನೆ ಸಿಗಲಿದೆ.

● ಕ್ಷೇತ್ರದ ಲಿಂಗಾಯತ ನಾಯಕರನ್ನು ನೀವು ಮೂಲೆಗುಂಪು ಮಾಡಿದೀರಿ ಎಂಬ ಆರೋಪ ನಿಮ್ಮ ಮೇಲಿದೆಯಲ್ಲ?
ನನ್ನ ಸಾರ್ವಜನಿಕ ಬದುಕು ಶುದ್ಧವಿದೆ. ನೈತಿಕವಾಗಿ ಹಾಗೂ ಭ್ರಷ್ಟಾಚಾರ ವಿರೋಧಿಸುವುದರಲ್ಲಿ ನಾನು ಕಟ್ಟುನಿಟ್ಟು. ನನ್ನ ವಿರೋಧಿಸಲು ವಿಷಯಗಳೇ ಇರದ ಕಾರಣ ಜಾತಿ ಆಧರಿಸಿ ಆರೋಪಿಸುತ್ತಾರೆ. ನನ್ನ ಲೋಕಸಭಾ ಕ್ಷೇತ್ರದಲ್ಲಿ ಎಂಟು ಮಂದಿ ಶಾಸಕರಿದ್ದು, ನಾಲ್ವರು ಬಿಜೆಪಿಯವರು ಇದ್ದಾರೆ. ಎಲ್ಲರೂ ಲಿಂಗಾಯತರು ಇದ್ದಾರೆ.

ಪ್ರಜಾವಾಣಿ ಸಂದರ್ಶನ
ಪ್ರಲ್ಹಾದ ಜೋಶಿ

ಬೀದಿಗಿಳಿದ ಮಠಾಧೀಶರು

ಸಭೆಗೆ ಅನುಮತಿ ನಿರಾಕರಣೆ; ಕ್ಷಮೆಕೋರಿದ ಡಿಸಿಪಿ

ಹುಬ್ಬಳ್ಳಿ ಚನ್ನಮ್ಮ ವೃತ್ತದಲ್ಲಿ ಶನಿವಾರ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಮಠಾಧೀಶರು ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ರಂಭಾಪುರಿ ಕಲ್ಯಾಣ ಮಂಟಪದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಗುರುವಿರಕ್ತ ಸಾಧು ಸನ್ಯಾಸಿಗಳ ಚಿಂತನ– ಮಂಥನ ಸಭೆ'ಗೆ ಚುನಾವಣಾ ಆಯೋಗ ಅನುಮತಿ ನೀಡದ ಕಾರಣ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಸ್ವಾಮೀಜಿಗಳು ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಆಯೋಗ ಹಾಗೂ ಪೊಲೀಸ್ ಇಲಾಖೆ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, 'ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಜೀತದಾಳುಗಳಂತೆ ಅಧಿಕಾರಿಗಳು ವರ್ತಿಸುತ್ತಿದ್ದಾರೆ' ಎಂದು ಆರೋಪಿಸಿದರು. ನಂತರ ಮಹಾನಗರ ಪಾಲಿಕೆ ಆವರಣದಲ್ಲಿ ಪ್ರತಿಭಟನೆ ಮುಂದುವರಿಸಿದರು.

'ಸಭೆಗೆ ಯಾಕೆ ಅನುಮತಿ ನೀಡಿಲ್ಲ ಎಂದು ಚುನಾವಣಾಧಿಕಾರಿ ಸ್ಪಷ್ಟಪಡಿಸಬೇಕು. 'ಸಭೆಗೆ ಧಕ್ಕೆ ತಂದು, ಮಠಾಧೀಶರನ್ನು ಬಂಧಿಸುವೆ' ಎಂದಿದ್ದ ವಿದ್ಯಾನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಧರೇಗೌಡ ಪಾಟೀಲ ಕ್ಷಮೆ ಕೇಳಬೇಕು. ಇಲ್ಲವೇ, ಪಾಲಿಕೆ ಆವರಣದಲ್ಲಿ ಸಭೆ ನಡೆಸಲು ಅವಕಾಶ ಕಲ್ಪಿಸಿಕೊಡಬೇಕು' ಎಂದು ಸ್ವಾಮೀಜಿಗಳು ಪಟ್ಟುಹಿಡಿದರು.

ಸ್ಥಳಕ್ಕೆ ಬಂದ ಚುನಾವಣಾಧಿಕಾರಿ ಹಾಗೂ ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ, 'ಅನುಮತಿ ಕೋರಿದ ಪತ್ರದಲ್ಲಿ ರಾಜಕೀಯ ಸಭೆ ಎಂದು ಬರೆದ ಕಾರಣ ಅನುಮತಿ ನೀಡಿಲ್ಲ. ನೀತಿ ಸಂಹಿತೆ ಜಾರಿಯಲ್ಲಿದ್ದಾಗ ಧಾರ್ಮಿಕ ಸ್ಥಳದಲ್ಲಿ ರಾಜಕೀಯ ಸಭೆಗೆ ಅವಕಾಶವಿಲ್ಲ. ರಾಜಕೀಯೇತರ ಸಭೆ ನಡೆಸಲು ಈಗ ಅನುಮತಿ ನೀಡಿದ್ದೇವೆ' ಎಂದರು.

ಅದಕ್ಕೆ ಸಮಾಧಾನವಾಗದ ಸ್ವಾಮೀಜಿಗಳು, 'ಮಠಾಧೀಶರನ್ನು ಬೀದಿಗಿಳಿಸಿದ ಇನ್‌ಸ್ಪೆಕ್ಟರ್ ಅವರು ನಮ್ಮ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಮತ್ತೆ ಪ್ರತಿಭಟನೆ ನಡೆಸುತ್ತೇವೆ. ನಾಳೆ ರಾಜ್ಯದಾದ್ಯಂತ ಬಂದ್ ಕರೆ ನೀಡುತ್ತೇವೆ' ಎಂದರು. ಆಗ ಡಿಸಿಪಿ ರಾಜೀವ್ ಎಂ, 'ನಿಮ್ಮ ಭಾವನೆಗಳಿಗೆ ಧಕ್ಕೆಯಾಗಿದ್ದರೆ ಕ್ಷಮೆ ಕೇಳುತ್ತೇವೆ. ರಾಜಕೀಯ ಹೊರತುಪಡಿಸಿ ಸಭೆ ನಡೆಸಿ' ಎಂದರು. ನಂತರ ಮಠಾಧೀಶರು ಪ್ರತಿಭಟನೆ ಹಿಂಪಡೆದರು.

ಕೊಟ್ಟೂರು ಮಹಾಸ್ವಾಮೀಜಿ, ಮಹಾಲಿಂಗ ಸ್ವಾಮೀಜಿ, ವೃಷಭೇಂದ್ರ ಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಶಂಭುಲಿಂಗಸ್ವಾಮೀಜಿ, ವಾಮದೇವ ಶಿವಾಚಾರ್ಯ ಸ್ವಾಮೀಜಿ, ಮಹಾಂತ ಶಿವಾಚಾರ್ಯ ಸ್ವಾಮೀಜಿ, ಸಿದ್ದಬಸವ ಸ್ವಾಮೀಜಿ, ಬಸವ ಭೂಷಣ ಸ್ವಾಮೀಜಿ, ಸಂಗಮೇಶ ಸ್ವಾಮೀಜಿ, ಶರಣಬಸವ ದೇವರು, ಕುಮಾರ ಸ್ವಾಮೀಜಿ ಸೇರಿ ರಾಜ್ಯದ ವಿವಿಧ ಭಾಗಗಳ ಸ್ವಾಮೀಜಿ ಇದ್ದರು.

ಸಭೆಯಲ್ಲಿ ನಿರ್ಣಯ ಮಂಡನೆ

ಪ್ರತಿಭಟನೆ ಬಳಿಕ ನಡೆದ ಚಿಂತನ–ಮಂಥನ ಸಭೆಯಲ್ಲಿ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಯಿತು. ನೇಹಾ ಹಿರೇಮಠ ಹತ್ಯೆಗೆ ಖಂಡನೆ, ವೀರಶೈವ–ಲಿಂಗಾಯತ ಧಾರ್ಮಿಕ ಪರಂಪರೆಯ ರಕ್ಷಣೆ ಸೇರಿ ಕೆಲ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇದಕ್ಕೂ ಮುನ್ನ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, 'ಸಭೆ ನಡೆಸಲು ಅನುಮತಿ ನೀಡುವಂತೆ ಶುಕ್ರವಾರವೇ ಆಯೋಗಕ್ಕೆ ವಿನಂತಿಸಿದ್ದೆವು. ರಾತ್ರಿವರೆಗೂ ಕಾಯಿಸಿ, ಬೆಳಿಗ್ಗೆ ಅನುಮತಿ ನೀಡುವುದಾಗಿ ತಿಳಿಸಿದ್ದರು. ಶನಿವಾರ ಬೆಳಿಗ್ಗೆ 11.30 ಆದರೂ ಅನುಮತಿ ನೀಡದ ಕಾರಣ, ನಾವು ಸಭೆ ನಡೆಸಲು ಮುಂದಾದೆವು. ಆಗ ಪೊಲೀಸರು ಮತ್ತು ಚುನಾವಣಾ ಅಧಿಕಾರಿಗಳು ಬಂದು ಸಭೆ ನಡೆಸದಂತೆ ತಡೆದರು' ಎಂದರು.

ಉದ್ಯಮಿಗಳ ಸಾಲ ಮನ್ನಾ ಮಾಡಿ ರೈತರ ಸಮಸ್ಯೆಗೆ ಸ್ಪಂದಿಸದ ಪ್ರಧಾನಿ: ಪ್ರಿಯಾಂಕಾ ವಾಗ್ದಾಳಿ

ಲಸಿಕೆ ತಯಾರಕರಿಂದಲೂ ಬಿಜೆಪಿಗೆ ದೇಣಿಗೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಬಿಜೆಪಿಯು ದೊಡ್ಡ ದೊಡ್ಡ ಉದ್ಯಮಿಗಳಿಂದ ದೇಣಿಗೆ ಪಡೆದು ಜಗತ್ತಿನ ಅತ್ಯಂತ ಶ್ರೀಮಂತ ಪಕ್ಷವಾಗಿ ಹೊರಹೊಮ್ಮಿದೆ. ಹೃದಯಾಘಾತ ಉಂಟುಮಾಡುತ್ತಿರುವ ಕೋವಿಡ್ ಲಸಿಕೆಯನ್ನು ತಯಾರಿಸಿರುವ ಕಂಪನಿಯಿಂದಲೂ ಆ ಪಕ್ಷವು ₹ 52 ಕೋಟಿ ದೇಣಿಗೆ ಪಡೆದುಕೊಂಡಿದೆ' ಎಂದು ಕಾಂಗ್ರೆಸ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ದೂರಿದರು.

ಶನಿವಾರ ಇಲ್ಲಿ ನಡೆದ ಪಕ್ಷದ ಲೋಕಸಭೆ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಬಿಜೆಪಿಗೆ ದೇಣಿಗೆ ನೀಡಿರುವ ಕಂಪನಿಯು ತಯಾರಿಸಿರುವ ಲಸಿಕೆ ಹಾಕಿಸಿಕೊಂಡು ದೇಶದ ಸಾವಿರಾರು ಜನ, ಅದರಲ್ಲೂ ವಿಶೇಷವಾಗಿ ಗಟ್ಟಿಮುಟ್ಟಾದ ಯುವಕರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಸಾವಿಗೀಡಾಗುತ್ತಿದ್ದಾರೆ' ಎಂದು ಆರೋಪಿಸಿದರು.

'ಕೆಲ ತಿಂಗಳ ಹಿಂದೆ ಗುಜರಾತ್‌ನಲ್ಲಿ ತೂಗು ಸೇತುವೆಯೊಂದು ಕುಸಿದು ಅನೇಕರು ಪ್ರಾಣ ಕಳೆದುಕೊಂಡರು. ಆ ಸೇತುವೆ ನಿರ್ಮಿಸಿದ್ದ ಗುತ್ತಿಗೆದಾರನೂ ಬಿಜೆಪಿಗೆ ದೇಣಿಗೆ ನೀಡಿದ್ದ. ಅದೇ ರೀತಿ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಯು ಶ್ರೀಮಂತ ಉದ್ಯಮಿಗಳಿಂದ ₹ 7,000 ಕೋಟಿ ಮೊತ್ತವನ್ನು ದೇಣಿಗೆ ರೂಪದಲ್ಲಿ ಪಡೆದು ಅತ್ಯಂತ ಶ್ರೀಮಂತ ಪಕ್ಷವೆಂದು ಹೆಸರಾಗಿದೆ' ಎಂದು ವಾಗ್ದಾಳಿ ನಡೆಸಿದರು.

ದಾವಣಗೆರೆಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರಿಗೆ ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ಸ್ಮರಣಿಕೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಚ್‌.ಎಂ.ರೇವಣ್ಣ, ಎಚ್‌.ಆಂಜನೇಯ, ಡಿ.ಕೆ.ಶಿವಕುಮಾರ್, ಕೆ.ಎಸ್‌ ಬಸವಂತಪ್ಪ, ಎಸ್‌.ರಾಮಪ್ಪ ಹಾಗೂ ಇತರರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

'ವಿಪಕ್ಷಕ್ಕೆ ಸೇರಿರುವ ಅನೇಕ ರಾಜಕಾರಣಿಗಳ ಮನೆಗಳ ಮೇಲೆ ಆದಾಯ ತೆರಿಗೆ, ಇ.ಡಿ. ದಾಳಿ ನಡೆಸಿ, ಅವರನ್ನು ತನ್ನತ್ತ ಸೆಳೆಯುತ್ತಿರುವ ಬಿಜೆಪಿ, ಅವರಿಂದಲೂ ದೇಣಿಗೆ ಸಂಗ್ರಹಿಸಿದೆ. ಇದು ನಿಜಕ್ಕೂ ದೊಡ್ಡ ಭ್ರಷ್ಟಾಚಾರ' ಎಂದು ಆರೋಪಿಸಿದರು.

'ಚುನಾವಣಾ ಬಾಂಡ್‌ಗಳ ಮೂಲಕ ರಾಜಕೀಯ ಪಕ್ಷಗಳು ದೇಣಿಗೆ ಸಂಗ್ರಹಿಸಲು ಅವಕಾಶ ನೀಡಿದ್ದೇ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ. ಆದರೆ, ಬಾಂಡ್ ಮೂಲಕವೇ ದೇಣಿಗೆ ಸಂಗ್ರಹಿಸಿದ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಯನ್ನು ಚುನಾವಣೆಯ ಸಂದರ್ಭವೇ ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಖರ್ಚು ಮಾಡಲೂ ಹಣವಿಲ್ಲದಂತೆ ಮಾಡಿತು' ಎಂದು ದೂರಿದರು.

'ದೇಶದ ಅರ್ಥ ವ್ಯವಸ್ಥೆ ಹದಗೆಡಲಿದೆ ಎಂಬ ಸಬೂಬು ಹೇಳುತ್ತ ರೈತರ ಸಾಲಮನ್ನಾ ಮಾಡಲು ಹಿಂದೇಟು ಹಾಕುತ್ತಿರುವ ಪ್ರಧಾನಿ, ತನ್ನ ಉದ್ಯಮಿ ಸ್ನೇಹಿತರ ₹ 16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ. ಕೇವಲ ₹ 10,000ದಷ್ಟು ಸಾಲ ಭರಿಸಲಾಗದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಅವರ ಸಾಲವನ್ನು ಮನ್ನಾ ಮಾಡದವರು ದೊಡ್ಡ ಉದ್ಯಮಿಗಳ ಸಾಲ ಮನ್ನಾ ಮಾಡಿದರೆ ಅರ್ಥ ವ್ಯವಸ್ಥೆ ಹಾಳಾಗುವುದಿಲ್ಲವೇ?' ಎಂದು ಪ್ರಶ್ನಿಸಿದ ಅವರು, 'ಇದು ಅತ್ಯಂತ ದೊಡ್ಡ ಭ್ರಷ್ಟಾಚಾರ' ಎಂದು ದೂರಿದರು.

'ಖಾಸಗಿಯವರಿಗೆ ನೆರವಾಗುವ ನಿಟ್ಟಿನಲ್ಲಿ ಸಾರ್ವಜನಿಕ ವಲಯದ ಉದ್ಯಮಗಳನ್ನು ಬಂದ್ ಮಾಡಲಾಗಿದೆ. ಹೆದ್ದಾರಿ, ಬಂದರು, ಕಲ್ಲಿದ್ದಲು, ವಿದ್ಯುತ್, ವಿಮಾನ ನಿಲ್ದಾಣ ಮತ್ತಿತರ ವಲಯದ ಉದ್ಯಮಗಳನ್ನು ಖಾಸಗಿಯವರಿಗೆ ವಹಿಸಲಾಗುತ್ತಿದೆ. ಉದ್ಯೋಗ ಕ್ಷೇತ್ರವು ಖಾಸಗಿಯವರ ವಶದಲ್ಲಿದೆ. ಆದರೆ, ಖಾಸಗಿ ವಲಯದಲ್ಲಿ ಮೀಸಲಾತಿ ದೊರೆಯುತ್ತಿಲ್ಲ' ಎಂದು ವಿವರಿಸಿದರು.

'ಚುನಾವಣೆಯ ಸಂದರ್ಭದಲ್ಲೇ ಎರಡು ರಾಜ್ಯಗಳ ಮುಖ್ಯಮಂತ್ರಿಗಳನ್ನು ಜೈಲಿಗೆ ಕಳುಹಿಸಲಾಗಿದೆ. ಈ ಕುರಿತು ಧ್ವನಿ ಎತ್ತುವವರನ್ನು ಹತ್ತಿಕ್ಕಲಾಗುತ್ತಿದೆ. ಶ್ರೀಮಂತ ಉದ್ಯಮಿಗಳು ಮಾಧ್ಯಮಗಳನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿರುವುದರಿಂದ ಇಂಥ ವ್ಯವಸ್ಥೆಯ ವಿರುದ್ಧ ಮಾಧ್ಯಮಗಳೂ ಧ್ವನಿ ಎತ್ತದಂತಾಗಿದ್ದು ವಿಷಾದನೀಯ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಜರಿದ್ದರು.

'ಲವ್ ಜಿಹಾದ್: ಕೇರಳ ಮಾದರಿ ಅನುಕರಣೆ'

ಹುಬ್ಬಳ್ಳಿ: 'ಕಾಂಗ್ರೆಸ್ ಸರ್ಕಾರದ ಅಲ್ಪಸಂಖ್ಯಾತರ ತುಷ್ಟೀಕರಣ ನೀತಿಯಿಂದ ಕರ್ನಾಟಕವು ಕೇರಳ ಮಾದರಿ ಅನುಸರಿಸುತ್ತಿದ್ದು, ಲವ್ ಜಿಹಾದ್ ಪ್ರಕರಣ ಹೆಚ್ಚುತ್ತಿವೆ. ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.



ಬಿ.ವೈ. ವಿಜಯೇಂದ್ರ

'ಕೊಲೆಗಡುಕರಿಗೆ ರಾಜ್ಯ ಸರ್ಕಾರ ಪರೋಕ್ಷವಾಗಿ ಸಹಕರಿಸುತ್ತಿದೆ. ಹಿಂದೂ ಯುವತಿಯರಿಗೆ ಭಯಗ್ರಸ್ತ ವಾತಾವರಣ ನಿರ್ಮಾಣವಾಗಿದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕೊಲೆಗಡುಕರ ಬಂಧನಕ್ಕೆ ರಾಜ್ಯ ಸರ್ಕಾರ ನೂರು ಸಲ ಯೋಚಿಸುತ್ತದೆ. ಲವ್ ಜಿಹಾದ್‌ನಲ್ಲಿ ತಪ್ಪಿತಸ್ಥರನ್ನು ಒಳಗೆ ಹಾಕಬೇಕೆಂದರೆ ಅಲ್ಪಸಂಖ್ಯಾತರಿಗೆ ನೋವು ಆಗುವುದೆಂದು ಭಾವಿಸುತ್ತದೆ' ಎಂದರು.

ಬಿಜೆಪಿ ನಾಯಕ ಸಿ.ಟಿ.ರವಿ ಮಾತನಾಡಿ, 'ರಾಜ್ಯದಲ್ಲಿ ಲವ್ ಜಿಹಾದ್ ವ್ಯವಸ್ಥಿತ, ಯೋಜನಾಬದ್ಧವಾಗಿ ನಡೆದಿದೆ. ಇದರ ಜಾಡು ಪತ್ತೆಗೆ ರಾಜ್ಯ ಸರ್ಕಾರ ಪ್ರತ್ಯೇಕ ಎಸ್‌ಐಟಿ ರಚಿಸಿ, ತನಿಖೆ ನಡೆಸಬೇಕು' ಎಂದರು.

'ಔರಂಗಜೇಬನ ಕಾಲದಲ್ಲಿ ಪ್ರಾಣ ಬೆದರಿಕೆಯೊಡ್ಡಿ ಹಿಂದೂಗಳನ್ನು ಮತಾಂತರ ಮಾಡಲಾಗುತ್ತಿತ್ತು. ಈಗ ಪ್ರೀತಿ ನೆಪದಲ್ಲಿ ಮಾಡಲಾಗುತ್ತಿದೆ. ಲವ್ ಜಿಹಾದ್, ಲ್ಯಾಂಡ್ ಜಿಹಾದ್ (ಭೂ ಕಬಳಿಕೆ) ಹಾಗೂ ವೋಟ್ ಜಿಹಾದ್ ಮಾಡಲಾಗುತ್ತಿದೆ. ಇದೆಲ್ಲವನ್ನೂ ಒಳಗೊಂಡಂತೆ ಸಮಗ್ರ ತನಿಖೆಯಾಗಬೇಕು' ಎಂದು ಅವರು ಆಗ್ರಹಿಸಿದರು.

'ಬಿಜೆಪಿ ಗೆದ್ದರೆ ಚಿಂತಕರ ಹತ್ಯೆ ಸಾಧ್ಯತೆ'

ಪ್ರಜಾವಾಣಿ ವಾರ್ತೆ



ಸಿದ್ದನಗೌಡ ಪಾಟೀಲ

ಹುಬ್ಬಳ್ಳಿ: 'ಈ ಬಾರಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ, ವಿಚಾರವಾದಿಗಳ ಹತ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ' ಎಂದು ಚಿಂತಕ ಸಿದ್ದನಗೌಡ ಪಾಟೀಲ ಕಳವಳ ವ್ಯಕ್ತಪಡಿಸಿದರು.

'ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶ್, ಪಾನ್ಸರೆ ಮುಂತಾದ ವಿಚಾರವಾದಿಗಳ ಹತ್ಯೆಯ ಹಿಂದಿನ ಶಕ್ತಿ ಯಾರು ಎಂಬುದು ಎಲ್ಲರಿಗೂ ಗೊತ್ತು. ಆದರೆ, ಕೊಂದ ವ್ಯಕ್ತಿ ಯಾರು ಎಂಬುದಷ್ಟೇ ತಿಳಿಯಬೇಕಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ನಾಡಿನ ಚಿಂತಕರು ಮತ್ತು ನಿರ್ಭೀತ ಪತ್ರಕರ್ತರಿಗೆ ಅಪಾಯವಾಗಲಿದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. 'ಬಿಜೆಪಿ ರಾಜಕೀಯ ಪಕ್ಷ ಅಲ್ಲ. ಆರ್‌ಎಸ್‌ಎಸ್ ಹೇಳಿದ್ದನ್ನು ಜಾರಿಗೆ ತರುವುದಷ್ಟೇ ನಮ್ಮ ಕೆಲಸ ಎಂದು ಸ್ವತಃ ಕೇಂದ್ರ ಸಚಿವ ನಿತಿನ್ ಗಡ್ಕರಿ ಈಚೆಗೆ ಹೇಳಿದ್ದಾರೆ. ಸಂವಿಧಾನ ಬದಲಿಸುತ್ತೇವೆ ಎಂದು ಬಹಿರಂಗವಾಗಿ ಹೇಳಿಕೆ ಕೊಡಬೇಡಿ. ಅದು ಗುಪ್ತ ಕಾರ್ಯತಂತ್ರ ಎಂದು ಬಿಜೆಪಿ ನಾಯಕರಿಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸೂಚಿಸಿದ್ದಾರೆ. ಇಂತಹ ಬೆಳವಣಿಗೆಗಳ ಬಗ್ಗೆ ಎಚ್ಚರದಿಂದಿರಿ' ಎಂದು ಹೇಳಿದರು.

ಕಣದಲ್ಲಿ ಹೊಸ ಮುಖಗಳು

ಪ್ರಜಾವಾಣಿ ಸಂದರ್ಶನ

● ಸಿದ್ದಯ್ಯ ಹಿರೇಮಠ

ದಾವಣಗೆರೆ ಲೋಕಸಭೆ ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್‌ನಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಿವೆ. ರಾಜಕೀಯ ಹಿನ್ನೆಲೆಯ ಕುಟುಂಬದ ಈ ಇಬ್ಬರೂ 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

'ನನ್ನ ಗೆಲುವಿಗೆ 'ಗೃಹಲಕ್ಷ್ಮಿ'ಯರ ಬಲ'

● ದಾವಣಗೆರೆ ಕ್ಷೇತ್ರದ ಜನರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು?
ಜನರ ನಿರೀಕ್ಷೆಗಳು ಅಪಾರ. ಅವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಈ ಭಾಗದಲ್ಲಿ ಕೈಗಾರಿಕೆ ಬೇಕು. ಹೊಲಿಗೆ ಕಲಿತು ಬೆಂಗಳೂರಿಗೆ ಕೆಲಸಕ್ಕೆ ಹೋಗುವ ಯುವತಿಯರಿಗಾಗಿ ಗಾರ್ಮೆಂಟ್ ಫ್ಯಾಕ್ಟರಿಗಳು ಬೇಕಿವೆ. ಆರೋಗ್ಯ ಸಮಸ್ಯೆಗಳಿವೆ. ಆಂಬುಲೆನ್ಸ್‌ಗಳು ಬೇಕಿವೆ. ಅಡಿಕೆ ದರ ಏರಿಳಿತ ಆಗುತ್ತಿದ್ದು, ಸ್ಥಿರವಾಗಿ ಇರಬೇಕು ಅನ್ನೋ ಬೇಡಿಕೆ ಇದೆ. ಜಗಳೂರು, ಹರಪನಹಳ್ಳಿ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಅಲ್ಲಿ ಭದ್ರಾ ನೀರು ತಂದು ಕೆರೆ ತುಂಬಿಸಬೇಕು. ಹರಿಹರ ಭಾಗದಲ್ಲಿ ಭದ್ರಾ ಬಲದಂಡೆ ನಾಲೆಯ ಕೊನೆ ಭಾಗದ ರೈತರ ಜಮೀನಿಗೆ ನೀರು ತಲುಪುತ್ತಿಲ್ಲ. ಅವರ ಬೇಡಿಕೆ ಈಡೇರಿಸಬೇಕಿದೆ. ಗ್ರಾಮೀಣ ಮಹಿಳೆಯರು ಇನ್ನೂ 5 ಕೆ.ಜಿ. ಅಕ್ಕಿ ಕೊಡಿ ಅಂತ ಕೇಳ್ತಾರೆ. ಬರ ಇದೆ. ರೈತರ ಕೈಹಿಡಿಯಬೇಕಿದೆ.

● ಕ್ಷೇತ್ರದಲ್ಲಿ 25 ವರ್ಷಗಳಿಂದ ಬಿಜೆಪಿಯೇ ಗೆಲ್ಲುತ್ತಿದೆ. ಈ ಕ್ಷೇತ್ರ ಆ ಪಕ್ಷದ ಭದ್ರಕೋಟೆಯೇ ಆದಂತಿದೆಯಲ್ಲ?
ಹಾಲಿ ಸಂಸದರು ಕಣ್ಣಿಗೆ ಕಾಣುವಂಥ ಕೆಲಸವನ್ನು ಮಾಡಿಲ್ಲ. ಅದಕ್ಕಾಗಿಯೇ ಪ್ರಧಾನಿ ಮೋದಿ ಹೆಸರು ಹೇಳುತ್ತಿದ್ದಾರೆ. ಜಗಳೂರು, ಹರಪನಹಳ್ಳಿ ಭಾಗಗಳು ಬರಪೀಡಿತ ಪ್ರದೇಶಗಳಾಗಿವೆ. ಹಿಂದುತ್ವ, ರಾಮಮಂದಿರ ಎಂದೆಲ್ಲಾ ಮಾತಾಡ್ತಾರೆ. ಜನರ ಪ್ರಬುದ್ಧತೆಯನ್ನೂ ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಸಮಸ್ಯೆಗಳನ್ನು ಪರಿಹರಿಸುವವರಿಗೆ ಮತ ಹಾಕ್ತಾರೆ ಅನ್ನೋ ನಂಬಿಕೆ ಇದೆ. ಬರ ಪರಿಹಾರ ನೀಡಲೂ ಬಿಜೆಪಿ ಮೀನ–ಮೇಷ ಎಣಿಸಿತ್ತು. 25 ಸಂಸದರು ಈ ಬಗ್ಗೆ ಧ್ವನಿ ಎತ್ತಲಿಲ್ಲ. ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಬರ ಪರಿಹಾರ ಬರುತ್ತಿದೆ. ಇದು ಜನರ ಮನದಲ್ಲಿದೆ.

● ಕಾಂಗ್ರೆಸ್ ಕುಟುಂಬ ರಾಜಕಾರಣ ಮಾಡುತ್ತೆ ಅಂತ ಬಿಜೆಪಿ ಆರೋಪ ಮಾಡುತ್ತದಲ್ಲ?
ಹಾಗಾದ್ರೆ ಬಿಜೆಪಿಯಿಂದ ಯಾರಿಗೆ ಟಿಕೆಟ್ ಕೊಟ್ಟಿದ್ದಾರೆ? ಇನ್ನೊಬ್ಬರ ಕಡೆ ಬೆರಳು ಮಾಡೋದು ಸುಲಭ. ಇಷ್ಟು ವರ್ಷ ಕುಟುಂಬ ರಾಜಕಾರಣ ಮಾಡಲಾಗುತ್ತದೆ ಅನ್ನೋ ಕಾರಣಕ್ಕೇ ನಾನು ತೆರೆಯ ಮರೆಯಲ್ಲೇ ಇದ್ದೆ. ಈ ಬಾರಿ ಗೆಲ್ಲುವ ಅಭ್ಯರ್ಥಿಯನ್ನು ನೋಡಿ ಪಕ್ಷ ನನಗೆ ಟಿಕೆಟ್ ನೀಡಿದೆ.

● ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಜಾರಿಗೊಳಿಸಿದೆ. ಲೋಕಸಭೆ ಚುನಾವಣೆ ಪ್ರಣಾಳಿಕೆಯಲ್ಲಿ ಮತ್ತಷ್ಟು ಭರವಸೆ ನೀಡಲಾಗಿದೆ. ಅದು ನಿಮಗೆ ನೆರವಾಗಲಿದೆಯೇ?
ರಾಜ್ಯ ಸರ್ಕಾರ ಆರಂಭಿಸಿರುವ ಗೃಹಲಕ್ಷ್ಮಿ ಯೋಜನೆ ಕೈಹಿಡಿದಿದೆ. ಮಹಿಳೆಯರು ಸಂತುಷ್ಟರಾಗಿದ್ದಾರೆ. ₹ 1 ಲಕ್ಷ ನೆರವು ನೀಡುವ ಯೋಜನೆ ಬಗ್ಗೆ ತಿಳಿದಿದೆ. ಉದ್ಯೋಗ ನೀಡುವ ಭರವಸೆಯೂ ಗೆಲ್ಲಲು ಅನುಕೂಲ ಕಲ್ಪಿಸಲಿದೆ.

● ಶಾಸನ ಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲವಲ್ಲ?
ಮಹಿಳೆಯರಿಗೆ ಶಾಸನಸಭೆಗಳಲ್ಲಿ ಶೇ 33ರಷ್ಟು ಮೀಸಲಾತಿ ಅಗತ್ಯವಿದೆ. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 6 ಜನ ಮಹಿಳೆಯರಿಗೆ ಟಿಕೆಟ್ ನೀಡಿದೆ. ರಾಜ್ಯಸಭೆ ಮತ್ತು ವಿಧಾನಪರಿಷತ್ ನಾಮನಿರ್ದೇಶನ ಸಂದರ್ಭ ಮಹಿಳೆಯರನ್ನು ಪರಿಗಣಿಸುವ ಮೂಲಕ ಆದ್ಯತೆ ನೀಡಬೇಕು.

● ನೇಹಾ ಹತ್ಯೆ ಪ್ರಕರಣದ ಬಗ್ಗೆ ಮಹಿಳೆಯಾಗಿ ಏನು ಹೇಳ್ತೀರಿ?
ಮಹಿಳೆಯರು ಸ್ವಯಂ ರಕ್ಷಣೆಯ ಕಲೆಯನ್ನು ಕರಗತ ಮಾಡಿಕೊಳ್ಳಬೇಕಿದೆ. ಕರಾಟೆ ಮತ್ತಿತರ ಪಟ್ಟುಗಳ ಮೂಲಕ ಆತ್ಮರಕ್ಷಣೆಗೆ ಮುಂದಾಗಬೇಕು. ಮಹಿಳೆಯರ ವಿರುದ್ಧದ ಅಪರಾಧಗಳ ತಡೆಗೆ ಕಠಿಣ ಕಾನೂನುಗಳು ಜಾರಿಯಾಗಬೇಕಿದೆ.

● ಮಹಿಳೆ ಅಡುಗೆ ಮನೆಗೆ ಸೀಮಿತ ಎಂದು ಶಾಮನೂರು ಶಿವಶಂಕರಪ್ಪ ಹೇಳಿಕೆ ಕೊಟ್ಟಿದ್ದರಲ್ಲ?
ಆ ಹೇಳಿಕೆಯನ್ನು ಬಿಜೆಪಿಯವರು ತಿರುಚಿ ಲಾಭ ಪಡೆಯಲು ನೋಡಿದರು. ಹಿರಿಯರಾದ ಶಾಮನೂರು ಶಿವಶಂಕರಪ್ಪ ಅವರು ಇಬ್ಬರೂ ಅಭ್ಯರ್ಥಿಗಳ ವ್ಯಕ್ತಿತ್ವ ಮತ್ತು ಅರ್ಹತೆಯ ತುಲನೆ ಮಾಡಿ, 'ಗಾಯತ್ರಿ ಅವರು ಸಾಮಾಜಿಕ ಜೀವನದಲ್ಲಿ ತೊಡಗಿಕೊಂಡಿಲ್ಲ. ಅಡುಗೆ ಮಾಡಿಕೊಂಡು ಇದ್ದವರು ಸಂಸತ್ ಸದಸ್ಯೆಯಾಗಿ ನಿಮ್ಮ ಆಶೋತ್ತರ ಈಡೇರಿಸಲಾರರು' ಎಂಬ ಅರ್ಥದಲ್ಲಿ ಜನತೆಗೆ ತಿಳಿಸಿದ್ದರು. ಅದನ್ನೇ ತಿರುಚಿ ಜನರ ದಾರಿ ತಪ್ಪಿಸಲು ಯತ್ನಿಸಲಾಯಿತು.

ಡಾ. ಪ್ರಭಾ ಮಲ್ಲಿಕಾರ್ಜುನ್ (ಕಾಂಗ್ರೆಸ್)

'ಮೋದಿ ಅಂದ್ರೇನೇ ದೊಡ್ಡ ಗ್ಯಾರಂಟಿ'

● ನಿಮ್ಮದೂ ರಾಜಕೀಯ ಕುಟುಂಬ. ರಾಜಕಾರಣ ನಿಮಗೆ ಹೊಸದಲ್ಲದಿದ್ದರೂ ಸ್ಪರ್ಧೆ ಹೊಸದಲ್ಲವೇ?
ಕಳೆದ 30 ವರ್ಷಗಳಿಂದ ಮಾವನವರಾದ ಜಿ.ಮಲ್ಲಿಕಾರ್ಜುನಪ್ಪ ಹಾಗೂ ಪತಿ ಸಿದ್ದೇಶ್ವರ ಅವರ ಚುನಾವಣೆಗಳಲ್ಲಿ ಮನೆಮನೆ ಸುತ್ತಿದ್ದೇನೆ. ಜನ ನನಗೆ ಹೊಸಬರಲ್ಲ. ಜನಸಂಪರ್ಕವೂ ಹೊಸದಲ್ಲ. ಹಾಗಾಗಿ ನನ್ನ ಸ್ಪರ್ಧೆಯೂ ಹೊಸದು ಅನ್ನಿಸುತ್ತಿಲ್ಲ.

● ನಿಮ್ಮ ವಿರುದ್ಧ ಬಂಡಾಯ ಕಂಡುಬಂದಿತ್ತು. ಈಗ ಸ್ಥಿತಿ ಹೇಗಿದೆ?
ನಮ್ಮಲ್ಲಿ ಬಂಡಾಯ ಇಲ್ಲ. ನನಗೆ ಟಿಕೆಟ್ ಕೊಟ್ಟಿದ್ದಕ್ಕೆ ಯಾರಿಗೂ ಬೇಸರ ಇಲ್ಲ. ಪಕ್ಷದಲ್ಲಿರುವ ಎಲ್ಲ ಮುಖಂಡರೂ ಜೊತೆಗೇ ಬರುತ್ತಿದ್ದಾರೆ. ಒಂದಾಗಿ ಪ್ರಚಾರ ಮಾಡ್ತಿದೀವಿ.

● ಜನರು ನಿಮಗೇಕೆ ಮತ ನೀಡಬೇಕು?
ಬಿಜೆಪಿಯಿಂದ ಇದೇ ಮೊದಲ ಬಾರಿಗೆ ಕ್ಷೇತ್ರದಲ್ಲಿ ಮಹಿಳೆಯೊಬ್ಬರಿಗೆ ಟಿಕೆಟ್ ನೀಡಲಾಗಿದೆ. ಇದು ಕ್ಷೇತ್ರದ ಜನರಲ್ಲಿ ಸಂತಸ ಉಂಟುಮಾಡಿದೆ. ಹೋದಲ್ಲೆಲ್ಲಾ ಮಹಿಳೆಯರಿಂದ ಬೆಂಬಲ ಸಿಗುತ್ತಿದೆ. ನನಗೆ ಯಾಕೆ ಮತ ಹಾಕಬೇಕು ಅನ್ನೋದು ಜನರಿಗೆ ಗೊತ್ತಿದೆ. ಅಭಿವೃದ್ಧಿ ಆಗಬೇಕೆಂದರೆ ಬಿಜೆಪಿಗೆ, ಮೋದಿ ಅವರಿಗೆ ಮತ ಹಾಕಬೇಕು ಎಂದು ಜನ ತೀರ್ಮಾನ ಮಾಡಿಯಾಗಿದೆ.

● ಕಾಂಗ್ರೆಸ್‌ನ ಗ್ಯಾರಂಟಿಗಳ ಭಯ ಇದೆಯಾ?
ಗ್ಯಾರಂಟಿಗಳು ಯಾರಿಗೂ ತಲುಪಿಲ್ಲ. ಒಂದು ಮನೆಯವರಿಗೆ ಸಿಕ್ಕರೆ ನಾಲ್ಕು ಮನೆಗೆ ಸಿಕ್ಕಿಲ್ಲ. ಬಸ್ ಚಾರ್ಜ್ ಇಲ್ಲ ಅಂತಾರೆ. ಆದರೆ ಹಳ್ಳಿಗಳಿಗೆ ಬಸ್ ಸೌಲಭ್ಯವೇ ಇಲ್ಲ. ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದ್ದು ಜನರಿಗೆ ಗೊತ್ತಿದೆ. ಜನ ಅಭಿವೃದ್ಧಿ ಕೇಳುತ್ತಾರೆ. ಉಚಿತ ಕೊಡುಗೆ ಕೇಳಲ್ಲ. ನಾವು ಪ್ರಚಾರಕ್ಕೆ ಹೋದಲ್ಲಿ ಜನರೇ ಈ ಅಂಶಗಳನ್ನು ಒತ್ತಿ ಹೇಳುತ್ತಿದ್ದಾರೆ.

● ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಕಣದಲ್ಲಿದ್ದಾರೆ. ನಿಮಗೆ ಅನುಕೂಲವಾಗಲಿದೆಯೇ?
ಅವರವರ ಮತಗಳು ಅವರಿಗೆ. ನಮ್ಮ ಮತಗಳು ನಮಗೆ ಇದ್ದೇ ಇವೆ. ಇನ್ನೊಬ್ಬರ ಜಗಳ ನಮಗೆ ಲಾಭ ಆಗತ್ತೆ ಅಂತ ನಾನು ಹೇಳಲ್ಲ. ಜನರು ಬಿಜೆಪಿಗೇ ಮತ ಹಾಕಬೇಕು ಅಂತ ನಿರ್ಧಾರ ಮಾಡಿದ್ದರಿಂದ ಯಾರೇ ಜಗಳ ಆಡಿಕೊಂಡರೂ ನಮಗೆ ವ್ಯತ್ಯಾಸ ಆಗಲ್ಲ.

● ಮೋದಿ ಜನಪ್ರಿಯತೆ ಈ ಬಾರಿಯೂ ನೆರವಾಗಲಿದೆಯೇ?
ನರೇಂದ್ರ ಮೋದಿ ಅವರ ಯೋಜನೆಗಳು ಪ್ರತಿ ಫಲಾನುಭವಿಯನ್ನೂ ತಲುಪಿವೆ. ಅಂತೆಯೇ ಮೋದಿ ಹೆಸರು ಪ್ರತಿಯೊಬ್ಬರ ಬಾಯಲ್ಲೂ ಇದೆ. ಪ್ರಚಾರದ ವೇಳೆ ಅವರು ಮಾಡಿದ ಕೆಲಸಗಳ ಪೈಕಿ ನಾನು ಒಂದೆರಡನ್ನು ಮರೆತರೆ ಜನರೇ ಮಿಕ್ಕವುಗಳನ್ನ ನೆನಪಿಸುತ್ತಾರೆ. ಮೋದಿ ಅಂದ್ರೇನೇ ಒಂದು ದೊಡ್ಡ ಗ್ಯಾರಂಟಿ ಅಂತ ಜನರೇ ನಂಬಿದ್ದಾರೆ. ಅವರ ಜನಪ್ರಿಯತೆ ಖಂಡಿತ ನೆರವಾಗಲಿದೆ.

● ನಿಮಗೆ ಟಿಕೆಟ್ ಸಿಗುವ ನಿರೀಕ್ಷೆ ಇತ್ತಾ? ಅಥವಾ ಅನಿರೀಕ್ಷಿತವಾ?
ಟಿಕೆಟ್ ಸಿಕ್ಕಿದ್ದು ನಂಗೆ ಮಾಧ್ಯಮಗಳ ಮೂಲಕವೇ ಗೊತ್ತಾಗಿದ್ದು. ಖಂಡಿತ ಇದು ಅನಿರೀಕ್ಷಿತ.

● ಹುಬ್ಬಳ್ಳಿಯ ನೇಹಾ ಹತ್ಯೆ ಪ್ರಕರಣವನ್ನು ರಾಜಕೀಯಕ್ಕೆ ಬಳಕೆಯಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆಯಲ್ಲ?
ನೇಹಾ ಹತ್ಯೆ ನಿಜಕ್ಕೂ ನಾಗರಿಕ ಜಗತ್ತನ್ನು ಬೆಚ್ಚಿಬೀಳಿಸಿದೆ. ಬಿಜೆಪಿಯವರು ಈ ಪ್ರಕರಣವನ್ನು ರಾಜಕೀಯವಾಗಿ ಬಳಸುತ್ತಿದ್ದಾರೆಂದು ಕಾಂಗ್ರೆಸ್ ಹೇಳುತ್ತಿದೆ. ಈ ಪ್ರಕರಣ ವೈಯಕ್ತಿಕ, ಇದೊಂದು ಲವ್ ಕೇಸ್ ಎಂದು ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಹೇಳಿದ್ದಾರೆ. ಅವರಿಗೆ ಪ್ರಕರಣದ ಗಾಂಭೀರ್ಯ ಅರ್ಥವಾಗಲಿಲ್ಲ. ಜನರನ್ನು ತಪ್ಪು ದಾರಿಗೆ ಎಳೆಯುವ ಹೇಳಿಕೆ ನೀಡಬಾರದು. ಮಹಿಳೆಯರ ರಕ್ಷಣೆಗೆ ಅಗತ್ಯ ಕಾನೂನು ಬೇಕು. ಆ ಕಾನೂನುಗಳ ಸಮರ್ಪಕ ಜಾರಿಗೆ ರಾಜ್ಯ ಸರ್ಕಾರಗಳೂ ಕಟಿಬದ್ಧವಾಗಬೇಕು.

ಗಾಯತ್ರಿ ಸಿದ್ದೇಶ್ವರ (ಬಿಜೆಪಿ)

ಪ್ರಜಾ ಮತ 2024

ಜನತಂತ್ರದ ಹಬ್ಬ

ಪ್ರಜಾವಾಣಿ | ಭಾನುವಾರ • ಮೇ 5, 2024 | 3B

ಸ್ತ್ರೀಪೀಡಕರು, ದ್ವೇಷ ಭಾಷಣ ಮಾಡುವವರಿಗೆ ಪಕ್ಷಗಳ ಮಣೆ: ಎಡಿಆರ್ ವರದಿಯಲ್ಲಿ ಉಲ್ಲೇಖ

4ನೇ ಹಂತ: ಕುಬೇರರಿಂದ ಕುಚೇಲರವರೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಶ್ರೀಮಂತರು ಹಾಗೂ ಬಡವರ ನಡುವಿನ ಆಸ್ತಿಯ ಅಸಮಾನತೆಯ ಉದಾಹರಣೆಯನ್ನು ಲೋಕಸಭೆ ಚುನಾವಣೆಯ ನಾಲ್ಕನೇ ಹಂತವು ಒದಗಿಸುತ್ತದೆ. ಟಿಡಿಪಿಯ ಗುಂಟೂರು ಅಭ್ಯರ್ಥಿ ಡಾ.ಚಂದ್ರಶೇಖರ್ ಪೆಮ್ಮಸಾನಿ ಅವರು ₹5,705 ಕೋಟಿ ಆಸ್ತಿ ಇರುವುದಾಗಿ ಘೋಷಿಸಿದ್ದಾರೆ. ಬಾಪಟ್ಲಾದ ಪಕ್ಷೇತರ ಅಭ್ಯರ್ಥಿ ಕಟ್ಟಾ ಆನಂದಬಾಬು ತಮ್ಮ ಬಳಿ ₹7 ಮಾತ್ರ ಇದೆ ಎಂದು ಹೇಳಿಕೊಂಡಿದ್ದಾರೆ.

ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಶನಿವಾರ ವರದಿ ಪ್ರಕಟಿಸಿದೆ. ಅಭ್ಯರ್ಥಿಗಳ ಪೈಕಿ ಶೇ 21 ಮಂದಿ ಅಪರಾಧ ಹಿನ್ನೆಲೆ ಹೊಂದಿದ್ದಾರೆ. ಶೇ 16 ಅಭ್ಯರ್ಥಿಗಳ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳಿವೆ. ಗಂಭೀರ ಅಪರಾಧ ಪ್ರಕರಣಗಳನ್ನು ಹೊಂದಿರುವ 22 ಮಂದಿಗೆ ಕಾಂಗ್ರೆಸ್ ಹಾಗೂ 32 ಅಭ್ಯರ್ಥಿಗಳಿಗೆ ಬಿಜೆಪಿ ಟಿಕೆಟ್ ನೀಡಿವೆ.

ಶೇ 28ರಷ್ಟು ಹುರಿಯಾಳುಗಳು ಕೋಟ್ಯಧಿಪತಿಗಳು. ಅಂದರೆ ಪ್ರತಿ ಮೂವರು ಅಭ್ಯರ್ಥಿಗಳ ಪೈಕಿ ಒಬ್ಬರು ಕೋಟ್ಯಧಿಪತಿ.

ಅಭ್ಯರ್ಥಿಗಳ ವಿವರ

- 1,717 ಒಟ್ಟು ಅಭ್ಯರ್ಥಿಗಳು
- 170 ಮಹಿಳೆಯರು
- 1,710 ಪ್ರಮಾಣಪತ್ರ ವಿಶ್ಲೇಷಣೆ

ಅಪರಾಧ ಪ್ರಕರಣ

- 274 ಗಂಭೀರ ಪ್ರಕರಣ
- 30 ಕೊಲೆ ಯತ್ನ
- 50 ಮಹಿಳೆಯರ ಮೇಲಿನ ಅಪರಾಧ
- 44 ದ್ವೇಷ ಭಾಷಣ
- 5 ಅತ್ಯಾಚಾರ
- 17 ಶಿಕ್ಷೆಗೆ ಒಳಗಾದವರು
- 11 ಕೊಲೆ ಪ್ರಕರಣಗಳಲ್ಲಿ ಭಾಗಿ

ಗಂಭೀರ ಪ್ರಕರಣ: ಪಕ್ಷವಾರು ಅಭ್ಯರ್ಥಿಗಳ ವಿವರ

ಪಕ್ಷ	ಅಭ್ಯರ್ಥಿಗಳು
ಬಿಜೆಪಿ	32
ಕಾಂಗ್ರೆಸ್	22
ಬಿಆರ್‌ಎಸ್	10
ಟಿಡಿಪಿ	6
ವೈಎಸ್‌ಆರ್ ಕಾಂಗ್ರೆಸ್	9
ಸಮಾಜವಾದಿ ಪಕ್ಷ	4
ಶಿವಸೇನಾ (ಯುಬಿಟಿ)	1
ಎಐಎಂಐಎಂ	3
ಶಿವಸೇನಾ	2
ಬಿಜೆಡಿ	2
ಟಿಎಂಸಿ	2



ಸಂಪತ್ತು ಮತ್ತು ಅಭ್ಯರ್ಥಿಗಳು — ಕೋಟ್ಯಧಿಪತಿಗಳು 476

ಪಕ್ಷ	ಕೋಟ್ಯಧಿಪತಿಗಳು
ಬಿಜೆಪಿ	65
ಕಾಂಗ್ರೆಸ್	56
ವೈಎಸ್‌ಆರ್ ಕಾಂಗ್ರೆಸ್	24
ಟಿಡಿಪಿ	17
ಬಿಆರ್‌ಎಸ್	17
ಸಮಾಜವಾದಿ ಪಕ್ಷ	11
ಟಿಎಂಸಿ	7
ಬಿಜೆಡಿ	4
ಆರ್‌ಜೆಡಿ	4
ಶಿವಸೇನಾ (ಯುಬಿಟಿ)	4
ಶಿವಸೇನಾ	3
ಎಐಎಂಐಎಂ	2

ಪಕ್ಷವಾರು ಸರಾಸರಿ ಆಸ್ತಿ (ಕೋಟಿಗಳಲ್ಲಿ)

ಪಕ್ಷ	ಸರಾಸರಿ ಆಸ್ತಿ
ಟಿಡಿಪಿ	₹416.42
ಬಿಜೆಪಿ	₹101.77
ಶಿವಸೇನಾ	₹54.49
ಬಿಆರ್‌ಎಸ್	₹54.25
ವೈಎಸ್‌ಆರ್ ಕಾಂಗ್ರೆಸ್	₹39
ಟಿಎಂಸಿ	₹36
ಕಾಂಗ್ರೆಸ್	₹23.65
ಶಿವಸೇನಾ (ಯುಬಿಟಿ)	₹13.53
ಸಮಾಜವಾದಿ ಪಕ್ಷ	₹9.86
ಎಐಎಂಐಎಂ	₹9.53
ಆರ್‌ಜೆಡಿ	₹8.23
ಬಿಜೆಡಿ	₹3.11

ಅಭ್ಯರ್ಥಿಗಳ ಸರಾಸರಿ ಆಸ್ತಿ ₹11.72 ಕೋಟಿ

ಶ್ರೀಮಂತ ಅಭ್ಯರ್ಥಿಗಳು

- ಡಾ.ಚಂದ್ರಶೇಖರ್ ಪೆಮ್ಮಸಾನಿ (ಗುಂಟೂರು, ಟಿಡಿಪಿ) ₹5,705.47 ಕೋಟಿ
- ಕೊಂಡಾ ವಿಶ್ವೇಶ್ವರ ರೆಡ್ಡಿ (ಚೆವೆಲ್ಲಾ, ಬಿಜೆಪಿ) ₹4,568.22 ಕೋಟಿ
- ಪ್ರಭಾಕರ ರೆಡ್ಡಿ ವೇಮಿರೆಡ್ಡಿ (ನೆಲ್ಲೂರು, ಟಿಡಿಪಿ) ₹716.33 ಕೋಟಿ

ಬಡ ಅಭ್ಯರ್ಥಿಗಳು

- ಕಟ್ಟಾ ಆನಂದ ಬಾಬು (ಬಾಪಟ್ಲ, ಪಕ್ಷೇತರ): ₹7
- ಸಂತೋಷ್ ಉಬಾಳೆ (ಮಾವಲ್, ಭೀಮ್ ಸೇನ): ₹83
- ಭೋರ್ ವಿಕಾಸ್ ರೋಹಿದಾಸ್ (ಶಿರೂರು, ಪಕ್ಷೇತರ): ₹90

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಕಾಂಗ್ರೆಸ್ ಬಂದರೆ ಔರಂಗಜೇಬನ ಆಡಳಿತ: ಯೋಗಿ ಆದಿತ್ಯನಾಥ್

ಭೋಪಾಲ್ (ಪಿಟಿಐ): ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಮೊಘಲ್ ದೊರೆ ಔರಂಗಜೇಬನ ರೀತಿಯಲ್ಲಿ ಕ್ರೂರ ಆಡಳಿತ ನಡೆಸಲಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶನಿವಾರ ಆರೋಪಿಸಿದರು.

ಬಿಜೆಪಿ ಅಭ್ಯರ್ಥಿ ಜ್ಯೋತಿರಾದಿತ್ಯ ಸಿಂಧಿಯಾ ಪರ ಪ್ರಚಾರದಲ್ಲಿ ಪಾಲ್ಗೊಂಡ ಅವರು, ಕಾಂಗ್ರೆಸ್‌ನ ಪ್ರಣಾಳಿಕೆಯು 'ಜಝಿಯಾ' (ಮಧ್ಯಕಾಲೀನ ಭಾರತದಲ್ಲಿ ಮುಸ್ಲಿಮೇತರರ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆ) ಬಗ್ಗೆ ಮಾತನಾಡುತ್ತದೆ' ಎಂದು ದೂರಿದರು.

'ನಿಷ್ಠುರ ಆಡಳಿತ ನಡೆಸಿದ್ದ ಮೊಘಲ್ ದೊರೆ ಔರಂಗಜೇಬನ ಬಗ್ಗೆ ನೀವು ಕೇಳಿರಬಹುದು. ಸಭ್ಯ ಮುಸ್ಲಿಂ ಕುಟುಂಬಗಳಲ್ಲಿ ಯಾರೂ ತಮ್ಮ ಮಕ್ಕಳಿಗೆ ಆ ಹೆಸರು ಇಡುವುದಿಲ್ಲ. ಆತ 'ಜಿಝಿಯಾ' ವಿಧಿಸಿದ್ದ. ಹಾಗಂದರೆ ಏನು? ಕಾಂಗ್ರೆಸ್ ಹೇಳುತ್ತಿರುವ ಪಿತ್ರಾರ್ಜಿತ ಆಸ್ತಿ ತೆರಿಗೆಯೇ ಅದು' ಎಂದು ಹೇಳಿದರು.

'ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರಿಗೆ ಅವರ ಆಯ್ಕೆಯಂತೆ ತಿನ್ನಲು ಮತ್ತು ಕುಡಿಯಲು ಎಲ್ಲಾ ಸ್ವಾತಂತ್ರ್ಯವನ್ನು ನೀಡಲು ಬಯಸುತ್ತದೆ. ಆ ಮೂಲಕ ಗೋಮಾಂಸ ತಿನ್ನಲು ಅವಕಾಶ ನೀಡಿ, ಗೋಹತ್ಯೆಯನ್ನು ಪ್ರೋತ್ಸಾಹಿಸುತ್ತದೆ' ಎಂದು ಟೀಕಿಸಿದರು.

'ಗೋಮಾಂಸ ರಫ್ತುದಾರರಿಂದ ದೇಣಿಗೆ'

ಗೋಹತ್ಯೆಗೆ ಸಂಬಂಧಿಸಿದಂತೆ ಯೋಗಿ ಆದಿತ್ಯನಾಥ್ ಹೇಳಿಕೆಗೆ ತಿರುಗೇಟು ನೀಡಿರುವ ಕಾಂಗ್ರೆಸ್, 'ಬಿಜೆಪಿಯು ಗೋಮಾಂಸ ರಫ್ತು ಮಾಡುವ ಕಂಪನಿಗಳಿಂದ ದೇಣಿಗೆ ಪಡೆದಿರುವುದು ಏಕೆ' ಎಂದು ಪ್ರಶ್ನಿಸಿದೆ.

'ನಮ್ಮ ಪ್ರಣಾಳಿಕೆಯಲ್ಲಿ ಗೋಹತ್ಯೆ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ. ಬಿಜೆಪಿಯು ಗೋಮಾಂಸ ರಫ್ತು ಮಾಡುವ ಕಂಪನಿಗಳಿಂದ ₹250 ಕೋಟಿ ದೇಣಿಗೆ ಪಡೆದಿದೆ' ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಹೇಳಿದ್ದಾರೆ.

ಪ್ರಚಾರಕ್ಕೆ ಹಣ ಇಲ್ಲ: ಟಿಕೆಟ್ ಮರಳಿಸಿದ ಕಾಂಗ್ರೆಸ್ ಅಭ್ಯರ್ಥಿ

ಭುವನೇಶ್ವರ (ಪಿಟಿಐ): ಒಡಿಶಾದ ಪುರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುಚರಿತಾ ಮೊಹಂತಿ ಅವರು ಸ್ಪರ್ಧಿಸಲು ನಿರಾಕರಿಸಿದ್ದು, ಪಕ್ಷದ ಟಿಕೆಟ್ ಅನ್ನು ವಾಪಸ್ ಮಾಡಿದ್ದಾರೆ.

ಚುನಾವಣಾ ಪ್ರಚಾರದ ಖರ್ಚಿಗೆ ಪಕ್ಷದ ನಿಧಿಯಿಂದ ಹಣ ನೀಡಲು ನಿರಾಕರಿಸಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರು ಹೇಳಿದ್ದಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತೆಯಾಗಿ ಮುಂದುವರಿತ್ತೇನೆ ಎಂದು ಕಾಂಗ್ರೆಸ್‌ನ ಮಾಜಿ ಸಂಸದ ಬ್ರಿಜ್‌ಮೋಹನ್ ಮೊಹಂತಿ ಅವರ ಪುತ್ರಿಯಾಗಿರುವ ಸುಚರಿತಾ ಸ್ಪಷ್ಟಪಡಿಸಿದ್ದಾರೆ.

'ಹಣದ ಕೊರತೆಯಿಂದಾಗಿ ಪ್ರಚಾರ ನಡೆಸಲು ಆಗುತ್ತಿಲ್ಲ. ಪಕ್ಷದ ನಿಧಿಯಿಂದ ಹಣ ಬರದಿದ್ದರೆ ಪುರಿಯಲ್ಲಿ ಪ್ರಚಾರ ನಡೆಸಲು ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ನಾನು ವಿಷಾದಿಸುತ್ತೇನೆ. ಆದ್ದರಿಂದ ಪುರಿ ಲೋಕಸಭಾ ಕ್ಷೇತ್ರದ ಪಕ್ಷದ ಟಿಕೆಟ್‌ಅನ್ನು ವಾಪಸ್ ಮಾಡುತ್ತೇನೆ' ಎಂದು ಎಐಸಿಸಿ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಎಐಸಿಸಿ ಒಡಿಶಾ ಉಸ್ತುವಾರಿ ಅಜಯ್ ಕುಮಾರ್, 'ಚುನಾವಣಾ ಪ್ರಚಾರಕ್ಕೆ ಪಕ್ಷದ ನಿಧಿಯಿಂದ ಹಣ ನೀಡಿಲ್ಲ ಎಂದು ಮೊಹಂತಿ ಹೇಳುತ್ತಿದ್ದಾರೆ. ಅಭ್ಯರ್ಥಿಯು ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಂಡು ಪ್ರಚಾರ ಆರಂಭಿಸಿದ ಬಳಿಕವಷ್ಟೇ ಪಕ್ಷವು ತನ್ನ ನಿಧಿಯಿಂದ ಹಣ ನೀಡುತ್ತದೆ' ಎಂದಿದ್ದಾರೆ.

'ಪುರಿ ಕ್ಷೇತ್ರದ ಅಭ್ಯರ್ಥಿಯನ್ನು ಬದಲಿಸಲು ಪಕ್ಷವು ಈ ಮೊದಲೇ ನಿರ್ಧರಿಸಿದ್ದು, ಅದಕ್ಕೆ ಸಂಬಂಧಿಸಿದ ಪ್ರಸ್ತಾಪವನ್ನು ಹೈಕಮಾಂಡ್‌ಗೆ ಕಳುಹಿಸಲಾಗಿತ್ತು. ಹೊಸ ಅಭ್ಯರ್ಥಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು' ಎಂದು ಹೇಳಿದರು. ಪುರಿ ಕ್ಷೇತ್ರದಲ್ಲಿ ಮೇ 25ರಂದು ಮತದಾನ ನಡೆಯಲಿದೆ. ಇಲ್ಲಿ ಬಿಜೆಪಿಯ ಸಂಬಿತ್ ಪಾತ್ರ ಮತ್ತು ಬಿಜೆಡಿಯ ಅರೂಪ್ ಪಟ್ನಾಯಕ್ ಅವರು ಕಣದಲ್ಲಿದ್ದಾರೆ.

'ಪ್ರಧಾನಿಗೆ ನಿದ್ದೆ ಇಲ್ಲದ ರಾತ್ರಿಗಳು'

ಭೋಪಾಲ್ (ಪಿಟಿಐ): 2024ರ ಲೋಕಸಭಾ ಚುನಾವಣೆಯು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಿದ್ದೆ ಇಲ್ಲದ ರಾತ್ರಿಗಳನ್ನು ನೀಡುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಹೇಳಿದರು.

ಕೇಂದ್ರ ಸರ್ಕಾರವು ಕಳೆದ ಹತ್ತು ವರ್ಷಗಳಲ್ಲಿ ಇದ್ದೂ ಏನೂ ಪ್ರಯೋಜನವಿಲ್ಲದಂತಾಗಿದೆ ಎಂದೂ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಎರಡು ಹಂತದ ಮತದಾನ ಮುಗಿದಾಗ ಮೋದಿ ಅವರಿಗೆ ನಿದ್ದೆ ಇಲ್ಲದಂತಾಗಿದೆ. ಮೊದಲು ಅವರು 18 ಗಂಟೆ ಜಾಗರಣೆ ಮಾಡುತ್ತಿದ್ದರು. ಈಗ 23 ಗಂಟೆಯೂ ಎಚ್ಚರದಿಂದಿರುತ್ತಾರೆ. ಮೂರನೇ ಹಂತದ ಮತದಾನದ ನಂತರ ಅವರು 24 ಗಂಟೆಯೂ ಎಚ್ಚರದಿಂದಿರಲಿದ್ದಾರೆ' ಎಂದು ಲೇವಡಿ ಮಾಡಿದರು.

ಪಕ್ಷ ತೊರೆದ ಆರ್‌ಎಲ್‌ಡಿ ವಕ್ತಾರ

ಮೀರತ್ (ಉತ್ತರ ಪ್ರದೇಶ) (ಪಿಟಿಐ): ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಪುತ್ರನಿಗೆ ಟಿಕೆಟ್ ನೀಡಿರುವುದನ್ನು ವಿರೋಧಿಸಿ, ಬಿಜೆಪಿಯ ಮಿತ್ರಪಕ್ಷ ರಾಷ್ಟ್ರೀಯ ಲೋಕದಳದ ವಕ್ತಾರ ರೋಹಿತ್ ಜಾಖರ್ ಅವರು ಪಕ್ಷವನ್ನು ತೊರೆದಿದ್ದಾರೆ.

'ಬ್ರಿಜ್‌ಭೂಷಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿದ್ದಾರೆ. ಅವರ ಪುತ್ರನಿಗೆ ಟಿಕೆಟ್ ನೀಡಿರುವುದು ಮಹಿಳಾ ಕುಸ್ತಿಪಟುಗಳಿಗೆ ಮಾಡಿರುವ ಅವಮಾನ' ಎಂದು ಜಾಖರ್ ಹೇಳಿದ್ದಾರೆ.

ರಾಹುಲ್ ಪ್ರಧಾನಿಯಾಗಲಿ ಎಂದು ಪಾಕಿಸ್ತಾನ ಬಯಸುತ್ತಿದೆ: ಮೋದಿ

'ಬಲಿಷ್ಠ ಭಾರತಕ್ಕೆ ಬಲಿಷ್ಠ ಪ್ರಧಾನಿ ಬೇಕು'

ಪಲಾಮು/ಸಿಸ್ಸೈ (ಪಿಟಿಐ): ಕೇಂದ್ರ ಸರ್ಕಾರದ 'ಸರ್ಜಿಕಲ್ ಸ್ಟ್ರೈಕ್' ಮತ್ತು ವಾಯು ದಾಳಿಗಳಿಂದ ಪಾಕಿಸ್ತಾನಕ್ಕೆ ನಡುಕ ಹುಟ್ಟಿದ್ದು, ಅಲ್ಲಿನ ನಾಯಕರು ಕಾಂಗ್ರೆಸ್‌ನ 'ಶಹಜಾದ' ಪ್ರಧಾನಿ ಆಗಲಿ ಎಂದು ಪ್ರಾರ್ಥಿಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಜಾರ್ಖಂಡ್‌ನ ಪಲಾಮುವಿನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ರಾಹುಲ್ ಗಾಂಧಿ ಹೆಸರು ಉಲ್ಲೇಖಿಸದೇ ಅವರ ವಿರುದ್ಧ ವಾಗ್ದಾಳಿ ನಡೆಸಿದರು. 'ಅವರು (ರಾಹುಲ್) ಪ್ರಧಾನಿ ಆಗಲಿ ಎಂದು ಪಾಕಿಸ್ತಾನ ಬಯಸಬಹುದು. ಆದರೆ, ಬಲಿಷ್ಠ ಭಾರತಕ್ಕೆ ಬಲಿಷ್ಠ ಪ್ರಧಾನಿ ಬೇಕು' ಎಂದು ಪ್ರತಿಪಾದಿಸಿದರು.

'ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಪ್ರತಿ ಬಾರಿ ದೇಶದ ಮೇಲೆ ಉಗ್ರ ದಾಳಿ ನಡೆದಾಗಲೂ ಅಸಹಾಯಕವಾಗಿರುತ್ತಿದ್ದವು. ಆದರೆ, ಈಗ ಸ್ಥಿತಿ ಹೇಗಿದೆ ಎಂದರೆ, ಪಾಕಿಸ್ತಾನವು ತನ್ನನ್ನು ಉಳಿಸಿಕೊಳ್ಳಲು ಜಗತ್ತಿನ ಸಹಾಯ ಯಾಚಿಸುತ್ತಿದೆ' ಎಂದು ಹೇಳಿದರು.

'ಕಾಂಗ್ರೆಸ್ ಎಂದೂ ಜನರ ಅಭಿವೃದ್ಧಿಯ ಬಗ್ಗೆ ತಲೆಕಡಿಸಿಕೊಳ್ಳಲಿಲ್ಲ. ಪಕ್ಷದ 'ಶಹಜಾದ' ಬೆಳ್ಳಿ ಚಮಚದೊಂದಿಗೆ ಹುಟ್ಟಿದವರು, ಬಡವರ ಮನೆಗಳಿಗೆ ಹೋದಾಗ ಕ್ಯಾಮೆರಾಗೆ ಪೋಸು ಕೊಡುತ್ತಾರೆ. ಆದರೆ, ಭಾರತವನ್ನು ಬದಲಾಯಿಸುವುದು ನನ್ನ ವಾಗ್ದಾನ' ಎಂದು ಹೇಳಿದರು.

'ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ 25 ವರ್ಷ ಆಡಳಿತ ನಡೆಸಿರುವ ನನ್ನ ಮೇಲೆ ಯಾವುದೇ ಭ್ರಷ್ಟಾಚಾರದ ಆರೋಪವಿಲ್ಲ. ನನಗೆ ಒಂದು ಮನೆಯೂ ಇಲ್ಲ. ಕನಿಷ್ಠ ಒಂದು ಬೈಸಿಕಲ್ ಕೂಡ ಇಲ್ಲ. ಆದರೆ, ಭ್ರಷ್ಟ ಜೆಎಂಎಂ ಮತ್ತು ಕಾಂಗ್ರೆಸ್ ಮುಖಂಡರು ತಮ್ಮ ಮಕ್ಕಳಿಗಾಗಿ ಅಗಾಧ ಸಂಪತ್ತನ್ನು ಗಳಿಸಿದ್ದಾರೆ' ಎಂದು ಆರೋಪಿಸಿದರು.

ನಂತರ ಸಿಸ್ಸೈನಲ್ಲಿ ಮಾತನಾಡಿದ ಅವರು, 'ಎನ್‌ಡಿಎ ಸರ್ಕಾರವು ಭ್ರಷ್ಟ ಶಕ್ತಿಗಳನ್ನು ಬಯಲಿಗೆಳೆದಿದ್ದು, ಭ್ರಷ್ಟಾಚಾರದಲ್ಲಿ ತೊಡಗಿರುವ ಎಲ್ಲರೂ ಮುಂದಿನ ಐದು ವರ್ಷಗಳಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ' ಎಂದು ಹೇಳಿದರು.

ಆದಿವಾಸಿ ಜಿಲ್ಲೆಗಳ ಹಿಂದುಳಿದಿರುವಿಕೆಗೆ ಕಾಂಗ್ರೆಸ್ ಅನ್ನು ನಿಂದಿಸಿದ ಪ್ರಧಾನಿ ಮೋದಿ, 2004ರಿಂದ 2014ರವರೆಗಿನ ಯುಪಿಎ ಅವಧಿಯಲ್ಲಿ ಆಹಾರ ಧಾನ್ಯ ಗೋದಾಮುಗಳಲ್ಲಿ ಕೊಳೆಯುತ್ತಿದ್ದರೂ ಆದಿವಾಸಿ ಮಕ್ಕಳು ಹಸಿವಿನಿಂದ ಸಾಯುತ್ತಿದ್ದರು ಎಂದು ಆರೋಪಿಸಿದರು.

'ಇಂದು ಯುವಕರು ಸಾಮಾಜಿಕ ಜಾಲತಾಣದ ಹೀರೋಗಳಾಗಿದ್ದಾರೆ. ಕಾಂಗ್ರೆಸ್ ಅಂತರ್ಜಾಲವನ್ನು ಶ್ರೀಮಂತರ ವಸ್ತು ಎನ್ನುವಂತೆ ಮಾಡಿತ್ತು. ಆದರೆ, ಮೋದಿ ಅದು ಬಡವರಿಗೆ ಸಿಗುವಂತೆ ನೋಡಿಕೊಂಡರು. ಮೊಬೈಲ್ ಡೇಟಾ ಎಲ್ಲರಿಗೂ ಸಿಗುವಂತೆ ನಾವು ಮಾಡಿದೆವು' ಎಂದು ಹೇಳಿದರು.

ಜಾರ್ಖಂಡ್‌ನ ಪಲಾಮುವಿನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಹಿಳೆಯರು ಸನ್ಮಾನಿಸಿದರು– ಪಿಟಿಐ ಚಿತ್ರ

'ಶಹಜಾದ ಅಲ್ಲ, ಶಹೀದ್‌ಜಾದ'

ಪಲಾಮು/ಗುಮ್ಲಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬಳಸುತ್ತಿರುವ ಭಾಷೆಯ ಬಗ್ಗೆ ಕಾಂಗ್ರೆಸ್ ಆಕ್ಷೇಪಣೆ ಎತ್ತಿದೆ. ಪ್ರಧಾನಿ ಅವರು ರಾಹುಲ್ ಗಾಂಧಿ ಅವರನ್ನು 'ಶಹಜಾದ' ಎಂದಿದ್ದಾರೆ, ಆದರೆ ಅವರು 'ಶಹೀದ್‌ಜಾದ' (ಹುತಾತ್ಮರ ಮಗ) ಎಂಬುದಾಗಿ ಜನ ತಿಳಿದಿದ್ದಾರೆ ಎಂದು ಜಾರ್ಖಂಡ್ ಕಾಂಗ್ರೆಸ್ ಉಸ್ತುವಾರಿ ಗುಲಾಂ ಅಹ್ಮದ್ ಮಿರ್ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ಅಸಾಂವಿಧಾನಿಕ ಭಾಷೆ ಬಳಸುತ್ತಿದ್ದಾರೆ ಎಂದು ಜೆಎಂಎಂ ಜಾರ್ಖಂಡ್‌ನಲ್ಲಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದು, ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

ಜಾಗೃತಿ

ಮೂರನೇ ಹಂತದ ಲೋಕಸಭಾ ಚುನಾವಣೆಗಾಗಿ ಉತ್ತರ ಪ್ರದೇಶದ ಜಲೌನ್‌ನಲ್ಲಿ ಮತದಾನದ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಿದ ಅಂಗನವಾಡಿ ಕಾರ್ಯಕರ್ತೆಯರು – ಪಿಟಿಐ ಚಿತ್ರ

ಚುನಾವಣೆ ಪ್ರಕ್ರಿಯೆ ವೀಕ್ಷಣೆಗೆ 23 ರಾಷ್ಟ್ರಗಳ ಪ್ರತಿನಿಧಿಗಳು

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ, ರಷ್ಯಾ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ದೇಶ ಸೇರಿದಂತೆ 23 ದೇಶಗಳ ಚುನಾವಣಾ ನಿರ್ವಹಣಾ ಸಂಸ್ಥೆಗಳ ಪ್ರತಿನಿಧಿಗಳು ಲೋಕಸಭಾ ಚುನಾವಣಾ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು ಭಾರತಕ್ಕೆ ಬಂದಿದ್ದಾರೆ.

ಒಟ್ಟು 75 ಪ್ರತಿನಿಧಿಗಳು ಸಣ್ಣ ಗುಂಪುಗಳಲ್ಲಿ ಆರು ರಾಜ್ಯ ಗಳಿಗೆ ಭೇಟಿ ನೀಡಲಿದ್ದು, ವಿವಿಧ ಲೋಕಸಭಾ ಕ್ಷೇತ್ರಗಳ ಚುನಾವಣಾ ಸಿದ್ಧತೆಯನ್ನು ಅವಲೋಕಿಸಲಿದ್ದಾರೆ. ಚುನಾವಣಾ ಪ್ರಕ್ರಿಯೆಯ ವೀಕ್ಷಣೆಗೆ ವಿದೇಶಿ ಪ್ರತಿನಿಧಿಗಳು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಬಂದಿರುವುದು ಇದೇ ಮೊದಲು ಎಂದು ಚುನಾವಣಾ ಆಯೋಗವು ಹೇಳಿದೆ.

ಬಿಜೆಪಿಯ 'ಶಹಜಾದ' ಹೇಳಿಕೆಗೆ ಪ್ರಿಯಾಂಕಾ ಗಾಂಧಿ ತಿರುಗೇಟು

ಜನರಿಂದ ದೂರವಾಗಿರುವ 'ಶಹನ್‌ಶಾ' ಮೋದಿ

ಲಖಾನಿ (ಗುಜರಾತ್) (ಪಿಟಿಐ): ರಾಹುಲ್ ಗಾಂಧಿ ಅವರನ್ನು 'ಶಹಜಾದ' ಎಂದದ್ದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ, ಪ್ರಧಾನಿ ಮೋದಿ ಅವರು ಜನರಿಂದ ದೂರವಾಗಿ ಅರಮನೆಯಲ್ಲಿ ವಾಸಿಸುವ 'ಶಹನ್‌ಶಾ' (ರಾಜರ ರಾಜ) ಎಂದು ಟೀಕಿಸಿದ್ದಾರೆ.

ಬನಾಸ್‌ಕಾಂತಾ ಲೋಕಸಭಾ ಕ್ಷೇತ್ರದ ಲಖಾನಿಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಶನಿವಾರ ಮಾತನಾಡಿದ ಅವರು, 'ಪ್ರಧಾನಿ ನನ್ನ ಸಹೋದರನನ್ನು 'ಶಹಜಾದ' ಎಂದು ಕರೆಯುತ್ತಾರೆ. ಈ ಶಹಜಾದ ನಿಮ್ಮ ಜನರ ಸಮಸ್ಯೆ ಕೇಳಲು, ನನ್ನ ಸಹೋದರ ಸಹೋದರಿಯರು, ರೈತರು, ಕಾರ್ಮಿಕರನ್ನು ಭೇಟಿ ಮಾಡಲು ಮತ್ತು ಅವರ ಸಮಸ್ಯೆಗಳನ್ನು ಹೇಗೆ ಬಗೆಹರಿಸಬಹುದು ಎಂದು ಕೇಳಿ ತಿಳಿಯಲು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ 4 ಸಾವಿರ ಕಿ.ಮೀ. ಯಾತ್ರೆ ಕೈಗೊಂಡರು ಎಂದು ನಾನು ಅವರಿಗೆ ಹೇಳಲು ಬಯಸುತ್ತೇನೆ' ಎಂದಿದ್ದಾರೆ.

'ಇನ್ನೊಂದು ಕಡೆ, ನಿಮ್ಮ ಶಹನ್‌ಶಾ ನರೇಂದ್ರ ಮೋದಿ ಇದ್ದಾರೆ. ಅವರು ಅರಮನೆಯಲ್ಲಿ ವಾಸ ಮಾಡುತ್ತಾರೆ. ನೀವು ಎಂದಾದರೂ ಅವರನ್ನು ಟಿ.ವಿಯಲ್ಲಿ ನೋಡಿದ್ದೀರಾ? ದೂಳಿನ ಸಣ್ಣ ಕಲೆಯೂ ಇಲ್ಲದ ಶುಭ್ರ ಬಟ್ಟೆ, ನೀಟಾದ ಕೂದಲು. ಅವರು ಎಂದಾದರೂ ನಿಮ್ಮ ಶ್ರಮದ ದುಡಿಮೆ, ಬೇಸಾಯವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವೇ? ಹಣದುಬ್ಬರದಿಂದ ಹೆಚ್ಚಾಗಿರುವ ನಿಮ್ಮ ಸಮಸ್ಯೆಗಳನ್ನು ಅವರು ಹೇಗೆ ಅರ್ಥಮಾಡಿಕೊಳ್ಳಲು ಸಾಧ್ಯ?' ಎಂದರು.

ಮೋದಿ ಗುಜರಾತ್‌ನಿಂದ ಸ್ಪರ್ಧಿಸದೆ, ವಾರಾಣಸಿಯಿಂದ ಏಕೆ ಸ್ಪರ್ಧಿಸುತ್ತಿದ್ದಾರೆ ಎಂದು ಪ್ರಶ್ನಿಸಿದ ಅವರು, 'ಇಲ್ಲಿನ ಜನರಿಂದ ದೂರವಾಗದೇ ಇದ್ದರೆ ಅವರೇಕೆ ಗುಜರಾತ್‌ನಿಂದ ಚುನಾವಣೆಗೆ ಸ್ಪರ್ಧಿಸುತ್ತಿಲ್ಲ' ಎಂದು ಹೇಳಿದರು.

ಪ್ರಿಯಾಂಕಾ ಗಾಂಧಿ ಹೇಳಿದ್ದು..

- ಚುನಾವಣೆ ನಡೆಯುತ್ತಿರುವುದು ಭಾರತದಲ್ಲಿ, ಆದರೆ, ಪಾಕಿಸ್ತಾನದ ಬಗ್ಗೆ ಮಾತನಾಡುತ್ತಿದ್ದಾರೆ. ದೇಶದ ಪ್ರಧಾನಿಯಿಂದ ಇಷ್ಟು ಕೀಳುಮಟ್ಟದ ಮಾತೇ?
- ಜನ ಎಚ್ಚೆತ್ತುಕೊಂಡಿದ್ದಾರೆ ಮತ್ತು ಚುನಾವಣೆಯಲ್ಲಿ ಹಿಂದೂ ಮುಸ್ಲಿಂ ವಿಚಾರ ತರಬೇಡಿ ಎನ್ನುತ್ತಿದ್ದಾರೆ. ಅದರ ಬದಲಿಗೆ ವಿದ್ಯುತ್, ನೀರು, ಉದ್ಯೋಗ ಮತ್ತು ಹಣದುಬ್ಬರದ ಬಗ್ಗೆ ಮಾತನಾಡಿ ಎಂದು ಕೇಳುತ್ತಿರುವುದರಿಂದ ಪ್ರಧಾನಿ ಇಂಥ ಹೇಳಿಕೆ ನೀಡುತ್ತಿದ್ದಾರೆ.
- ಕಾಂಗ್ರೆಸ್ ಸರ್ಕಾರವು ರೈತರ ಅಭಿವೃದ್ಧಿಗಾಗಿ ಅಮುಲ್, ಬನಾಸ್ ಡೇರಿಯಂಥ ಸಹಕಾರಿ ಸಂಸ್ಥೆಗಳನ್ನು ರೂಪಿಸಿತು. ಆದರೆ, ಬಿಜೆಪಿ ಮುಖಂಡರು ಆ ವಲಯವನ್ನು ಕೈವಶ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ.

ಚುಟುಕು

ಎಎಪಿ ಚುನಾವಣಾ ಗೀತೆಗೆ ಅನುಮೋದನೆ

ನವದೆಹಲಿ (ಪಿಟಿಐ): ಎಎಪಿಯು ತನ್ನ ಚುನಾವಣಾ ಗೀತೆಗೆ ಕೆಲವೊಂದು ತಿದ್ದುಪಡಿಗಳನ್ನು ಮಾಡಿದ ನಂತರ ಅದಕ್ಕೆ ದೆಹಲಿ ಮುಖ್ಯ ಚುನಾವಣಾ ಆಯುಕ್ತರ ಕಚೇರಿಯು ಅನುಮೋದನೆ ನೀಡಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಚುನಾವಣಾ ಆಯೋಗವು ಶುಕ್ರವಾರ ಗೀತೆಯನ್ನು ಅನುಮೋದಿಸಿರುವುದಾಗಿ ಅದನ್ನು ಬರೆದು ಹಾಡಿರುವ ಎಎಪಿ ಶಾಸಕ ದಿಲೀಪ್ ಪಾಂಡೆ ಸ್ಪಷ್ಟಪಡಿಸಿದ್ದಾರೆ.

ಆಯೋಗವು ತಮ್ಮ ಪಕ್ಷದ ಚುನಾವಣಾ ಗೀತೆಯನ್ನು ನಿಷೇಧಿಸಿದೆ ಎಂದು ಎಎಪಿ ಏಪ್ರಿಲ್ 28ರಂದು ಆರೋಪಿಸಿತ್ತು. ಗೀತೆಯು ನೀತಿ ಸಂಹಿತೆ ಮತ್ತು ಆಯೋಗದ ಮಾರ್ಗಸೂಚಿಯನ್ನು ಉಲ್ಲಂಘಿಸುತ್ತಿದ್ದುದರಿಂದ ಅದನ್ನು ತಿದ್ದುಪಡಿ ಮಾಡುವಂತೆ ಆಯೋಗ ಸೂಚಿಸಿತ್ತು. ಅದರಂತೆ ತಿದ್ದುಪಡಿ ಮಾಡಿ ಸಲ್ಲಿಸಿದ್ದ ಗೀತೆಗೆ ಅನುಮೋದನೆ ಸಿಕ್ಕಿದೆ.

ಜಿಗಿ–ನೆಗೆದಾಟ

ಕಾಂಗ್ರೆಸ್ ದೆಹಲಿ ಘಟಕದ ಮಾಜಿ ಅಧ್ಯಕ್ಷ, ಮುಖಂಡರು ಬಿಜೆಪಿಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ದೆಹಲಿ ಘಟಕದ ಮಾಜಿ ಅಧ್ಯಕ್ಷ ಅರವಿಂದರ್ ಸಿಂಗ್ ಲವ್ಲಿ ಅವರು ಶನಿವಾರ ಬಿಜೆಪಿಗೆ ಸೇರ್ಪಡೆಗೊಂಡರು.

ಮಾಜಿ ಸಚಿವ ರಾಜ್‌ಕುಮಾರ್ ಚೌಹಾಣ್, ಮಾಜಿ ಶಾಸಕರಾದ ನೀರಜ್ ಬಸೋಯ ಮತ್ತು ನಸೀಬ್ ಸಿಂಗ್ ಅವರೂ ಅರವಿಂದರ್ ಜತೆಗೆ ಬಿಜೆಪಿಗೆ ಸೇರಿದರು. ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರು ಈ ನಾಲ್ವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಎಎಪಿಯ ಜೊತೆಗೆ ಮೈತ್ರಿ ಮಾಡಿಕೊಂಡಿರುವುದನ್ನು ವಿರೋಧಿಸಿ ಅರವಿಂದರ್ ಅವರು ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ ಸ್ಥಾನಕ್ಕೆ ಈಚೆಗೆ ರಾಜೀನಾಮೆ ನೀಡಿದ್ದರು.

ಎಂಥಾ ಮಾತು!

ಈ ಬಾರಿ ಕೇರಳದ ವಯನಾಡ್ ಕ್ಷೇತ್ರದಲ್ಲಿ ಸೋಲುವ ಭೀತಿ ಇರುವುದರಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಮೇಠಿಯ ಬದಲು ರಾಯ್‌ಬರೇಲಿಯಿಂದ ಕಣಕ್ಕಿಳಿದಿದ್ದಾರೆ. ಅಲ್ಲಿ ಅವರು ಭಾರಿ ಮತಗಳ ಅಂತರದಿಂದ ಸೋಲಲಿದ್ದಾರೆ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾದರೆ ಮೀಸಲಾತಿಯನ್ನು ರದ್ದು ಪಡಿಸಲಿದ್ದಾರೆ ಎಂದು 'ರಾಹುಲ್ ಬಾಬಾ ಮತ್ತು ಕಂಪನಿ' ಅಪಪ್ರಚಾರ ಮಾಡುತ್ತಿದೆ. ಕೆಲವು ರಾಜ್ಯಗಳಲ್ಲಿ 'ಇಂಡಿಯಾ' ಒಕ್ಕೂಟವು ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ವರ್ಗದವರ ಮೀಸಲಾತಿಯನ್ನು ಕಸಿದು ಮುಸ್ಲಿಮರಿಗೆ ನೀಡಿದೆ

ಅಮಿತ್ ಶಾ, ಕೇಂದ್ರ ಗೃಹಸಚಿವ

ಪಕ್ಷದ ಚುನಾವಣಾ ಕಾರ್ಯತಂತ್ರದ ಭಾಗವಾಗಿ ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶದ ರಾಯ್‌ಬರೇಲಿಯಿಂದ ಸ್ಪರ್ಧಿಸುತ್ತಿದ್ದಾರೆ. ಇದರಿಂದ ಬಿಜೆಪಿ ಮುಖಂಡರು ಭಯಗೊಂಡಿದ್ದಾರೆ. ರಾಹುಲ್ ಅವರು ಉತ್ತರ ಪ್ರದೇಶದಿಂದ ಮೂರು ಬಾರಿ ಮತ್ತು ಕೇರಳದಿಂದ ಒಮ್ಮೆ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಉತ್ತರದಲ್ಲಿ ಮತ್ತು ದಕ್ಷಿಣದಲ್ಲಿ ಸ್ಪರ್ಧಿಸಿ ಗೆಲ್ಲುವ ಸಾಮರ್ಥ್ಯ ಅವರಿಗಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒಡಿಶಾ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ, ಕರ್ನಾಟಕದಿಂದ ಸ್ಪರ್ಧಿಸುವ ಧೈರ್ಯ ಇದೆಯೇ? ಈ ರಾಜ್ಯಗಳ ಜನರು ಭಾರತದವರಲ್ಲವೇ?

ಸುಪ್ರಿಯಾ ಶ್ರೀನೇತ್, ಕಾಂಗ್ರೆಸ್ ನಾಯಕಿ

ಕ್ಷೇತ್ರ ಮಹಾತ್ಮೆ

ಮಧ್ಯಪ್ರದೇಶದ ಮೊರೇನಾ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಣ ರಂಗೇರಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ನಡುವಿನ ನೇರ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ. ಬಿಜೆಪಿಯು ಈ ಬಾರಿ ಶಿವಮಂಗಲ್ ಸಿಂಗ್ ತೋಮರ್ ಅವರನ್ನು ಕಣಕ್ಕಿಳಿಸಿದರೆ, ಕಾಂಗ್ರೆಸ್ ಪಕ್ಷವು ಸತ್ಯಪಾಲ್ ಸಿಂಗ್ ಸಿಕರ್‌ವಾರ್ ಅವರನ್ನು ಅಖಾಡಕ್ಕಿಳಿಸಿದೆ. ಇವರಿಬ್ಬರಿಗೆ ಪೈಪೋಟಿ ನೀಡಲು ಬಿಎಸ್‌ಪಿಯು ರಮೇಶ್‌ಚಂದ್ ಗಾರ್ಗ್ ಎಂಬುವವರನ್ನು ಸ್ಪರ್ಧಿಯಾಗಿಸಿದೆ.

2019ರ ಚುನಾವಣೆಯಲ್ಲಿ ಬಿಜೆಪಿಯ ನರೇಂದ್ರ ಸಿಂಗ್ ತೋಮರ್ ಅವರು, 1,13,341 ಮತಗಳ ಅಂತರದಿಂದ ಕಾಂಗ್ರೆಸ್‌ನ ರಾಮ್‌ನಿವಾಸ್ ರಾವತ್ ಅವರನ್ನು ಪರಾಭವಗೊಳಿಸಿದ್ದರು. ಬಿಜೆಪಿಯಲ್ಲಿದ್ದ ಸತ್ಯಪಾಲ್ ಸಿಂಗ್ ಅವರನ್ನು 2020ರಲ್ಲಿ ಪಕ್ಷ ವಿರೋಧಿ ಚಟುವಟಿಕೆಯ ಆರೋಪದಲ್ಲಿ ಉಚ್ಚಾಟಿಸಲಾಗಿತ್ತು. ಬಳಿಕ ಅವರು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಬಿಎಸ್‌ಪಿಯು ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಬಿಜೆಪಿ ವಿರೋಧಿ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. 1996ರಿಂದಲೂ ಈ ಕ್ಷೇತ್ರವು ಬಿಜೆಪಿಯ ಕೈವಶವಿದೆ. ಸತ್ಯಪಾಲ್ ಸಿಂಗ್ ಅವರು ಕ್ಷೇತ್ರದಲ್ಲಿ ಪ್ರಭಾವಿ ಮುಖಂಡರಾಗಿರುವುದರಿಂದಲೇ ಕಾಂಗ್ರೆಸ್ ಅವರನ್ನು ಕಣಕ್ಕಿಳಿಸಿದೆ. ನಿರುದ್ಯೋಗ ಸಮಸ್ಯೆ, ಹಣದುಬ್ಬರ, ಬೆಲೆ ಏರಿಕೆ ಮೊದಲಾದವುಗಳನ್ನು ಪ್ರಮುಖ ಚುನಾವಣಾ ವಿಷಯವಾಗಿಸಿ ಸತ್ಯಪಾಲ್ ಅವರು ಮತಯಾಚಿಸುತ್ತಿದ್ದಾರೆ. ಇಬ್ಬರು ಪ್ರಬಲ ಅಭ್ಯರ್ಥಿಗಳು ಕಣಕ್ಕಿಳಿದಿರುವುದರಿಂದ ಕ್ಷೇತ್ರದ ಮತದಾರರು ಯಾರ ಕೈಹಿಡಿಯುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ

ಅಮೇಠಿ

ಸ್ಮೃತಿ ಇರಾನಿ (ಬಿಜೆಪಿ)

ಉತ್ತರ ಪ್ರದೇಶದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಅಮೇಠಿಯಿಂದ ಈ ಬಾರಿಯೂ ಬಿಜೆಪಿಯು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಸ್ಮೃತಿ ಅವರು 55,120 ಮತಗಳ ಅಂತರದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸೋಲಿಸಿದ್ದರು. ಕಿರುತೆರೆ ನಟಿಯಾಗಿದ್ದ ಸ್ಮೃತಿ ಅವರು 2003ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಬಿಜೆಪಿ ಮಹಿಳಾ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿದ್ದರು. 2004ರಲ್ಲಿ ದೆಹಲಿಯ ಚಾಂದಿನಿ ಚೌಕ್ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ಕಪಿಲ್ ಸಿಬಲ್ ವಿರುದ್ಧ ಸ್ಪರ್ಧಿಸಿ ಸೋತಿದ್ದರು. 2011ರಲ್ಲಿ ಗುಜರಾತ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗುವ ಮೂಲಕ ಸಂಸತ್ ಪ್ರವೇಶಿಸಿದ್ದರು. ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಅಮೇಠಿಯಿಂದ 2014ರಲ್ಲಿ ಸ್ಮೃತಿ ಅವರು ರಾಹುಲ್ ಗಾಂಧಿ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

v/s

ಕಿಶೋರಿ ಲಾಲ್ ಶರ್ಮಾ (ಕಾಂಗ್ರೆಸ್)

ಬಿಜೆಪಿಯ ಪ್ರಬಲ ಅಭ್ಯರ್ಥಿಯಾದ ಸ್ಮೃತಿ ಇರಾನಿ ಅವರನ್ನು ಮಣಿಸಲು ಈ ಬಾರಿ ಕಾಂಗ್ರೆಸ್, ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಕಿಶೋರಿ ಲಾಲ್ ಶರ್ಮಾ ಅವರನ್ನು ಅಖಾಡಕ್ಕಿಳಿಸಿದೆ. ಈ ಕ್ಷೇತ್ರದಿಂದ ರಾಹುಲ್ ಗಾಂಧಿ ಅವರೇ ಸ್ಪರ್ಧಿಸುತ್ತಾರೆಂದು ಆರಂಭದಲ್ಲಿ ಹೇಳಲಾಗುತ್ತಿತ್ತು. ಅಮೇಠಿಯಿಂದ ರಾಹುಲ್ ಮತ್ತು ರಾಯ್‌ಬರೇಲಿಯಿಂದ ಸೋನಿಯಾ ಗಾಂಧಿ ಅವರು ಈ ಹಿಂದೆ ಸ್ಪರ್ಧಿಸಿದ್ದಾಗ, ಅವರ ಗೆಲುವಿಗಾಗಿ ಕಿಶೋರಿ ಲಾಲ್ ಅವರು ಅವಿರತವಾಗಿ ಶ್ರಮಿಸಿದ್ದರು. ಪಂಜಾಬ್‌ನ ಲುಧಿಯಾನ ಮೂಲದ ಕಿಶೋರಿ ಲಾಲ್ ಅವರು ಅಮೇಠಿ ಕ್ಷೇತ್ರದಲ್ಲಿ ಪ್ರಭಾವಿ ಮುಖಂಡರಾಗಿದ್ದಾರೆ. 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಯಾಗಿರುವುದು ಕಿಶೋರಿ ಲಾಲ್ ಅವರ ಗೆಲುವಿನ ವಿಶ್ವಾಸವನ್ನು ಹೆಚ್ಚಿಸಿದೆ. 63 ವರ್ಷದ ಅವರು ಮೊದಲ ಬಾರಿ ಚುನಾವಣೆಯನ್ನು ಎದುರಿಸುತ್ತಿದ್ದಾರೆ. ಕಿಶೋರಿ ಲಾಲ್ ಅವರು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು.

ವಾರಂಟ್ ಪಡೆದು ಜೆಡಿಎಸ್ ಶಾಸಕನ ಬಂಧಿಸಿದ ಎಸ್ಐಟಿ ಅಧಿಕಾರಿಗಳು • ಊಟ ತಂದುಕೊಟ್ಟ ಸಿಬ್ಬಂದಿ

ಎಸ್ಐಟಿ ಕಚೇರಿಯಲ್ಲಿ ರಾತ್ರಿ ಕಳೆದ ರೇವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ತನಿಖಾ ತಂಡದ (ಎಸ್ಐಟಿ) ಅಧಿಕಾರಿಗಳು ಬಂಧಿಸಿರುವ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರನ್ನು ಬೌರಿಂಗ್ ಆಸ್ಪತ್ರೆಗೆ ಶನಿವಾರ ರಾತ್ರಿಯೇ ಕರೆದೊಯ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು.

ಕೆ.ಆರ್.ನಗರದಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ರೇವಣ್ಣ ಅವರ ಪತ್ತೆಗೆ ಎಸ್ಐಟಿ ಅಧಿಕಾರಿಗಳು ವಿಶೇಷ ತಂಡ ರಚಿಸಿದ್ದರು. ಪದ್ಮನಾಭನಗರದಲ್ಲಿರುವ ಎಚ್.ಡಿ.ದೇವೇಗೌಡ ಮನೆ, ಬಿಡದಿಯಲ್ಲಿರುವ ತೋಟದ ಮನೆ ಹಾಗೂ ಇತರೆಡೆಯ ಶೋಧ ನಡೆಸಲು ಅಧಿಕಾರಿಗಳು ನ್ಯಾಯಾಲಯದಿಂದ ವಾರಂಟ್ ಸಹ ಪಡೆದಿದ್ದರು.

ಮೂರು ಸ್ಥಳಗಳಿಗೂ ಏಕಕಾಲದಲ್ಲಿ ಭೇಟಿ ನೀಡಿದ್ದ ಅಧಿಕಾರಿಗಳ ತಂಡ, ಶೋಧ ನಡೆಸಿದರು. ಪದ್ಮನಾಭನಗರದಲ್ಲಿರುವ ಮನೆಯಲ್ಲಿಯೇ ರೇವಣ್ಣ ಸಿಕ್ಕಿಬಿದ್ದರು. ಅವರಿಗೆ ವಾರಂಟ್ ತೋರಿಸಿದ ಅಧಿಕಾರಿಗಳು, ವಶಕ್ಕೆ ಪಡೆದು ಅರಮನೆ ರಸ್ತೆಯಲ್ಲಿರುವ ಕಾರ್ಲ್‌ಟನ್ ಕಟ್ಟಡದಲ್ಲಿರುವ ಕಚೇರಿಗೆ ಕರೆತಂದರು. ಕೆಲ ನಿಮಿಷ ಕಚೇರಿಯಲ್ಲಿ ವಿಚಾರಣೆ ನಡೆಸಿ, ಕಾನೂನು ಪ್ರಕ್ರಿಯೆ ನಡೆಸಿದರು.

ವೈದ್ಯರಿಂದ ತಪಾಸಣೆ: 65 ವರ್ಷ ವಯಸ್ಸಿನ ರೇವಣ್ಣ ಅವರನ್ನು ಬಿಗಿ ಭದ್ರತೆಯಲ್ಲಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದ ಅಧಿಕಾರಿಗಳು, ವೈದ್ಯಕೀಯ ತಪಾಸಣೆಗೆ ಒಳಪಡಿಸಿದರು. ರೇವಣ್ಣ ಅವರ ರಕ್ತದೊತ್ತಡ ಹಾಗೂ ಇತರ ಆರೋಗ್ಯದ ಬಗ್ಗೆ ತಪಾಸಣೆ ನಡೆಸಲಾಯಿತು.

ಅರ್ಧ ಗಂಟೆಯೂ ಹೆಚ್ಚು ಕಾಲ ರೇವಣ್ಣ ಹಾಗೂ ಅಧಿಕಾರಿಗಳು ಆಸ್ಪತ್ರೆಯಲ್ಲಿದ್ದರು. ವೈದ್ಯಕೀಯ ತಪಾಸಣೆ ಪೂರ್ಣಗೊಂಡ ನಂತರ ವೈದ್ಯರಿಂದ ವರದಿ ಪಡೆದ ಪೊಲೀಸರು, ರೇವಣ್ಣ ಅವರನ್ನು ಪುನಃ ಕಚೇರಿಗೆ ಕರೆತಂದರು.

ರೇವಣ್ಣ ಅವರಿಗೆ ರಾತ್ರಿ ಎಸ್ಐಟಿ ಸಿಬ್ಬಂದಿಯೇ ಊಟ ತಂದು ಕೊಟ್ಟರು. ಭಾನುವಾರ ರಾತ್ರಿ ಕಚೇರಿಯಲ್ಲಿಯೇ ರೇವಣ್ಣ ಅವರನ್ನು ಇರಿಸಲಾಯಿತು.

'ಅಪಹರಣ ಹಾಗೂ ಅಕ್ರಮ ಬಂಧನ ಪ್ರಕರಣದಲ್ಲಿ ರೇವಣ್ಣ ಅವರನ್ನು ಬಂಧಿಸಲಾಗಿದೆ. ಸಂತ್ರಸ್ತೆ ಅಪಹರಣದ ಬಗ್ಗೆ ಅವರಿಂದ ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗುತ್ತಿದೆ. ರೇವಣ್ಣ ಅವರನ್ನು ನ್ಯಾಯಾಧೀಶರ ಎದುರು ಭಾನುವಾರ ಬೆಳಿಗ್ಗೆ ಹಾಜರುಪಡಿಸಿದ ಸಂದರ್ಭದಲ್ಲಿ, ಪ್ರಕರಣದ ಮಾಹಿತಿಯನ್ನು ನ್ಯಾಯಾಧೀಶರ ಗಮನಕ್ಕೆ ತರಲಾಗುವುದು' ಎಂದು ಎಸ್ಐಟಿ ಮೂಲಗಳು ಹೇಳಿವೆ.

'ಇದೊಂದು ಗಂಭೀರ ಪ್ರಕರಣ. ಸಾಕಷ್ಟು ಸಂತ್ರಸ್ತೆಯರ ಮೇಲೆ ಲೈಂಗಿಕ ದೌರ್ಜನ್ಯ ಆಗಿದೆ. ಜೊತೆಗೆ, ಅಪಹರಣ ಮಾಡಿದ್ದ ಸಂತ್ರಸ್ತೆ ಮೇಲೆ ಹಲ್ಲೆ ಮಾಡಿರುವುದು ಕಂಡುಬಂದಿದೆ. ರೇವಣ್ಣ ಸೇರಿದಂತೆ ಹಲವರು ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಎಲ್ಲರನ್ನೂ ಪತ್ತೆ ಮಾಡಲು ರೇವಣ್ಣ ಅವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಬೇಕು. ಹೀಗಾಗಿ, ಅವರನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು' ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು
- ರೇವಣ್ಣರಿಂದ ಪ್ರಾಥಮಿಕ ಮಾಹಿತಿ ಸಂಗ್ರಹ
- ಸಂತ್ರಸ್ತೆಯ ಹೇಳಿಕೆ ದಾಖಲಿಸಲು ಸಿದ್ಧತೆ
- ಮತ್ತಷ್ಟು ಮಂದಿಗೆ ನೋಟಿಸ್ ಸಾಧ್ಯತೆ


ಪದ್ಮನಾಭನಗರದ ಮನೆಯಲ್ಲಿ ಎಚ್.ಡಿ.ರೇವಣ್ಣ ಅವರನ್ನು ಬಂಧಿಸಿದ ಎಸ್ಐಟಿ ಅಧಿಕಾರಿಗಳು ಕರೆದೊಯ್ದರು –ಪ್ರಜಾವಾಣಿ ಚಿತ್ರ

ಕಾರ್ಲ್‌ಟನ್ ಕಟ್ಟಡದ ಬಳಿ ಬಿಗಿ ಭದ್ರತೆ

ರೇವಣ್ಣ ಬಂಧನ ಹಿನ್ನೆಲೆಯಲ್ಲಿ ಎಸ್ಐಟಿ ಕಚೇರಿ ಇರುವ ಅರಮನೆ ರಸ್ತೆಯ ಕಾರ್ಲ್‌ಟನ್ ಕಟ್ಟಡದ ಸುತ್ತಮುತ್ತ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

ಹೈಗ್ರೌಂಡ್ ಠಾಣೆ ಪೊಲೀಸರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭದ್ರತೆಗೆ ನಿಯೋಜಿಸಲಾಗಿತ್ತು. ಕೆಎಸ್ಆರ್‌ಪಿ ತುಕಡಿಯನ್ನು ಭದ್ರತೆಗೆ ಬಳಸಿಕೊಳ್ಳಲಾಗಿತ್ತು. ಕಾರ್ಲ್‌ಟನ್ ಕಟ್ಟಡದ ಪ್ರವೇಶ ದ್ವಾರದಲ್ಲಿ ಸಾರ್ವಜನಿಕರಿಗೆ ಪ್ರವೇಶವನ್ನು ನಿರ್ಬಂಧಿಸಿ, ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿತ್ತು.

'ರೇವಣ್ಣ ಬಂಧನದಿಂದಾಗಿ ಅವರ ಬೆಂಬಲಿಗರು ಕಾರ್ಲ್‌ಟನ್ ಕಟ್ಟಡದ ಬಳಿ ಪ್ರತಿಭಟನೆ ನಡೆಸುವ ಸೂಚನೆ ಇತ್ತು. ಮುಂಜಾಗ್ರತೆಯಾಗಿ ಹೆಚ್ಚಿನ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಭಾನುವಾರವೂ ಭದ್ರತೆ ಮುಂದುವರಿಯಲಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್‌ಗೆ ಫ್ರಾನ್ಸ್ ವಿದ್ಯಾರ್ಥಿಗಳ ತಂಡ

ಚನ್ನಪಟ್ಟಣ: ಫ್ರಾನ್ಸ್ ದೇಶದ ಲಿಸಾ ಸ್ಕೂಲ್ ಆಫ್ ಡಿಸೈನಿಂಗ್ ವಿದ್ಯಾರ್ಥಿಗಳು ಶುಕ್ರವಾರ ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್‌ಗೆ ಭೇಟಿ ನೀಡಿ ಬೊಂಬೆ ತಯಾರಿಕಾ ಸಾಂಪ್ರದಾಯಿಕ ಕಲೆ ಬಗ್ಗೆ ತಿಳಿದುಕೊಂಡರು. ಕರ್ನಾಟಕ ಪ್ರವಾಸದ ಭಾಗವಾಗಿ ಭೇಟಿ ನೀಡಿದ್ದರು.

ಬೊಂಬೆ ತಯಾರಿಕಾ ಕುಶಲಕರ್ಮಿಗಳೊಂದಿಗೆ ಸಂವಾದ ನಡೆಸಿದರು. ಬೊಂಬೆಗಳಿಗೆ ಬಳಸುವ ಮರ, ಬೊಂಬೆ ಮಾಡುವ ಮೊದಲು ಮಾಡಿಕೊಳ್ಳುವ ತಯಾರಿ, ಬೊಂಬೆಗಳಿಗೆ ಬಣ್ಣ ಹಾಕುವ ವಿಧಾನ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾಹಿತಿ ಪಡೆದರು.

ತಲೆಮಾರುಗಳಿಂದ ಬಂದಿರುವ ಸಾಂಪ್ರದಾಯಿಕ ಕಲೆಯ ಹಿನ್ನೆಲೆ ಕುರಿತು ಪ್ರಶ್ನಿಸಿದರು. ಕುಶಲಕರ್ಮಿಗಳ ವಾಸ್ತುಶಿಲ್ಪ ಪರಂಪರೆ, ಕಾರ್ಯಕ್ಷಮತೆ ಹಾಗೂ ಕಲೆ ಗೌರವಿಸುವ ವಿಧಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಬೊಂಬೆ ತಯಾರಿಕೆ, ವಿನ್ಯಾಸಗಳನ್ನು ವಿಡಿಯೊ ಚಿತ್ರೀಕರಣ ಮಾಡಿಕೊಂಡರು.

ಆನೇಕಲ್: ವೈಭವದ ಹೆನ್ನಾಗರ ನಾಗೇಶ್ವರ ರಥೋತ್ಸವ

ಆನೇಕಲ್: ತಾಲ್ಲೂಕಿನ ಹೆನ್ನಾಗರ ನಾಗೇಶ್ವರ ರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು. ಸುತ್ತಮುತ್ತಲ ಗ್ರಾಮಗಳ ನೂರಾರು ಮಂದಿ ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು.

ಮಧ್ಯಾಹ್ನ 12.30ರ ವೇಳೆಗೆ ನಾಗಲಿಂಗೇಶ್ವರ ಉತ್ಸವಮೂರ್ತಿಯನ್ನು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥದಲ್ಲಿ ಇರಿಸಲಾಯಿತು. ರಾಜಾಪುರ ಸಂಸ್ಥಾನ ಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ ಮತ್ತು ಗುಮ್ಮಳಾಪುರ ಸಂಸ್ಥಾನ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಅಲಂಕೃತ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಪ್ರಮುಖ ಬೀದಿಗಳಲ್ಲಿ ರಥ ಸಂಚರಿಸಿತು. ಭಕ್ತರು ದವನ, ಬಾಳೆ ಹಣ್ಣು ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಮಹಿಳಾ ವೀರಗಾಸೆ, ಗಾರುಡಿ ಗೊಂಬೆ, ನಂದಿಧ್ವಜ ರಥೋತ್ಸವಕ್ಕೆ ಮೆರುಗು ನೀಡಿದವು. ಭಕ್ತರು ಬೆಲ್ಲದಾರತಿ ಹೊತ್ತು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಿಗೆ ಸಮರ್ಪಿಸಿದರು.

ಒಂದೂವರೆ ವರ್ಷದ ಮಗು ಅಪಹರಣ

ಪ್ರಜಾವಾಣಿ ವಾರ್ತೆ

ಬೀದರ್: ನಗರದ ನಯಾಕಮಾನ್ ಸಮೀಪ ಶನಿವಾರ ಒಂದೂವರೆ ವರ್ಷದ ಗಂಡು ಮಗುವಿನ ಅಪಹರಣವಾಗಿದೆ.

'ಉತ್ತರ ಪ್ರದೇಶ ಮೂಲದ ದಂಪತಿಯ ಒಂದೂವರೆ ವರ್ಷದ ಗಂಡು ಮಗು ಅವರ ಕೆಲಸ ನಿರ್ವಹಿಸುತ್ತಿರುವ ಸ್ಥಳದ ಸಮೀಪ ಶನಿವಾರ ಆಟವಾಡುತ್ತಿತ್ತು. ಈ ಸಂದರ್ಭದಲ್ಲಿ 55ರಿಂದ 60 ವರ್ಷದ ಮಹಿಳೆಯೊಬ್ಬರು ಮಗುವನ್ನು ಅಪಹರಿಸಿಕೊಂಡು ಹೋಗಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಅಪಹರಣ ದೃಶ್ಯ ಸೆರೆಯಾಗಿದೆ. ಮಗುವಿನ ಪತ್ತೆಗೆ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮೃತದೇಹ ಹೂಳಲು ಜಮೀನಿನಲ್ಲಿ ಗುಂಡಿ ತೋಡುತ್ತಿದ್ದಾಗ ಸಿಕ್ಕಿಬಿದ್ದ ಆರೋಪಿ

ತವರು ಮನೆಗೆ ಕೋಟಿ ಹಣ: ಪತ್ನಿ ಹತ್ಯೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಸೋಂಪುರ ಹೋಬಳಿ ಗೊಟ್ಟಿಕೆರೆ ಪಾಳ್ಯದಲ್ಲಿ ಜಯಲಕ್ಷ್ಮಿ (36) ಎಂಬುವವರನ್ನು ಹತ್ಯೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪತಿ ಶ್ರೀನಿವಾಸ್ (42) ಅವರನ್ನು ದಾಬಸ್‌ಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗೊಟ್ಟಿಕೆರೆ ಪಾಳ್ಯದ ಶ್ರೀನಿವಾಸ್ ಅವರ ಜಮೀನು ಸ್ವಾಧೀನ ಪಡೆದಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸುಮಾರು ₹ 1 ಕೋಟಿ ಪರಿಹಾರ ಮಂಜೂರು ಮಾಡಿತ್ತು. ಇದೇ ಹಣವನ್ನು ಜಯಲಕ್ಷ್ಮಿ ತವರು ಮನೆಗೆ ನೀಡಿದ್ದರೆಂದು ಗೊತ್ತಾಗಿದೆ. ಇದೇ ಕಾರಣಕ್ಕೆ ಆರೋಪಿ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಶ್ರೀನಿವಾಸ್ ಹಾಗೂ ಜಯಲಕ್ಷ್ಮಿ ದಂಪತಿಗೆ ಮಕ್ಕಳಿದ್ದಾರೆ. ಜಮೀನಿನಲ್ಲಿಯೇ ಮನೆ ಮಾಡಿಕೊಂಡು ಕುಟುಂಬ ವಾಸವಿತ್ತು. ಮದ್ಯವ್ಯಸನಿ ಆಗಿದ್ದ ಶ್ರೀನಿವಾಸ್, ನಿತ್ಯ ಕುಡಿದು ಬಂದು ಗಲಾಟೆ ಮಾಡುತ್ತಿದ್ದ. ಪತ್ನಿ ಮೇಲೂ ಹಲ್ಲೆ ಮಾಡುತ್ತಿದ್ದ. ಗ್ರಾಮದ ಹಿರಿಯರು, ದಂಪತಿ ನಡುವೆ ಹಲವು ಬಾರಿ ಸಂಧಾನ ಮಾಡಿದ್ದರು' ಎಂದು ತಿಳಿಸಿದರು.

ಅಪರಾಧ ಸುದ್ದಿ

ಮಚ್ಚಿನಿಂದ ಹೊಡೆದು ಕೊಲೆ: 'ಪರಿಹಾರದ ಮೊತ್ತವನ್ನು ಜಯಲಕ್ಷ್ಮಿ ತನ್ನ ತವರು ಮನೆಗೆ ನೀಡಿದ್ದು ತಿಳಿಯುತ್ತಿದ್ದಂತೆ ಶ್ರೀನಿವಾಸ್ ಜಗಳ ಮಾಡೊ. ಹಣ ವಾಪಸು ತರಿಸಲು ತಾಕೀತು ಮಾಡಿದ್ದ. ಆದರೆ, ಜಯಲಕ್ಷ್ಮಿ ಹಿಂದೇಟು ಹಾಕಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಏಪ್ರಿಲ್ 30ರಂದು ದಂಪತಿ ನಡುವೆ ಜಗಳ ಶುರುವಾಗಿತ್ತು. ಜಗಳ ವಿಕೋಪಕ್ಕೆ ಹೋಗಿ ಶ್ರೀನಿವಾಸ್, ಪತ್ನಿಗೆ ಮಚ್ಚಿನಿಂದ ಹೊಡೆದಿದ್ದ. ರಕ್ತಸ್ರಾವದಿಂದಾಗಿ ಪತ್ನಿ ಸ್ಥಳದಲ್ಲೇ ಮೃತಪಟ್ಟಿದ್ದಳು. ಜಮೀನಿನಲ್ಲಿಯೇ ಶವ ಬಿಟ್ಟು ಮನೆಗೆ ಹೋಗಿದ್ದ' ಎಂದು ತಿಳಿಸಿವೆ.

ಪತ್ನಿಯ ಮೃತದೇಹ ಹೂಳಲು ಪತಿ ತೋಡಿದ್ದ ಗುಂಡಿ

ನಾಯಿಯ ಮೃತದೇಹವೆಂದಿದ್ದ: 'ಜಮೀನು ಬಳಿ ಹೋಗಿದ್ದ ಮಕ್ಕಳು, ಯಾರೋ ಬಿದ್ದಿದ್ದನ್ನು ದೂರದಿಂದ ನೋಡಿದ್ದರು. ಜೊತೆಗಿದ್ದ ತಂದೆಗೂ ವಿಷಯ ತಿಳಿಸಿದ್ದರು. ಆರೋಪಿ, ನಾಯಿ ಬಿದ್ದಿರುವುದಾಗಿ ಹೇಳಿ ಮಕ್ಕಳನ್ನು ಮನೆಗೆ ಕಳುಹಿಸಿದ್ದ. ನಂತರ, ಮೃತದೇಹವನ್ನು ಮನೆಯ ನೀರಿನ ಸಂಪಿನಲ್ಲಿ ಎಸೆದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಜಯಲಕ್ಷ್ಮಿ

ಶ್ರೀನಿವಾಸ್

ಗುಂಡಿ ತೋಡುತ್ತಿದ್ದಾಗ ಸಿಕ್ಕಿಬಿದ್ದ: 'ರಾತ್ರಿಯವರೆಗೂ ನೀರಿನ ಸಂಪಿನಲ್ಲಿಯೇ ಮೃತದೇಹವಿತ್ತು. ರಾತ್ರಿ 12 ಗಂಟೆಗೆ ಜಮೀನಿಗೆ ಬಂದಿದ್ದ ಆರೋಪಿ, ಮೃತದೇಹ ಹೂಳಲು ಗುಂಡಿ ತೋಡುತ್ತಿದ್ದ. ದೂರದಲ್ಲಿರುವ ಮನೆಯ ಚಾವಣಿಯಲ್ಲಿದ್ದ ಮಕ್ಕಳು, ಯಾರೋ ಗುಂಡಿ ತೋಡುತ್ತಿದ್ದಾರೆಂದು ಸ್ಥಳಕ್ಕೆ ಹೋಗಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಂದೆಯನ್ನು ನೋಡಿದ್ದ ಮಕ್ಕಳು, 'ಏಕೆ ಗುಂಡಿ ತೆಗೆಯುತ್ತಿದ್ದಿಯಾ' ಎಂದು ಪ್ರಶ್ನಿಸಿದ್ದರು. ತೆಂಗಿನ ಸಸಿ ನೆಡಲು ಗುಂಡಿ ತೋಡುತ್ತಿರುವುದಾಗಿ ಹೇಳಿ ವಾಪಸು ಕಳುಹಿಸಿದ್ದ. ಬಳಿಕ, ನೀರಿನ ಸಂಪಿನಲ್ಲಿದ್ದ ಮೃತದೇಹವನ್ನು ತರಲು ಆರೋಪಿ ಹೋಗಿದ್ದ. ಆಗ ಮಕ್ಕಳು ತಾಯಿಯ ಮೃತದೇಹ ನೋಡಿದ್ದರು. ಹೆದರಿದ್ದ ಮಕ್ಕಳು, ಅಳಲಾರಂಭಿಸಿದ್ದರು. ವಿಷಯವನ್ನು ಯಾರಿಗೂ ಹೇಳದಂತೆ ಶ್ರೀನಿವಾಸ್, ಮಕ್ಕಳಿಗೂ ಜೀವ ಬೆದರಿಕೆಯೊಡ್ಡಿದ್ದ' ಎಂದು ಮೂಲಗಳು ಹೇಳಿವೆ.

'ತಾಯಿ ಮೃತಪಟ್ಟ ವಿಷಯವನ್ನು ಮಕ್ಕಳು ಸಂಬಂಧಿಕರಿಗೆ ತಿಳಿಸಿದ್ದರು. ನಂತರವೇ ಠಾಣೆಗೆ ವಿಷಯ ಗೊತ್ತಾಗಿತ್ತು. ನೆಲಮಂಗಲ ಡಿವೈಎಸ್ಪಿ ಜಗದೀಶ್, ದಾಬಸ್ ಪೇಟೆ ಠಾಣೆ ಇನ್‌ಸ್ಪೆಕ್ಟರ್ ಬಿ.ರಾಜು ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿದ್ದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದ್ದರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ₹ 1 ಕೋಟಿ ಹಣದ ವಿಚಾರಕ್ಕೆ ಪತ್ನಿಯನ್ನು ಕೊಂದಿರುವುದಾಗಿ ತಪ್ಪೊಪ್ಪಿಕೊಂಡ' ಎಂದು ಮೂಲಗಳು ತಿಳಿಸಿವೆ.

ಅರಣ್ಯದಲ್ಲಿ ಅರೆಬೆಂದ ಮಹಿಳೆ ಶವ: ಪತಿ ಬಂಧನ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ತೂಬಗೆರೆ ಹೋಬಳಿಯ ನಾರಸಿಂಹನ ಹಳ್ಳಿ ಗ್ರಾಮದ ಸಮೀಪದ ಅರಣ್ಯದಲ್ಲಿ ಕೊಳೆತ ಸ್ಥಿತಿಯಲ್ಲಿ ದೊರೆತಿದ್ದ ಅರೆಬೆಂದ ಮಹಿಳೆ ಶವದ ಗುರುತು ಪತ್ತೆಯಾಗಿದೆ.

ವೀಣಾ

ಶವವನ್ನು ದೊಡ್ಡಬಳ್ಳಾಪುರದ ಕರೇನಹಳ್ಳಿ ನಿವಾಸಿ ವೀಣಾ (22) ಅವರದ್ದು ಎಂದು ಗುರುತಿಸಲಾಗಿದೆ. ಮಹಿಳೆಯ ಗಂಡ ರವಿಚಂದ್ರ ತಾನೇ ಕೊಲೆ ಮಾಡಿರುವುದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೇರೆ ಮಹಿಳೆಯೊಂದಿಗೆ ರವಿಚಂದ್ರ ಅಕ್ರಮ ಸಂಬಂಧ ಹೊಂದಿದ್ದಾನೆ ಎಂಬ ಅನುಮಾನದೊಂದಿಗೆ ಪತ್ನಿ ವೀಣಾ ಸದಾ ಜಗಳ ತೆಗೆಯುತ್ತಿದ್ದಳು. ಇದರಿಂದ ಬೇಸತ್ತ ರವಿಚಂದ್ರ, ಪತ್ನಿ ಅರಣ್ಯಕ್ಕೆ ಕರೆದೊಯ್ದು ಕತ್ತು ಹಿಸುಕಿ ಕೊಲೆ ಮಾಡಿದ ನಂತರ ಶವವನ್ನು ಸುಟ್ಟುಹಾಕಿರುವುದಾಗಿ ತನಿಖೆಯಲ್ಲಿ ಒಪ್ಪಿಕೊಂಡಿದ್ದಾನೆ ಎಂದು ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ಸಾದಿಕ್ ಪಾಷಾ ಅವರು ತಿಳಿಸಿದರು.

ಮಹಿಳೆ ಆತ್ಮಹತ್ಯೆ: ಕೊಲೆ ಆರೋಪದಲ್ಲಿ ರವಿಚಂದ್ರ ಬಂಧನ ವಿಚಾರ ತಿಳಿದು ಈತನೊಂದಿಗೆ ಸಂಪರ್ಕದಲ್ಲಿದ್ದ ಕರೇನಹಳ್ಳಿ ನಿವಾಸಿ ಕಲ್ಪನಾ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಈ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹ್ಯಾಂಡಲ್ ಲಾಕ್ ಮುರಿದು ವಾಹನ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಯ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿ ಎ.ಮುಬಾರಕ್‌ನನ್ನು (25) ಚಾಮರಾಜಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆರ್.ಕೆ.ಹೆಗಡೆ ನಗರದ ಮುಬಾರಕ್, ಅಪರಾಧ ಹಿನ್ನೆಲೆಯುಳ್ಳವ. ಸಹಚರನ ಜೊತೆ ಸೇರಿ ಕೃತ್ಯ ಎಸಗುತ್ತಿದ್ದ. ಈತನಿಂದ ₹ 2.50 ಲಕ್ಷ ಮೌಲ್ಯದ 4 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಸಚಹರ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ವಾಹನ ಕದ್ದೊಯ್ದು ನಿರ್ಜನ ಪ್ರದೇಶದಲ್ಲಿ ನಿಲ್ಲಿಸುತ್ತಿದ್ದ. ಸೆಕೆಂಡ್ ಹ್ಯಾಂಡ್ ವಾಹನವೆಂದು ಹೇಳಿ ಬೇರೆಯವರಿಗೆ ಮಾರುತ್ತಿದ್ದ. ದಾಖಲೆ ಕೇಳಿದಾಗ, ಕೆಲ ದಿನ ಬಿಟ್ಟು ಕೊಡುವುದಾಗಿ ಹೇಳುತ್ತಿದ್ದ.'

'ಚಾಮರಾಜಪೇಟೆ, ಕಲಾಸಿಪಾಳ್ಯ, ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಹಾಗೂ ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ಈತ ಕಳವು ಮಾಡಿರುವುದು ಗೊತ್ತಾಗಿದೆ' ಎಂದರು.

'ಸಂಬಳ ನೀಡದಿದ್ದಕ್ಕೆ ಬೈಕ್ ಕದ್ದ'

ಬೆಂಗಳೂರು: ಸಂಬಳ ನೀಡಲಿಲ್ಲ ಎಂದು ಕೆಲಸ ಮಾಡುತ್ತಿದ್ದ ಹೋಟೆಲ್ ಮಾಲೀಕನ ದ್ವಿಚಕ್ರ ವಾಹನ ಕಳವು ಮಾಡಿ ಕೇರಳಕ್ಕೆ ಪರಾರಿಯಾಗಿದ್ದ ಅಖೀಬ್ ಖಾನ್ (23) ಎಂಬಾತನನ್ನು ಮಡಿವಾಳ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕೇರಳ ಮೂಲದ ಅಖೀಬ್ ಖಾನ್ ಠಾಣೆ ವ್ಯಾಪ್ತಿಯ ಹೋಟೆಲ್‌ವೊಂದರಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಹೋಟೆಲ್ ಮಾಲೀಕರು ಸಂಬಳ ನೀಡಿಲ್ಲ ಎಂದು ಸಿಟ್ಟಿಗೆದ್ದ ಬೈಕ್ ಕದ್ದಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಚ್ಚುವರಿ ಕೆಲಸ ಮತ್ತು ಪ್ರತಿ ತಿಂಗಳು ಸಂಬಳ ನೀಡಲೂ ವಿಳಂಬದಿಂದ ಬೇಸತ್ತಿದ್ದ ಅಖೀಬ್, ಯೂಟ್ಯೂಬ್ ನೋಡಿ ಬೈಕ್ ಲಾಕ್ ತೆರೆಯುವುದು ಹೇಗೆ? ಎಂದು ತಿಳಿದುಕೊಂಡಿದ್ದ. ಹೋಟೆಲ್‌ನ ಬಳಿ ನಿಲ್ಲಿಸಿದ್ದ ಮಾಲೀಕನ ಬೈಕ್ ಕದ್ದುಕೊಂಡು ಕೇರಳಕ್ಕೆ ಪರಾರಿಯಾಗಿದ್ದ. ಬೈಕ್ ಕಳ್ಳತನ ಬಗ್ಗೆ ಮಾಲೀಕ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಬೈಕ್ ಕದ್ದುಕೊಂಡು ಬಂದಿರುವುದಾಗಿ ತಂದೆ–ತಾಯಿಗೆ ಆರೋಪಿ ತಿಳಿಸಿದ್ದ. ತಂದೆ–ತಾಯಿ ಬೈದು, 'ಕಳ್ಳತನ ತಪ್ಪು. ವಾಪಸು ಹೋಗು' ಎಂದಿದ್ದರು. ಆಗ ಬೆಂಗಳೂರಿನತ್ತ ಮರಳುತ್ತಿದ್ದ ಆರೋಪಿಯನ್ನು ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದರು.

ತಾಯಿಯ ಆಸರೆ ನಗರದ ಕೆ.ಆರ್ ರಸ್ತೆಯಲ್ಲಿ ಬಿದಿರಿನ ಬುಟ್ಟಿ ಹೆಣೆಯುವ ಮಹಿಳೆಯೊಬ್ಬರು ಮಲಗಿರುವ ಮಗುವಿಗೆ ಬೀಸಣಿಕೆಯಯಿಂದ ಗಾಳಿ ಬೀಸುತ್ತಿರುವುದು –ಪ್ರಜಾವಾಣಿ ಚಿತ್ರ

ಕೃಷಿ ಹೊಂಡದಲ್ಲಿ ಮುಳುಗಿ ಸಾವು

ಕೋಲಾರ: ತಾಲ್ಲೂಕಿನ ವೇಮಗಲ್ ಸಮೀಪದ ನಾಗನಾಳ ಗ್ರಾಮದಲ್ಲಿ ಕೃಷಿ ಹೊಂಡದಲ್ಲಿ ಈಜಲು ಹೋಗಿದ್ದ ವ್ಯಕ್ತಿಯೊಬ್ಬರು ಮುಳುಗಿ ಮೃತಪಟ್ಟಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮೈಸೂರಿನ ರಾಘವೇಂದ್ರ ನಗರ ಬಡಾವಣೆ ನಿವಾಸಿ ಗೌತಮ್ ಗೌಡ (26) ಮೃತ ಯುವಕ. ಕೆಲ ಹುಡುಗರೊಂದಿಗೆ ಕೃಷಿಹೊಂಡದಲ್ಲಿ ಈಜಲು ಹೋಗಿದ್ದಾರೆ. ವಿಡಿಯೊ ಮಾಡಲು ತಂಗಿಗೆ ಹೇಳಿದ್ದರು.

ಈಜು ಬಾರದ ಅವರು ನೀರಿನಲ್ಲಿ ಮುಳುಗುವುದು ಅರಿವಿಗೆ ಬಾರದೆ ಸಹೋದರಿ ವಿಡಿಯೊ ಮಾಡುವುದನ್ನು ಮುಂದುವರಿಸಿದ್ದಾರೆ. ದಡಸೇರಲಾಗದೇ ಗೌತಮ್ ಕೊನೆಯುಸಿರೆಳೆದಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ತೇಜೋವಧೆ ಮೂವರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಕಲಿ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟು ತೇಜೋವಧೆ ಮಾಡಿರುವ ಆರೋಪದಡಿ ಮೂವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಹರೀಶ್ ನಾಗರಾಜು ಎಂಬುವವರು ನಕಲಿ ಚಿತ್ರ ಹಾಗೂ ವಿಡಿಯೊ ಬಗ್ಗೆ ದೂರು ನೀಡಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿರುವ ಸಂತೋಷ್ ನೆಲಮಂಗಲ, ರಾಜೇಶ್ ಗೌಡ ಹಾಗೂ ಕೇಸರಿ ಸಾಮ್ರಾಟ್ ಹೆಸರಿನ ಖಾತೆಗಳ ನಿರ್ವಹಣೆದಾರರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಡಿ.ಕೆ.ಶಿವಕುಮಾರ್ ಅವರ ನಕಲಿ ಚಿತ್ರ ಹಾಗೂ ವಿಡಿಯೊಗಳನ್ನು ಬೇರೆಯವರ ಚಿತ್ರ–ವಿಡಿಯೊಗಳಿಗೆ ಹೋಲಿಕೆ ಮಾಡಿ ಏಪ್ರಿಲ್ 29ರಂದು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಲಾಗಿತ್ತು. ಅವಾಚ್ಯವಾಗಿ ನಿಂದಿಸಿ ಅವಹೇಳನ ಮಾಡಲಾಗಿತ್ತು. ಕೃತ್ಯ ಎಸಗಿದ ಆರೋಪಿಗಳನ್ನು ಪತ್ತೆ ಮಾಡಿ, ಕ್ರಮ ಜರುಗಿಸುವಂತೆ ದೂರುದಾರರು ಒತ್ತಾಯಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ '86ನೇ ಶ್ರೀ ರಾಮನವಮಿ ಸಂಗೀತೋತ್ಸವ'ದಲ್ಲಿ ಉತ್ತರಾ ಮತ್ತು ಪಿ.ಉನ್ನಿಕೃಷ್ಣನ್ ಅವರು ಕರ್ನಾಟಕ ಸಂಗೀತ ವಿಶೇಷ ಕಛೇರಿಯನ್ನು ಶನಿವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಪ್ರಾಧ್ಯಾಪಕ ಮೈಲಾರಪ್ಪ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಗೆ ಬೆದರಿಕೆ ಹಾಕಿದ ಹಾಗೂ ವಂಚಕರ ಪರ ಮಧ್ಯಸ್ಥಿಕೆ ವಹಿಸಿದ ಆರೋಪದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಬಿ.ಸಿ.ಮೈಲಾರಪ್ಪ ಅವರನ್ನು ಹೈದರಾಬಾದ್‌ನ ಜ್ಯುಬಿಲಿ ಹಿಲ್ಸ್ ಪೊಲೀಸರು ಈಚೆಗೆ ಬಂಧಿಸಿದ್ದು, ಒಂದು ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ ನಂತರ ಬಿಡುಗಡೆಯಾಗಿದ್ದಾರೆ.

ತೆಲಂಗಾಣದ ನಂದಗಿರಿ ಹಿಲ್ಸ್‌ನ ರಿಯಲ್ ಎಸ್ಟೇಟ್ ಉದ್ಯಮಿ ಕೆ.ಶಶಿಧರ ರೆಡ್ಡಿ ಅವರು 2023 ಫೆಬ್ರುವರಿಯಲ್ಲಿ ನೀಡಿದ್ದ ವಂಚನೆ, ಜೀವ ಬೆದರಿಕೆ ದೂರಿನ ಹಿನ್ನೆಲೆಯಲ್ಲಿ ತೆಲಂಗಾಣ ಪೊಲೀಸರು ಮೈಲಾರಪ್ಪ ಅವರನ್ನು ಈಚೆಗೆ ಬಂಧಿಸಿದ್ದರು.

ಶಶಿಧರ ರೆಡ್ಡಿ ತಮ್ಮ ಒಡೆತನದ ಶ್ರಿವೆನ್ ಇನ್‌ಫ್ರಾ ಹೆಸರಿನಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಪ್ರಕರಣದ ಮುಖ್ಯ ಆರೋಪಿ ಸುರೇಂದ್ರ ರೆಡ್ಡಿ ಅವರಿಂದ ಯಲಹಂಕದ ಬಳಿಯ ಹೊಸಳ್ಳಿ ಬಳಿ ಇರುವ 11.30 ಎಕರೆ ಜಮೀನು ಖರೀದಿಸಿದ್ದರು.

ಮಾತುಕತೆಯ ವೇಳೆ ಮುಂಗಡವಾಗಿ ನೀಡಿದ್ದ ₹50 ಲಕ್ಷ ಸೇರಿ, ಒಟ್ಟು ₹5.35 ಕೋಟಿ ಪಾವತಿಸಿದ್ದರು. ಸುರೇಂದ್ರ ರೆಡ್ಡಿ ಅವರು ನೀಡಿದ್ದ ಜಮೀನಿನ ದಾಖಲೆಗಳನ್ನು ಪರಿಶೀಲಿಸಿದಾಗ ನಕಲಿ ಎನ್ನುವುದು ದೃಢಪಟ್ಟಿತ್ತು.

ಹಣ ವಾಪಸ್ ಕೇಳಿದಾಗ ಮಧ್ಯ ಪ್ರವೇಶಿಸಿದ್ದ ಮೈಲಾರಪ್ಪ ಆರೋಪಿಗಳ ಪರವಾಗಿ ತಮ್ಮ ಪ್ರಭಾವ ಬಳಸಿದ್ದರು. ಬೆದರಿಕೆ ಹಾಕಿದ್ದರು ಎಂದು ಅವರನ್ನೂ ಸೇರಿಸಿ, ಪ್ರಕರಣ ದಾಖಲಿಸಲಾಗಿತ್ತು.

ಉದಕಮಂಡಲ ರೇಸ್

ಪಿಂಕ್ ಜಾಸ್ಮೈನ್ ಗೆಲ್ಲುವ ನಿರೀಕ್ಷೆ

ಫ್ರಾಂಕೆಲ್ ಹ್ಯಾಂಡಿಕ್ಯಾಪ್ ಭಾನುವಾರದ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಪಿಂಕ್ ಜಾಸ್ಮೈನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 11ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡ್ಯಾಜ್ಲಿಂಗ್ ಪ್ರಿನ್ಸೆಸ್ 1, ಕಾನ್ಷಿಯಸ್ ಕೀಪರ್ 6, ಸ್ಟೋಲೆನ್ ಗ್ಲ್ಯಾನ್ಸ್ 9
2ನೇ ರೇಸ್ ಅಮೇಜಿಂಗ್ ಅಟ್ರ್ಯಾಕ್ಶನ್ 3, ಹೈ ಟ್ರಿಬ್ಯೂಟ್ 1, ಸಾರೊ ಸೂಪರ್‌ಫಾಸ್ಟ್ 8
3ನೇ ರೇಸ್: ಸೀಕೊ ಕಾಟ್ಸು 7, ರಾಯಲ್ ಚಿವಾಲ್ರಿ 3, ಡ್ರಾಮಟಿಕ್ 5
4ನೇ ರೇಸ್: ಪಿಂಕ್ ಜಾಸ್ಮೈನ್ 1, ಇಂಪೀರಿಯಲ್ ಗೆಸ್ಚರ್ 3, ಸ್ವರ್ಗ 4
5ನೇ ರೇಸ್: ಇಂಪಿಯಾನ 7, ರೆಲಿಕ್ ವಾರಿಯರ್ 5, ಟರ್ಫ್ ಮೆಲೋಡಿ 2
6ನೇ ರೇಸ್: ಆಲ್ ಸ್ಟಾರ್ಸ್ 2, ಗ್ರೇಸ್ 9, ಕ್ಲೌಡಿ ಹಿಲ್ಸ್ 5

ಉತ್ತಮ ಬೆಟ್: ಆಲ್ ಸ್ಟಾರ್ಸ್

ಜಾಕ್‌ಪಾಟ್‌ಗೆ	ಟ್ರಿಬಲ್
2,3,4,5,6,7	4,5,6

ಯಂಗ್ ಬ್ಲೂಸ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಂಗ್ ಬ್ಲೂಸ್ ಎಲೀಟ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಮಹಿಳಾ 'ಬಿ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಶುಕ್ರವಾರ ನಡೆದ ಅಂತಿಮ ಪಂದ್ಯದಲ್ಲಿ ಯಂಗ್ ಬ್ಲೂಸ್ ತಂಡವು 3–0 ಯಿಂದ ಆಫ್‌ಸೈಡ್ ಟ್ರ್ಯಾಪ್ ಎಫ್‌ಸಿ ತಂಡವನ್ನು ಮಣಿಸಿತು. ಯಂಗ್ ಬ್ಲೂಸ್ ಪರ ತಿಯಾ ಝುಮೊರಾ ಫರ್ನಾಂಡಿಸ್ (6ನೇ ಮತ್ತು 8ನೇ ನಿಮಿಷ) ಮತ್ತು ಶನಯಾ ಮ್ಯಾಕ್ಸನ್ ಡಿಕುನ್ಹ (15ನೇ ನಿ) ಗೋಲು ಗಳಿಸಿದರು.

ಯಂಗ್ ಬ್ಲೂಸ್ ಮತ್ತು ರನ್ನರ್ಸ್ ಅಪ್ ಆಫ್‌ಸೈಡ್ ಟ್ರ್ಯಾಪ್ ತಂಡಗಳು ಕೆಎಸ್‌ಎಫ್‌ಎ ಮಹಿಳಾ 'ಎ' ಡಿವಿಷನ್‌ಗೆ ಬಡ್ತಿ ಪಡೆದವು.

ಕೆಎಸ್‌ಎಫ್‌ಎ ಮಹಿಳಾ 'ಬಿ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಯಂಗ್ ಬ್ಲೂಸ್ ಎಲೀಟ್ ಎಫ್‌ಸಿ ತಂಡಕ್ಕೆ ಟ್ರೋಫಿ ಹಸ್ತಾಂತರಿಸಲಾಯಿತು.

ಫಕೀರ ದಿಂಗಾಲೇಶ್ವರ ಶ್ರೀ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ನವಲಗುಂದ (ಧಾರವಾಡ ಜಿಲ್ಲೆ): ಇಲ್ಲಿನ ಗಾಂಧಿ ಮಾರುಕಟ್ಟೆಯಲ್ಲಿ ಮೇ 2ರಂದು ನಡೆದಿದ್ದ ಸ್ವಾಭಿಮಾನಿ ಮತದಾರರ ಸಮಾವೇಶದಲ್ಲಿ ಮಾಡಿದ ಭಾಷಣಕ್ಕೆ ಸಂಬಂಧಿಸಿ ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಶ್ರೀಗಳ ವಿರುದ್ಧ ದೂರು ದಾಖಲಾಗಿದೆ.

ಜಾತಿ, ಸಮುದಾಯ, ಧರ್ಮದ ಹೆಸರಲ್ಲಿ ವಿವಿಧ ಸಮುದಾಯಗಳ ನಡುವೆ ವೈರತ್ವ ಮತ್ತು ದ್ವೇಷ ಭಾವ ಉಂಟು ಮಾಡುವ ಹೇಳಿಕೆ ನೀಡಿದ್ದಾರೆ ಎಂದು ಹುಬ್ಬಳ್ಳಿಯ ಎಪಿಎಂಸಿಯಲ್ಲಿ ಉದ್ಯೋಗಿ ಆಗಿರುವ ಆರ್.ಕುಮಾರಸ್ವಾಮಿ ಎಂಬುವವರು ನವಲಗುಂದ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಿಸಿದ್ದಾರೆ.


ಫಕೀರ ದಿಂಗಾಲೇಶ್ವರ ಸ್ವಾಮೀಜಿ

'ಪ್ರಲ್ಹಾದ ಜೋಶಿ ಅವರು ತಮ್ಮ ಜಾತಿಯವರನ್ನು ಪ್ರೀತಿ ಮಾಡಿದಷ್ಟು ಬೇರೆ ಯಾವ ಜಾತಿಯವರನ್ನೂ ಪ್ರೀತಿಸುವುದಿಲ್ಲ. ನಿಮ್ಮ ಲಿಂಗಾಯತ ಜಾತಿಯವರಿಗೆ ಫೋನ್ ಮಾಡ್ರಿ, ನಮಗೆ ಮಾಡಬ್ಯಾಡಿ ಅಂತ ಹೇಳುವ ಈ ಪಾಪಿಯನ್ನು ಹೊರಗೆ ಹಾಕುವವರೆಗೆ ನಮಗೆ ಸಮಾಧಾನ ಇಲ್ಲಾ ಎಂದು ನುಡಿದಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ನೈರುತ್ಯ ರೈಲ್ವೆಯ 'ಒಂದು ನಿಲ್ದಾಣ– ಒಂದು ಉತ್ಪನ್ನ' ಯೋಜನೆ • ಗ್ರಾಹಕರಿಂದ ಉತ್ತಮ ಸ್ಪಂದನೆ

'ಸ್ಥಳೀಯ ಉತ್ಪನ್ನಗಳ ಮಳಿಗೆ 80ಕ್ಕೆ ಏರಿಕೆ'

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಒಂದು ನಿಲ್ದಾಣ- ಒಂದು ಉತ್ಪನ್ನ' ಯೋಜನೆಯು ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ 40 ನಿಲ್ದಾಣಗಳಲ್ಲಿ ಅನುಷ್ಠಾನಗೊಂಡಿದೆ. ಈ ಮಳಿಗೆಗಳನ್ನು 80ಕ್ಕೆ ಏರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಸ್ಥಳೀಯ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ರೈಲ್ವೆ ಇಲಾಖೆಯು ಎರಡು ವರ್ಷಗಳ ಹಿಂದೆ ದೇಶದಾದ್ಯಂತ 'ಒಂದು ನಿಲ್ದಾಣ- ಒಂದು ಉತ್ಪನ್ನ' ಯೋಜನೆಯನ್ನು ರೂಪಿಸಿತ್ತು. ಅದರಂತೆ ನೈರುತ್ಯ ರೈಲ್ವೆಯ ಬೆಂಗಳೂರು ವಲಯದಲ್ಲಿಯೂ ರೈಲು ನಿಲ್ದಾಣಗಳಲ್ಲಿ ಉತ್ಪನ್ನ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿತ್ತು.

ಚನ್ನಪಟ್ಟಣದ ಗೊಂಬೆ, ಮಂಡ್ಯದ ಬೆಲ್ಲ, ತಿಪಟೂರಿನ ಕೊಬ್ಬರಿ, ಮುದಿರೆಡಿಪಲ್ಲಿ ಸೀರೆ, ಕೂರ್ಗ್ ಸಂಸ್ಕೃತಿ ಬಿಂಬಿಸುವ ಉತ್ಪನ್ನಗಳು, ಸಿರಿಧಾನ್ಯ, ಚರ್ಮೋತ್ಪನ್ನ, ಖಾದಿ, ಸೆಣಬು, ಎಣ್ಣೆ ಪದಾರ್ಥ, ಮನೆಯಲ್ಲಿ ತಯಾರಿಸಿದ ಚಾಕೊಲೇಟ್ ಮತ್ತು ಡ್ರೈಫ್ರೂಟ್ಸ್, ಮನೆಯಲ್ಲಿಯೇ ತಯಾರಿಸಿದ ಸೋಪು, ಸಾವಯವ ಜೇನು, ಕರಕುಶಲ ವಸ್ತುಗಳು ಹೀಗೆ ವಿವಿಧ ವಸ್ತುಗಳಿಗೆ ಮಾರುಕಟ್ಟೆ ಒದಗಿಸಿತ್ತು.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಯಶವಂತಪುರ, ಬೆಂಗಳೂರು ಕಂಟೋನ್ಮೆಂಟ್, ಕೆ.ಆರ್. ಪುರ, ಮಲ್ಲೇಶ್ವರ, ತುಮಕೂರು, ಬಾಣಸವಾಡಿ ಸೇರಿ 40 ನಿಲ್ದಾಣಗಳಲ್ಲಿ 41 ಮಳಿಗೆಗಳಿಗೆ ಅವಕಾಶ ಮಾಡಿಕೊಟ್ಟಿತ್ತು.

ಸ್ಥಳೀಯ ಮಾರಾಟಗಾರರು ₹1,000 ನೋಂದಣಿ ಶುಲ್ಕ ನೀಡಬೇಕು. ಅವರು 15 ದಿನ ವ್ಯಾಪಾರ ಮಾಡುತ್ತಾರೆ. ಬಳಿಕ ಬೇರೆ ಉತ್ಪನ್ನ ಮಾರಾಟಗಾರರು ಬಂದರೆ ಅವರಿಗೆ ಅವಕಾಶ ನೀಡಲಾಗುತ್ತದೆ.

ಉತ್ತಮ ಸ್ಪಂದನೆ: ಮೊದಲ ಹಂತದಲ್ಲಿ ಉತ್ತಮ ಸ್ಪಂದನೆ ದೊರಕಿದೆ. ಚನ್ನಪಟ್ಟಣದ ಗೊಂಬೆಗಳಿಗೆ, ಸಿರಿಧಾನ್ಯ, ಬೆಲ್ಲ, ಕರಕುಶಲ ವಸ್ತುಗಳಿಗೆ ಹೆಚ್ಚು ಬೇಡಿಕೆ ಇರುವುದರಿಂದ ಅವು ಹೆಚ್ಚಿನ ನಿಲ್ದಾಣಗಳಲ್ಲಿ ಮಾರಾಟದ ಅವಕಾಶಗಳನ್ನು ಪಡೆದಿವೆ.

'ಇದನ್ನೆಲ್ಲ ಗಮನಿಸಿ ಇನ್ನೂ 40 ನಿಲ್ದಾಣಗಳಲ್ಲಿ ಸ್ಥಳೀಯ ಉತ್ಪನ್ನಗಳಿಗೆ ಅವಕಾಶ ನೀಡಲು ನಿರ್ಧರಿಸಲಾಗಿದೆ. ಕೋಲಾರ, ಚಿಂತಾಮಣಿ ರೈಲು ನಿಲ್ದಾಣಗಳು ಸೇರಿದಂತೆ ವಿವಿಧೆಡೆ ಶೀಘ್ರದಲ್ಲೇ ಆರಂಭಗೊಳ್ಳಲಿವೆ' ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಆರ್. ತ್ರಿನೇತ್ರ 'ಪ್ರಜಾವಾಣಿ'ಗೆ ತಿಳಿಸಿದರು.

ನಿಲ್ದಾಣಗಳಲ್ಲಿ ಸ್ಥಳಾವಕಾಶದ ಲಭ್ಯತೆಯನ್ನು ನೋಡಿಕೊಂಡು ಮತ್ತು ಉತ್ಪನ್ನಗಳಿಗೆ ಅನುಗುಣವಾಗಿ ಮಳಿಗೆ ಅಥವಾ ಟ್ರಾಲಿಗಳನ್ನು ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ 'ಒಂದು ನಿಲ್ದಾಣ– ಒಂದು ಉತ್ಪನ್ನ' ಯೋಜನೆಯಡಿ ಇರುವ ಕರಕುಶಲ ವಸ್ತುಗಳ ಮಾರಾಟ ಮಳಿಗೆ (ಎಡ ಚಿತ್ರ) ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ 'ಒಂದು ನಿಲ್ದಾಣ– ಒಂದು ಉತ್ಪನ್ನ' ಯೋಜನೆಯಡಿ ಆರಂಭವಾಗಿರುವ ಟ್ರಾಲಿ

ಒಂದು ನಿಲ್ದಾಣ–ಒಂದು ಉತ್ಪನ್ನ ಯೋಜನೆಯಡಿ ಇನ್ನಷ್ಟು ರೈಲು ನಿಲ್ದಾಣಗಳಲ್ಲಿ ಮಳಿಗೆ ಇಲ್ಲವೇ ಟ್ರಾಲಿ ಒದಗಿಸಲಾಗುವುದು

ಕೆ.ಆರ್. ತ್ರಿನೇತ್ರ, ಪಿ.ಆರ್.ಒ, ನೈರುತ್ಯ ರೈಲ್ವೆ–ಬೆಂಗಳೂರು ವಿಭಾಗ

'ವಿಧಾನ ಪರಿಷತ್ ಚುನಾವಣೆ 7ರ ಬಳಿಕ ಅಭ್ಯರ್ಥಿಗಳ ಆಯ್ಕೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ವಿಧಾನ ಪರಿಷತ್ತಿನ ಮೂರು ಪದವೀಧರರ ಹಾಗೂ ಮೂರು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಮತ್ತು ಜೆಡಿಎಸ್‌ನಲ್ಲಿ ಸಾಕಷ್ಟು ಆಕಾಂಕ್ಷಿಗಳಿದ್ದಾರೆ. ಚುನಾವಣಾ ಕಣಕ್ಕೆ ಯಾರು ನಿಲ್ಲಬೇಕು ಎಂಬುದನ್ನು ಲೋಕಸಭಾ ಚುನಾವಣೆಯ ನಂತರವೇ ತೀರ್ಮಾನಿಸಲಾಗುವುದು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲವರು ಹೊಂದಾಣಿಕೆ ಆಗಬೇಕು ಎನ್ನುತ್ತಿದ್ದಾರೆ. ಉಭಯ ಪಕ್ಷಗಳಲ್ಲಿ ಸ್ಪರ್ಧೆಯೂ ಹೆಚ್ಚಾಗಿದ್ದು, ಮೇ 7ರ ನಂತರ ಒಟ್ಟಿಗೆ ಕುಳಿತು ತೀರ್ಮಾನ ಮಾಡುತ್ತೇವೆ' ಎಂದರು.

'ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಸಂತ್ರಸ್ತರಿಗೆ ನ್ಯಾಯಕೊಡಿಸಬೇಕು ಎನ್ನುವುದಕ್ಕಿಂತ ಹೆಚ್ಚಾಗಿ ಸರ್ಕಾರಕ್ಕೆ ಪ್ರಚಾರ ಬೇಕಿದೆ. 2021ರಲ್ಲಿನ ಯಾವುದೋ ಒಬ ಹೆಣ್ಣು ಮಗಳ ಹೇಳಿಕೆಯನ್ನು ರಹಸ್ಯವಾಗಿ ನ್ಯಾಯಾಧೀಶರ ಮುಂದೆ ಕೊಡಿಸಿದ್ದಾರೆ. ಆದರೆ, ಗೃಹ ಸಚಿವರು 'ನಮ್ಮ ಮೇಲೆ ಯಾವುದೇ ರೀತಿಯ ಅನುಮಾನ ಬರಬಾರದು' ಎಂದಿದ್ದಾರೆ. ಹಾಗಿದ್ದರೆ, ನ್ಯಾಯಾಧೀಶರ ಮುಂದೆ ಮಹಿಳೆ ಹೇಳಿಕೆ ಕೊಟ್ಟಿದ್ದನ್ನು ಮಾಧ್ಯಮಗಳಿಗೆ ತಲುಪಿಸಿದವರು ಯಾರು' ಎಂದು ಪ್ರಶ್ನಿಸಿದರು.

ಎಚ್.ಡಿ. ಕುಮಾರಸ್ವಾಮಿ

'ನಾಲ್ಕು ಗೋಡೆಗಳ ಮಧ್ಯೆ ಇರಬೇಕಾದ ರಹಸ್ಯ ಮಾಧ್ಯಮದ ಮುಂದೆ ಏಕೆ ಬಂತು? ಈ ರೀತಿ ಸೋರಿಕೆ ಮಾಡುವ ಮೂಲಕ ತನಿಖೆಯಲ್ಲಿ ಸತ್ಯಾಂಶ ಹೊರತರುತ್ತೀರಾ? ಇದೆಲ್ಲವನ್ನು ಜನರ ಮುಂದೆ ಬಿಡುತ್ತೇನೆ. ಕಾಂಗ್ರೆಸ್ಸಿಗರು ಏನೇ ಅಪಪ್ರಚಾರ ಮಾಡಿದರೂ ಪ್ರಯೋಜನ ಆಗುವುದಿಲ್ಲ. ಹಾಸನ ಪ್ರಕರಣದಲ್ಲಿ ಮೋದಿ ಅವರನ್ನು ತಳಕು ಹಾಕಿದ್ದ ಹಾಗೂ ಶಾಸಕ ರಾಜು ಕಾಗೆ ಹೇಳಿಕೆ ಬಿಜೆಪಿಗೆ ವರವಾಗಲಿದೆ' ಎಂದರು.

'ಬಿಬಿಎಂಪಿ: ಬಿಲ್ ಪಾವತಿಗೆ ಲಂಚ'

ಶೇ 3.5ರಿಂದ ಶೇ 7.5ರಷ್ಟು ಲಂಚಕ್ಕೆ ಬೇಡಿಕೆ: ಗುತ್ತಿಗೆದಾರರ ಸಂಘದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯಲ್ಲಿ ಬಿಲ್ ಪಾವತಿ ಮಾಡಲು ಮುಖ್ಯ ಎಂಜಿನಿಯರ್ ಸೇರಿದಂತೆ ಹಲವು ಅಧಿಕಾರಿಗಳಿಗೆ ಲಂಚ ನೀಡಬೇಕಾಗಿದೆ. ಲಂಚ ನೀಡದಿದ್ದರೆ 'ರ‍್ಯಾಂಡಮೈಸೇಷನ್ ಚೆಕ್ಕಿಂಗ್' ಎಂದೆಲ್ಲ ಅಲೆಸುತ್ತಿದ್ದಾರೆ' ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್ ಆರೋಪಿಸಿದರು.

'2022ರ ಏಪ್ರಿಲ್‌ನಿಂದ ಬಿಲ್ ಬಾಕಿ ಇದೆ. ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಬಿಲ್ ಪಾವತಿಸಬೇಕಿದೆ. ಒಂದು ವಾರದಲ್ಲಿ ಬಿಲ್ ಪಾವತಿಯಾಗಬೇಕು ಎಂಬ ಸಂದರ್ಭದಲ್ಲಿ 'ರ‍್ಯಾಂಡಮೈಸೇಷನ್ ಚೆಕ್ಕಿಂಗ್' ಹೆಸರಿನಲ್ಲಿ ಮತ್ತೆ ತಪಾಸಣೆ ಮಾಡಬೇಕು, ಗುಣಮಟ್ಟದ ವರದಿ ಸಲ್ಲಿಸಬೇಕು ಎಂದು ಮುಖ್ಯ ಎಂಜಿನಿಯರ್‌ಗಳು ತಕಾರು ಎತ್ತುತ್ತಿದ್ದಾರೆ. ಈ ಎಲ್ಲ ವರದಿ ಸಿದ್ಧವಾಗಲು ಒಂದು ತಿಂಗಳಾಗುತ್ತದೆ. ಆದರೆ, ಲಂಚ ಕೊಟ್ಟರೆ ಯಾವ ಪರಿಶೀಲನೆಯೂ ಇಲ್ಲದೆ ಪಾವತಿಯಾ ಗುತ್ತಿದೆ' ಎಂದು ಅವರು ದೂರಿದರು.

'ಕೊನೆಗಳಿಗೆಯಲ್ಲಿ ತಕರಾರು ಕುರಿತು ಕೇಳಿದರೆ ಮುಖ್ಯ ಆಯುಕ್ತರು ಹೇಳಿದಂತೆ ಮಾಡುತ್ತಿದ್ದೇವೆ. ಅವರನ್ನೇ ಕೇಳಿ ಎನ್ನುತ್ತಾರೆ. ಮುಖ್ಯ ಎಂಜಿನಿಯರ್ ಅವರನ್ನು ಭೇಟಿ ಮಾಡಿ, ಮನವಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಆದರೆ, ಅವರು ಕರೆ ಸ್ವೀಕರಿಸುತ್ತಿಲ್ಲ, ಭೇಟಿಗೂ ಸಮಯ ನೀಡುತ್ತಿಲ್ಲ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮುಖ್ಯ ಆಯುಕ್ತರನ್ನು ಟ್ಯಾಗ್ ಮಾಡಿ ಈ ಭ್ರಷ್ಟಾಚಾರದ ವಿಷಯವನ್ನು ತಿಳಿಸಲಾಗಿದೆ' ಎಂದು ಮಂಜುನಾಥ್ ಹೇಳಿದರು.

'ಸರ್ಕಾರದ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿಗಳಿಗೆ 2023ರ ಅಕ್ಟೋಬರ್‌ವರೆಗೆ ಪಾವತಿಸಲಾಗಿದೆ. ಈ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ ಪಾವತಿಗೆ ಶೇ 7.5ರಷ್ಟು ಲಂಚ ನೀಡಿದವರಿಗೆ ಕೂಡಲೇ ಹಣ ಬಿಡುಗಡೆ ಮಾಡಿದ್ದಾರೆ. ಉಳಿದವರಿಗೆ 'ಪರಿಶೀಲನೆ' ಎಂದು ಸತಾಯಿಸುತ್ತಿದ್ದಾರೆ' ಎಂದು ದೂರಿದರು.

'ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಮೊದಲು ಹಣ ಇಲ್ಲ ಎನ್ನುತ್ತಿದ್ದರು, ಇದೀಗ ಹಣವಿದ್ದರೂ ಲಂಚ ನೀಡದ ಗುತ್ತಿಗೆದಾರರಿಗೆ 'ರ‍್ಯಾಂಡಮೈಸೇಷನ್ ಚೆಕ್ಕಿಂಗ್' ಎಂದು ಪರಿಶೀಲನೆಗೆ ಬರೆಯುತ್ತಿದ್ದಾರೆ. ಶೇ 3.5ರಷ್ಟು ಲಂಚ ನೀಡಿದರೆ ಹಣ ಪಾವತಿಯಾಗುತ್ತಿದೆ' ಎಂದರು.

'ಹಿಂದೆ ಕೇಂದ್ರೀಕೃತವಾಗಿ ಕೇಂದ್ರ ಕಚೇರಿಯಿಂದ ಬಿಲ್ ಪಾವತಿಯಾಗುತ್ತಿತ್ತು. ಈಗ ವಲಯಗಳ ಮುಖ್ಯ ಎಂಜಿನಿಯರ್ ಮಟ್ಟದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಇಲ್ಲಿ ಪ್ರತಿಯೊಬ್ಬರಿಗೂ ಲಂಚ ನೀಡಬೇಕಾಗಿದೆ' ಎಂದು ಮಂಜುನಾಥ್ ದೂರಿದರು.

ಪ್ರತಿಕ್ರಿಯೆ ಇಲ್ಲ: ಈ ಬಗ್ಗೆ ಪ್ರತಿಕ್ರಿಯೆಗಾಗಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

'ಎಕ್ಸ್' ಪೋಸ್ಟ್‌ನಲ್ಲಿ ಏನಿದೆ?

'ಬಿಬಿಎಂಪಿ ಕಾಂಟ್ರಾಕ್ಟರ್ಸ್' ಎಂಬ ಎಕ್ಸ್ ಖಾತೆಯಲ್ಲಿ 'ಮಾನ್ಯ ಮುಖ್ಯ ಆಯುಕ್ತರೇ.. ಈಗಾಗಲೇ ತಮಗೆ ತಿಳಿಸಿರುವಂತೆ ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ತಾವು ಮಾಡಿರುವ ಒಂದೊಂದು ಕಾನೂನು ಸಹ ಭ್ರಷ್ಟಾಚಾರ ಹೆಚ್ಚಾಗುವಂತೆ ಮಾಡಿದ್ದು (ರ‍್ಯಾಂಡಮೈಸೇಷನ್), ಗುತ್ತಿಗೆದಾರರು ಪರದಾಡುವಂತಹ ಪರಿಸ್ಥಿತಿ ಬಂದಿದೆ. ಕೆಲವು ಅಧಿಕಾರಿಗಳಂತೂ ಲಂಚ ಇಲ್ಲದೆ ಕೆಲಸ ಮಾಡುತ್ತಿಲ್ಲ' ಎಂದು ಪ್ರಕಟಿಸಲಾಗಿದೆ.



ರೇವಾ ವಿಶ್ವವಿದ್ಯಾಲಯದ ಕೆರಿಯರ್ ಡೆವಲಪ್‌ಮೆಂಟ್ ಸೆಂಟರ್ ಶನಿವಾರ ಹಮ್ಮಿಕೊಂಡಿದ್ದ 'ಅಭಿನಂದನ್ 2024' ಕ್ಯಾಂಪಸ್ ಸೆಲೆಕ್ಷನ್ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ವಿವಿಧ ಕಂಪನಿಗಳು ಆಯ್ಕೆ ಮಾಡಿಕೊಂಡವು

ಕ್ಯಾಂಪಸ್ ನೇಮಕಾತಿ: 3,006 ವಿದ್ಯಾರ್ಥಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇವಾ ವಿಶ್ವವಿದ್ಯಾಲಯದ ಕೆರಿಯರ್ ಡೆವಲಪ್‌ಮೆಂಟ್ ಸೆಂಟರ್ ಶನಿವಾರ ಹಮ್ಮಿಕೊಂಡಿದ್ದ 'ಅಭಿನಂದನ್ 2024' ಕ್ಯಾಂಪಸ್ ಸೆಲೆಕ್ಷನ್ ಕಾರ್ಯಕ್ರಮದಲ್ಲಿ 3,006 ವಿದ್ಯಾರ್ಥಿಗಳನ್ನು ವಿವಿಧ ಕಂಪನಿಗಳು ಆಯ್ಕೆ ಮಾಡಿಕೊಂಡಿವೆ.

ರೇವಾ ವಿಶ್ವವಿದ್ಯಾಲಯದ ಕುಲಪತಿ ಪಿ.ಶ್ಯಾಮರಾಜ್ ಮಾತನಾಡಿ, 'ವರ್ಷದಿಂದ ವರ್ಷಕ್ಕೆ ನಮ್ಮ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇಲ್ಲಿ ಕಲಿತವರಿಗೆ ಉತ್ತಮ ಉದ್ಯೋಗ ಸಿಗುತ್ತಿದೆ. ಇಂದು 3000ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಕಂಪನಿಗಳು ಉದ್ಯೋಗಕ್ಕೆ ಆಯ್ಕೆ ಮಾಡಿರುವುದು ಇದಕ್ಕೆ ಸಾಕ್ಷಿ' ಎಂದು ಹೆಮ್ಮೆಪಟ್ಟರು. ಸಹ ಕುಲಾಧಿಪತಿ ಶುಭಾ ಎ., ಕೆಪಿಐಟಿಯ ಕ್ಯಾಂಪಸ್ ನೇಮಕಾತಿ ಮತ್ತು ಸಂಬಂಧಗಳು ವಿಭಾಗದ ಮುಖ್ಯಸ್ಥ ಅಬಿನಾಶ್ ಪಿ. ಮಹಾಪಾತ್ರ, ಹಿರಿಯ ಟ್ಯಾಲೆಂಟ್ ಅಕ್ವಿಸಿಷನ್ ಮ್ಯಾನೇಜರ್ ಅರವಿಂದ್ ಎ.ಬೆಳಗುಂಬ ಮತ್ತು ಐಬಿಎಂನ ಪ್ರಧಾನ ಟ್ಯಾಲೆಂಟ್ ಅಕ್ವಿಸಿಷನ್ ಪಾಲುದಾರ ನವೀನ್ ರಾಮಯ್ಯ ಭಾಗವಹಿಸಿದ್ದರು.

ಅಭಿನಯಿಸುತ್ತಲೆ ಮೃತಪಟ್ಟ ಮುನಿಕೆಂಪಣ್ಣ

ಯಲಹಂಕ: ರಂಗದ ಮೇಲೆ ಅಭಿನಯಿಸುತ್ತಿರುವಾಗಲೇ ಕುಸಿದು ಬಿದ್ದ ಕಲಾವಿದ ಎನ್. ಮುನಿಕೆಂಪಣ್ಣ (73), ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಹುಟ್ಟೂರಾದ ದೇವನಹಳ್ಳಿ ತಾಲ್ಲೂಕು ಅರದೇಶನಹಳ್ಳಿ ಗ್ರಾಮದಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಿತು.

ಸಾತನೂರು ಗ್ರಾಮದಲ್ಲಿ 'ಕುರುಕ್ಷೇತ್ರ' ನಾಟಕದಲ್ಲಿ ಶಕುನಿ ಪಾತ್ರಕ್ಕೆ ಬಣ್ಣ ಅವರು ಹಚ್ಚಿದ್ದರು. ಅಭಿನಯಿಸುವಾಗಲೇ ಶುಕ್ರವಾರ ರಾತ್ರಿ 1.15ರ ವೇಳೆಗೆ ವೇದಿಕೆ ಮೇಲೆಯೇ ಕುಸಿದು ಬಿದ್ದರು. ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ, ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದರು.

ಯಲಹಂಕದ ಸುರಭಿ ಲೇಔಟ್‌ನಲ್ಲಿದ್ದ ನಿವೃತ್ತ ಉಪನ್ಯಾಸಕರಾದ ಅವರು, ಇತ್ತೀಚೆಗೆ ದೇವನಹಳ್ಳಿಯಲ್ಲಿ ನಡೆದ 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ವಿದ್ಯಾ ಪೋಷಕರ ಸಂಘದ ಸಂಸ್ಥಾಪಕ ನಿರ್ದೇಶಕರಾಗಿದ್ದರು. ಬಾಗಲೂರಿನ ಮಂಜು ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಒಕ್ಕಲಿಗರ ಮತಕ್ಕಾಗಿ ಕ್ರಮ ಕೈಗೊಳ್ಳದ ಕಾಂಗ್ರೆಸ್: ನಿರ್ಮಲಾ ಟೀಕೆ

ಪುಣೆ (ಪಿಟಿಐ): 'ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿರುವ ಜೆಡಿಎಸ್ ನಾಯಕ ಪ್ರಜ್ವಲ್ ರೇವಣ್ಣ ವಿರುದ್ಧ ಕಾಂಗ್ರೆಸ್ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ವಾಗ್ದಾಳಿ ನಡೆಸಿದರು.

'ಒಕ್ಕಲಿಗರ ಮತಗಳನ್ನು ಕಳೆದುಕೊಳ್ಳಬಹುದು ಎಂದು ಕಾಂಗ್ರೆಸ್ ಹೆದರಿತ್ತು. ಆದ್ದರಿಂದಲೇ ಕರ್ನಾಟಕದಲ್ಲಿ ಮೊದಲ ಹಂತದ ಲೋಕಸಭೆ ಚುನಾವಣೆಯ ಮತದಾನ ಮುಗಿಯುವ ತನಕವೂ ಮೌನವಾಗಿತ್ತು. ಸುಮಾರು ಒಂದು ವರ್ಷದಿಂದಲೂ ಈ ವಿಷಯ ತಿಳಿದಿದ್ದರೂ, ಕಾನೂನು ಕ್ರಮ ಕೈಗೊಂಡಿಲ್ಲ' ಎಂದು ಇಲ್ಲಿ ನಡೆದ ಸಭೆಯಲ್ಲಿ ಅವರು ಹೇಳಿದರು.

'ಮಹಿಳೆಯರ ಮೇಲೆ ನಡೆಯುವ ಶೋಷಣೆ, ದೌರ್ಜನ್ಯವನ್ನು ಸಹಿಸುವುದಿಲ್ಲ. ಇದರ ವಿರುದ್ಧ ಒಗ್ಗಟ್ಟಿನಿಂದ ನಿಲ್ಲುತ್ತೇವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಮೈತ್ರಿ ಪಕ್ಷಕ್ಕೆ ಸಂಬಂಧಿಸಿದ ವಿಷಯ ಇದಾಗಿದ್ದರೂ, ಅದು ಸ್ವೀಕಾರಾರ್ಹವಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಈ ಬಗ್ಗೆ ತನಿಖೆ ನಡೆಸಲಿ' ಎಂದು ನಿರ್ಮಲಾ ಹೇಳಿದರು.

ಉಗ್ರರ ದಾಳಿ: ಯೋಧ ಹುತಾತ್ಮ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಭಾರತೀಯ ವಾಯುಪಡೆಗೆ ಸೇರಿದ್ದ ವಾಹನ ಹಾಗೂ ಎರಡು ಭದ್ರತಾ ವಾಹನಗಳನ್ನು ಗುರಿಯಾಗಿಸಿ ಉಗ್ರರು ಶನಿವಾರ ಗುಂಡಿನ ದಾಳಿ ನಡೆಸಿದ್ದಾರೆ.

ದಾಳಿಯಲ್ಲಿ ವಾಯುಪಡೆಯ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ಇತರ ನಾಲ್ವರು ಯೋಧರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜರನ್‌ವಾಲಿಯಿಂದ ವಾಯುಪಡೆ ಕೇಂದ್ರಕ್ಕೆ ತುಕಡಿಗಳು ಮರಳುವಾಗ ದಾಳಿ ನಡೆದಿದೆ. ಗಾಯಗೊಂಡಿರುವ ಯೋಧರಲ್ಲಿ ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅನಂತನಾಗ್-ರಾಜೌರಿ ಲೋಕಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಪೂಂಛ್ ಬರಲಿದ್ದು, ಈ ಕ್ಷೇತ್ರದಲ್ಲಿ ಮೇ 25ರಂದು ಆರನೇ ಹಂತದಲ್ಲಿ ಮತದಾನ ನಡೆಯಲಿದೆ.

ಘಟನೆ ನಡೆದ ಸ್ಥಳಕ್ಕೆ ಸೇನಾ ಸಿಬ್ಬಂದಿ ಮತ್ತು ಪೊಲೀಸರು ದೌಡಾಯಿಸಿದ್ದಾರೆ. ಪಹರೆ ಮತ್ತು ಶೋಧ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಕೃತ್ಯ ಕುರಿತುತನಿಖೆ ನಡೆಯುತ್ತಿದೆ ಎಂದು ವಾಯುಪಡೆಯು 'ಎಕ್ಸ್' ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದೆ.

ಚಿತ್ರಕಲಾ ಪರಿಷತ್ತು ಸಂಜೆ ಕಾಲೇಜು ಪ್ರವೇಶ ಪ್ರಾರಂಭ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಬೆಂಗಳೂರು ಸ್ಕೂಲ್ ಆಫ್ ವಿಷ್ಯುವಲ್ ಆರ್ಟ್ಸ್‌ನಲ್ಲಿ (ಸಂಜೆ ಕಾಲೇಜು) 2024-25ನೇ ಸಾಲಿನ ಪ್ರವೇಶಾತಿ ಪ್ರಾರಂಭವಾಗಿದೆ.

ವಾರದ ದಿನಗಳಲ್ಲಿ ಸಂಜೆ 4ರಿಂದ ರಾತ್ರಿ 9 ಗಂಟೆಯವರೆಗೆ ತರಗತಿಗಳು ನಡೆಯಲಿವೆ. ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ವಿಷ್ಯುವಲ್ ಆರ್ಟ್ಸ್ (ಬಿ.ವಿ.ಎ) ಪದವಿಗೆ ಪ್ರವೇಶಕ್ಕಾಗಿ, ಪಿಯುಸಿ ಅಥವಾ ತತ್ಸಮಾನ ಶೈಕ್ಷಣಿಕ ಅರ್ಹತೆ ಹೊಂದಿರಬೇಕು.

ಚಿತ್ರಕಲೆ, ಗ್ರಾಫಿಕ್ ಕಲೆ, ಶಿಲ್ಪಕಲೆ, ಅನ್ವಯಕಲೆ ಹಾಗೂ ಕಲಾ ಇತಿಹಾಸ ವಿಭಾಗಗಳಲ್ಲಿ ಪದವಿ ಕೋರ್ಸ್‌ಗಳಿಗೆ ಅರ್ಜಿಯನ್ನು www.thebsva.art ರಲ್ಲಿ ಪಡೆಯಬಹುದು. ವಿವರಗಳಿಗೆ ಇ–ಮೇಲ್ principal@thebsva.art ಅಥವಾ ಮೊ. 9606719559ಕ್ಕೆ ಸಂಪರ್ಕಿಸಬಹುದು ಎಂದು ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಶಿಧರ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

986 ಮಳೆನೀರು ಇಂಗುಗುಂಡಿ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲ ಆರಂಭಕ್ಕೆ ಮುನ್ನ 986 ಇಂಗುಗುಂಡಿಗಳನ್ನು ನಿರ್ಮಿಸುವ ಮೂಲಕ ಬೆಂಗಳೂರು ಜಲಮಂಡಳಿಯು ಒಂದು ತಿಂಗಳಲ್ಲಿ ಶೇ 98ರಷ್ಟು ಗುರಿ ಸಾಧಿಸಿದೆ.

ನಗರದಲ್ಲಿ ಜಲಮಂಡಳಿಯ ಅಧೀನದಲ್ಲಿರುವ ಬತ್ತಿ ಹೋಗಿರುವ ಕೊಳವೆ ಬಾವಿಗಳನ್ನು ಮಳೆನೀರು ಇಂಗುಗುಂಡಿಗಳನ್ನಾಗಿ ಪರಿವರ್ತಿಸಬೇಕು ಎಂದು ಜಲಮಂಡಳಿ ಅಧ್ಯಕ್ಷವಿ. ರಾಮ್‌ಪ್ರಸಾತ್ ಮನೋಹರ್ ಸೂಚನೆ ನೀಡಿದ್ದರು.

1000 ಇಂಗುಗುಂಡಿಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತು. ವಲಯವಾರು ನಿರ್ಮಿಸಲಾಗುವ ಇಂಗುಗುಂಡಿಗಳ ಮೂಲಕ ಮಳೆಯ ನೀರು ಯಾವುದೇ ಕಲ್ಮಶವಿಲ್ಲದೇ ನೆಲದಡಿಗೆ ಇಳಿಯುವಂತೆ ಮಾಡಲಾಗಿದೆ. ಹಾಗೆಯೇ, ರಸ್ತೆಗಳಲ್ಲಿನ ನೀರು ಹರಿದು ಒಳಚರಂಡಿಗೆ ಸೇರ್ಪಡೆ ಆಗಿ ತೊಂದರೆ ಆಗದಂತೆ ತಡೆಯಲು ಇದು ಸಹಕಾರಿಯಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

74 ಪ್ರಸ್ತಾವ: ಬೆಂಗಳೂರು ನಗರದಲ್ಲಿ ಅಂತರ್ಜಲ ವೃದ್ಧಿಸುವ ಹಾಗೂ ಕೆರೆಗಳಿಗೆ ಮಳೆ ನೀರು ತುಂಬಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿರುವ ಸಮುದಾಯ ಮಳೆ ಸಂಗ್ರಹಕ್ಕೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 74 ಪ್ರಸ್ತಾವಗಳು ಬಂದಿದ್ದು, ಜಲಮಂಡಳಿ ಅಧಿಕಾರಿಗಳು ಇದನ್ನು ಪರಿಶೀಲಿಸಿ, ಶೀಘ್ರವೇ ಯೋಜನೆಗೆ ಚಾಲನೆ ನೀಡಲಿದ್ದಾರೆ.

'ನಾವು ಇತರರಿಗೆ ಮಾದರಿಯಾಗಬೇಕು ಎನ್ನುವುದು ಉದ್ದೇಶವಾಗಿದೆ. ಸಾರ್ವಜನಿಕರು ಮಳೆ ನೀರು ಇಂಗುಗುಂಡಿಗಳನ್ನು ಕಡ್ಡಾಯವಾಗಿ ನಿರ್ಮಿಸಿಕೊಳ್ಳಿ ಎಂದು ಹೇಳುವ ಮುನ್ನ ಜಲಮಂಡಳಿಯಿಂದಲೇ ಮಳೆ ನೀರು ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ. ಕಡಿಮೆ ಸಮಯದಲ್ಲಿ 986 ಇಂಗುಗುಂಡಿಗಳನ್ನು ನಿರ್ಮಿಸಲಾಗಿದೆ. ಹೆಚ್ಚಿನ ಕಡೆಗಳಲ್ಲಿ ನಿರ್ಮಿಸುವ ಮೂಲಕ ಅಂತರ್ಜಲ ವೃದ್ಧಿಗೆ ಒತ್ತುನೀಡಲಾಗುವುದು' ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಜಲಮಂಡಳಿ ಕಚೇರಿಯ ಆವರಣದಲ್ಲಿ ನಿರ್ಮಿಸಲಾಗಿರುವ ಇಂಗುಗುಂಡಿಯನ್ನು ಅಧ್ಯಕ್ಷ ವಿ. ರಾಮ್‌ಪ್ರಸಾತ್ ಮನೋಹರ್ ಪರಿಶೀಲಿಸಿದರು

ಮುಖ್ಯಾಂಶಗಳು

- ಮಳೆನೀರು ಸಂಗ್ರಹ, ಇಂಗುಗುಂಡಿಗಳ ಬಗ್ಗೆ ಜನರಲ್ಲಿ ಜಾಗೃತಿ
- ಪ್ರತಿ ವಲಯಕ್ಕೂ 250 ಇಂಗುಗುಂಡಿ ನಿರ್ಮಾಣದ ಗುರಿ
- ಶೇ 98.6ರಷ್ಟು ಸಾಧನೆ ತೋರಿಸಿದ ಅಧಿಕಾರಿಗಳು

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಲೋಕಾಯುಕ್ತ

ರಸ್ತೆಗಳಲ್ಲಿ ಘನತ್ಯಾಜ್ಯದ ರಾಶಿ: ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ಮುಖ್ಯರಸ್ತೆಯ ಮಾರ್ಗದಲ್ಲಿರುವ ಬೆಂಗಳೂರು ಉತ್ತರ ತಾಲ್ಲೂಕಿನ ಕಾಚೋಹಳ್ಳಿ ಮತ್ತು ಕಡಬಗೆರೆ ಗ್ರಾಮ ಪಂಚಾಯಿತಿಗಳಲ್ಲಿ ರಸ್ತೆ, ಪಾದಚಾರಿ ಮಾರ್ಗಗಳಲ್ಲೇ ಘನತ್ಯಾಜ್ಯ ಸುರಿಯುತ್ತಿರುವ ಕುರಿತು ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಎರಡೂ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದೇ ರಸ್ತೆ, ಪಾದಚಾರಿ ಮಾರ್ಗಗಳಲ್ಲೇ ಸುರಿಯುತ್ತಿರುವ ಕುರಿತು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದ್ದರು. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಸಂಸ್ಥೆಯ ಅಧಿಕಾರಿಗಳೊಂದಿಗೆ ಗುರುವಾರ ಖುದ್ದಾಗಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು.

ಮಾಗಡಿ ಮುಖ್ಯ ರಸ್ತೆಯ ವ್ಯಾಪ್ತಿಯಲ್ಲಿ, ಕಾಚೋಹಳ್ಳಿಯ ಮುನೇಶ್ವರ ಬಡಾವಣೆ, ಇಂದಿರಾ ಕಾಲೋನಿಯ ಸೇಂಟ್ ಮೇರೀಸ್ ಪಬ್ಲಿಕ್ ಶಾಲೆ ಎದುರು, ಎಂಬಿಸಿ ಪಬ್ಲಿಕ್ ಶಾಲೆ ಮುಂಭಾಗ, ಸೀಗೆಹಳ್ಳಿ ಗೇಟ್ ಸೇರಿದಂತೆ ಹಲವು ಕಡೆಗಳಲ್ಲಿ ರಾಶಿಗಟ್ಟಲೆ ಘನತ್ಯಾಜ್ಯ ಸುರಿದಿರುವುದು ಪತ್ತೆಯಾಗಿತ್ತು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾಚೋಹಳ್ಳಿ ಹಾಗೂ ಕಡಬಗೆರೆ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿಕೊಂಡಿದ್ದ ಲೋಕಾಯುಕ್ತರು, ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಬಿದ್ದಿರುವ ಘನತ್ಯಾಜ್ಯ ರಾಶಿಗಳನ್ನು ತೆರವಿಗೆ ನಿರ್ದೇಶನ ನೀಡಿದ್ದರು.

ಘನ ತ್ಯಾಜ್ಯ ವಿಲೇವಾರಿಯಲ್ಲಿ ಕರ್ತವ್ಯಲೋಪ, ದುರಾಡಳಿತದ ಆರೋಪದಡಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಶುಕ್ರವಾರ ಆದೇಶ ಹೊರಡಿಸಿರುವ ಲೋಕಾಯುಕ್ತರು, ತನಿಖೆ ಆರಂಭಿಸಿದ್ದಾರೆ.

ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಕಾಚೋಹಳ್ಳಿ ಮತ್ತು ಕಡಬಗೆರೆ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿಯನ್ನು ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಮುಂದಿನ ವಿಚಾರಣೆಯನ್ನು ಜೂನ್ 29ಕ್ಕೆ ನಿಗದಿಪಡಿಸಿದ್ದು, ಅದಕ್ಕೂ ಮುನ್ನ ಎರಡೂ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಘನತ್ಯಾಜ್ಯದ ಸಮರ್ಪಕ ವಿಲೇವಾರಿಗೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ. ಉಳಿದ ಪ್ರತಿವಾದಿಗಳು ತಮ್ಮ ವಿರುದ್ಧದ ಆರೋಪಗಳ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿದ್ದಾರೆ.

ಮಾಗಡಿ ರಸ್ತೆಯ ಬದಿಯಲ್ಲೇ ಘನತ್ಯಾಜ್ಯ ಸುರಿದಿರುವುದನ್ನು ಗುರುವಾರ ಪರಿಶೀಲನೆ ನಡೆಸಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಅಧಿಕಾರಿಗಳಿಂದ ವಿವರಣೆ ಪಡೆದಿದ್ದರು

ತಮಿಳುನಾಡು: ಯುಟ್ಯೂಬರ್ ಸವುಕ್ಕು ಶಂಕರ್ ಬಂಧನ

ಚೆನ್ನೈ: ಹಿರಿಯ ಮತ್ತು ಮಹಿಳಾ ಪೊಲೀಸ್ ಅಧಿಕಾರಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಮೇಲೆ ತಮಿಳುನಾಡಿನ ಖ್ಯಾತ ಯುಟ್ಯೂಬರ್ 'ಸವುಕ್ಕು' ಶಂಕರ್ ಅವರನ್ನು ಕೊಯಮತ್ತೂರಿನ ಸೈಬರ್‌ಕ್ರೈಂ ಪೊಲೀಸರು ಶನಿವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಶಂಕರ್ ಅವರು 'ಸವುಕ್ಕು ಮೀಡಿಯಾ' ಎಂಬ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇದು ಒಂದು ವೆಬ್‌ಸೈಟ್ ಮತ್ತು ಯೂಟ್ಯೂಬ್ ಚಾನಲ್ ಹೊಂದಿದೆ.

ಈಚೆಗೆ ಸಂದರ್ಶನವೊಂದನ್ನು ನಡೆಸಿಕೊಟ್ಟಿದ್ದ ಅವರು, ಮಹಿಳಾ ಪೊಲೀಸ್ ಅಧಿಕಾರಿ ವಿರುದ್ಧ ಕೀಳು ಮಟ್ಟದ ಹೇಳಿಕೆ ನೀಡಿದ್ದರು. ಪೊಲೀಸ್ ಅಧಿಕಾರಿಗಳನ್ನು 'ಸ್ಕೌಂಡ್ರಲ್ಸ್' ಎಂದು ಕರೆದಿದ್ದರು. ಹೀಗಾಗಿ, ಅವರ ವಿರುದ್ಧ ಭಾರತೀಯ ದಂಡ ಸಂಹಿತೆ ಮತ್ತು ತಮಿಳುನಾಡು ಮಹಿಳಾ ದೌರ್ಜನ್ಯ ತಡೆ ವಿರೋಧಿ ಕಾಯ್ದೆ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ– 2000ದ ವಿವಿಧ ಸೆಕ್ಷನ್‌ಗಳ ಅಡಿ ಮೊಕದ್ದಮೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಿತ್ರಾವಳಿ

ನಗರದ ರಾಜಾಜಿನಗರದ ಇಸ್ಕಾನ್ ದೇವಾಲಯದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ವಾರ್ಷಿಕ ಬ್ರಹ್ಮೋತ್ಸವ ಮತ್ತು ರಜತ ಮಹೋತ್ಸವದಲ್ಲಿ ನಡೆದ ಕೃಷ್ಣ ರಾಧೆ ತೆಪ್ಪೋತ್ಸವದಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೊಮ್ಮನಹಳ್ಳಿ ಸಮೀಪದ ರೂಪೇನ ಅಗ್ರಹಾರ ಗ್ರಾಮದ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು

ಹುಳಿಮಾವು ಗ್ರಾಮದಲ್ಲಿ ರೇಣುಕಾ ದೇವಿಯ ಹೂವಿನ ಕರಗ ಮಹೋತ್ಸವ ಅದ್ದೂರಿಯಾಗಿ ನಡೆಯಿತು.

ಸ್ವಾವಲಂಬಿ ಬದುಕಿಗೆ ಅನುಕೂಲವಾದ ಉದ್ಯಮ ಸಂಕಷ್ಟದಲ್ಲಿ

ಬದುಕಿಗೆ ಕೂದಲೇ ಆಸರೆ

ಕೊಪ್ಪಳದ ಭಾಗ್ಯನಗರದಲ್ಲಿ ಕೂದಲು ವರ್ಗೀಕರಣ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

• ಪ್ರಮೋದ

ಕೊಪ್ಪಳ: ಸೂರ್ಯನ ಕಿರಣಗಳು ನೆತ್ತಿಯ ಮೇಲೆ ಬೀಳುವ ಹೊತ್ತಿಗಾಗಲೇ ಕೊಪ್ಪಳದ ಗಾಂಧಿನಗರದ 60 ವರ್ಷದ ಗಂಗಮ್ಮ ಮಂಗ್ಳಿ ತಲೆಯ ಮೇಲೆ ಪ್ಲಾಸ್ಟಿಕ್ ಸಾಮಗ್ರಿ, ಕೈಯಲ್ಲಿ ಚೀಲ ಹಿಡಿದುಕೊಂಡು ಹಳ್ಳಿಗಳತ್ತ ಹೋಗಲು ಅಣಿಯಾಗಿದ್ದರು.

ಹೀಗೆ ತಯಾರಾಗಿ ಬಿರುಸಿನ ಹೆಜ್ಜೆಗಳೊಂದಿಗೆ ಊರೂರು ಅಲೆದಾಡಿ ತಲೆಯ ಮೇಲಿನ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಮಾರಾಟ ಮಾಡಿ, 'ತುತ್ತಿನ ಚೀಲ' ತುಂಬಿಸಿಕೊಳ್ಳುವುದೇ ಅವರ ನಿತ್ಯದ ಬದುಕು. ಮನೆಯಿಂದ ಹೋಗುವಾಗ ಪ್ಲಾಸ್ಟಿಕ್ ಸಾಮಗ್ರಿಗಳು ತುಂಬಿದ್ದ ಚೀಲದಲ್ಲಿ ಸಂಜೆ ಬರುವಾಗ ಹಳ್ಳಿಗಳಲ್ಲಿ ಸಂಗ್ರಹಿಸಿದ ಕೂದಲು ಇರುತ್ತವೆ.

ಕೂದಲು ಅನೇಕರ ಪಾಲಿಗೆ 'ಲೆಕ್ಕ'ಕ್ಕೇ ಇಲ್ಲದಿರಬಹುದು. ಇದೇ ಕಾರಣಕ್ಕೆ ತಿಪ್ಪೆ, ಅಕ್ಕಪಕ್ಕದ ಖಾಲಿ ನಿವೇಶನ ಅಥವಾ ಕಸ ಸಂಗ್ರಹಿಸುವ ವಾಹನಕ್ಕೆ ಎಸೆಯಬಹುದು. ಆದರೆ, ಗಂಗಮ್ಮ ಅವರಿಗೆ ಕೂದಲೇ ಅನ್ನದ ಮೂಲ. ಇದೇ ಬದುಕು. ನಿತ್ಯ ಹಳ್ಳಿಗಳಲ್ಲಿ ಅಲೆದಾಡಿ ತರುವ 300ರಿಂದ 350 ಗ್ರಾಂ ಕೂದಲು ಅವರಿಗೆ ನೆಮ್ಮದಿಯ ಬದುಕು ಕಟ್ಟಿಕೊಟ್ಟಿದೆ. ಐದು ದಶಕಗಳಿಂದ ಅವರು ಇದೇ ಕೆಲಸ ಮಾಡುತ್ತಿದ್ದಾರೆ. ಕೂದಲಿನ ವ್ಯಾಪಾರ ಮಾಡಿ ಮೂರು ಜನ ಮೈದುನರು ಹಾಗೂ ನಾಲ್ಕು ಜನ ಮಕ್ಕಳ ಮದುವೆ ಮಾಡಿ ಅವರಿಗೆ ಬದುಕು ಕಟ್ಟಿಕೊಟ್ಟಿದ್ದಾರೆ.

ಗಾಂಧಿನಗರದಲ್ಲಿಯೇ ವಾಸವಾಗಿರುವ ಬಸಮ್ಮ ಕುಕನೂರು ಎನ್ನುವ ಬಡ ಕುಟುಂಬಕ್ಕೆ ಸೇರಿದ ಇನ್ನೊಬ್ಬ ಮಹಿಳೆಯ ಬದುಕಿನ ಕಥನವೂ ಅಷ್ಟೇ ಅರ್ಥಪೂರ್ಣ. ಇವರ ಮನೆಯಲ್ಲಿ 17 ಜನರಿದ್ದಾರೆ. ಇದರಲ್ಲಿ ಎಂಟು ಜನ ದುಡಿಯುವವರು. ಪುರುಷರು ಕೂದಲು ಸಂಗ್ರಹಕ್ಕಾಗಿ ರಾಯಚೂರು, ಬಳ್ಳಾರಿ, ಸಿಂಧನೂರು, ಮಾನ್ವಿ ಹೀಗೆ ದೂರದ ಊರುಗಳಿಗೆ ಹೋಗಿ ವಾರಕ್ಕೊಮ್ಮೆ ಮನೆಗೆ ಮರಳಿದರೆ, ಹೆಣ್ಣುಮಕ್ಕಳು ಕೊಪ್ಪಳ ಜಿಲ್ಲೆಯ ವಿವಿಧ ಹಳ್ಳಿಗಳಲ್ಲಿ ಓಡಾಡಿ ಕೂದಲು ಸಂಗ್ರಹಿಸುತ್ತಾರೆ. ನಾಲ್ಕು ದಶಕಗಳಿಂದ ಇದೇ ಕೆಲಸದಲ್ಲಿ ಇವರ ಕುಟುಂಬ ತೊಡಗಿದೆ. 57 ವರ್ಷದ ಬಸಮ್ಮ ಅವರ ಇಷ್ಟು ವರ್ಷಗಳ ಬದುಕು ಸಾಗಿಬಂದಿದ್ದು ಜನ ವ್ಯರ್ಥವೆಂದು ಬೀಸಾಡಿದ ಕೂದಲುಗಳ ಸಂಗ್ರಹದಿಂದಲೇ!

ಇವೆರಡು ಉದಾಹರಣೆಗಳು ಮಾತ್ರ. ಹೀಗೆ ನಿತ್ಯ ಕೂದಲು ಸಂಗ್ರಹಿಸುವ ಮೂಲಕ ಸ್ವಾವಲಂಬಿ ಬದುಕು ರೂಪಿಸಿಕೊಂಡ ಸಾವಿರಾರು ಜನ ಹೆಣ್ಣುಮಕ್ಕಳು ಕೊಪ್ಪಳದ ಗಾಂಧಿನಗರ, ಭಜಂತ್ರಿ ಕಾಲೊನಿ, ತಾಲ್ಲೂಕು ವ್ಯಾಪ್ತಿಯ ಪ್ರಸಿದ್ಧ ಧಾರ್ಮಿಕ ತಾಣ ಹುಲಿಗಿ ಗ್ರಾಮದಲ್ಲಿ ಸಿಗುತ್ತಾರೆ. ಅವರಿಗೆ ತಮ್ಮ ಬದುಕಿನ ಸಾಹಸದ ಕಥನ ಮುಕ್ತವಾಗಿ ಹೇಳಿಕೊಳ್ಳಲು ಹಿಂಜರಿಕೆ. ಕೆಲಸವೊಂದೇ ಬದುಕಿನ ನಂಬಿಕೆ. ಇಲ್ಲಿನ ಕೂದಲು ಉದ್ಯಮ ವ್ಯಾಪಕವಾಗಿ ಬೆಳೆಯಲು ಕಾರಣವೇ ಮಹಿಳೆಯರು ನೆಚ್ಚಿಕೊಂಡಿರುವ ಭಾಗ್ಯನಗರ.

ಕೊಪ್ಪಳದ ಭಾಗ್ಯನಗರ ಸಾಂಪ್ರದಾಯಿಕ ಕಲಾತ್ಮಕ ಸೀರೆ ತಯಾರಿಕೆ ಮತ್ತು ಕೂದಲು ಉದ್ಯಮಕ್ಕೆ ದೇಶ, ವಿದೇಶಗಳಲ್ಲಿ ಹೆಸರಾಗಿದೆ. ಹಿಂಜಿ ಸಂಸ್ಕರಿಸುವ ಕೂದಲನ್ನು ಉದ್ಯಮಿಗಳು ವಿದೇಶಗಳಿಗೆ ರಫ್ತು ಮಾಡಿ ಕೋಟ್ಯಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. ಅನೇಕ ಮಹಿಳೆಯರು ಕೂದಲು ಹಿಂಜುವ ಕೆಲಸದಲ್ಲಿ ನೇರವಾಗಿ ಭಾಗಿಯಾದರೆ, ಇನ್ನುಳಿದವರು ಮಳೆ, ಬಿಸಿಲು ಲೆಕ್ಕಿಸದೇ ಊರೂರು ಅಲೆದಾಡಿ ಕೂದಲು ತಂದು ಈ ಉದ್ಯಮ ವ್ಯಾಪಕವಾಗಿ ಬೆಳೆಯಲು ಕಾರಣರಾಗಿದ್ದಾರೆ.

ಹಳ್ಳಿಗಳಲ್ಲಿ ಮನೆಮನೆಗೆ ಹೋಗಿ ಕೂದಲು ಸಂಗ್ರಹಿಸುವ ಮಹಿಳೆಯರು ಪ್ಲಾಸ್ಟಿಕ್ ತಾಟು, ಲೋಟ, ಡಬ್ಬಿ, ಸ್ಟೀಲ್‌ನ ಸಾಮಗ್ರಿಗಳನ್ನು ಸಗಟು ವ್ಯಾಪಾರಿಗಳ ಬಳಿ ಖರೀದಿ ಮಾಡಿ ಕೂದಲು ನೀಡುವವರಿಗೆ ಕೊಡುತ್ತಾರೆ. ಇನ್ನೂ ಕೆಲವರು ಕೂದಲಿಗೆ ಹಣದ ಬದಲು ಪಾತ್ರೆ, ಹೇರ್‌ಪಿನ್, ಪೌಡರ್ ಡಬ್ಬಿ ನೀಡುತ್ತಾರೆ. ಬೊಂಬಾಯಿ ಮಿಠಾಯಿ ಮಾರುವವರು ಕೂಡ ಕೂದಲು ಸಂಗ್ರಹಿಸಿ ಹೊಟ್ಟೆ ಹೊರೆಯುತ್ತಿದ್ದಾರೆ. ಕೂದಲು ಸಂಸ್ಕರಿಸುವ ಕೆಲಸದಲ್ಲಿ ಪುರುಷರೂ ಭಾಗಿಯಾಗುತ್ತಿದ್ದಾರೆ. ಆದರೆ, ಕೂದಲು ತಂದುಕೊಡುವ ಕೆಲಸದಲ್ಲಿ ಬಹುತೇಕ ಮಹಿಳೆಯರದ್ದೇ ಪಾರುಪತ್ಯ.

ಕೂದಲು ಸಂಗ್ರಹಿಸಿ ಮಾರಾಟ ಮಾಡಿ ಬದುಕು ಕಟ್ಟಿಕೊಂಡ ಸಾವಿರಾರು ಮಹಿಳೆಯರಲ್ಲಿ ಬಹುತೇಕರು ಅನಕ್ಷರಸ್ಥರು. ಆದರೆ, ಅವರು ವ್ಯಾಪಾರಕ್ಕೆಂದು ಹೋಗುವ ಹಳ್ಳಿಗಳ ಜನರಲ್ಲಿ ಮೂಡಿಸಿರುವ ನಂಬಿಕೆ ಮತ್ತು ವಿಶ್ವಾಸ ಅದಮ್ಯವಾದದ್ದು. ಕೊಪ್ಪಳ ಜಿಲ್ಲೆ ಕೂದಲು ಉದ್ಯಮಕ್ಕೆ ಹೆಸರಾದ ಕಾರಣ ಬಳ್ಳಾರಿ ಹಾಗೂ ಆಂಧ್ರದಿಂದಲೂ ಮಹಿಳೆಯರು ಜಿಲ್ಲೆಯ ಹಳ್ಳಿಗಳಿಗೆ ಬಂದು ಕೂದಲು ಸಂಗ್ರಹಿಸುತ್ತಾರೆ. ಹೀಗಾಗಿ ಪೈಪೋಟಿಯೂ ಹೆಚ್ಚು. ಇದೆಲ್ಲ ಸವಾಲು ಮೀರಿ ಜಿಲ್ಲೆಯ ಮಹಿಳೆಯರು ಹಳ್ಳಿಗಳ ಜನರ ಮನಸ್ಸು ಗೆದ್ದಿದ್ದಾರೆ. 'ನಮ್ಮೂರಿನ ಗೌರಮ್ಮ, ನಾಗಮ್ಮ, ದೇವಕ್ಕ ಬರುತ್ತಾರೆ. ಅವರಿಗೇ ಕೂದಲು ಕೊಡಬೇಕು' ಎನ್ನುವಷ್ಟರ ಮಟ್ಟಿಗೆ ಜನರ ಮನದ ಮೇಲೆ ಪ್ರಭಾವ ಬೀರಿದ್ದಾರೆ. ಈ ನಂಬಿಕೆ ಹಾಗೂ ವಿಶ್ವಾಸದ ಕಾರಣದಿಂದಲೇ ಜಿಲ್ಲೆಯ ಮಹಿಳೆಯರು ಎಲ್ಲ ಸವಾಲುಗಳನ್ನು ಮೆಟ್ಟಿನಿಂತು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ. ಅನಕ್ಷರಸ್ಥ ಮಹಿಳೆಯರೂ ಗೌರವಯುತ ಬದುಕು ಸಾಗಿಸಲು ಕೂದಲು ಉದ್ಯಮ ಅವಕಾಶ ಮಾಡಿಕೊಟ್ಟಿದೆ. ಹೀಗಾಗಿ ದಣಿವರಿಯದ ಹೆಣ್ಣುಮಕ್ಕಳ ಕಾರ್ಯ ಅವರ ಮಕ್ಕಳಿಗೆ ಭವಿಷ್ಯ ಕಟ್ಟಿಕೊಳ್ಳಲು ರಹದಾರಿಯಾಗಿದೆ.

'ನಮ್ಮ ಸಮುದಾಯದ ಜನರಿಗೆ ಊರೂರು ಅಲೆದಾಡಿ ಕೂದಲು ಸಂಗ್ರಹಿಸುವುದಷ್ಟೇ ಗೊತ್ತಿರುವ ಉದ್ಯೋಗ. ಈ ಕೆಲಸದಲ್ಲಿ ಅನೇಕ ಬಾರಿ ಗಂಡಸರೇ ಸುಸ್ತಾಗಿದ್ದಾರೆ. ಕುಟುಂಬ ನಿರ್ವಹಣೆಗಾಗಿ ಕೂದಲು ಸಂಗ್ರಹಕ್ಕೆ ಮಹಿಳೆಯರು ಯಾವತ್ತೂ ಬೇಸರಿಸಿಕೊಂಡಿಲ್ಲ. ಮಳೆ, ಗಾಳಿ, ಬಿಸಿಲು ಏನೇ ಬರಲಿ ತಮ್ಮ ಕೆಲಸ ಬಿಡುವುದಿಲ್ಲ. ಮಹಿಳೆಯರ ಗಟ್ಟಿತನದಿಂದಲೇ ಇಂದಿಗೂ ಅನೇಕ ಕುಟುಂಬಗಳು ಉಳಿದುಕೊಂಡಿವೆ' ಎಂದು ಕೊರಮ ಸಮುದಾಯದ ಮುಖಂಡ ಹಾಗೂ ಹೋರಾಟಗಾರ ಗಾಳೆಪ್ಪ ಮುಂಗೋಲಿ ಹೇಳುತ್ತಾರೆ.

'ನೀತಿ ಬದಲಿಸದಿದ್ದರೆ ಉಳಿಗಾಲವಿಲ್ಲ'

'ಭಾರತದ ಕೂದಲು ಬಳಸಿಕೊಂಡು ವಿದೇಶಗಳು ವ್ಯಾಪಕ ಹಣ ಗಳಿಸುತ್ತಿವೆ. ತಮ್ಮ ದೇಶದ ಕೋಟ್ಯಂತರ ಜನರಿಗೆ ಉದ್ಯೋಗ ನೀಡುವ ಮೂಲಕ ದೇಶದ ಆರ್ಥಿಕ ಸ್ಥಿತಿಗತಿಯನ್ನೂ ಹೆಚ್ಚಿಸಿಕೊಳ್ಳುತ್ತಿವೆ. ಆದರೆ, ನಮ್ಮಲ್ಲಿಯೇ ಕಚ್ಚಾವಸ್ತುವಿನ ಸಂಪನ್ಮೂಲವಿದ್ದರೂ ಬಳಸಿಕೊಳ್ಳಲು ಆಗುತ್ತಿಲ್ಲ' ಎಂದು ಕೊಪ್ಪಳದ ಕೂದಲು ಉದ್ಯಮಿ ಶ್ರೀನಿವಾಸ ಗುಪ್ತಾ ಹೇಳಿದರು.

'ಮೊದಲಿನಿಂದಲೂ ಇದೇ ಉದ್ಯಮ ಮಾಡಿಕೊಂಡು ಬಂದಿದ್ದೇನೆ ಎನ್ನುವ ಕಾರಣಕ್ಕೆ ಇದರಲ್ಲಿಯೇ ಮುಂದುವರಿದಿದ್ದೇನೆ. ಭಾಗ್ಯನಗರದಲ್ಲಿ ಈಗ ಕೂದಲು ಸಂಗ್ರಹ ಘಟಕಗಳ ಸಂಖ್ಯೆ 400ರಿಂದ ಬೆರಳೆಣಿಕೆ ಸಂಖ್ಯೆಗೆ ಇಳಿದಿದೆ. ವಾರ್ಷಿಕ ವಹಿವಾಟು ₹100 ಕೋಟಿಯಾದರೆ ಅದೇ ಹೆಚ್ಚು. ಆದ್ದರಿಂದ ಸರ್ಕಾರ ತುರ್ತಾಗಿ ರಫ್ತಿಗೆ ನೀಡಿರುವ ಮುಕ್ತ ಮಾರುಕಟ್ಟೆ ನೀತಿಯಲ್ಲಿ ಬದಲಾವಣೆ ತರಬೇಕು. ಇಲ್ಲವಾದರೆ ನಮ್ ಸಂಪನ್ಮೂಲ ಬೇರೆ ದೇಶಗಳಿಗೆ ದೊಡ್ಡ ಸಂಪತ್ತಾಗುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

ರಾಜ್ಯದ ಧಾರವಾಡ, ಉತ್ತರ ಕನ್ನಡ, ಹಾವೇರಿ, ಗದಗ, ಬಳ್ಳಾರಿ, ದಾವಣಗೆರೆ, ವಿಜಯನಗರ, ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಕೆಲವೆಡೆ ಕೂದಲು ಸಂಗ್ರಹಿಸುವವರು ಹೊರತುಪಡಿಸಿದರೆ ಅದನ್ನೇ ಉದ್ಯಮವಾಗಿಸಿಕೊಂಡವರು ವಿರಳ. ಕೊಪ್ಪಳದಲ್ಲಿ ಉದ್ಯಮವಾಗಿರುವ ಕಾರಣ ಇಲ್ಲಿ ಬೇಡಿಕೆಯೂ ಹೆಚ್ಚು.

ಉದ್ಯಮವಾದ ಕಥನ: 1970ರ ದಶಕದ ಹಿಂದಿನಿಂದಲೂ ಭಾಗ್ಯನಗರದಲ್ಲಿ ಸಣ್ಣ ಮಟ್ಟದಲ್ಲಿ ಕೂದಲು ಸಂಗ್ರಹಿಸಲಾಗುತ್ತಿತ್ತು. ಇದು ಮಹಿಳೆಯರು, ಮಕ್ಕಳ ಬದುಕಿಗೆ ಆಸರೆಯಾಗಿತ್ತು. ಕೂದಲು ಸಂಗ್ರಹಿಸಿ ಅದನ್ನು ಆಂಧ್ರಪ್ರದೇಶಕ್ಕೆ ಕಳುಹಿಸಲು ಅಂಗಡಿಗಳಿದ್ದವು.

ಕ್ರಮೇಣ ಕೂದಲು ಸಂಗ್ರಹ ಕಾರ್ಯ ಹೆಚ್ಚಾಗುತ್ತಲೇ ಹೋಗಿದ್ದು, 1990ರ ಬಳಿಕ ದೊಡ್ಡ ಮೊತ್ತ ಗಳಿಕೆ ಸಾಧ್ಯವಾಯಿತು. ಈ ವೇಳೆಗಾಗಲೇ ತಿರುಪತಿಯಲ್ಲಿ ವ್ಯಾಪಕವಾಗಿದ್ದ ಕೂದಲು ಸಂಗ್ರಹ ಉದ್ಯಮದ ಜೊತೆ ಕೊಪ್ಪಳದ ಉದ್ಯಮಿ ಶ್ರೀನಿವಾಸ ಗುಪ್ತಾ ನಿಕಟ ನಂಟು ಹೊಂದಿದ್ದರು. ಇದರ ಆಳಅಗಲ ತಿಳಿದು ಕೊಪ್ಪಳದಲ್ಲಿಯೇ ಕೂದಲು ಸಂಗ್ರಹಿಸುವ ಕಾರ್ಯ ಅವರು ಆರಂಭಿಸಿದರು. 1985ರ ಆಸುಪಾಸಿನಲ್ಲಿ ಕೂದಲು ಸಂಸ್ಕರಿಸುವ ಅಂದಾಜು 30 ಘಟಕಗಳು ಭಾಗ್ಯನಗರದಲ್ಲಿದ್ದವು. 2010ರ ವೇಳೆಗೆ ಘಟಕಗಳ ಸಂಖ್ಯೆ 400ಕ್ಕೆ ಏರಿಕೆಯಾದವು! ಆಗ ಭಾಗ್ಯನಗರದ ಜನರ ಬದುಕಿಗೆ ಈ ಉದ್ಯಮವು ಭಾಗ್ಯದ ಬಾಗಿಲು ತೆರೆಯಿತು.

'2010ರ ಅವಧಿಯಲ್ಲಿ ನಾನೊಬ್ಬನೇ ಕೂದಲು ಉದ್ಯಮದಿಂದ ವಾರ್ಷಿಕ ₹800 ಕೋಟಿಯಿಂದ ₹900 ಕೋಟಿ ವಹಿವಾಟು ನಡೆಸುತ್ತಿದ್ದೆ. ದೇಶದಾದ್ಯಂತ ಸಾವಿರಾರು ಕೋಟಿ ವ್ಯಾಪಾರ ನಡೆಯುತ್ತಿತ್ತು. ದೇಶದ ಅನೇಕ ಹಳ್ಳಿಗಳಿಂದ ಕೂದಲು ಸಂಗ್ರಹವಾದರೂ ಪಶ್ಚಿಮ ಬಂಗಾಳದಲ್ಲಿ ಸಂಸ್ಕರಣಾ ಘಟಕಗಳಿವೆ. ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಕೊಪ್ಪಳದಲ್ಲಿ ಕೂದಲು ಸಂಗ್ರಹಣಾ ಕೇಂದ್ರಗಳು ದೊಡ್ಡಮಟ್ಟದಲ್ಲಿವೆ' ಎಂದು ಶ್ರೀನಿವಾಸ ಗುಪ್ತಾ ಹೇಳುತ್ತಾರೆ.

'ಸ್ಥಳೀಯವಾಗಿ ಸಂಗ್ರಹಿಸುವ ಕೂದಲನ್ನು ವಿವಿಧ ಅಳತೆಗಳನ್ನಾಗಿ ಕತ್ತರಿಸಿ ಬಣ್ಣ ಹಾಕುವುದು, ಸ್ವಚ್ಛಗೊಳಿಸಿ ನಿರ್ದಿಷ್ಟ ಅಳತೆ ಕೂದಲು ಮಾಡಲಾಗುತ್ತದೆ. 2010–12ರ ಅವಧಿಯಲ್ಲಿ ಒಂದು ದಿನಕ್ಕೆ ಮೂರರಿಂದ ನಾಲ್ಕು ಸಾವಿರ ಕೆ.ಜಿ. ಕೂದಲು ಸಂಗ್ರಹವಾಗುತ್ತಿತ್ತು. ಅವುಗಳನ್ನು ವರ್ಗೀಕರಣ ಮಾಡಿ ಚೀನಾ, ಇಂಡೋನೇಷ್ಯಾ, ಹಾಂಕಾಂಗ್, ಇಟಲಿಗೆ ಕಳುಹಿಸಲಾಗುತ್ತಿತ್ತು' ಎನ್ನುತ್ತಾರೆ ಅವರು.

ಈಗ ಹಳ್ಳಿಗಳಿಗೆ ಹೋಗಿ ಕೂದಲು ಸಂಗ್ರಹಿಸುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಿರುವ ಕಾರಣ ಎಲ್ಲರಿಗೂ ದೊಡ್ಡಮಟ್ಟದಲ್ಲಿ ಆದಾಯ ಸಿಗುತ್ತಿಲ್ಲ. ಬಿಳಿ ಕೂದಲು ಮತ್ತು ಕೆಂಪು ಕೂದಲಿಗೆ ಮೊದಲಿನಿಂದಲೂ ಬೇಡಿಕೆ ಕಡಿಮೆ. ಕನಿಷ್ಠ ಆರು ಇಂಚು ಉದ್ದವಿರುವ ಕಪ್ಪುಬಣ್ಣದ ಕೂದಲಿಗೆ ಸಾಕಷ್ಟು ಬೇಡಿಕೆಯಿದೆ. ಕಚ್ಚಾ ವಸ್ತುವಿಗೆ ಸಂಸ್ಕರಣಾ ಘಟಕಗಳು ಪ್ರತಿ ಕೆ.ಜಿ ಬಿಳಿ ಕೂದಲಿಗೆ ₹2 ಸಾವಿರದಿಂದ ₹3 ಸಾವಿರ, ಕಪ್ಪು ಬಣ್ಣದ ಕೂದಲಿಗೆ ₹5 ಸಾವಿರದ ತನಕ ನೀಡುತ್ತವೆ.

ತಿರುಪತಿಯಲ್ಲಿ ಪ್ರತಿ ವರ್ಷ ಲಕ್ಷಾಂತರ ಕೆ.ಜಿ. ಕೂದಲು ದಾನವಾಗಿ ದೊರೆಯುತ್ತದೆ. ಪ್ರತಿ ದಿನ ಸಂಗ್ರಹವಾಗುವ ಕೂದಲನ್ನು ತೊಳೆದು ಒಣಗಿಸಲಾಗುತ್ತದೆ. ನಂತರ ಗೋದಾಮುಗಳಲ್ಲಿ ಸಂಗ್ರಹಿಸಿ ಗುಣಮಟ್ಟದ ಆಧಾರದಲ್ಲಿ ವಿಂಗಡಿಸಿ ಮಾರಾಟ ಮಾಡಲಾಗುತ್ತದೆ. ಆದರೆ, ಭಾಗ್ಯನಗರದಲ್ಲಿ ಬಿಡಿಬಿಡಿಯಾಗಿ ಸಂಗ್ರಹವಾಗುವ ಕೂದಲನ್ನು ಸರಿಯಾಗಿ ಹಿಂಜಿ ಗಂಟು ಬಿಡಿಸುತ್ತಾರೆ.

ಏಜೆಂಟರ ಹಾವಳಿ: ಕೂದಲು ಸಂಗ್ರಹಿಸುವ ಮಹಿಳೆಯರ ಬದುಕು ಈ ಕೆಲಸದಿಂದಾಗಿ ಹಸನಾದರೂ ಭಾರತದ ಕೂದಲು ಉದ್ಯಮಿಗಳಿಗೆ ಸರ್ಕಾರದ ಮುಕ್ತ ಮಾರುಕಟ್ಟೆ ನೀತಿ ಮತ್ತು ಭಾರತದಲ್ಲಿ ಬೇರೂರಿರುವ ವಿದೇಶಿ ಕಂಪನಿಗಳಿಗೆ ಕೂದಲು ಪೂರೈಸುವ ಮಧ್ಯವರ್ತಿಗಳ ಹಾವಳಿ ಮುಳುವಾಗಿದೆ.

ಮೊದಲು ಮನೆಮನೆಗಳಿಂದ ಸಂಗ್ರಹವಾಗುತ್ತಿದ್ದ ಕೂದಲು ಏಜೆಂಟರ ಹಾವಳಿಯಿಲ್ಲದೆ ನೇರವಾಗಿ ದೇಶಿ ಉದ್ಯಮಿಗಳ ಬಳಿಯೇ ಬರುತ್ತಿತ್ತು. ಆಗ ಹಳ್ಳಿಗಳಿಂದ ಕೂದಲು ಸಂಗ್ರಹಿಸುವ ಮಧ್ಯವರ್ತಿಗಳ ಸಂಖ್ಯೆಯೂ ಕಡಿಮೆಯಿತ್ತು. ರಫ್ತು ಮಾಡುವುದಕ್ಕೆ ಇದು ನಿಷೇಧಿತ ಸರಕಾಗಿತ್ತು. ದಶಕದ ಹಿಂದೆ ಕೇಂದ್ರ ಸರ್ಕಾರವು ಪರವಾನಗಿ ಪಡೆದ ಯಾವ ವ್ಯಾಪಾರಿ ಬೇಕಾದರೂ ಕಚ್ಚಾವಸ್ತು ನೇರವಾಗಿ ವಿದೇಶಕ್ಕೆ ಮಾರಾಟ ಮಾಡಲು ಅನುಮತಿ ಕೊಟ್ಟಾಗಿನಿಂದ ದೇಶದ ಉದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜಗತ್ತಿನಾದ್ಯಂತ 'ಇಂಡಿಯನ್ ಹೇರ್' ಎನ್ನುವ ಬ್ರ್ಯಾಂಡ್ ಖ್ಯಾತಿ ಪಡೆದಿದ್ದು ಇದೇ ಕೂದಲಿನಿಂದ ತಯಾರಾದ ವಿಗ್‌ಗಳಿಗೆ ವ್ಯಾಪಕ ಬೇಡಿಕೆಯಿದೆ. ಭಾರತದ ಕಚ್ಚಾವಸ್ತು ಬಳಸಿಕೊಂಡು ವಿದೇಶಿಗರು 'ಇಂಡಿಯನ್ ಹೇರ್ ವಿಗ್' ತಯಾರಿಸಿ ಭಾರತದ ಉದ್ಯಮಿಗಳಿಗೆ ಪೆಟ್ಟು ಕೊಡುತ್ತಿದ್ದಾರೆ.

ನಮ್ಮವರಿಂದಲೇ ಪೆಟ್ಟು: ಮಹಿಳೆಯರು ಹಳ್ಳಿಗಳಲ್ಲಿ ಕೂದಲು ಸಂಗ್ರಹಿಸಿ ಸ್ಥಳೀಯ ವರ್ತಕರಿಗೆ ನೀಡಿ ಹಣ ಪಡೆದುಕೊಳ್ಳುತ್ತಾರೆ. ಅಲ್ಲಿಗೆ ಕೂದಲಿಗೆ ಹಾಗೂ ಅವರಿಗೂ ವ್ಯಾಪಾರದ ಸಂಬಂಧ ಮುಗಿದು ಹೋಗುತ್ತದೆ. ಅಪಾರ ಪ್ರಮಾಣದಲ್ಲಿ ಒಂದೆಡೆ ಕೂದಲು ಸಂಗ್ರಹಿಸಿದ ಸಣ್ಣ ವರ್ತಕರು ನೇರವಾಗಿ ವಿದೇಶಕ್ಕೆ ಅಥವಾ ದೇಶದಲ್ಲಿರುವ ವಿದೇಶಿ ಏಜೆಂಟರಿಗೆ ಹೆಚ್ಚಿನ ಹಣದಾಸೆಗೆ ಮಾರಾಟ ಮಾಡುತ್ತಿದ್ದಾರೆ. ಕೂದಲು ಮಾರಾಟಕ್ಕೆ ಪರವಾನಗಿ ಪಡೆಯಬೇಕು ಎನ್ನುವ ನಿಯಮವಿದ್ದರೂ ಕೆಲವರು ಅಕ್ರಮದ ಮಾರ್ಗ ಹುಡುಕಿದ್ದಾರೆ. ಭಾರತದ ಕೂದಲು ಉದ್ಯಮಿಗಳ ಒಕ್ಕೊರಲ ಆಗ್ರಹವೇ 'ಕಚ್ಚಾವಸ್ತು ನೇರವಾಗಿ ವಿದೇಶಕ್ಕೆ ರಫ್ತು ಬೇಡ' ಎನ್ನುವುದಾಗಿದ್ದರೂ ಸರ್ಕಾರ ಕೇಳುತ್ತಿಲ್ಲ. ಮ್ಯಾನ್ಮಾರ್ ಇದರ ಗರಿಷ್ಠ ಲಾಭ ಪಡೆದುಕೊಳ್ಳುತ್ತಲೇ ಇದೆ ಎನ್ನುವುದು ಉದ್ಯಮಿಗಳ ಆರೋಪ.

'ಒಂದು ಕೆ.ಜಿ. ಕೂದಲು ವರ್ಗೀಕರಣ ಹಾಗೂ ಸಂಸ್ಕರಣೆಯಾಗಬೇಕಾದರೆ ಭಾರತದಲ್ಲಿ ಕನಿಷ್ಠ 35 ಜನರಿಗೆ ಕೆಲಸ ಸಿಗುತ್ತಿತ್ತು. ಆದರೆ ಈಗ ವಿದೇಶಿಗರೇ ಏಜೆಂಟರ ಮೂಲಕ ಹೈದರಾಬಾದ್, ಬೆಂಗಳೂರಿನಲ್ಲಿ ಕೇಂದ್ರಗಳನ್ನು ಆರಂಭಿಸಿ ಕೂದಲು ತರಿಸಿಕೊಳ್ಳುತ್ತಿದ್ದಾರೆ. ಏಜೆಂಟರು ಗುಣಮಟ್ಟದ ಕೂದಲು ವಿದೇಶಕ್ಕೆ ಕಳುಹಿಸಿ ಎರಡನೇ ದರ್ಜೆಯ ಕೂದಲು ನಮಗೆ ಕೊಡುತ್ತಾರೆ. ಭಾರತಕ್ಕೂ ಹಾಗೂ ಮ್ಯಾನ್ಮಾರ್‌ಗೂ ಒಂದು ಕೆ.ಜಿ. ಕೂದಲಿಗೆ ₹1500 ಮತ್ತು ₹2000 ವ್ಯತ್ಯಾಸವಿದೆ. ನಮ್ಮಲ್ಲಿ ಬಾಲ ಕಾರ್ಮಿಕರಿಂದ ಕೆಲಸ ಮಾಡಿಸುವಂತಿಲ್ಲ. ಆದರೆ, ಅಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಕಟ್ಟೆಚ್ಚರ ವಹಿಸುವುದಿಲ್ಲ. ಅಲ್ಲಿ ಕಾರ್ಮಿಕರು ಕಡಿಮೆ ಸಂಬಳಕ್ಕೂ ದುಡಿಯುತ್ತಿದ್ದಾರೆ. ಇದರಿಂದ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದಲ್ಲಿ ಈ ಉದ್ಯಮ ವ್ಯಾಪಕವಾಗಿ ಪ್ರಗತಿ ಕಾಣುತ್ತಿದೆ. ನಮಗೆ ನಿರಂತರವಾಗಿ ನಷ್ಟವಾಗುತ್ತಿದೆ' ಎಂದು ಶ್ರೀನಿವಾಸ ಗುಪ್ತಾ ಹೇಳುತ್ತಾರೆ.

'ಚೀನಾಕ್ಕೆ ರಫ್ತು ಮಾಡಲು ನಾವು ಸರಕು ಸೇವಾ ತೆರಿಗೆ ಪಾವತಿಸಬೇಕಾಗುತ್ತದೆ. ಆದರೆ, ಮ್ಯಾನ್ಮಾರ್ ದೇಶದಿಂದ ಚೀನಾಕ್ಕೆ ರಫ್ತು ಮಾಡಲು ಈ ತೆರಿಗೆ ಕಟ್ಟಬೇಕಾಗಿಲ್ಲ. ಹೀಗಾಗಿ ಆ ದೇಶದವರು ನಮಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡುವುದರಿಂದ ಭಾರತದಲ್ಲಿ ವರ್ಗೀಕರಣ ಕಂಡ ಕೂದಲಿಗೆ ಹೆಚ್ಚಿನ ಬೆಲೆಯೂ ಇಲ್ಲದಂತಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಈ ಎಲ್ಲ ಪರಿಣಾಮದಿಂದಾಗಿ ದಶಕದ ಹಿಂದೆ ವಾರ್ಷಿಕ ಸಾವಿರಾರು ಕೋಟಿ ರೂಪಾಯಿ ನಡೆಸುತ್ತಿದ್ದ ವಹಿವಾಟು ಈಗ ನೂರು ಕೋಟಿ ರೂಪಾಯಿಗೆ ಇಳಿದಿದೆ. ಕಾರ್ಮಿಕರಿಗೆ ಸರ್ಕಾರದಿಂದಲೇ ಸೌಲಭ್ಯಗಳು ಸಿಗುತ್ತಿವೆ. ಆದರೆ, ಕೂದಲು ಉದ್ಯಮದಲ್ಲಿ ನಿರತರಾದ ಕಾರ್ಮಿಕರಿಗೆ ಸರ್ಕಾರದ ಸೌಲಭ್ಯ ಸಿಗುವುದಿಲ್ಲ.

ಭಾರತದಲ್ಲಿ ಕಚ್ಚಾ ಕೂದಲಿನಿಂದ ಒಂದು ವಿಗ್ ತಯಾರಾಗುವ ಹಂತದಲ್ಲಿ ಕನಿಷ್ಠ 200 ಜನರಿಗೆ ಉದ್ಯೋಗ ಲಭಿಸುತ್ತದೆ. ಕಚ್ಚಾವಸ್ತು ನಮ್ಮದೇ ಇದ್ದರೂ ಸರ್ಕಾರದ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ಏಜೆಂಟರ ಮೂಲಕ ಅದರ ಲಾಭ ವಿದೇಶಿಗರ ಪಾಲಾಗುತ್ತಿದೆ. ದೇಶದಾದ್ಯಂತ ಕೂದಲು ಮಾರಾಟವಾದರೂ ನಮ್ಮವರಿಗೆ ಅದರ ಲಾಭವಿರುತ್ತದೆ. ಈಗ ವಿದೇಶಿಗರ ಲಗ್ಗೆಯಿಂದಾಗಿ ಭಾರತದ ಅಂದಾಜು ಒಂದು ಕೋಟಿ ಜನ ಉದ್ಯೋಗ ಅವಕಾಶ ಕಳೆದುಕೊಂಡಂತಾಗಿದೆ ಎನ್ನುತ್ತಾರೆ ಉದ್ಯಮಿಗಳು.

ಜಗತ್ತಿನಾದ್ಯಂತ ತಿರುಪತಿಯಲ್ಲಿನ ಕೂದಲಿಗೆ ವ್ಯಾಪಕ ಬೇಡಿಕೆಯಿದೆ. ಬೇಡಿಕೆಯಷ್ಟು ಶೇ 1ರಿಂದ 2ರಷ್ಟು ಮಾತ್ರ ಕೂದಲು ಪೂರೈಕೆ ಮಾಡಲು ಅಲ್ಲಿನ ಆಡಳಿತ ಮಂಡಳಿಗೆ ಸಾಧ್ಯವಾಗುತ್ತಿದೆ. ವಿದೇಶಿ ಕಂಪನಿಗಳು ಏಜೆಂಟರ ಮೂಲಕ ನೇರವಾಗಿ ತಿರುಪತಿಯಲ್ಲಿಯೂ ಕೂದಲು ಸಂಗ್ರಹದ ಟೆಂಡರ್ ಪಡೆದುಕೊಂಡಿದ್ದಾರೆ. ಸಂಸ್ಕರಣೆ ಮಾಡಿದ ಕೂದಲನ್ನು ತಿರುಪತಿಯಲ್ಲಿ ಕಾರ್ಮಿಕರು ಹಣಿಗೆ ಮೂಲಕ ಒಪ್ಪವಾಗಿ ಕೂದಲು ತಯಾರಿಸುತ್ತಾರೆ. ಇವುಗಳಲ್ಲಿ ಬಹುತೇಕ ಚೀನಾಕ್ಕೆ ಹೋಗಿ ಅಲ್ಲಿಂದ ವಿಗ್ ಆಗಿ ಪರಿವರ್ತಿತ ಹೊಂದುತ್ತಿವೆ.

ಬೇರೆಡೆ ಇಲ್ಲ ವ್ಯಾಪಕ: ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೂದಲು ಸಂಗ್ರಹ ಉದ್ಯಮವಾಗಿ ಬೆಳೆದಿಲ್ಲ. ಉದ್ದ ಕೂದಲುಗಳಿಗೆ ಮಾತ್ರ ಬೇಡಿಕೆಯಿದ್ದು, 'ಕೆಲ ಬ್ಯೂಟಿ ಪಾರ್ಲರ್‌ಗಳಲ್ಲಿ ಉದ್ದಕೂದಲನ್ನು ಸಣ್ಣದಾಗಿಸಿಕೊಳ್ಳಲು ಬರುವ ಮಹಿಳೆಯರ ಕೂದಲನ್ನು ಕಾಪಿಟ್ಟು ಕ್ಯಾನ್ಸರ್ ರೋಗಿಗಳಿಗೆ ವಿಗ್ ತಯಾರಿಸುವ ಕೇರಳದ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗೆ ನೀಡಲಾಗುತ್ತದೆ' ಎಂದು ಹುಬ್ಬಳ್ಳಿಯ ಬ್ಯೂಟಿಷಿಯನ್ ಪೂಜಾ ಮಹಾಜನ್ ಹೇಳುತ್ತಾರೆ.

ದಕ್ಷಿಣ ಕನ್ನಡದಲ್ಲಿ ಚೆನ್ನಾಗಿರುವ ಕೂದಲು ದಾನ ಮಾಡುವ ಮತ್ತು ಸಂಗ್ರಹಿಸುವ 'ಸೇವಾಕಾರ್ಯ' ನಿರಂತರವಾಗಿ ನಡೆಯುತ್ತಿದೆ. ಸೀಡ್ಸ್ ಆಫ್ ಹೋಪ್ (ಭರವಸೆಯ ಬೀಜ) ಎಂಬ ಧ್ಯೇಯವಾಕ್ಯವನ್ನು ಹೊಂದಿರುವ ಸಖ್ಯಂ ಎಂಬ ಸಂಸ್ಥೆ ಕೂದಲು ಸಂಗ್ರಹಿಸಿ ವಿಗ್ ತಯಾರಿಸಿ, ಕ್ಯಾನ್ಸರ್‌ನಿಂದ ಕೂದಲು ಕಳೆದುಕೊಂಡವರಿಗೆ ವಿತರಿಸುತ್ತಿದೆ.

ರಾಜ್ಯದಲ್ಲಿ ಈಗಲೂ ಕೂದಲಿನ ಕಚ್ಚಾವಸ್ತು ಹಿಂಜುವ ಕೆಲಸವನ್ನು ಕಾರ್ಮಿಕರೇ ನಿರ್ವಹಣೆ ಮಾಡುವುದರಿಂದ ಉದ್ಯೋಗದ ಅವಕಾಶಗಳು ಉಳಿದುಕೊಂಡಿವೆ. ಆದರೆ ಹಲವು ದೇಶಿಯ ವ್ಯಾಪಾರಿಗಳು ಹೆಚ್ಚು ಹಣದಾಸೆಗೆ ವಿದೇಶಿಗರ ಸಂಪರ್ಕದಲ್ಲಿರುವ ಏಜೆಂಟರಿಗೆ ಕಚ್ಚಾಕೂದಲು ನೀಡುತ್ತಿರುವ ಕಾರಣ ಭಾರತದ ಉದ್ಯಮಿಗಳಿಗೆ ಕಚ್ಚಾವಸ್ತುವಿನ ಕೊರತೆಯಾಗುತ್ತಿದೆ. ಇದು ಹೀಗೆಯೇ ಮುಂದುವರಿದರೆ ಉದ್ಯಮಿಗಳು ಸಂಕಷ್ಟ ಮತ್ತಷ್ಟು ಹೆಚ್ಚಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ಜಗತ್ತಿನಾದ್ಯಂತ ಬೇಡಿಕೆಯಿರುವ 'ಇಂಡಿಯನ್ ಹೇರ್' ಬ್ರ್ಯಾಂಡ್ ಉಳಿಸಲು ಭಾರತದ ಉದ್ಯಮಿಗಳನ್ನು ಪ್ರೋತ್ಸಾಹಿಸಬೇಕಿದೆ. ವಿದೇಶಗಳಿಗೆ ಕಚ್ಚಾವಸ್ತು ನೇರವಾಗಿ ಮಾರಾಟ ಮಾಡುವ ವ್ಯವಸ್ಥೆಗೆ ಕಡಿವಾಣ ಹಾಕಬೇಕಿದೆ. ಇಲ್ಲವಾದರೆ ದೇಶದಲ್ಲಿ ಕುದಲು ಉದ್ಯಮದಲ್ಲಿ ಒಟ್ಟು ಶೇ. 40ರಷ್ಟು ಪಾಲು ಹೊಂದಿರುವ ಭಾಗ್ಯನಗರದ ಜನರ ಬದುಕು ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವ ಅಪಾಯವಿದೆ.

ಪೂರಕ ಮಾಹಿತಿ: ವಿಕ್ರಂ ಕಾಂತಿಕೆರೆ ಹಾಗೂ ಹುಬ್ಬಳ್ಳಿ ಬ್ಯೂರೊ.

'ನಕಲಿ ಹಾವಳಿ ತಡೆಯಬೇಕು'

ಹಲವು ದಶಕಗಳಿಂದ ಕೂದಲು ಉದ್ಯಮ ವೃತ್ತಿಯಲ್ಲಿ ತೊಡಗಿರುವ ಕೊಪ್ಪಳದ ಗ್ಯಾನೇಶ್ ಹ್ಯಾಟಿ, 'ಇತ್ತೀಚೆಗಿನ ವರ್ಷಗಳಲ್ಲಿ ಈ ಉದ್ಯಮದಲ್ಲಿಯೂ ನಕಲಿ ಹಾವಳಿ ಹೆಚ್ಚಾಗಿದೆ. ಹೀಗಾಗಿ ನೈಜ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು. 'ಬಹಳಷ್ಟು ಕಡೆ ಮಹಿಳೆಯರು ಊರೂರು ಅಲೆದಾಡಿ ಕೂದಲು ತಂದುಕೊಡುತ್ತಿಲ್ಲ. ಹೀಗಾಗಿ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ. ಯಂತ್ರ ಹಾಗೂ ತಂತ್ರಜ್ಞಾನದ ದುರ್ಬಳಕೆ ಮಾಡಿಕೊಂಡು ಕೃತಕವಾಗಿಯೇ ಕೂದಲು ತಯಾರಿಸುತ್ತಿರುವ ಕಾರಣ ಮೊದಲಿದ್ದ ಲಾಭವೂ ಈಗ ಇಲ್ಲ' ಎಂದರು.

ಗುಂಡಣ್ಣ

© 2024 by King Features Syndicate, Inc. World Rights reserved

25 ವರ್ಷಗಳ ಹಿಂದೆ

ಬುಧವಾರ, 5-5-1999

• **ಸೆಪ್ಟೆಂಬರ್- ಅಕ್ಟೋಬರ್‌ನಲ್ಲಿ ಚುನಾವಣೆ**

ನವದೆಹಲಿ, ಮೇ 4– ಸದ್ಯದ ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದಾಗಿ ಚುನಾವಣಾ ಆಯೋಗವು ಲೋಕಸಭೆಯ ಮಧ್ಯಂತರ ಚುನಾವಣೆಯನ್ನು ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮೊದಲ ವಾರದಲ್ಲಿ ನಡೆಸಲು ನಡೆಸಲು ನಿರ್ಧರಿಸಿದೆ.

ಆಗಸ್ಟ್ ಮಧ್ಯದಲ್ಲಿ ಆಯೋಗವು ಚುನಾವಣಾ ದಿನಾಂಕಗಳನ್ನು ಪ್ರಕಟಿಸುವ ನಿರೀಕ್ಷೆ ಇದ್ದು, ಚುನಾವಣೆಯನ್ನು ನಾಲ್ಕು ಹಂತಗಳಲ್ಲಿ ನಡೆಸುವ ಸಂಭವ ಇದೆ. ಮುಖ್ಯ ಚುನಾವಣಾ ಕಮಿಷನರ್ ಎಂ.ಎಸ್. ಗಿಲ್ ಇಂದು ಈ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 5-5-1974

• **ಪ್ರಧಾನಿ ಮಧ್ಯಪ್ರವೇಶಕ್ಕೆ ಫರ್ನಾಂಡಿಸ್ ಕರೆ**

ನವದೆಹಲಿ, ಮೇ 4– ರೈಲ್ವೆ ಸಚಿವ ಖಾತೆ ಮತ್ತು 20 ಲಕ್ಷ ಮಂದಿ ರೈಲ್ವೆ ನೌಕರರ ನಡುವೆ ತಲೆದೋರಿರುವ ವಿವಾದದಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರು ಮಧ್ಯ ಪ್ರವೇಶಿಸಿ , ವಿವಾದ ಇತ್ಯರ್ಥಪಡಿಸಬೇಕೆಂದು ಜಾರ್ಜ್ ಫರ್ನಾಂಡಿಸ್ ಅವರು ಕೋರಿದ್ದಾರೆ. ರೈಲ್ವೆ ನೌಕರರ ಹೋರಾಟಕ್ಕಾಗಿ ರಾಷ್ಟ್ರೀಯ ಸಮನ್ವಯ ಸಮಿತಿಯ ಸಂಚಾಲಕ ಫರ್ನಾಂಡೀಸ್ ಅವರು ತಿಹಾರ್ ಸೆರೆಮನೆಯಿಂದ ನಿನ್ನೆ ಬರೆದಿರುವ ಪತ್ರದಲ್ಲಿ ಈ ಮನವಿ ಮಾಡಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮೇ 5, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಾದಶಿ ಗಂ. 17-42 **ನಕ್ಷತ್ರ:** ಉತ್ತರಾಭಾದ್ರ ಗಂ. 19-57 **ಯೋಗ:** ವೈಧೃತಿ ಗಂ. 07-37ನಂತರ ವಿಷ್ಕಂಭ ಗಂ. 28-03 **ಕರಣ:** ಕೌಲವ ಗಂ. 7-12, ಮೇಷ ಮಾಸದ 23 ನೇ ದಿನ
ಮಳೆನಕ್ಷತ್ರ: ಭರಣಿ 3, **ರಾಹುಕಾಲ :** ಸಾಯಂಕಾಲ 04-30 - 06-00
ಸೂರ್ಯೋದಯ : 06-11 **ಸೂರ್ಯಾಸ್ತ :** 06-43
ಮುಸ್ಲಿಂ ದಿನಾಂಕ : 25 ಶವ್ವಾಲ್
ಅದೃಷ್ಟ ಸಂಖ್ಯೆ : 3, 6

ಮೇಷ: ಕಬ್ಬು ಬೆಳೆಯುವುದರ ಜೊತೆಗೆ ವ್ಯಾಪಾರವನ್ನು ಹೊಂದಿರುವಂಥವರಿಗೆ ಲಾಭದ ದಿನವಾಗಲಿದೆ. ನೀವು ಯಾರಿಗೂ ತಿಳಿಯದೆ ಮಾಡಿದೆ ಎಂದು ತಿಳಿದ ಕಾರ್ಯವು ಜಗಜ್ಜಾಹೀರಾಗುವ ಪ್ರಸಂಗಗಳು ಎದುರಾಗಬಹುದು.

ವೃಷಭ: ಯಾವುದೋ ಕಾರಣದಿಂದ ನೀವು ಮಾಡಿದ ಶೋಧಕಾರ್ಯದಿಂದ ನಿಮ್ಮ ಮನೆಯ ಇತಿಹಾಸ ದೊರೆಯಬಹುದು ಹಾಗೂ ಅದನ್ನು ಕಂಡ ನಿಮಗೆ ಹೆಮ್ಮೆಯಾಗಬಹುದು. ರತ್ನ ವ್ಯಾಪಾರಿಗಳಿಗೆ ಉತ್ತಮ ಲಾಭ.

ಮಿಥುನ: ಎಲ್ಲರ ಆಸ್ತಿ ಹಂಚಿಕೆಯಾದ ಮೇಲೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ನಿಮಗೂ ಶೇಷವಾಗಿ ಸ್ವಲ್ಪ ಭಾಗ ಮಾನವೀಯತೆ ದೃಷ್ಟಿಯಲ್ಲಿ ಸಿಗಲಿದೆ. ನಿಮ್ಮ ಕಾರ್ಯಗಳು ಆದಷ್ಟು ಶೀಘ್ರವಾಗಿ ಸಿದ್ಧಿಸಲು ಅಶ್ವತ್ಥವೃಕ್ಷಕ್ಕೆ ಪ್ರದಕ್ಷಿಣೆ ಹಾಕಿ.

ಕರ್ಕಾಟಕ: ಮಕ್ಕಳ ತುಂಟುತನ ತಡೆಯಲಾಗದೆ ಅವರ ಸಂತೋಷಕ್ಕಾಗಿ ಕುಟುಂಬ ಸಮೇತ ಸಣ್ಣದಾದ ಪ್ರವಾಸಕ್ಕೆ ತೆರಳಬಹುದು. ತಾಯಿಯೊಂದಿಗೆ ಸಮಾಧಾನಕರ ಸಮಯ ಕಳೆಯುವಿರಿ. ಮಧುರ ಖಾದ್ಯಗಳನ್ನು ಸವಿಯುವಿರಿ.

ಸಿಂಹ: ಇಂದು ವಿಶೇಷವಾಗಿ ವಿದ್ಯಾರ್ಥಿಗಳಿಗೆ ಅತ್ಯಂತ ದೇಹಾಲಸ್ಯ ಕಾಡಲಿದೆ. ಆಲಸಿಯಾಗದಿರಿ. ನಿಮ್ಮ ಕೆಲವು ಶೋಕಿ ಎನ್ನಿಸುವ ಅಭ್ಯಾಸಗಳು ಇತರಿಗೆ ಅಡ್ಡಿಯಾಗುವಂತಿದ್ದಲ್ಲಿ ಆ ಅಭ್ಯಾಸವನ್ನು ಕೈಬಿಡುವ ಕಾರ್ಯವನ್ನು ಮಾಡಿ.

ಕನ್ಯಾ: ಸಸ್ಯಶಾಸ್ತ್ರಜ್ಞರಿಗೆ ನಿಮ್ಮ ದೇಹಕ್ಕೆ ಅಲರ್ಜಿಕಾರಕ ಸಸ್ಯಗಳೊಂದಿಗೆ ಕೆಲಸ ಮಾಡಲೇಬೇಕಾದ ಪರಿಸ್ಥಿತಿ ಇಬ್ಬಂದಿಗೆ ಸಿಲುಕಿಸುತ್ತದೆ. ಹಾಲು ಮಾರಟಗಾರರಿಗೆ ಗುಣಮಟ್ಟದ ಹಾಲಿಗೆ ಮನ್ನಣೆ ದೊರೆಯುತ್ತದೆ.

ತುಲಾ: ಮೊಂಡು ಹಟ ನಿಮ್ಮ ಪೋಷಕರ ಹಾಗೂ ಕುಟುಂಬ ವರ್ಗದ ಚಿಂತೆಗೆ ಕಾರಣವಾಗಬಹುದು. ಅವರೋಹಣ ಪ್ರಕ್ರಿಯೆಯಲ್ಲಿರುವ ನಿಮ್ಮ ಷೇರು ವ್ಯವಹಾರಗಳು ನಿಧಾನಗತಿಯಲ್ಲಿ ಆರೋಹಣ ಪ್ರಕ್ರಿಯೆಗೆ ಬರುತ್ತದೆ.

ವೃಶ್ಚಿಕ: ಉದ್ಯೋಗ ಕ್ಷೇತ್ರದಲ್ಲಿ ಪರಿಚಯವಾಗಿ ನಿಮ್ಮ ಮನೆ ಕುಟುಂಬದವರಂತೆ ಆಗಿ ಹೋದ ವ್ಯಕ್ತಿಗಳೊಂದಿಗೆ ಕಳೆದ ಸಮಯ ಮನಸ್ಸಿಗೆ ಸಂತೋಷ ನೀಡುವುದು. ರುದ್ರಾರಾಧನೆಯು ಶುಭ ಫಲಗಳನ್ನು ನೀಡುವುದು.

ಧನು: ಅರ್ಹತೆಗೆ ತಕ್ಕಂಥ ಕೆಲಸವಿಲ್ಲವೆಂದು ಕೊರಗುತ್ತಿರುವವರು ತಮಗೆ ಬೇಕಾದಂತಹ ಉದ್ಯೋಗಾವಕಾಶವನ್ನು ಹುಡುಕುವರು. ಪ್ರಕೃತಿಯ ವಿಸ್ಮಯವಾದ ರೂಪುರೇಷೆಗಳಿಗೆ ಇಂದು ನೀವು ಮಾರುಹೋಗುವಿರಿ.

ಮಕರ: ಮಗಳ ವಿಚಾರವಾಗಿ ನೀವು ಮಾಡಿದ ಪರೀಕ್ಷೆಯಲ್ಲಿ ಆಕೆ ಉತ್ತಮವಾದ ವರ್ತನೆಯನ್ನು ತೋರಿ ನಿಮ್ಮನ್ನು ಸಮಾಧಾನಗೊಳಿಸುತ್ತಾಳೆ. ನಿಮ್ಮ ಸಹೋದ್ಯೋಗಿಗಳ ಅಭಿವೃದ್ಧಿಯನ್ನು ಕಂಡು ಅಸೂಯೆ ಪಡದಿರಿ.

ಕುಂಭ: ಉನ್ನತ ಸ್ಥಾನಕ್ಕೆ ತಲುಪಿರುವ ನಿಮ್ಮ ಮಕ್ಕಳು ನಿಮ್ಮ ಆಗುಹೋಗುಗಳಿಗೆ ಎಳ್ಳಿನಿತೂ ಗಮನ ಕೊಡದಿರುವುದು ನಿಮ್ಮ ಬೇಸರಕ್ಕೆ ಕಾರಣವಾಗಬಹುದು. ಮನೆ ಯುದ್ಧರಂಗವಾಗದಂತೆ ನೀವೇ ತಡೆಗಟ್ಟಬೇಕಾಗುತ್ತದೆ.

ಮೀನ: ಬಲಶಾಲಿಯಾದ ವಿರೋಧಿಗಳನ್ನು ಮಣಿಸಲು ಅವರ ಅನ್ಯಾಯ ಬೆಳಕಿಗೆ ತರಲು ನೀವು ಮಾಡಿದ ಪ್ರಯತ್ನ ಉತ್ತಮ ಫಲ ನೀಡಲಿವೆ. ನಿಮ್ಮ ಸಾಮರ್ಥ್ಯಕ್ಕಿಂತ ಕೆಲಸ ಕಳಪೆಯಾಗಲಿದ್ದು, ನಿಮಗೆ ಬೇಸರವೆನಿಸಬಹುದು.

ಪದಬಂಧ 5671

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನುಕೂಲ ಸಂದರ್ಭ (4)
3.ಅರವತ್ತು ವರ್ಷದ ಹುಟ್ಟುಹಬ್ಬ (4)
5.ಆನೆಯ ದಾಡೆ (3)
6.ಜಗಳಕ್ಕೊಂದು ಪರ್ಯಾಯ ಪದ (3)
8.ಕಲೆಸಿದ ಗೋಧಿ ಹಿಟ್ಟು (3)
9.ಪ್ರಶ್ನೆಗೆ ಪೂರಕವಾಗಿ ಹೇಳುವ ಮಾತು (3)
10.ದುಷ್ಟ ಇಲ್ಲಿದ್ದಾನೆ (3)
12.ಬಿದಿಗೆಯಂದು ಖರೀದಿಸಿದ ಕೊಡ (3)
14.ಈತ ಲೆಕ್ಕ ಬರೆಯುವವನು! (4)
15.ಸುಮಾರು ಮೂರು ಮೈಲುಗಳ ಅಳತೆ (4)

ಮೇಲಿಂದ ಕೆಳಕ್ಕೆ

1.ಕಾಗೆ ಬಂಗಾರವಿದು (3)
2.ಶಬರನು ಹಿಡಿದಿರುವ ಬಾಣ (2)
3.ವರಮಾನವುಳ್ಳನು ನೋಡುತ್ತಿರುವ ಕಾನನ (2)
4.ಹುತ್ತ ಇಲ್ಲಿದೆ (3)
7.ಅತಿಯಾಗಿ ಮಾತಾಡುವವನು (5)
8.ಕಿವಿಯಿಂದ ಕಿವಿಗೆ ಹರಡುವ ಮಾತು (5)
9.ಉದಯ ಕಾಲದಲ್ಲಿ ಶೇಖರಿಸಿರುವ ನೀರು (3)
11.ಕತ್ತರಿಸುವ ಸಾಧನ (3)
12.ಕಂಬಿ ಹಿಂದೆ ತೋರಿದ ಬಿನ್ನಾಣ! (2)
13.ತಿರುಗಿದಾಗ ದ್ವೇಷ ಕಾಣಿಸುತ್ತಿದೆಯಲ್ಲಾ? (2)



5670ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾನ 3.ಗತ್ಯಂತರ
5.ಗರಗಸ 7.ಗಡಿಯಾರ
9.ಪರ್ವಕಾಲ 12.ಗರಂವನ
15.ಪರಿತಾಪ 16.ಕಠೋರ

ಮೇಲಿಂದ ಕೆಳಕ್ಕೆ:
1.ಜನಾಂಗ 2.ನಹಗ
3.ಗಡಿಬಿಡಿ 4.ರಕ್ಷಕ
6.ರಣರಂಗ 7.ಗರಲ8.
ರಥೋತ್ಸವ 10.ಕಾಲಕ್ಷೇಪ
11.ವಿರೂಪ 13.ರಂಜಕ
14.ನಶ್ವರ

ಸುಡೊಕು 6056

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6055 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂತ್ರಸ್ತೆಯರ ಹೇಳಿಕೆ ದಾಖಲಿಸಿಕೊಂಡ ತನಿಖಾ ತಂಡ • ಸಾಕ್ಷ್ಯಗಳ ವಿಡಿಯೊ ಚಿತ್ರೀಕರಣ • ಸ್ಥಳದಲ್ಲಿ ಹಾಜರಿದ್ದ ಜೆಡಿಎಸ್ ನಾಯಕರು

ರೇವಣ್ಣ ಮನೆಯಲ್ಲಿ ಎಸ್‌ಐಟಿಯಿಂದ ಮಹಜರು

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮಹಿಳೆಯೊಬ್ಬರು ದಾಖಲಿಸಿರುವ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ತಂಡ, ಶನಿವಾರ ಇಲ್ಲಿನ ಎಚ್‌.ಡಿ. ರೇವಣ್ಣ ಅವರ ನಿವಾಸದಲ್ಲಿ ಸ್ಥಳ ಮಹಜರು ನಡೆಸಿತು.

ಡಿವೈಎಸ್‌ಪಿ ಸತ್ಯ ನಾರಾಯಣ್ ಸಿಂಗ್, ಸುಮಾರಾಣಿ ನೇತೃತ್ವದಲ್ಲಿ ಸಂತ್ರಸ್ತ ಮಹಿಳೆ ಹಾಗೂ ಆಕೆಯ ಪುತ್ರಿಯೊಂದಿಗೆ ಮೂರು ವಾಹನಗಳಲ್ಲಿ ಬಂದ ಎಸ್‌ಐಟಿ ತಂಡದ ಜೊತೆ ಹಾಸನ ಎಎಸ್‌ಪಿ ತಮ್ಮಯ್ಯ ಹಾಗೂ ಸ್ಥಳೀಯ ಪೊಲೀಸರು ಇದ್ದರು.

'ರೇವಣ್ಣ ಅವರ ನಿವಾಸದಲ್ಲಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ. ನನ್ನ ಮಗಳ ಜೊತೆಗೂ ವಿಡಿಯೊ ಕಾಲ್ ಮಾಡಿ, ಅಸಭ್ಯವಾಗಿ ಪ್ರಜ್ವಲ್ ಮಾತನಾಡುತ್ತಿದ್ದರು' ಎಂದು ಮಹಿಳೆ ದೂರು ನೀಡಿದ್ದರು.

ಈ ಹಿನ್ನೆಲೆಯಲ್ಲಿ ಶನಿವಾರ ಬೆಳಿಗ್ಗೆ ಹೊಳೆನರಸೀಪುರಕ್ಕೆ ಭೇಟಿ ನೀಡಿದ ತಂಡ ರೇವಣ್ಣ ಅವರ ಮನೆಯ ಅಡುಗೆ ಮನೆ, ಬೆಡ್ ರೂಂ, ಸ್ಟೋರ್ ರೂಂ ಸೇರಿದಂತೆ ಮನೆಯ ಎಲ್ಲೆಡೆ ಹೋಗಿ ಪರಿಶೀಲಿಸಿತು.

ಬೆಳಿಗ್ಗೆ 11.30ಕ್ಕೆ ರೇವಣ್ಣ ಅವರ ಮನೆಗೆ ಬಂದ ಎಸ್‌ಐಟಿ ತಂಡದ ಸದಸ್ಯರು, ಸಂಜೆ 4.30 ರವರೆಗೆ ಮನೆಯ ಒಳಗೆ ಹಾಗೂ ಹೊರಗೆ ಇಂಚಿಂಚು ಜಾಗವನ್ನೂ ಪರಿಶೀಲಿಸಿದರು.

ಮಹಜರು ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣ ಮಾಡಲಾಗಿದ್ದು, ಪಂಚನಾಮ ಬಳಿಕ ಸ್ಥಳದಲ್ಲಿಯೇ ಸಂತ್ರಸ್ತೆಯ ಹೇಳಿಕೆ ದಾಖಲು ಮಾಡಿಕೊಂಡರು. ಸ್ಥಳ ಮಹಜರು ವೇಳೆಯಲ್ಲಿ ರೇವಣ್ಣ ಅವರ ಪತ್ನಿ ಭವಾನಿ ಮನೆಯಲ್ಲೇ ಇದ್ದರು. ಸಂತ್ರಸ್ತೆಯರ ಹೇಳಿಕೆ ದಾಖಲಿಸಿಕೊಳ್ಳಲು ಪಟ್ಟಣದ ಪೊಲೀಸರು ಸಿಪಿಯು, ಮಾನಿಟರ್, ಪ್ರಿಂಟರ್ ಕೊಂಡೊಯ್ದು ವ್ಯವಸ್ಥೆ ಮಾಡಿದ್ದರು. ರೇವಣ್ಣ ಪರ ವಕೀಲರು, ಜೆಡಿಎಸ್ ನಾಯಕರು ಸ್ಥಳದಲ್ಲಿ ಹಾಜರಿದ್ದರು.

ಭವಾನಿ ಅವರಿಗೆ ಪ್ರಸಾದ ನೀಡಲು ಬಂದಿದ್ದ ಹರದನಹಳ್ಳಿ ದೇವೇಶ್ವರ ದೇವಾಲಯದ ಅರ್ಚಕರನ್ನು ತಡೆದ ಪೊಲೀಸರು, ಬ್ಯಾಗ್ ಪರಿಶೀಲನೆ ನಡೆಸಿದ ನಂತರ ಮನೆಯೊಳಗೆ ಬಿಟ್ಟರು.

ಹೊಳೆನರಸೀಪುರದ ಶಾಸಕ ಎಚ್‌.ಡಿ.ರೇವಣ್ಣ ಮನೆಗೆ ಎಸ್‌ಐಟಿ ಅಧಿಕಾರಿಗಳು ಸ್ಥಳ ಮಹಜರು ನಡೆಸಲು ಬಂದ ಸಂದರ್ಭದಲ್ಲಿ ಜನ ಕುತೂಹಲದಿಂದ ವೀಕ್ಷಿಸಿದರು

ಊರು ಬಿಟ್ಟ ಸಂತ್ರಸ್ತೆಯರು

ಎಸ್‌ಐಟಿ ತನಿಖೆ ಚುರುಕುಗೊಳ್ಳುತ್ತಿದ್ದಂತೆಯೇ ಹಲವು ಸಂತ್ರಸ್ತೆಯರು ತಮ್ಮ ಊರುಗಳನ್ನು ತೊರೆದು, ಬೇರೆಡೆ ತೆರಳಿದ್ದಾರೆ.

ವಿಡಿಯೊಗಳಲ್ಲಿ ಕಾಣಿಸಿಕೊಂಡಿರುವ ಹಲವು ಮಹಿಳೆಯರು, ತಮ್ಮ ಊರುಗಳಿಂದ ಹೊರಗೆ ಹೋಗಿದ್ದು, ಎಲ್ಲಿದ್ದಾರೆ ಎಂಬ ಮಾಹಿತಿಯೂ ಸಿಗುತ್ತಿಲ್ಲ.

ಎಸ್‌ಐಟಿ ತಂಡ ಕೆಲವರನ್ನು ಸಂಪರ್ಕಿಸಿದ್ದು, ತನಿಖೆಗೆ ಸಹಕರಿಸುವಂತೆ ಕೇಳಿಕೊಂಡಿದೆ. ಆದರೆ, ಸಂತ್ರಸ್ತೆಯರು ಸಹಕಾರ ನೀಡುತ್ತಿಲ್ಲ, ಬದಲಿಗೆ, 'ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟು ಬಿಡಿ. ಈಗಾಗಲೇ ಸಾಕಷ್ಟು ನೊಂದಿದ್ದೇವೆ ಎಂದು ಮನವಿ ಮಾಡುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸಂತ್ರಸ್ತೆ, ಪತಿಯನ್ನು ಕರೆತಂದ ಅಧಿಕಾರಿಗಳು

ಶನಿವಾರ ಸಂಜೆ ಹಾಸನದ ಸಂಸದರ ನಿವಾಸಕ್ಕೆ ಬಂದ ಎಸ್‌ಐಟಿ ಅಧಿಕಾರಿಗಳು

ಹಾಸನ: ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯೊಬ್ಬರು ನೀಡಿರುವ ಅತ್ಯಾಚಾರದ ದೂರಿಗೆ ಸಂಬಂಧಿಸಿದಂತೆ, ಸಂಸದ ಪ್ರಜ್ವಲ್ ರೇವಣ್ಣ ಅವರ ನಗರದ ನಿವಾಸಕ್ಕೆ ಶನಿವಾರ ಸಂಜೆ ಭೇಟಿ ನೀಡಿದ ಎಸ್‌ಐಟಿ ತಂಡ, ಸ್ಥಳ ಮಹಜರು ನಡೆಸಿತು.

'ಅಹವಾಲು ಹೇಳಿಕೊಳ್ಳಲು ಸಂಸದರ ನಿವಾಸಕ್ಕೆ ಬಂದಾಗ, ಕೋಣೆಗೆ ಕರೆದು ಗನ್ ತೋರಿಸಿ ಪ್ರಜ್ವಲ್ ಅತ್ಯಾಚಾರ ಎಸಗಿದ್ದರು' ಎಂದು ಸಂತ್ರಸ್ತೆ ದೂರು ನೀಡಿದ್ದರು. ಆದರಿಂದ, ಸಂತ್ರಸ್ತೆ ಹಾಗೂ ಆಕೆಯ ಪತಿಯನ್ನು ಸಂಸದರ ನಿವಾಸಕ್ಕೆ ಕರೆತಂದ ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು.

ನಿವಾಸದ ಹಾಲ್, ಮೇಲ್ಮಹಡಿಯಲ್ಲಿರುವ ಕೋಣೆಗಳಿಗೆ ತೆರಳಿ ಅಧಿಕಾರಿಗಳು ಪರಿಶೀಲಿಸಿದರು. ವಿಡಿಯೊದಲ್ಲಿರುವ ದೃಶ್ಯಾವಳಿಗಳು ಹಾಗೂ ಕೋಣೆಯಲ್ಲಿನ ಚಿತ್ರಣಗಳನ್ನು ಹೋಲಿಸಿ ನೋಡಿದರು. ಅಲ್ಲದೇ, ಪ್ರಜ್ವಲ್ ಅತ್ಯಾಚಾರ ನಡೆಸಿದ್ದಾರೆ ಎನ್ನಲಾದ ಕೋಣೆಯ ಪ್ರತಿಭಾಗವನ್ನೂ ತಪಾಸಣೆಗೆ ಒಳಪಡಿಸಿದರು.

ಡಿವೈಎಸ್‌ಪಿ ಸತ್ಯ ನಾರಾಯಣ್ ಸಿಂಗ್, ಸುಮಾರಾಣಿ ನೇತೃತ್ವದಲ್ಲಿ ಎಸ್‌ಐಟಿ ಇನ್‌ಸ್ಪೆಕ್ಟರ್ ಸ್ವರ್ಣಾ, ಸಬ್ ಇನ್‌ಸ್ಪೆಕ್ಟರ್ ಕುಮುದಾ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸುತ್ತಲೂ ನೂರಾರು ಜನ ನೆರೆದು, ಎಸ್‌ಐಟಿ ತಂಡದ ಭೇಟಿಯನ್ನು ಕುತೂಹಲದಿಂದ ವೀಕ್ಷಿಸಿದರು.

ರೇವಣ್ಣಗೆ ಜಾಮೀನು ನೀಡಲು ಕೋರ್ಟ್ ನಕಾರ

ಬೆಂಗಳೂರು: ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಹೊಂದಿಕೊಂಡ ಕ್ರಿಮಿನಲ್ ಪ್ರಕರಣದಲ್ಲಿ ಮಹಿಳೆಯೊಬ್ಬರ ಅಪಹರಣದ ಪ್ರತ್ಯೇಕ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಹೊಳೆನರಸೀಪುರದ ಜೆಡಿಎಸ್ ಶಾಸಕ ಎಚ್‌.ಡಿ.ರೇವಣ್ಣ ಅವರಿಗೆ ನಿರೀಕ್ಷಣಾ ಜಾಮೀನು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರಾಕರಿಸಿದೆ.

ಈ ಕುರಿತ ಅರ್ಜಿಗೆ ಸಂಬಂಧಿಸಿ, ಮಧ್ಯಾಹ್ನ 3 ಗಂಟೆಯಿಂದ 4.30ರವರೆಗೆ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ಆದೇಶವನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸಂಜೆ 6.23ಕ್ಕೆ ಪ್ರಕಟಿಸಿದರು.

ವಿಚಾರಣೆ ವೇಳೆ ರೇವಣ್ಣ ಪರ ಹೈಕೋರ್ಟ್‌ನ ಹಿರಿಯ ವಕೀಲ ಮೂರ್ತಿ ಡಿ. ನಾಯಕ್ ಅವರು, 'ಅರ್ಜಿದಾರ ರೇವಣ್ಣ ಅವರಿಗೆ ಜಾಮೀನು ನೀಡಬೇಕು. ಎಸ್‌ಐಟಿಯ ನಡೆ ಆತಂಕಕಾರಿ ಆಗಿರುವ ಕಾರಣ ರಕ್ಷಣೆ ಇಲ್ಲದೇ ಹೋದರೆ ಬಂಧಿಸುವ ಸಾಧ್ಯತೆ ಇದೆ' ಎಂದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ 'ಆರೋಪಿ ಬಲಾಢ್ಯರಿದ್ದಾರೆ. ಅಪಹರಣಕ್ಕೆ ಒಳಗಾಗಿರುವ ಮಹಿಳೆಯ ರಕ್ಷಣೆ ನಮ್ಮ ಮೊದಲ ಆದ್ಯತೆ. ಇಂತಹ ಪ್ರಕರಣಗಳು ಬಿಹಾರ, ಉತ್ತರ ಪ್ರದೇಶದಲ್ಲಿ ನಡೆಯುತ್ತವೆ ಎಂದು ನಾವು ಕೇಳಿ ಬಲ್ಲೆವು. ಆದರೆ, ಇಂತಹ ಘಟನೆ ಕರ್ನಾಟಕದಲ್ಲಿ ಆಗಲು ಬಿಡುವುದಿಲ್ಲ. ಈಗಾಗಲೇ ಸಂತ್ರಸ್ತ ಮಹಿಳೆಯ ವಿಡಿಯೊ, ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ. ಆದ್ದರಿಂದ ನಿರೀಕ್ಷಣಾ ಜಾಮೀನು ನೀಡಬಾರದು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಯನ್ನು ತಿರಸ್ಕರಿಸಿದರು. ಪ್ರಕರಣದ ಮುಖ್ಯ ವಿಚಾರಣೆಯನ್ನು ಸೋಮವಾರಕ್ಕೆ (ಮೇ 6) ಮುಂದೂಡಿದರು.

ಅರ್ಜಿದಾರ ರೇವಣ್ಣ ಪರ ಹೈಕೋರ್ಟ್ ವಕೀಲ ಪವನ್ ಸಾಗರ್ ವಕಾಲತ್ತು ವಹಿಸಿದ್ದಾರೆ.

ಜೆಡಿಎಸ್ ಕಾರ್ಯಕರ್ತರಿಗೆ ಆಘಾತ : ನಿಖಿಲ್

ಬೆಂಗಳೂರು: ಪ್ರಜ್ವಲ್ ಪ್ರಕರಣದಿಂದ ಪಕ್ಷದ ಮುಖಂಡರು, ಕಾರ್ಯಕರ್ತರು ಆಘಾತಕ್ಕೆ ಒಳಗಾಗಿದ್ದಾರೆ. ತಂದೆ (ಎಚ್.ಡಿ. ಕುಮಾರಸ್ವಾಮಿ) ಜತೆ ಹಾಸನಕ್ಕೆ ತೆರಳಿ ಆತ್ಮಸ್ಥೈರ್ಯ ತುಂಬಲಾಗುವುದು ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಎಚ್‌.ಡಿ. ದೇವೇಗೌಡ ಅವರನ್ನು ಶನಿವಾರ ಭೇಟಿ ಮಾಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಘಟನೆಯಿಂದ ದೇವೇಗೌಡರು ಆಘಾತಕ್ಕೆ ಒಳಗಾಗಿದ್ದಾರೆ. 91ರ ಇಳಿವಯಸ್ಸಿನಲ್ಲಿ ಅವರಿಗಾದ ನೋವು ಊಹಿಸಲೂ ಸಾಧ್ಯವಿಲ್ಲ. ಸಾಕಷ್ಟು ನೊಂದಿದ್ದಾರೆ. ವಿಶ್ರಾಂತಿಯಲ್ಲಿ ಇದ್ದಾರೆ' ಎಂದು ಹೇಳಿದರು.

'ವಿಡಿಯೊಗಳನ್ನು ನಾನು ನೋಡಿಲ್ಲ. ಬೇರೆಯವರಿಂದ ವಿಡಿಯೊಗಳ ಬಗ್ಗೆ ಕೇಳಿದ್ದೇನೆ. ಸದ್ಯ ಪ್ರಜ್ವಲ್ ಆರೋಪಿ ಸ್ಥಾನದಲ್ಲಿದ್ದಾರೆ. ಎಸ್‌ಐಟಿ ತನಿಖೆ ನಡೆಯುತ್ತಿದೆ. ತಪ್ಪು ಮಾಡಿದ್ದರೆ ಖಂಡಿತ ಶಿಕ್ಷೆ ಅನುಭವಿಸಬೇಕು. ಆದರೆ, ವಿಡಿಯೊ ಪ್ರಸಾರ ಮಾಡಿದವರು ಮಹಿಳೆಯರ ಘನತೆಗೆ ಕುತ್ತು ತಂದಿದ್ದಾರೆ. ಕೊನೆಯ ಪಕ್ಷ ಮುಸುಕು ಮಾಡಬಹುದಿತ್ತು' ಎಂದರು.

ಗೌಡರ ಮನೆಯಲ್ಲೇ ರೇವಣ್ಣ ಸೆರೆ

ಒಂದನೇ ಪುಟದಿಂದ...

ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ಎಸ್‌ಐಟಿ ಅಧಿಕಾರಿಗಳ ತಂಡ, ಮನೆಗೆ ತೆರಳಿ ರೇವಣ್ಣ ಅವರನ್ನು ಸೆರೆ ಹಿಡಿದಿದೆ.

ಅಪಹರಣ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ಎಚ್‌.ಡಿ. ರೇವಣ್ಣ, ನ್ಯಾಯಾಲಯದ ತೀರ್ಪಿಗಾಗಿ ಕಾಯುತ್ತಿದ್ದರು. ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿದ್ದ ನ್ಯಾಯಾಲಯ, ಶನಿವಾರ ಸಂಜೆ 5.30ರೊಳಗೆ ಎಸ್‌ಐಟಿ ಮುಂದೆ ಹಾಜರಾಗುವಂತೆ ಗಡುವು ನೀಡಿ, ಆದೇಶವನ್ನು ಕಾಯ್ದಿರಿಸಿತ್ತು. ರೇವಣ್ಣ ಎಸ್‌ಐಟಿ ಮುಂದೆ ಹಾಜರಾಗಲಿಲ್ಲ. ಗಡುವು ಮುಗಿಯುತ್ತಿದ್ದಂತೆ ಕೋರ್ಟ್ ಹಾಲ್‌ಗೆ ಬಂದ ನ್ಯಾಯಾಧೀಶರು, ಜಾಮೀನು ಅರ್ಜಿಯನ್ನು ತಿರಸ್ಕರಿಸಿರುವುದಾಗಿ ಪ್ರಕಟಿಸಿದರು.

ಅದರ ಬೆನ್ನಲ್ಲೇ, ದೇವೇಗೌಡರ ಮನೆಗೆ ದೌಡಾಯಿಸಿದ ಎಸ್‌ಐಟಿ ಅಧಿಕಾರಿಗಳು ಬಾಗಿಲು ಬಡಿದರು. 15 ನಿಮಿಷ ಬಾಗಿಲು ತೆಗೆಯಲಿಲ್ಲ. ಬಳಿಕ, ರೇವಣ್ಣ ಅವರೇ ಬಾಗಿಲು ತೆರೆದು ಹೊರಬಂದರು. ತಕ್ಷಣವೇ, ಅವರನ್ನು ವಶಕ್ಕೆ ಪಡೆದ ತನಿಖಾ ತಂಡ, ಸಿಐಡಿ ಕಚೇರಿಗೆ ಆವರಣದಲ್ಲಿರುವ ಎಸ್‌ಐಟಿ ಕಚೇರಿಗೆ ಕರೆತಂದಿದೆ. ವೈದ್ಯಕೀಯ ಪರೀಕ್ಷೆ ಬಳಿಕ, ಅವರನ್ನು ನ್ಯಾಯಾಧೀಶರ ಮುಂದೆ ಭಾನುವಾರ ಬೆಳಿಗ್ಗೆ ಹಾಜರುಪಡಿಸುವ ಸಾಧ್ಯತೆ ಇದೆ. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲು ಎಸ್‌ಐಟಿ ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದಾರೆ.

> ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಆದ ಕಾರಣ ಬಂಧಿಸಲಾಗಿದೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ. ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುತ್ತದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಕೆ.ಆರ್. ನಗರದ ಸಂತ್ರಸ್ತೆ, ಎಚ್‌.ಡಿ. ರೇವಣ್ಣ ಅವರ ಮನೆಯಲ್ಲಿ ಕೆಲಸಕ್ಕಿದ್ದರು. ಇದೇ ಮಹಿಳೆ ಮೇಲೆ ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಬಲವಂತದಿಂದ ಅತ್ಯಾಚಾರ ಎಸಗಿದ್ದಾರೆಂಬ ಆರೋಪವಿದೆ. ಈ ಕೃತ್ಯದ ವಿಡಿಯೊಗಳು ಪೆನ್‌ಡ್ರೈವ್‌ನಲ್ಲಿ ಹಲವರಿಗೆ ಹಂಚಿಕೆಯಾಗಿವೆ. ಕೃತ್ಯಕ್ಕೆ ಒಪ್ಪದ ಮಹಿಳೆ, ತನ್ನನ್ನು ಬಿಟ್ಟುಬಿಡುವಂತೆ ಗೋಗರೆಯುವ ದೃಶ್ಯಗಳು ವಿಡಿಯೊದಲ್ಲಿವೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊಗಳು ಹಂಚಿಕೆಯಾಗಿದ್ದವು. ಮಗ ಪ್ರಜ್ವಲ್ ರಕ್ಷಣೆಗೆ ಮುಂದಾಗಿದ್ದ ಎಚ್‌. ಡಿ.ರೇವಣ್ಣ ಹಾಗೂ ಇತರರು, ಸಂತ್ರಸ್ತೆಯನ್ನು ಏಪ್ರಿಲ್ 29ರಂದು ಅಪಹರಿಸಿದ್ದರು ಎಂಬುದಾಗಿ ಗೊತ್ತಾಗಿದೆ. ನಂತರ, ಹಲವು ಕಡೆಗಳಲ್ಲಿ ಅವರನ್ನು ಅಕ್ರಮ ಬಂಧನದಲ್ಲಿಟ್ಟಿದ್ದರು. ಹಲ್ಲೆ ಸಹ ಮಾಡಿದ್ದರು. ತನ್ನ ತಾಯಿಯನ್ನು ಅಪಹರಿಸಲಾಗಿದೆ ಎಂದು ಸಂತ್ರಸ್ತೆಯ ಪುತ್ರ ಕೆ.ಆರ್. ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ಪ್ರಕರಣದಲ್ಲಿ ಸತೀಶ್ ಬಾಬಣ್ಣ ಎಂಬುವರನ್ನು ಬಂಧಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ ರೇವಣ್ಣ ಅವರನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಭವಾನಿಗೂ ನೋಟಿಸ್ ಸಾಧ್ಯತೆ: 'ಅಪಹರಣ ಕೃತ್ಯದಲ್ಲಿ ಎಚ್‌.ಡಿ. ರೇವಣ್ಣ ಅವರ ಪತ್ನಿ ಭವಾನಿ ಅವರೂ ಭಾಗಿಯಾಗಿರುವ ಮಾಹಿತಿ ಇದೆ. ಹೀಗಾಗಿ, ಅವರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲು ಚಿಂತನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ರೇವಣ್ಣ ಆಪ್ತನ ಮನೆಯಲ್ಲೇ ಮಹಿಳೆ ಪತ್ತೆ

ಒಂದನೇ ಪುಟದಿಂದ...

'ರೇವಣ್ಣ ಮನೆಯಲ್ಲಿ ಕೆಲಸ ಮಾಡುತ್ತಿದ್ದ ನನ್ನ ತಾಯಿಯನ್ನು ಏ. 29 ರಂದು ರೇವಣ್ಣ ಅವರ ಸೂಚನೆಯಂತೆ ಸತೀಶ್ ಬಾಬಣ್ಣ ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಆಕೆಯ ಜೀವಕ್ಕೆ ಅಪಾಯವಿದೆ' ಎಂದು ಮಹಿಳೆಯ ಮಗ ಕೆ.ಆರ್. ನಗರ ಠಾಣೆಯಲ್ಲಿ ದೂರು ನೀಡಿದ್ದರು. ತನಿಖೆ ಕೈಗೊಂಡ ಎಸ್‌ಐಟಿ ತಂಡವು ಮಹಿಳೆಯನ್ನು ಶನಿವಾರ ಬೆಳಿಗ್ಗೆ 11.30ಕ್ಕೆ ರಕ್ಷಿಸಿದರು ಎನ್ನಲಾಗಿದೆ.

'ಹುಣಸೂರು ಪಟ್ಟಣದಿಂದ ಸುಮಾರು 14 ಕಿ.ಮೀ ದೂರದಲ್ಲಿರುವ ಕಾಳೇನಹಳ್ಳಿಯಲ್ಲಿ ತೋಟದ ಮನೆಯಿದ್ದು, ಇಲ್ಲಿ ಒಂದು ವಾರದಿಂದ ಮಹಿಳೆಯನ್ನು ಇರಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಯಾರೀತ ರಾಜ್‌ಗೋಪಾಲ್?: ರಾಜಗೋಪಾಲ್ ಅವರು ಹುಣಸೂರು ತಾಲ್ಲೂಕಿನ ಹೊಸೂರು ಕೊಡಗು ಕಾಲೊನಿ ಗ್ರಾಮದ ನಿವಾಸಿ. ರೇವಣ್ಣ ಲೋಕೋಪಯೋಗಿ ಸಚಿವರಾಗಿದ್ದಾಗ ಅವರ ಆಪ್ತ ಸಹಾಯಕ ಆಗಿದ್ದರು. ಸದ್ಯ ರೇವಣ್ಣ ಅವರಿಗೆ ಸಂಬಂಧಿಸಿದ ಪ್ರಮುಖ ಕಡತಗಳನ್ನು ನಿರ್ವಹಿಸುತ್ತಿದ್ದಾರೆ. ಏಳು ವರ್ಷದ ಹಿಂದೆ ತೋಟದ ಮನೆ ನಿರ್ಮಿಸಿದ್ದರು.

'ಸಂತ್ರಸ್ತೆ ಹೇಳಿಕೆ ಆಧರಿಸಿ ಮತ್ತೊಂದು ಪ್ರಕರಣ'

'ಅಪಹರಣವಾಗಿದ್ದ ಸಂತ್ರಸ್ತೆಯ ಪತ್ತೆಗಾಗಿ ಮೈಸೂರು, ಮಂಡ್ಯ, ಹಾಸನ ಹಾಗೂ ಬೆಂಗಳೂರು ಪೊಲೀಸರ ನೇತೃತ್ವದಲ್ಲಿ ಎಸ್‌ಐಟಿ ಅಧಿಕಾರಿಗಳು ಶೋಧ ಚುರುಕುಗೊಳಿಸಿದ್ದರು. ನಿರಂತರ ಕಾರ್ಯಾಚರಣೆ ನಡೆಸಿ, ಸಂತ್ರಸ್ತೆಯನ್ನು ರಕ್ಷಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸಂತ್ರಸ್ತೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಸುರಕ್ಷಿತ ಸ್ಥಳದಲ್ಲಿ ಇರಿಸಲಾಗಿದೆ. ಅವರಿಗೆ ಕೌನ್ಸೆಲಿಂಗ್ ಮಾಡಿಸಿ, ನಂತರ ಹೇಳಿಕೆ ಪಡೆಯಲಾಗುವುದು. ಅವರು ನೀಡುವ ಹೇಳಿಕೆ ಆಧರಿಸಿ, ಆರೋಪಿಗಳ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಿಸಿಕೊಳ್ಳಲು ತೀರ್ಮಾನಿಸಲಾಗಿದೆ. ನಂತರ, ನ್ಯಾಯಾಧೀಶರ ಸಮ್ಮುಖದಲ್ಲಿ ಸಿಆರ್‌ಪಿಸಿ 164 ಅಡಿ ಸಂತ್ರಸ್ತೆಯ ಹೇಳಿಕೆ ದಾಖಲಿಸಿಕೊಳ್ಳಲಾಗುವುದು' ಎಂದು ತಿಳಿಸಿದರು.

ಸಂತ್ರಸ್ತೆಯರ ಬೆಂಬಲಕ್ಕೆ ನಿಲ್ಲಿ: ರಾಹುಲ್ ಪತ್ರ

ಪ್ರಜಾವಾಣಿ ವಾರ್ತೆ

ರಾಹುಲ್ ಗಾಂಧಿ

ಬೆಂಗಳೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಅತ್ಯಾಚಾರಕ್ಕೊಳಗಾಗಿರುವ ಸಂತ್ರಸ್ತೆಯರ ನೆರವಿಗೆ ನಿಂತು, ಅವರಿಗೆ ಅಗತ್ಯವಿರುವ ಎಲ್ಲ ರೀತಿಯ ಬೆಂಬಲವನ್ನೂ ಒದಗಿಸಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಿದ್ದಾರೆ.

ಮುಖ್ಯಮಂತ್ರಿಯವರಿಗೆ ಶುಕ್ರವಾರ ಪತ್ರ ಬರೆದಿರುವ ರಾಹುಲ್, 'ನಮ್ಮ ತಾಯಂದಿರು ಮತ್ತು ಸಹೋದರಿಯರಿಗೆ ನ್ಯಾಯ ಒದಗಿಸಲು ಹೋರಾಟ ನಡೆಸಬೇಕಾದ ಜವಾಬ್ದಾರಿ ಕಾಂಗ್ರೆಸ್ ಪಕ್ಷದ ಮೇಲಿದೆ. ಇಂತಹ ಘೋರ ಕೃತ್ಯದಲ್ಲಿ ಭಾಗಿಯಾದ ಎಲ್ಲರನ್ನೂ ಕಾನೂನು ಕ್ರಮದ ವ್ಯಾಪ್ತಿಗೆ ತರಬೇಕಾದ ಸಾಮೂಹಿಕ ಹೊಣೆಗಾರಿಕೆ ನಮ್ಮ ಮೇಲಿದೆ' ಎಂದಿದ್ದಾರೆ.

ಪ್ರಜ್ವಲ್ ರೇವಣ್ಣ ಹಲವು ವರ್ಷಗಳಿಂದ ನೂರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ತನ್ನನ್ನು ಸಹೋದರ, ಮಗನಂತೆ ಭಾವಿಸಿದ್ದ ಹಲವು ಮಹಿಳೆಯರನ್ನೂ ಹಿಂಸಿಸಿರುವ ಪ್ರಜ್ವಲ್, ಆ ಮಹಿಳೆಯರ ಗೌರವವನ್ನು ಹಾಳು ಮಾಡಿದ್ದಾರೆ. ಅತ್ಯಾಚಾರ ನಡೆಸಿರುವ ವ್ಯಕ್ತಿಗೆ ಕಾನೂನಿನಲ್ಲಿ ಸಾಧ್ಯವಿರುವ ಅತ್ಯಂತ ಕಠಿಣ ಶಿಕ್ಷೆ ಆಗಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಬಿಜೆಪಿ ಮುಖಂಡ ಜಿ. ದೇವರಾಜೇಗೌಡ ಅವರು 2023ರ ಡಿಸೆಂಬರ್‌ನಲ್ಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದು ಪ್ರಜ್ವಲ್ ಅವರಿಂದ ನೂರಾರು ಮಹಿಳೆಯರ ಮೇಲೆ ಅತ್ಯಾಚಾರ ನಡೆದಿರುವ ಮಾಹಿತಿ ನೀಡಿದ್ದರು ಎಂಬುದು ತಿಳಿದು ನನಗೆ ಆಘಾತವಾಯಿತು. ಆರೋಪಿಯ ಲೈಂಗಿಕ ದೌರ್ಜನ್ಯದ ಚರಿತ್ರೆ ಮತ್ತು ಆತನೇ ವಿಡಿಯೊ ಚಿತ್ರೀಕರಿಸಿಕೊಳ್ಳುತ್ತಿದ್ದ ಬಗ್ಗೆಯೂ ದೂರಿನಲ್ಲಿ ಉಲ್ಲೇಖಿಸಿದ್ದರು. ಇಂತಹ ಘೋರ ಕೃತ್ಯದ ಬಗ್ಗೆ ಬಿಜೆಪಿ ನಾಯಕರಿಗೆ ಮಾಹಿತಿ ನೀಡಿದ್ದಾಗ್ಯೂ ಪ್ರಧಾನಿ ನರೇಂದ್ರ ಮೋದಿ ಅವರು ಸಾಮೂಹಿಕ ಅತ್ಯಾಚಾರಿಯ ಪರ ಮತ ಯಾಚಿಸಿರುವುದು ಇನ್ನೂ ಆಘಾತಕಾರಿ ಸಂಗತಿ' ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಪ್ರಜ್ವಲ್ ವಿದೇಶಕ್ಕೆ ಪರಾರಿಯಾಗಲು ಇಚ್ಛಾಪೂರ್ವಕವಾಗಿಯೇ ಸಹಕಾರ ನೀಡಿದೆ. ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವ ಆರೋಪಿಯನ್ನು ರಕ್ಷಿಸುತ್ತಿರುವ ಪ್ರಧಾನಿ ಮತ್ತು ಗೃಹ ಸಚಿವರನ್ನು ಕಟುವಾಗಿ ಖಂಡಿಸಬೇಕಿದೆ ಎಂದಿದ್ದಾರೆ.

'ಮಹಿಳೆಯರ ಮೇಲೆ ದೌರ್ಜನ್ಯ ಎಸಗಿರುವವರ ವಿರುದ್ಧ ತುಟಿ ಬಿಚ್ಚದೇ ಇರುವ ಇಂತಹ ಹಿರಿಯ ರಾಜಕಾರಣಿಯನ್ನು ನನ್ನ ಎರಡು ದಶಕಗಳ ಸಾರ್ವಜನಿಕ ಜೀವನದಲ್ಲಿ ಯಾವತ್ತೂ ನೋಡಿರಲಿಲ್ಲ. ಮಣಿಪುರದಲ್ಲೂ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದವರನ್ನು ಪ್ರಧಾನಿ ಬೆಂಬಲಿಸಿದ್ದರು' ಎಂದು ದೂರಿದ್ದಾರೆ.

ಕುಟುಂಬದ ಒಳಜಗಳದಿಂದ ಪ್ರಜ್ವಲ್ ಪ್ರಕರಣ ಬಹಿರಂಗ: ಡಿ.ಕೆ. ಶಿವಕುಮಾರ್

ಡಿ.ಕೆ. ಶಿವಕುಮಾರ್

ಬೆಂಗಳೂರು: ಜೆಡಿಎಸ್ ನಾಯಕರ ಕುಟುಂಬದ ಒಳಗಿನ ಜಗಳದಿಂದಾಗಿಯೇ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣ ಹೊರಬಂದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ವಿಡಿಯೊಗಳು ಬಹಿರಂಗವಾದ ಬಳಿಕ ಉಪ್ಪು ತಿಂದವರು ನೀರು ಕುಡಿಯಬೇಕು ಎಂದು ಹೇಳಿದವರು ಯಾರು? ರಾಜ್ಯದ ಜನರ ಕ್ಷಮೆ ಕೇಳಿದ್ದು ಯಾರು? ಅವರ ಕುಟುಂಬ ಮತ್ತು ನಮ್ಮ ಕುಟುಂಬ ಬೇರೆ ಬೇರೆ ಎಂದು ಹೇಳಿದವರು ಯಾರು? ಈ ಪ್ರಕರಣದಲ್ಲಿ ಕುಮಾರಸ್ವಾಮಿ ಏಕೆ ಪದೇಪದೇ ನಿಲುವು ಬದಲಿಸುತ್ತಿದ್ದಾರೆ' ಎಂದು ಪ್ರಶ್ನಿಸಿದರು.

'ಮೇ 7ರ ಬಳಿಕ ಪ್ರಕರಣ ಎಲ್ಲಿಗೆ ಹೋಗುತ್ತದೆ ಕಾದು ನೋಡಿ' ಎಂಬ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರ ಆರೋಪದ ಕುರಿತು ಪ್ರತಿಕ್ರಿಯಿಸಿದ ಅವರು, 'ಮೇ 7 ಅಲ್ಲ. ಅಲ್ಲಿವರೆಗೂ ಏಕೆ ಕಾಯಬೇಕು. ಇದರ ಮೂಲ, ಹಿನ್ನೆಲೆ ಏನು ಎಂಬುದನ್ನು ಬಿಚ್ಚಬೇಕಾ? ಇದು ಅವರ ಕುಟುಂಬದ ಆಂತರಿಕ ವಿಷಯ' ಎಂದರು.

ಜೆಡಿಎಸ್ ಶಾಸಕರನ್ನು ಕಾಂಗ್ರೆಸ್ ನಾಯಕರು ಸಂಪರ್ಕಿಸುತ್ತಿದ್ದಾರೆ ಎಂಬ ಆರೋಪದ ಬಗ್ಗೆ ಕೇಳಿದಾಗ, 'ಜೆಡಿಎಸ್ ಪಕ್ಷದ ಯಾರ ಜತೆಗೂ ನಾನು ಸಂಪರ್ಕದಲ್ಲಿಲ್ಲ. ಅವರ ಪಕ್ಷದ ವಿಚಾರಕ್ಕೆ ನಾನು ತಲೆ ಹಾಕುವುದಿಲ್ಲ. ಅವರ ಶಾಸಕರು, ಕುಟುಂಬದವರು ಹತಾಶರಾಗಿದ್ದಾರೆ. ಹೀಗಾಗಿ ಏನೇನೋ ಮಾತನಾಡುತ್ತಿದ್ದಾರೆ. ಅದಕ್ಕೆ ನಾನು ಪ್ರತಿಕ್ರಿಯಿಸುವುದಿಲ್ಲ' ಎಂದು ಉತ್ತರಿಸಿದರು.

ಒಕ್ಕಲಿಗ ನಾಯಕತ್ವ ಪಡೆಯಲು ಪ್ರಜ್ವಲ್ ಪ್ರಕರಣ ಹೊರ ಹಾಕಲಾಗಿದೆ ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನನಗೆ ಕಾಂಗ್ರೆಸ್ ನಾಯಕ ಎಂಬುದೇ ಸಾಕು. ಒಕ್ಕಲಿಗ ನಾಯಕನ ಪಟ್ಟ ಬೇಕಿಲ್ಲ. ಬಿಜೆಪಿಯವರು ಗಂಟೆಗೊಂದು ಮಾತನಾಡುತ್ತಿದ್ದಾರೆ. ಜೆಡಿಎಸ್‌ನವರೂ ಅದೇ ರೀತಿ ಮಾತನಾಡುತ್ತಿದ್ದಾರೆ' ಎಂದರು.

'ಒಕ್ಕಲಿಗನಾಗಿ ಹುಟ್ಟಿದ್ದೇನೆ. ಆ ಸಮಾಜಕ್ಕೆ ಗೌರವ ಕೊಡುವುದು, ಸಹಾಯ ಮಾಡುವುದು ನನ್ನ ಕರ್ತವ್ಯ ಅದನ್ನು ಮಾಡುತ್ತೇನೆ. ಆದರೆ, ಒಕ್ಕಲಿಗ ನಾಯಕ ಎಂದು ಕರೆಸಿಕೊಳ್ಳಲು ನನಗೆ ಇಷ್ಟವಿಲ್ಲ' ಎಂದರು.

ರ‍್ಯಾಲಿ ಕೊಪ್ಪಳದಲ್ಲಿ ಜಿಲ್ಲಾ ಸ್ವೀಪ್ ಸಮಿತಿಯಿಂದ ಮತದಾನದ ಜಾಗೃತಿಗಾಗಿ ಶನಿವಾರ ನಡೆದ ಬೈಕ್ ರ‍್ಯಾಲಿ ಅಶೋಕ ಸರ್ಕಲ್ ಬಳಿ ಸಾಗಿಬಂದಾಗ ಕಂಡು ಬಂದಿದ್ದು ಹೀಗೆ –ಪ್ರಜಾವಾಣಿ ಚಿತ್ರ

ರೇವಣ್ಣ ನಡವಳಿಕೆ ಸರಿ ಇರಲಿಲ್ಲ: ಶಿವರಾಮೇಗೌಡ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಶಾಸಕ ಎಚ್‌.ಡಿ. ರೇವಣ್ಣ ಅವರ ವರ್ತನೆ ಮೊದಲಿನಿಂದಲೂ ಸರಿ ಇರಲಿಲ್ಲ. 20 ವರ್ಷಗಳ ಹಿಂದೆ ನಾನು ಅವರೊಂದಿಗೆ ಲಂಡನ್‌ಗೆ ತೆರಳಿದ್ದಾಗ ಅಲ್ಲಿ ಕೆಟ್ಟ ನಡವಳಿಕೆ ತೋರಿಸಿ ತಗಲಾಕಿಕೊಂಡಿದ್ದರು' ಎಂದು ಮಾಜಿ ಸಂಸದ ಎಲ್‌.ಆರ್. ಶಿವರಾಮೇಗೌಡ ಹೇಳಿದರು.

'ಪ್ರಜ್ವಲ್ ರೇವಣ್ಣ ಇಷ್ಟೊಂದು ದೌರ್ಜನ್ಯ ನಡೆಸುತ್ತಿದ್ದರೂ ಅವರ ಅಪ್ಪ– ಅಮ್ಮ ಕತ್ತೆ ಕಾಯುತ್ತಿದ್ದರಾ? ಮಗನಿಗೆ ಆಗಲೇ ಬುದ್ಧಿ ಕಲಿಸಬೇಕಾಗಿತ್ತು. ಎಚ್‌.ಡಿ. ರೇವಣ್ಣ ಅವರ ನಡತೆಯೂ ಸರಿ ಇಲ್ಲ, ಹೀಗಾಗಿ ಮಗನ ತಪ್ಪುಗಳನ್ನು ಮುಚ್ಚಿಟ್ಟುಕೊಂಡಿದ್ದಾರೆ. ಗೂಗಲ್‌ನಲ್ಲಿ ಪಿ ಎಂದು ಟೈಪ್ ಮಾಡಿದರೆ ಪ್ರಜ್ವಲ್ ಹೆಸರು ಬರುತ್ತದೆ. ಇಂತಹ ದೊಡ್ಡ ಲೈಂಗಿಕ ಹಗರಣ ಬೇರೆಲ್ಲೂ ನಡೆದಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮಂಥವರನ್ನು ತುಳಿದ ಪಾಪದಿಂದ ದೇವೇಗೌಡರಿಗೆ ಇಂದು ಇಂತಹ ಪರಿಸ್ಥಿತಿ ಬಂದಿದೆ. ಕಂಚನಹಳ್ಳಿ ಗಂಗಾಧರ ಮೂರ್ತಿ ಕೊಲೆ ಪ್ರಕರಣದಲ್ಲಿ ನನ್ನದೇನೂ ತಪ್ಪಿಲ್ಲದಿದ್ದರೂ ಆಗ ದೇವೇಗೌಡರು ನನ್ನ ವಿರುದ್ಧ ಹೋರಾಡಿದ್ದರು. ಗಂಗಾಧರಮೂರ್ತಿ ಫೋಟೊ ಹೊತ್ತು 8 ಕಿ.ಮೀ ಪಾದಯಾತ್ರೆ ಮಾಡಿದ್ದರು. ಆಗ ನಾನು ಎಷ್ಟು ನೋವು ಅನುಭವಿಸಿದ್ದೆ ಗೊತ್ತಿದೆಯಾ' ಎಂದು ಪ್ರಶ್ನಿಸಿದರು.

'ಬ್ಲೂ ಫಿಲಂ ಮಾಡುವವರ ಬಳಿಯೂ ಇಷ್ಟೊಂದು ವಿಡಿಯೊಗಳು ಇರುವುದಿಲ್ಲ. ಎಂ.ಪಿಯಾಗಿ ಆತ ಐದು ವರ್ಷ ಬರೀ ಇದನ್ನೇ ಮಾಡಿದ್ದಾನೆ, ಬೇರೆ ಯಾವ ಕೆಲಸವನ್ನೂ ಮಾಡಿಲ್ಲ. ಎಚ್‌.ಡಿ.ಕುಮಾರಸ್ವಾಮಿ ಅವರು ಈಗ ಸಂತ್ರಸ್ತೆಯರ ಪರ ಹೋರಾಡಬೇಕು. ಬೆಂಗಳೂರಿನಿಂದ ಹಾಸನದವರೆಗೂ ಪಾದಯಾತ್ರೆ ನಡೆಸಬೇಕು. ಪ್ರಜ್ವಲ್ ಗೆದ್ದರೆ ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಫಲಿತಾಂಶಕ್ಕೆ ತಡೆ ನೀಡಬೇಕು' ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಒಂದೇ ವರ್ಷದಲ್ಲಿ ರೈತಪರ ಸರ್ಕಾರ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ರಾಣೆಬೆನ್ನೂರು (ಹಾವೇರಿ): 'ಕೇಂದ್ರದಲ್ಲಿ ಮೋದಿ ಪ್ರಧಾನಿಯಾದರೆ, ಒಂದೇ ವರ್ಷದಲ್ಲಿ ರಾಜ್ಯದಲ್ಲಿ ರೈತಪರ ಸರ್ಕಾರ ಬರಲಿದೆ' ಎಂದು ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲ್ಲೂಕಿನ ಹಲಗೇರಿ ಗ್ರಾಮದಲ್ಲಿ ಶನಿವಾರ ಪ್ರಚಾರಸಭೆಯಲ್ಲಿ ಮಾತನಾಡಿದರು.

'ಮೋದಿ ವೇಷಕ್ಕೆ ಕುರುಬರು ಯಾಮಾರಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಹೆಗಲ ಮೇಲೆ ಕಂಬಳಿ ಹಾಕಿಕೊಂಡ ಮೇಲೆ ಪ್ರಾಮಾಣಿಕರಾಗಿ ಇರಬೇಕು. ನಾನು ಮುಖ್ಯಮಂತ್ರಿ ಆಗಿದ್ದಾಗ ಕುರಿಗಾರರ ಸಂಘಗಳ ಮೂಲಕ ಕುರಿ ಖರೀದಿಗಾಗಿ ₹260 ಕೋಟಿ ವೆಚ್ಚದ ಯೋಜನೆ ಜಾರಿಗೊಳಿಸಿದ್ದೆ. ಕಾಂಗ್ರೆಸ್ ಸರ್ಕಾರ ಬಂದು ಅದನ್ನು ನಿಲ್ಲಿಸಿದೆ' ಎಂದು ಅವರು ಹೇಳಿದರು.

'ರದ್ದಾಗಿರುವ ಯೋಜನೆಯನ್ನು ಕೇಂದ್ರ ಸರ್ಕಾರದಿಂದ ಜಾರಿ ಮಾಡಿ ಹಾಲುಮತ ಸಮುದಾಯಕ್ಕೆ ಅನುಕೂಲ ಮಾಡಿಕೊಡುವೆ. ರಾಣೆಬೆನ್ನೂರಿನಲ್ಲಿ ಎರಡು ಏತ ನೀರಾವರಿ ಯೋಜನೆಗಳು, ಮೆಗಾ ಮಾರ್ಕೆಟ್ ಮಾಡಿದ್ದೇವೆ. ಅಮೃತ ಯೋಜನೆಯಡಿ ನಿರಂತರ ನೀರು ನೀಡುವ ಯೋಜನೆ ಮಾಡಿದ್ದೇವೆ' ಎಂದರು.

'ಕುರುಬ ಸಮುದಾಯದವರು ಬಸವರಾಜ ಬೊಮ್ಮಾಯಿಗೆ ಮತ ಹಾಕಬೇಡಿ' ಎಂಬ ಸಿ.ಎಂ ಹೇಳಿಕೆಗೆ ಪ್ರತಿಕ್ರಿಯಿಸಿ, 'ಯಾವುದೇ ಸಮುದಾಯ ಒಂದು ಪಕ್ಷದ ಪರವಾಗಿ ಇರುವುದಿಲ್ಲ. ಅದು ಸಿದ್ದರಾಮಯ್ಯ ಅವರಿಗೂ ಗೊತ್ತಿದೆ. ಇದರ ಅರ್ಥ ಏನು? ಅವರ ಅಭ್ಯರ್ಥಿಗೆ ಅವರ ಸಮಾಜ ಮತ ಹಾಕುತ್ತಿಲ್ಲ ಅಂತ ಅರ್ಥ. ಅಂದರೆ ಈಗಾಗಲೇ ಅವರು ಬಿಜೆಪಿಗೆ ಮತ ಹಾಕುತ್ತಿದ್ದಾರೆ ಅಂತ ಅರ್ಥ ಅಲ್ಲವಾ? ಎಂದು ಉತ್ತರಿಸಿದರು.

'ಗ್ಯಾರಂಟಿ ಮರೆತು ಪೆನ್‌ಡ್ರೈವ್‌ಗೆ ಕಾಂಗ್ರೆಸ್ ಮೊರೆ'

ಬೆಳಗಾವಿ: 'ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ ಮುಂದಿಟ್ಟುಕೊಂಡು ಕಾಂಗ್ರೆಸ್ ಕ್ಷುಲ್ಲಕ ರಾಜಕಾರಣ ಮಾಡುತ್ತಿದೆ. ಗ್ಯಾರಂಟಿ ಬಿಟ್ಟು ಪೆನ್‌ಡ್ರೈವ್ ಪ್ರಕರಣದಿಂದಲೇ ಚುನಾವಣೆಯಲ್ಲಿ ಗೆಲ್ಲುವ ಉಮೇದಿನಲ್ಲಿ ಇರುವ ಕಾಂಗ್ರೆಸ್‌ನವರಿಗೆ ಜನ ತಕ್ಕ ಪಾಠ ಕಲಿಸುವರು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ತಾಲ್ಲೂಕಿನ ಬಾಳೇಕುಂದ್ರಿ ಕೆ.ಎಚ್ ಗ್ರಾಮದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಲೈಂಗಿಕ ದೌರ್ಜನ್ಯ ಪ್ರಕರಣ ಬಿಜೆಪಿಗೆ ಮುಳುವಾಗಲಿ ಎಂಬ ಅಪೇಕ್ಷೆ ಕಾಂಗ್ರೆಸ್‌ದ್ದು. ಅದಕ್ಕೆ ಗ್ಯಾರಂಟಿ ಬಗ್ಗೆ ವಿಶ್ವಾಸ ಕಳೆದುಕೊಂಡು, ಪೆನ್‌ಡ್ರೈವ್ ನೆಚ್ಚಿಕೊಂಡಿದ್ದಾರೆ' ಎಂದರು.

'ಕಾನೂನಿನಂತೆ ಮಹಜರು ನಡೆಸಿಲ್ಲ'

ಪ್ರಜಾವಾಣಿ ವಾರ್ತೆ

ಹಾಸನ: 'ಹೊಳೆನರಸೀಪುರದ ಶಾಸಕ ಎಚ್‌.ಡಿ. ರೇವಣ್ಣ ಅವರ ಮನೆಯಲ್ಲಿ ಕಾನೂನು ಪ್ರಕಾರ ಸ್ಥಳದ ಮಹಜರು ಮಾಡಿಲ್ಲ. ಏಕಪಕ್ಷೀಯವಾಗಿ, ಪ್ರಭಾವಿ ವ್ಯಕ್ತಿಯ ಆದೇಶದಂತೆ ಮಹಜರು ಮಾಡಿದ್ದಾರೆ' ಎಂದು ಎಚ್‌.ಡಿ. ರೇವಣ್ಣ ಪರ ವಕೀಲ ಗೋಪಾಲ ಆರೋಪಿಸಿದ್ದಾರೆ.

ಶನಿವಾರ ರಾತ್ರಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸ್ಥಳದ ಮಹಜರು ನಡೆಸಿದ ನಂತರ ಅಂತಿಮ ವರದಿಯನ್ನು ಅಲ್ಲಿದ್ದವರಿಗೆ ಓದಿ ಹೇಳಬೇಕು. ವಿದ್ಯಾವಂತರಿದ್ದರೆ, ಓದಲು ಅವಕಾಶ ಕೊಡಬೇಕು. ನಂತರ ಸಹಿ ಪಡೆಯಬೇಕು. ಆದರೆ, ಎಸ್‌ಐಟಿ ಅಧಿಕಾರಿಗಳು ಕೇವಲ ಮನೆಯಲ್ಲಿ ಕುಳಿತು ಏಕಪಕ್ಷೀಯವಾಗಿ ಮಹಜರು ವರದಿಯನ್ನು ತಯಾರಿಸಿದ್ದಾರೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ

ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್(MDTC), ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016, ಕರ್ನಾಟಕ, ದೂರವಾಣಿ: 080-2565 0285, E-mail: kvicbang@gmail.com

ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್(MDTC), ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಕಮಿಷನ್(KVIC) ರೊಂದಿಗೆ ತೊಡಗಿಸಿಕೊಳ್ಳಲು ಪ್ರೊಫೆಷನಲ್ ಟ್ರೈನಿಂಗ್ ಅಸೋಸಿಯೇಟ್ಸ್ (PTA), ಮತ್ತು ಲೋಕಲ್ ಸ್ಕಿಲ್ ಟ್ರೈನಿಂಗ್ (LST) ಗಾಗಿ ಅರ್ಜಿಗಳ ಆಹ್ವಾನ.

ಸ್ಥಾಪಿತ ಸಮಿತಿಯಿಂದ ಆಯ್ಕೆಯಾದ ನಂತರ MDTC KVIC ಬೆಂಗಳೂರಿನ PTA ಗಳಾಗಿ ಎಂಪ್ಯಾನೆಲ್ ಮಾಡಲು ಅಪೇಕ್ಷಿತ ವ್ಯಕ್ತಿಗಳು / ವೃತ್ತಿಪರರು / ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರಕ್ಕೆ ಸಂಬಂಧಿಸಿದ ಕೌಶಲ್ಯ ಅಭಿವೃದ್ಧಿ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರಬೇಕು ಮತ್ತು ಸ್ಥಳೀಯ ಅಗತ್ಯತೆ ಮತ್ತು ಮಾರುಕಟ್ಟೆ ಪ್ರವೃತ್ತಿಗೆ ಅನುಗುಣವಾಗಿ ಹೆಚ್ಚಿನ ಉದ್ಯೋಗಾವಕಾಶ ಮತ್ತು ಕೌಶಲ್ಯದ ಅಗತ್ಯವನ್ನು ಹೊಂದಿರುವ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಒದಗಿಸಬೇಕು. ಈ ಕಾರ್ಯಕ್ರಮಗಳನ್ನು ಸ್ವಯಂ–ಹಣಕಾಸು ಮತ್ತು ಆದಾಯ ಹಂಚಿಕೆ ಆಧಾರದ ಮೇಲೆ ನಡೆಸಲಾಗುವುದು.

ಅರ್ಜಿದಾರರು NSDC/SSC/NCVETಗೆ ಅನುಗುಣವಾಗಿ ಇತ್ತೀಚಿನ ಯಂತ್ರೋಪಕರಣಗಳು, FAQ ಗಳು (ಮೆಷಿನರಿ ವಿಶೇಷಣಗಳು, ಕಚ್ಚಾ–ವಸ್ತು, ಉತ್ಪನ್ನ ಪ್ರಕ್ರಿಯೆ, ಪೂರ್ಣಗೊಳಿಸುವಿಕೆ, ಪ್ಯಾಕಿಂಗ್, ಮಾರ್ಕೆಟಿಂಗ್ ಇತ್ಯಾದಿ) ಸೇರಿದಂತೆ ಪ್ರಮಾಣಿತ ಮತ್ತು ಇತ್ತೀಚಿನ ಕೋರ್ಸ್ ವಿಷಯ ಮತ್ತು ಓದುವ ವಸ್ತುಗಳನ್ನು ಹೊಂದಿರಬೇಕು.

www.kvic.org.in ವೆಬ್‌ಸೈಟ್ ನ ಸುತ್ತೋಲೆಗಳ ವಿಭಾಗದ ಅಡಿಯಲ್ಲಿ ಆದೇಶ ಸಂಖ್ಯೆ 1777 ರಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಒದಗಿಸಲಾಗಿದೆ. ಇತರ ನಿಯಮಗಳು ಮತ್ತು ಷರತ್ತುಗಳನ್ನು ಎಂಪ್ಯಾನಲ್‌ಮೆಂಟ್ ಸಮಯದಲ್ಲಿ ಚರ್ಚಿಸಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 14.05.2024**. MDTC, KVIC, ಬೆಂಗಳೂರು ಯಾವುದೇ ಕಾರಣ ನೀಡದೆ PTA ಅರ್ಜಿಗಳನ್ನು ಆಯ್ಕೆ ಮಾಡುವ ಮತ್ತು ತಿರಸ್ಕರಿಸುವ ಅಧಿಕಾರ ಹೊಂದಿದೆ.

ಆಸಕ್ತ ವ್ಯಕ್ತಿಗಳು/ವೃತ್ತಿಪರರು/ಸಂಸ್ಥೆಗಳು ಈ ಕಛೇರಿಯಿಂದ ಪಡೆಯಬಹುದಾದ ನಿಗದಿತ ನಮೂನೆಯಲ್ಲಿ ತಮ್ಮ ವಿವರಗಳನ್ನು ಸಲ್ಲಿಸುವ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ 080–25650285 / 9449354126 / 8299377420 ಅನ್ನು ಸಂಪರ್ಕಿಸಬಹುದು ಅಥವಾ **kvicbang@gmail.com** ಗೆ ಇ–ಮೇಲ್ ಮಾಡಬಹುದು.

ಸಹಿ/– ನಿರ್ದೇಶಕರು / ಪ್ರಾಂಶುಪಾಲರು

ವಿನಯ್ ಕುರುಬ ಸಮುದಾಯದವರು ಎಂದು ಮತ ನೀಡಬೇಕಾ: ಸಿ.ಎಂ ಪ್ರಶ್ನೆ

'ನಾನು ಮುಖ್ಯಮಂತ್ರಿ ಆಗಿರಲು ಕಾಂಗ್ರೆಸ್ ಗೆಲ್ಲಿಸಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಲು ಕುರುಬ ಸಮುದಾಯದವರು ಕಾಂಗ್ರೆಸ್‌ಗೆ ಮತ ನೀಡಿ ಗೆಲ್ಲಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದರು.

ಲೋಕಸಭೆ ಚುನಾವಣೆ ಅಂಗವಾಗಿ ನಗರದಲ್ಲಿ ಶನಿವಾರ ಕುರುಬ ಸಮುದಾಯದವರು ಏರ್ಪಡಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, 'ನಾನು 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದರೆ ನೀವು ಕಾಂಗ್ರೆಸ್ ಬೆಂಬಲಿಸಬೇಕು. ರಾಜ್ಯದಲ್ಲಿ ಕಾಂಗ್ರೆಸ್‌ನ ಹೆಚ್ಚು ಅಭ್ಯರ್ಥಿಗಳು ಗೆದ್ದರೆ ಸಿದ್ದರಾಮಯ್ಯ ನಾಯಕತ್ವಕ್ಕೆ ಹೆಸರು ಬರುತ್ತದೆ ಅಲ್ಲವೇ? ನನ್ನ ನಾಯಕತ್ವ ಉಳಿಯುತ್ತದಲ್ಲವೇ?' ಎಂದರು.

'ಮುಖ್ಯಮಂತ್ರಿಯಾದ ನಿಮ್ಮ ಸಮುದಾಯದ ನಾನು ಬೇಕಾ, ಇಲ್ಲ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್‌ಕುಮಾರ್ ಬೇಕಾ ನೀವೇ ನಿರ್ಧರಿಸಿ. ವಿನಯ್‌ಗೆ ಒಂದೂ ಮತ ಕೊಡಬಾರದು' ಎಂದೂ ಅವರು ಇದೇ ವೇಳೆ ಕೋರಿದರು.

'ವಿನಯ್ ಕುರುಬ ಸಮುದಾಯದವರು ಎಂದು ಮತ ನೀಡಬೇಕಾ? ಒಂದು ಜಾತಿಯ ಮತದಿಂದ ಯಾವುದಾದರೂ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವೇ? ನೀವೇ ಹೇಳಿ. ಅವರಿಗೆ ಮುಂದೆ ಭವಿಷ್ಯವಿದೆ. ಈಗ ಸ್ಪರ್ಧೆಯಿಂದ ಹಿಂದೆ ಸರಿಯಿರಿ ಎಂದು ಹೇಳಿದರೂ ಕೇಳಲಿಲ್ಲ. ಅಂತಹವರಿಗೆ ನೀವು ಮತ ಹಾಕುವಿರಾ?' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯ ಹೇಳಿಕೆ ಆಶೀರ್ವಾದ ಇದ್ದಂತೆ'

'ಪಕ್ಷೇತರನಾದ ನನಗೆ ಮತ ನೀಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರುಬ ಸಮುದಾಯದವರಿಗೆ ಮನವಿ ಮಾಡಿದ್ದು ಆಶೀರ್ವಾದ ಇದ್ದಂತೆ. ಅವರು ನನ್ನ ಹೆಸರು ದೆಹಲಿ ಮಟ್ಟಕ್ಕೆ ತಲುಪಲು ಮಹತ್ವದ ಪಾತ್ರ ವಹಿಸಿದ್ದಾರೆ' ಎಂದು ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯಕುಮಾರ್ ಪ್ರತಿಕ್ರಿಯೆ ನೀಡಿದರು.

ಸಿದ್ದರಾಮಯ್ಯ ಹೇಳಿಕೆ ಬೆನ್ನಲ್ಲೇ ಸುದ್ದಿಗೋಷ್ಠಿ ನಡೆಸಿದ ಅವರು, 'ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಅನಿವಾರ್ಯತೆ ಇದೆ. ರಾಜಕಾರಣಿಯಾಗಿ ಆ ಹೇಳಿಕೆ ನೀಡಿದ್ದಾರೆ' ಎಂದರು.

'ಒಂದು ವೇಳೆ ವಿನಯ್‌ಕುಮಾರ್ ಗೆದ್ದರೆ ಮೋದಿಯಿಂದ ಫಂಡ್ ತರಲು ಆಗುವುದಿಲ್ಲ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ನನಗೆ ಗೆಲುವಿನ ಆಶೀರ್ವಾದವನ್ನು ಅವರು ಮಾಡಿದ್ದಾರೆ' ಎಂದ ಅವರು, 'ಕಾಗಿನೆಲೆ ಸ್ವಾಮೀಜಿ ಹಾಗೂ ಸಿದ್ದರಾಮಯ್ಯ ನನಗೆ ಸ್ಪರ್ಧಿಸದಂತೆ ಹೇಳಿದ್ದರು. ಕ್ಷೇತ್ರದ ಜನರ ಒತ್ತಾಯದಂತೆ ಸ್ಪರ್ಧಿಸಿದ್ದು, ಈಶ್ವರಪ್ಪ ಕುಮ್ಮಕ್ಕು ಅನ್ನೋದು ಸತ್ಯಕ್ಕೆ ದೂರವಾದದ್ದು' ಎಂದರು.

ಪಿಯು ನಿರ್ದೇಶನಾಲಯದ ಪ್ರಸ್ತಾವಕ್ಕೆ ಸಿಗದ ಸಮ್ಮತಿ • ವಿದ್ಯಾರ್ಥಿ, ಪೋಷಕರಿಗೆ ಹೊರೆಯಾಗದಂತೆ ಪರಿಷ್ಕರಣೆ

ಪದವಿಪೂರ್ವ: ಈ ವರ್ಷ ಶುಲ್ಕ ಏರಿಕೆ ಇಲ್ಲ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 2024–25ನೇ ಶೈಕ್ಷಣಿಕ ಸಾಲಿಗೆ ಪದವಿಪೂರ್ವ ಕಾಲೇಜುಗಳ ಪ್ರವೇಶ ಶುಲ್ಕ ಹೆಚ್ಚಳ ಮಾಡದಿರಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ಪಿಯು ಕಾಲೇಜುಗಳಲ್ಲಿನ ವಿವಿಧ ಕೋರ್ಸ್‌ಗಳ ಶುಲ್ಕ ಹೆಚ್ಚಳ ಮಾಡಲು ಅನುಮತಿ ಕೋರಿ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಪ್ರಸಕ್ತ ವರ್ಷದ ಜನವರಿಯಲ್ಲೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಇದುವರೆಗೂ ಸಮ್ಮತಿ ನೀಡದ ಕಾರಣ 2024–25ನೇ ಸಾಲಿಗೂ ಹಿಂದೆ ಇದ್ದಷ್ಟೇ ಶುಲ್ಕ ಮುಂದುವರಿಸಲು ನಿರ್ಧರಿಸಲಾಗಿದೆ.

ಪದವಿಪೂರ್ವ ಶಿಕ್ಷಣದ ನಿಯಮಗಳಂತೆ ಮೂರು ವರ್ಷಕ್ಕೊಮ್ಮೆ ಶುಲ್ಕ ಪರಿಷ್ಕರಣೆ ನಡೆಯುತ್ತದೆ. 2018-19ನೇ ಸಾಲಿನಲ್ಲಿ ಶುಲ್ಕ ಹೆಚ್ಚಳ ಮಾಡಲಾಗಿತ್ತು. ಕೋವಿಡ್ ನಂತರ ರಾಜ್ಯದ ಬಹುತೇಕ ಜನರ ಆರ್ಥಿಕ ಸ್ಥಿತಿಗತಿಗಳು ಏರುಪೇರಾದ ಕಾರಣ ಶುಲ್ಕ ಪರಿಷ್ಕರಣೆ ಮಾಡಿರಲಿಲ್ಲ. ಹಾಗಾಗಿ, ಐದು ವರ್ಷಗಳ ನಂತರ ಕಾಲೇಜುಗಳ ಪ್ರವೇಶ, ಬೋಧನಾ ಶುಲ್ಕ, ಪ್ರಯೋಗಾಲಯ, ಪ್ರಾಯೋಗಿಕ ಪರೀಕ್ಷೆ, ಹೊಸ ಕೋರ್ಸ್‌ಗಳ ಆರಂಭ, ವಿವಿಧ ಕೋರ್ಸ್‌ಗಳ ಸಂಯೋಜನೆಕ್ಕಾಗಿ ಶುಲ್ಕ ಹೆಚ್ಚಳ ಮಾಡಲು ಪದವಿಪೂರ್ವ ನಿರ್ದೇಶನಾಲಯ ಪರಿಷ್ಕೃತ ಪಟ್ಟಿ ಸಿದ್ಧಪಡಿಸಿತ್ತು.

> 2024–25ನೇ ಸಾಲಿಗೆ ಶುಲ್ಕ ಹೆಚ್ಚಳ ಮಾಡದಿರಲು ನಿರ್ಧರಿಸಲಾಗಿದೆ. ಹಿಂದಿನ ಶುಲ್ಕವನ್ನೇ ಮುಂದುವರಿಸಲು ಸೂಚಿಸಲಾಗಿದೆ.
> **ರಿತೇಶ್‌ಕುಮಾರ್ ಸಿಂಗ್,** ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಕಾಲೇಜುಗಳಲ್ಲಿ ಮೂಲಸೌಕರ್ಯ ಸುಧಾರಣೆಗೆ ಆದ್ಯತೆ, ಶೌಚಾಲಯಗಳ ನಿರ್ವಹಣೆ, ಸ್ವಚ್ಛತಾ ಕಾರ್ಯದ ವೆಚ್ಚವೂ ಸೇರಿದಂತೆ ಶುಲ್ಕ ಹೆಚ್ಚಳದ ಅಗತ್ಯವಿದೆ. ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಹೊರೆಯಾಗದಂತೆ ಪರಿಷ್ಕೃತ ಶುಲ್ಕಗಳನ್ನು ನಿಗದಿ ಮಾಡಲಾಗಿತ್ತು. 2013-14ರಲ್ಲಿ ಶೇ 30ರಷ್ಟು ಹಾಗೂ 2018-19ರಲ್ಲಿ ಶೇ 60ರಷ್ಟು ಶುಲ್ಕ ಹೆಚ್ಚಿಸಲಾಗಿತ್ತು. ಈ ಬಾರಿ ಕನಿಷ್ಠ ಶೇ 20ರಿಂದ 30ರಷ್ಟು ಹೆಚ್ಚಳ ಮಾಡಲು ಅನುಮತಿ ನೀಡಬೇಕು ಎಂದು ಪ್ರಸ್ತಾವದಲ್ಲಿ ವಿವರಿಸಲಾಗಿತ್ತು.

'ಶುಲ್ಕ ಹೆಚ್ಚಳ ಮಾಡದಿರುವುದು ಖಾಸಗಿ ಕಾಲೇಜುಗಳ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಆದರೆ, ಬಹುತೇಕ ಸರ್ಕಾರಿ ಕಾಲೇಜುಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಬಾಲಕಿಯರು ಹಾಗೂ ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ₹796 ಹಾಗೂ ಸಾಮಾನ್ಯ ವರ್ಗದವರಿಗೆ ₹1,466 ಇದೆ. 2018ರ ನಂತರ ಶುಲ್ಕ ಹೆಚ್ಚಳ ಮಾಡಿಲ್ಲ. ಈ ಬಾರಿ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಳ ಮಾಡಿದ್ದರೂ ಅನುಕೂಲವಾಗುತ್ತಿತ್ತು' ಎನ್ನುತ್ತಾರೆ ಸರ್ಕಾರಿ ಕಾಲೇಜು ಪ್ರಾಂಶುಪಾಲರು.

₹ 2,126 ಖಾಸಗಿ, ಅನುದಾನಿತ ಕಾಲೇಜುಗಳ ಪ್ರಥಮ ಪಿಯು ಶುಲ್ಕ
₹ 3,132 ಖಾಸಗಿ, ಅನುದಾನಿತ ಕಾಲೇಜುಗಳ ದ್ವಿತೀಯ ಪಿಯು ಶುಲ್ಕ
₹ 1,466 ಸರ್ಕಾರಿ ಕಾಲೇಜುಗಳ ಪ್ರಥಮ ಪಿಯು ಶುಲ್ಕ
₹ 1,806 ಸರ್ಕಾರಿ ಕಾಲೇಜುಗಳ ದ್ವಿತೀಯ ಪಿಯು ಶುಲ್ಕ
1,231 ಸರ್ಕಾರಿ ಪಿಯು ಕಾಲೇಜುಗಳು
825 ಅನುದಾನಿತ ಕಾಲೇಜುಗಳು
3,567 ಖಾಸಗಿ ಪಿಯು ಕಾಲೇಜುಗಳು

ವರ್ಷಕ್ಕೆ ₹5 ಲಕ್ಷ ಶುಲ್ಕ!

ಸರ್ಕಾರ ಕಾಲಕಾಲಕ್ಕೆ ನಿಗದಿ ಮಾಡುವ ಶುಲ್ಕ ಖಾಸಗಿ ಪಿಯು ಕಾಲೇಜುಗಳಿಗೂ ಅನ್ವಯವಾಗುತ್ತದೆ. ಪ್ರಯೋಗಾಲಯ ಶುಲ್ಕ ₹336, ಪ್ರಾಯೋಗಿಕ ಪರೀಕ್ಷೆ ಶುಲ್ಕ ₹330 ಸೇರಿ ಖಾಸಗಿ ಕಾಲೇಜುಗಳು ಪ್ರತಿ ವಿದ್ಯಾರ್ಥಿಯಿಂದ ಪ್ರಥಮ ಹಾಗೂ ದ್ವಿತೀಯ ಪಿಯುಗೆ ಕ್ರಮವಾಗಿ ₹2,126 ಹಾಗೂ ₹3,132 ಪಡೆಯಬೇಕು. ಅದರಲ್ಲೂ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಬೋಧನಾ ಶುಲ್ಕ ₹1,330ರಲ್ಲಿ ಅರ್ಧದಷ್ಟು ಹಣವನ್ನು ಸರ್ಕಾರಕ್ಕೆ ಜಮಾ ಮಾಡಬೇಕು.

ಪೋಷಕರ ಸಮ್ಮತಿ ಮೇರೆಗೆ ಆಯಾ ಸಂಸ್ಥೆಗಳು ಕಾಲೇಜು ಅಭಿವೃದ್ಧಿ ಶುಲ್ಕವನ್ನು ಪಡೆಯಲು ನಿಯಮಗಳಲ್ಲೇ ಅವಕಾಶ ಕಲ್ಪಿಸಲಾಗಿದೆ. ಆದರೆ, ರಾಜ್ಯದ ಬಹುತೇಕ ವಿಜ್ಞಾನ ಪದವಿ ಪೂರ್ವ ಕಾಲೇಜುಗಳು ವರ್ಷಕ್ಕೆ ₹1 ಲಕ್ಷದಿಂದ ₹5 ಲಕ್ಷದವರೆಗೂ ಪಡೆಯುತ್ತವೆ. ಆದರೆ, ಈ ಕುರಿತು ಹಲವು ಪೋಷಕರು ದೂರು ನೀಡಿದ್ದರೂ ಇಲಾಖೆ ಯಾವ ಕಾಲೇಜಿನ ವಿರುದ್ಧವೂ ಕ್ರಮಕೈಗೊಂಡಿಲ್ಲ. 'ಕಳೆದ ವರ್ಷ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 91 ಅಂಕಗಳಿಸಿದ್ದ ಮಗನಿಗೆ ಪ್ರತಿಷ್ಠಿತ ಖಾಸಗಿ ಕಾಲೇಜೊಂದರಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದ್ದೆವು. ಸೀಟು ಸಿಕ್ಕಿತು, ವಸತಿ ಸೇರಿ ವರ್ಷಕ್ಕೆ ₹4.75 ಲಕ್ಷ ಎಂದು ಹೇಳಿದರು. ಹಾಗಾಗಿ, ₹1.50 ಲಕ್ಷ ಕೊಟ್ಟು ಬೇರೆ ಕಾಲೇಜಿಗೆ ಸೇರಿಸಿದೆವು. ಈ ಕುರಿತು ಕಾಲೇಜಿನ ವಿರುದ್ಧ ಇಲಾಖೆಗೆ ದೂರು ನೀಡಿದರೂ ಕ್ರಮ ಕೈಗೊಳ್ಳಲಿಲ್ಲ' ಎನ್ನುತ್ತಾರೆ ಜೆ.ಪಿ.ನಗರದ ಪೋಷಕ ಆರ್.ಶಿವರಾಜ್.

ಸುದ್ದಿ 2 ನಿಮಿಷ

ಸಿ.ಎಂ ಸಿದ್ದರಾಮಯ್ಯ ವಿರುದ್ಧ ಆಯೋಗಕ್ಕೆ ಬಿಜೆಪಿ ದೂರು

ಬೆಂಗಳೂರು: 'ಮೋದಿ ಒಬ್ಬ ನಾಟಕಕಾರ' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ವಿರುದ್ಧ ಬಿಜೆಪಿ ಮುಖಂಡರು ಶನಿವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದರು.

ಮುಖ್ಯಮಂತ್ರಿ ತಮ್ಮ ಹೇಳಿಕೆ ಮೂಲಕ ಕಲಾವಿದರಿಗೆ ಅವಮಾನ ಮಾಡಿದ್ದಾರೆ. ದೇಶದ ಉನ್ನತ ಸ್ಥಾನದ ವ್ಯಕ್ತಿಗಳನ್ನು ಕುರಿತು ಇಂತಹ ಅವಹೇಳನಕಾರಿ ಮಾತನಾಡುವುದು ಸರಿಯಲ್ಲ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ರಾಜ್ಯ ಸಂಚಾಲಕ ಗಣೇಶ್ ರಾವ್ ಕೇಸರ್ಕರ್, ರಾಜ್ಯ ಸಹ-ಸಂಚಾಲಕ ವಿಕ್ರಂ ಸೂರಿ, ಹಿರಿಯ ಮುಖಂಡರಾದ ದತ್ತಗುರು ಹೆಗ್ಡೆ, ರಂಗಕರ್ಮಿಗಳಾದ ಪ್ರಶಸ್ತ ಕುಮಾರ್, ಪುನೀತ್, ರಂಗಭೂಮಿ ಕಲಾವಿದರಾದ ರವಿಕಿರಣ್, ಗೀತಾ, ರಂಗಕರ್ಮಿ ಆಶ್ ಬಸಾಪುರ್, ರಂಗಭೂಮಿ ನಟ ಅಭಿಷೇಕ್ ಕೊಡಿಯಲ್ ನಿಯೋಗದಲ್ಲಿ ಇದ್ದರು.

35 ಕೆ.ಜಿ ತೂಕದ ಮೀನು ಬಲೆಗೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಕೃಷ್ಣಾ ನದಿಯ ಹಳೆ ಚಿಮ್ಮಲಗಿ ಬಾವಾಸಾಬ್ ಗುಡ್ಡದ ಬಳಿ ಮೀನುಗಾರ ಮಾಸೂಬಾ ಕಟ್ಟಿಮನಿ ಎಂಬುವರಿಗೆ ಶನಿವಾರ 35 ಕೆ.ಜಿ ತೂಕದ ಕಟ್ಲಾ ಜಾತಿಯ ಬೃಹತ್ ಗಾತ್ರದ ಮೀನು ಬಲೆಗೆ ಸಿಕ್ಕಿದೆ.

'ಕೃಷ್ಣಾ ಹಿನ್ನೀರು ಕಡಿಮೆಯಾಗಿದ್ದು, ಆಳ ನೀರಿನಲ್ಲಿ ಬೃಹತ್ ಮೀನು ಇರುತ್ತವೆ. ಶುಕ್ರವಾರ ಸಂಜೆ ಬಲೆ ಹಾಕಿ, ಶನಿವಾರ ಬೆಳಿಗ್ಗೆ ಬಲೆ ತೆಗೆದಾಗ ಕಾಟ್ಲಾ ಜಾತಿಯ ಮೀನು ಸಿಕ್ಕಿತು. ಕಳೆದ ವರ್ಷ 30 ಕೆ.ಜಿಯ ಮೀನು ಸಿಕ್ಕಿತ್ತು' ಎಂದು ಮಾಸೂಬಾ ಕಟ್ಟಿಮನಿ 'ಪ್ರಜಾವಾಣಿ'ಗೆ ತಿಳಿಸಿದರು.'ಕಾಟ್ಲಾ ಮೀನಿಗೆ ಸ್ಥಳೀಯ ಮಾರುಕಟ್ಟೆಯಲ್ಲಿ ಬೇಡಿಕೆಯಿದೆ. ಅದಕ್ಕೆ 14 ಬಟ್ಟು ಅಗಲದ ಕಾಟ್ಲಾ ಮೀನು ಬೀಳುವ ಬಲೆ ಹಾಕಿದ್ದೆವು. ಸಂಬಂಧಿಕ ಕುಮಾರ ಸಾಳೆ ಸಹಕರಿಸಿದರು. ಮೀನನ್ನು ಕೆ.ಜಿಗೆ ₹ 170ರ ಸಗಟು ದರದಲ್ಲಿ ಒಟ್ಟು ₹ 6 ಸಾವಿರಕ್ಕೆ ಅರಳದಿನ್ನಿಯ ಮಹಾಂತೇಶ ಧನವೇ ಅವರಿಗೆ ಮಾರಿದೆವು' ಎಂದರು.

7ರಿಂದ ಐದು ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಇದೇ 7ರಿಂದ ಐದು ದಿನಗಳು ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು, ಮೈಸೂರು, ಚಾಮರಾಜ ನಗರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ತುಮಕೂರು ಜಿಲ್ಲೆಯ ಕೆಲವೆಡೆ ಭಾನುವಾರ ಹಗುರದಿಂದ ಸಾಧಾರಣ ಮಳೆಯಾಗುವ ಸಂಭವ ಇದೆ. ಕೆಲವೆಡೆ ಮಳೆಯ ಜತೆಗೆ ಬಿಸಿ ಗಾಳಿಯೂ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಬೀದರ್, ಬೆಳಗಾವಿ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ಯಾದಗಿರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಬಳ್ಳಾರಿ, ಬೆಂಗಳೂರು ನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಶಾಖದ ಅಲೆಯ ವಾತಾವರಣವು ಹೆಚ್ಚಾಗಿರುತ್ತದೆ. ಸೋಮವಾರವೂ ಹಲವೆಡೆ ಬಿಸಿ ಗಾಳಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರದಂದು ಬೆಂಗಳೂರು ಸೇರಿ ರಾಜ್ಯದ 15 ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಬಳಿಕ ರಾಜ್ಯದಾದ್ಯಂತ ವಿಸ್ತರಿಸಲಿದ್ದು, ಮಳೆಯ ತೀವ್ರತೆಯೂ ಹೆಚ್ಚಾಗುವ ಸಂಭವವಿದೆ. ಬುಧವಾರದಂದು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮೈಸೂರು, ಕೊಡಗು ಮತ್ತು ಮಂಡ್ಯ ಜಿಲ್ಲೆಯಲ್ಲಿ ಬಿರುಗಾಳಿ ಹಾಗೂ ಆಲಿಕಲ್ಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ರಾಜ್ಯದಲ್ಲಿ ಶನಿವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಹಲವು ಜಿಲ್ಲೆಗಳಲ್ಲಿ ಬಿಸಿ ಗಾಳಿ ಕಾಣಿಸಿಕೊಂಡಿದೆ. 12 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿದೆ. ರಾಯಚೂರಿನಲ್ಲಿ ಗರಿಷ್ಠ ಉಷ್ಣಾಂಶ 45.2 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ ಎಂದು ಇಲಾಖೆ ತಿಳಿಸಿದೆ.

ಮಹದೇಶ್ವರ ಬೆಟ್ಟದಲ್ಲಿ ಮಳೆ

ಚಾಮರಾಜನಗರ: ಜಿಲ್ಲೆಯ ಪ್ರಸಿದ್ಧ ಯಾತ್ರಾ ಸ್ಥಳ ಮಹದೇಶ್ವರ ಬೆಟ್ಟ, ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಶನಿವಾರ ಮಳೆಯಾಗಿದೆ.

ಮಹದೇಶ್ವರ ಬೆಟ್ಟದಲ್ಲಿ ಸಂಜೆ 4 ಗಂಟೆಯಿಂದ ಅರ್ಧ ಗಂಟೆ ಕಾಲ ಬಿರುಸಿನ ಮಳೆಯಾಗಿದ್ದು, ಬಿಸಿಲಿನಿಂದ ಕಾದಿದ್ದ ಇಳೆಗೆ ತಂಪೆರೆಯಿತು. ಹನೂರು ಪಟ್ಟಣ ಹಾಗೂ ಸುತ್ತಮುತ್ತ 30 ನಿಮಿಷಗಳಿಗೂ ಹೆಚ್ಚು ಕಾಲ ಹದವಾಗಿ ಮಳೆಯಾಗಿದೆ.

ಮಂಗಳೂರು ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ವಿಮಾನ ನಿಲ್ದಾಣದಲ್ಲಿ ಅಲ್ಲಲ್ಲಿ ಮತ್ತು ವಿಮಾನದ ಒಳಗಡೆ ಸ್ಫೋಟಕಗಳನ್ನು ಇರಿಸಲಾಗಿದೆ. ಅವುಗಳನ್ನು ಸ್ಫೋಟಿಸಿ ಜೀವ ಹಾನಿ ಮಾಡುತ್ತೇವೆ' ಎಂಬುದಾಗಿ ಬಜಪೆಯಲ್ಲಿರುವ ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಇ–ಮೇಲ್‌ಗೆ ಅಪರಿಚಿತ ವ್ಯಕ್ತಿಯೊಬ್ಬರು ಬೆದರಿಕೆ ಸಂದೇಶ ಕಳುಹಿಸಿದ್ದು, ಈ ಬಗ್ಗೆ ಬಜಪೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಏಪ್ರಿಲ್ 29ರಂದು ಬೆಳಿಗ್ಗೆ 9.37ಕ್ಕೆ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಇ–ಮೇಲ್‌ಗೆ ಬೆದರಿಕೆ ಸಂದೇಶ ಬಂದಿದೆ. ಈ ಬಗ್ಗೆ ವಿಮಾನ ನಿಲ್ದಾಣದ ಮುಖ್ಯ ಭದ್ರತಾ ಅಧಿಕಾರಿ ಮೋನಿಶಾ ಕೆ.ಜಿ. ಅವರು ದೂರು ನೀಡಿದ್ದು, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 507ರನ್ವಯ (ಬೆದರಿಕೆ ಸಂದೇಶ) ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಇಲ್ಲಿನ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

'ಈ ಕುರಿತು ತನಿಖೆ ನಡೆಸಿದಾಗ ಅಪರಿಚಿತ ವ್ಯಕ್ತಿಯು ಮಂಗಳೂರು ವಿಮಾನ ನಿಲ್ದಾಣದ ಜೊತೆಗೆ ದೇಶದ ಸುಮಾರು 25ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳಿಗೆ ಬೆದರಿಕೆ ಸಂದೇಶಗಳನ್ನು ಕಳುಹಿಸಿರುವುದು ಕಂಡುಬಂದಿದೆ. ಆರೋಪಿಯನ್ನು ಪತ್ತೆ ಹಚ್ಚಲು ಕ್ರಮವಹಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ಅಪರಿಚಿತ ವ್ಯಕ್ತಿಯು ವಿಮಾನ ನಿಲ್ದಾಣಗಳ ಇ–ಮೇಲ್‌ಗಳು ಹಾಗೂ ವಿಮಾನನಿಲ್ದಾಣಗಳ ಭದ್ರತಾ ಏಜೆನ್ಸಿಯಾಗಿರುವ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಗೆ ಸಂಬಂಧಿಸಿದ ಇ–ಮೇಲ್‌ಗಳೂ ಸೇರಿ 90ಕ್ಕೂ ಹೆಚ್ಚು ಇ–ಮೇಲ್ ವಿಳಾಸಗಳಿಗೆ ಬೆದರಿಕೆ ಸಂದೇಶ ಕಳುಹಿಸಿದ್ದಾನೆ' ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

'ವಿಮಾನ ನಿಲ್ದಾಣದಲ್ಲಿ ಅಲ್ಲಲ್ಲಿ ಯಾರಿಗೂ ಕಾಣಿಸದಂತೆ ಬಾಂಬ್‌ಗಳನ್ನು ಇರಿಸಿದ್ದೇನೆ. ಕೆಲ ವಿಮಾನಗಳಲ್ಲಿ ಮೂರು ಕಡೆ ಸ್ಫೋಟಕಗಳನ್ನು ಇಟ್ಟಿದ್ದೇನೆ. ಕೆಲವೇ ಗಂಟೆಗಳಲ್ಲಿ ಅವುಗಳನ್ನು ಸ್ಫೋಟಿಸಲಿದ್ದೇನೆ. ಎಲ್ಲೆಡೆ ರಕ್ತಪಾತವಾಗುವಂತೆ ಖಂಡಿತ ಮಾಡುತ್ತೇನೆ. ಎಷ್ಟು ಸಾಧ್ಯವೋ ಅಷ್ಟು ಜನರ ಪ್ರಾಣ ತೆಗೆಯುತ್ತೇನೆ. 'ಟೆರರೈಸರ್ಸ್111' ಬಳಗವು ಈ ಮಾರಣಹೋಮದ ಹಿಂದೆ ಇದೆ' ಎಂಬ ಒಕ್ಕಣೆ ಇ– ಮೇಲ್‌ನಲ್ಲಿತ್ತು ಎಂದು ಮೂಲಗಳು ತಿಳಿಸಿವೆ.

ಎಚ್.ಡಿ.ಕೋಟೆ ಗಂಡು ಹುಲಿ ಸೆರೆ

ಮುಂಜಾಗ್ರತಾ ಕ್ರಮವಾಗಿ ಅರಿವಳಿಕೆ ಚುಚ್ಚುಮದ್ದು ನೀಡಿ ಹುಲಿ ಸೆರೆ

ಎಚ್.ಡಿ.ಕೋಟೆ: ತಾಲ್ಲೂಕಿನ ಮಳಲಿ ಗ್ರಾಮದ ಕಬಿನಿ ಹಿನ್ನೀರಿನ ಸಮೀಪದ ಡಿಸ್ಕವರಿ ವಿಲೇಜ್ ರೆಸಾರ್ಟ್ ಪಕ್ಕ ಎಂಟು ವರ್ಷದ ಗಂಡು ಹುಲಿಯನ್ನು ಶನಿವಾರ ಸೆರೆ ಹಿಡಿಯಲಾಗಿದೆ.

ಹುಲಿಯು ಜನ ವಸತಿ ಪ್ರದೇಶದಲ್ಲಿ ಮಧ್ಯಾಹ್ನದಿಂದಲೇ ಕಾಣಿಸಿಕೊಂಡಿದ್ದರಿಂದ, ಮುಂಜಾಗ್ರತಾ ಕ್ರಮವಾಗಿ ಅರಣ್ಯಾಧಿಕಾರಿಗಳು ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿದರು. 'ಹುಲಿಯು ಸಫಾರಿ ವಲಯದಲ್ಲೂ ಕಾಣಿಸಿಕೊಳ್ಳುತ್ತಿತ್ತು' ಎಂದು ಡಿಸಿಎಫ್ ಹರ್ಷಕುಮಾರ್ ಚಿಕ್ಕನರಗುಂದ ಅವರು ತಿಳಿಸಿದ್ದಾರೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

6 ದಶಕದ ರಾಜಕಾರಣಕ್ಕೆ ಬಸವರಾಜು ವಿದಾಯ

ಪ್ರಜಾವಾಣಿ ವಾರ್ತೆ

ತುಮಕೂರು: ಜಿಲ್ಲೆಯ ಹಿರಿಯ ರಾಜಕಾರಣಿ, ಸಂಸದ ಜಿ.ಎಸ್.ಬಸವರಾಜು ಅವರು ತಮ್ಮ ಆರು ದಶಕಗಳ ಸುದೀರ್ಘ ರಾಜಕೀಯ ಜೀವನಕ್ಕೆ ವಿದಾಯ ಹೇಳಿದ್ದಾರೆ.

ರಾಜಕಾರಣದಲ್ಲಿ ಸಾಕಷ್ಟು ದಾಖಲೆ: ನಿರ್ಮಿಸಿ, ಹಲವು ಏಳುಬೀಳು ಕಂಡ ಈ ಹಿರಿಯ ರಾಜಕಾರಣಿ ಸಕ್ರಿಯ ರಾಜಕಾರಣದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ.

ಜಿ.ಎಸ್. ಬಸವರಾಜು

86ನೇ ವಸಂತಕ್ಕೆ ಕಾಲಿಟ್ಟಿರುವ ಬಸವರಾಜು ತಮ್ಮ ಜನ್ಮದಿನದಂದೇ (ಮೇ 4) ಅಧಿಕೃತವಾಗಿ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ.

ಕಾಂಗ್ರೆಸ್ ಮೂಲಕ ರಾಜಕೀಯ ಜೀವನ ರೂಪಿಸಿಕೊಂಡಿದ್ದ ಬಸವರಾಜ್ ಅವರು, ಬಿಜೆಪಿಯಲ್ಲಿ ಇದೀಗ ತಮ್ಮ ರಾಜಕೀಯ ಬದುಕಿಗೆ ವಿದಾಯ ಹೇಳಿದ್ದಾರೆ.

ಪರಿಶಿಷ್ಟ ಮಹಿಳೆ ಮನೆಗೆ ಯದುವೀರ್ ಭೇಟಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ನಗರದ ಗೋನಾಳು ವಾರ್ಡ್‌ನ ಪರಿಶಿಷ್ಟ ಜಾತಿಯ ಮಹಿಳೆ ದುರ್ಗಮ್ಮ ಅವರ ಮನೆಗೆ ಶನಿವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ ನೀಡಿದರು. ಅವರಿಗೆ ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರವನ್ನು ಸ್ಮರಣಿಕೆಯಾಗಿ ನೀಡಿ, ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಯದುವೀರ್ ಮಾತನಾಡಿ, 'ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಪರ ಪ್ರಚಾರಕ್ಕೆ ಬಂದಿರುವ ನಾನು ದುರ್ಗಮ್ಮ ಅವರ ಮನೆಗೆ ಭೇಟಿ ನೀಡಿ, ಎಳನೀರು ಸೇವಿಸಿದೆ. ನಾವೆಲ್ಲರೂ ಅವರೊಂದಿಗೆ ಇದ್ದೇವೆ ಎಂಬ ಸಂದೇಶ ನೀಡಿರುವೆ. ಇದು ನನಗೆ ಅತ್ಯಂತ ಸಂತೋಷದ ವಿಷಯ' ಎಂದರು.

'ಸಂವಿಧಾನ, ಅಂಬೇಡ್ಕರ್ ಮತ್ತು ಕನ್ನಡ ನಾಡಿಗೆ ನಿಕಟ ಸಂಬಂಧವಿದೆ. ಸಂವಿಧಾನ ರಚನೆ ವೇಳೆ ಅಂಬೇಡ್ಕರ್ ಅವರು ಮೈಸೂರಿನ ಪ್ರಜಾಪ್ರತಿನಿಧಿ ವ್ಯವಸ್ಥೆ, ಮಿಲ್ಲರ್ ವರದಿಯನ್ನು ಉಲ್ಲೇಖಿಸಿದ್ದರು. ಮಹಾರಾಜರ ಕಾಲದಲ್ಲಿ ಮೈಸೂರಿನಲ್ಲಿ ಮೀಸಲಾತಿ ತರಲಾಗಿತ್ತು. ನಾವು ಎಲ್ಲ ವರ್ಗದ ಜನರ ಜೊತೆಗೆ ಇದ್ದವರು. ಆಗ ಮೈಸೂರು ರಾಜ್ಯದವರು ಎಂದು ಹೆಜ್ಜೆ ಹಾಕಿದ್ದೆವು. ಈಗ ಎಲ್ಲರೂ ಒಂದಾಗಿ, ಕನ್ನಡಿಗರು, ಭಾರತೀಯರಾಗಿ ಮುನ್ನಡೆಯಬೇಕಿದೆ' ಎಂದರು.

ಬಳ್ಳಾರಿಯ ಗೋನಾಳು ವಾರ್ಡ್‌ನ ದುರ್ಗಮ್ಮ ಮನೆಗೆ ಶನಿವಾರ ಭೇಟಿ ನೀಡಿದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಸ್ಮರಣಿಕೆಯಾಗಿ ನೀಡಲಾಯಿತು
– ಪ್ರಜಾವಾಣಿ ಚಿತ್ರ: ಮುರಳಿಕಾಂತ ರಾವ್

ತುಂಬಾ ಖುಷಿಯಾಗಿದೆ: 'ಮೈಸೂರಿನ ರಾಜವಂಶಸ್ಥರು ನಮ್ಮ ಮನೆಗೆ ಭೇಟಿ ನೀಡಿದ್ದು ತುಂಬಾ ಖುಷಿಯಾಗಿದೆ. ಮೈಸೂರಿಗೆ ಹೋದರೂ ಅವರು ಕಾಣಲು ಸಿಗಲ್ಲ. ಈ ಬಾರಿ ನಡೆಯಲಿರುವ ಮೈಸೂರು ದಸರಾಕ್ಕೆ ಆಹ್ವಾನಿಸುವುದಾಗಿ ಅವರು ತಿಳಿಸಿದರು. ಮನೆ ನೋಡಿ, ನಮ್ಮ ಮನೆ ಮಂದಿಯ ಬಗ್ಗೆ ವಿಚಾರಿಸಿದರು' ಎಂದು ದುರ್ಗಮ್ಮ ಸಂತಸ ವ್ಯಕ್ತಪಡಿಸಿದರು.

ಬಿಸಿಲಿನ ಝಳ: ಐವರ ಸಾವು

ಒಂದನೇ ಪುಟದಿಂದ...

ದುರ್ಗಮ್ಮ ಹನುಮಂತಪ್ಪ ಉಪ್ಪಾರ (69) ಅವರು ಮಗಳನ್ನು ಭೇಟಿಯಾಗಲು ಶುಕ್ರವಾರ ಸುಂಕಾಪುರಕ್ಕೆ ಹೋದಾಗ ಕೊನೆಯುಸಿರೆಳೆದಿದ್ದಾರೆ.

ರಾಯಚೂರು ತಾಲ್ಲೂಕಿನ ಜಾಲಿಬೆಂಚಿ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ದೇವಸ್ಥಾನಕ್ಕೆ ಹೋಗಿ ಮನೆಗೆ ಬಂದ ಹನುಮಂತ (45) ಸ್ವಲ್ಪ ಹೊತ್ತಿನಲ್ಲೇ ಜೀವ ಬಿಟ್ಟಿದ್ದಾರೆ.

'ಸಿಂಧನೂರು ತಾಲ್ಲೂಕಿನಲ್ಲಿ ಮೃತಪಟ್ಟವರ ಸಾವಿಗೆ ಪ್ರಖರ ಬಿಸಿಲೊಂದೇ ಕಾರಣ ಅಲ್ಲ. ಮೂವರು ಅನಾರೋಗ್ಯದಿಂದಲೂ ಬಳಲುತ್ತಿದ್ದರು ಎಂಬ ಮಾಹಿತಿ ಬಂದಿದೆ. ಇಬ್ಬರು ನಿರ್ಜಲೀಕರಣದಿಂದ ಕೊನೆಯುಸಿರೆಳೆದಿರುವ ಸಾಧ್ಯತೆ ಇದೆ. ವೈದ್ಯಕೀಯ ತಂಡ ಈ ಬಗ್ಗೆ ಪರಿಶೀಲನೆ ನಡೆಸುತ್ತಿದೆ' ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಸುರೇಶ ಬಾಬು ತಿಳಿಸಿದ್ದಾರೆ.

ಮಸ್ಕಿಯಲ್ಲಿ ಶುಕ್ರವಾರ ನಡೆದುಕೊಂಡು ಹೋಗುತ್ತಿದ್ದ ಬಿಎಂಟಿಸಿ ಬಸ್ ನಿರ್ವಾಹಕ ಬಿಸಿಲಿನ ತಾಪದಿಂದ ರಸ್ತೆಯಲ್ಲೇ ಕುಸಿದು ಬಿದ್ದು ಮೃತಪಟ್ಟಿದ್ದರು.

ಶಕ್ತಿನಗರದ ವೈಟಿಪಿಎಸ್ ಮುಂಭಾಗ ರಾಯಚೂರು–ಹೈದರಾಬಾದ್ ಹೆದ್ದಾರಿಯಲ್ಲಿ ಶನಿವಾರ ಚಲಿಸುತ್ತಿದ್ದ ಕಾರು ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡು ಸುಟ್ಟುಹೋಗಿದೆ.

'ಜಿಲ್ಲೆಯಲ್ಲಿ ಒಂದು ವಾರ 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಮೇ 8ರವರೆಗೂ ಬಿಸಿಲಿನ ತಾಪ ಹಾಗೂ ಬಿಸಿಗಾಳಿ ಮುಂದುವರಿಯಲಿದೆ' ಎಂದು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಹವಾಮಾನ ಘಟಕದ ಶಾಂತಪ್ಪ ದುತ್ತರಗಾಂವಿ ತಿಳಿಸಿದ್ದಾರೆ.

ರಾಯಚೂರು ನಗರದ ಮಾರುಕಟ್ಟೆ ಪ್ರದೇಶದಲ್ಲಿ ಬಿಸಿಲಿನಿಂದ ರಕ್ಷಣೆ ಪಡೆಯಲು ವ್ಯಕ್ತಿಯೊಬ್ಬರು ಕೊಡೆ ಹಿಡಿದು ಸಾಗಿದರು

ಮಾಹಿತಿ ಆಯೋಗ: ಡಾ.ಸತ್ಯನ್ ಮುಖ್ಯ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಾಹಿತಿ ಆಯೋಗದ ಪ್ರಭಾರ ಮುಖ್ಯ ಆಯುಕ್ತರಾಗಿ ಡಾ.ಎಚ್.ಸಿ.ಸತ್ಯನ್ ಅವರು ನೇಮಕವಾಗಿದ್ದಾರೆ.

ಸತ್ಯನ್ ಅವರು ಪ್ರಸ್ತುತ ಮಾಹಿತಿ ಆಯೋಗದ ಆಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೇ 6 ರಿಂದ ಮುಖ್ಯ ಆಯುಕ್ತರ ಪ್ರಭಾರ ವಹಿಸಿಕೊಳ್ಳಲಿದ್ದು, ಕಾಯಂ ಮುಖ್ಯ ಆಯುಕ್ತರ ನೇಮಕದವರೆಗೆ ಆ ಸ್ಥಾನದಲ್ಲಿ ಮುಂದುವರಿಯಲಿದ್ದಾರೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

₹ 130 ಕೋಟಿ ಮೌಲ್ಯದ ಬಿಟ್‌ಕಾಯಿನ್ ವಶ: ಬಂಧನ

ನವದೆಹಲಿ (ಪಿಟಿಐ): ಮಾದಕ ದ್ರವ್ಯ ಕಳ್ಳಸಾಗಣೆಗೆ ಸಂಬಂಧಿಸಿದಂತೆ ನಡೆದಿದೆ ಎನ್ನಲಾದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಅಮೆರಿಕದ ಕೋರಿಕೆ ಮೇರೆಗೆ ಉತ್ತರಾಖಂಡ ಮೂಲದ ವ್ಯಕ್ತಿಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿ, ಆತನಿಂದ ₹130 ಕೋಟಿ ಮೌಲ್ಯದ ಬಿಟ್ ಕಾಯಿನ್ ವಶಕ್ಕೆ ಪಡೆದಿದ್ದಾರೆ.

ಪರ್ವಿಂದರ್ ಸಿಂಗ್ ಬಂಧಿತ ಆರೋಪಿ. ಉತ್ತರಾಖಂಡದ ನೈನಿತಾಲ್ ಜಿಲ್ಲೆಯ ಹಲ್ದ್‌ವಾನಿ ಬಳಿ ಏಪ್ರಿಲ್ 27ರಂದು ಈತನನ್ನು ವಶಕ್ಕೆ ಪಡೆಯಲಾಗಿದೆ.

'ಡಾರ್ಕ್ ವೆಬ್ ಮೂಲಕ ಐರೋಪ್ಯ ರಾಷ್ಟ್ರಗಳಲ್ಲಿ ಮಾದಕ ದ್ರವ್ಯ ಕಳ್ಳಸಾಗಣೆ ಮಾಡಿ ಹಣ ಸಂಪಾದಿಸಿದ್ದೆ ಎಂದಿರುವ ಈತ, ಶರಣಗಾಲು ಒಪ್ಪಿಕೊಂಡ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಅಮೆರಿಕದ ಕೋರಿಕೆ ಮೇರೆಗೆ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಪರ್ವಿಂದರ್ ಸಿಂಗ್, ಆತನ ಸಹೋದರ ಬನಮೀತ್ ಸಿಂಗ್ ಹಾಗೂ ಇನ್ನಿತರರು ಸೇರಿ 'ಸಿಂಗ್ ಡಿಟಿಒ (ಡ್ರಗ್ ಟ್ರಾಫಿಕಿಂಗ್ ಆರ್ಗನೈಸೇಷನ್)' ಎಂಬ ಏಜೆನ್ಸಿಯನ್ನು ನಡೆಸುತ್ತಿದ್ದರು. ತಮ್ಮ ಡಾರ್ಕ್ ವೆಬ್‌ಗೆ ಮಾರಾಟಗಾರರ ಅಂತರ್ಜಾಲ ತಾಣವನ್ನು ಬಳಸುತ್ತಿದ್ದರು. ಜತೆಗೆ ಬಹಳಷ್ಟು ಜಾಹೀರಾತುಗಳನ್ನು ಬಳಸಿಕೊಂಡು ತಮ್ಮದೇ ಜಾಲದ ಮೂಲಕ ಮಾದಕ ದ್ರವ್ಯವನ್ನು ಅಮೆರಿಕ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಮಾರಾಟ ಮಾಡುತ್ತಿದ್ದರು' ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

'ಪರ್ವಿಂದರ್‌ನನ್ನು ವಶಕ್ಕೆ ಪಡೆದ ಸಂದರ್ಭದಲ್ಲಿ ಆತನ ಬಳಿ ₹130.48 ಕೋಟಿ ಮೌಲ್ಯದ ಬಿಟ್ ಕಾಯಿನ್ ವಶಕ್ಕೆ ಪಡೆಯಲಾಗಿದೆ. ಆತನ ಸಹೋದರ 'ಸಿಲ್ಕ್ ರೋಡ್ 1', 'ಆಲ್ಫಾ ಬೇ' ಹಾಗೂ 'ಹನ್ಸಾ' ಎಂಬ ಡಾರ್ಕ್ ವೆಬ್ ನಡೆಸುತ್ತಿದ್ದ. ಇದೇ ಪ್ರಕರಣದಲ್ಲಿ ಸಾವಿರಾರು ಕೋಟಿ ರೂಪಾಯಿ ಮೊತ್ತದ ಬಿಟ್ ಕಾಯಿನ್‌ಗಳನ್ನು ಅಮೆರಿಕದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಇ.ಡಿ ಹೇಳಿದೆ.

ಬರಿದಾದ ಶಿಂಷಾ ನದಿ, ಕೆರೆ, ಕಟ್ಟೆಗಳ ಒಡಲು, ಮಾಯವಾದ ಹಸಿರು ಪರಿಸರ

ಕೊಕ್ಕರೆಗಳಿಗೆ ನೀರು–ಆಹಾರ ಕೊರತೆ

• ಅಣ್ಣೂರು ಜಗದೀಶ್

ಭಾರತೀನಗರ (ಮಂಡ್ಯ ಜಿಲ್ಲೆ): ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿಂಷಾ ನದಿಯು ಬರಗಾಲದಿಂದ ಬರಿದಾಗಿದ್ದು, ಸಮೀಪದ ಪ್ರಸಿದ್ಧ ಕೊಕ್ಕರೆ ಬೆಳ್ಳೂರು ಪಕ್ಷಿಧಾಮದ ಕೊಕ್ಕರೆಗಳು ನೀರು– ಆಹಾರದ ಕೊರತೆಯಿಂದ ಪರಿತಪಿಸುತ್ತಿವೆ.

ನದಿ ತೀರದ ಹಸಿರು ಪರಿಸರ, ಮರ– ಗಿಡಗಳ ಸಾಲು, ಸಮೀಪದ ಕೆರೆ, ಕಟ್ಟೆಗಳಲ್ಲಿ ದೊರೆಯುತ್ತಿದ್ದ ಮೀನುಗಳು ಕೊಕ್ಕರೆಗಳಿಗೆ ಪ್ರಾಕೃತಿಕವಾದ ಆವಾಸಸ್ಥಾನ ನಿರ್ಮಿಸಿತ್ತು. ಅವುಗಳ ಸಂತಾನೋತ್ಪತ್ತಿಗೂ ಹೇಳಿ ಮಾಡಿಸಿದಂತಿತ್ತು. ಆದರೆ ಈಗ ವಾಸಕ್ಕೆ ತೊಂದರೆಯಾಗಿದೆ. ಪ್ರತಿ ವರ್ಷ ಒಂದು ಸಾವಿರಕ್ಕೂ ಹೆಚ್ಚು ಪೆಲಿಕಾನ್ (ಹೆಜ್ಜಾರ್ಲೆ) ಹಾಗೂ 2 ಸಾವಿರಕ್ಕೂ ಹೆಚ್ಚು ಪೇಂಟೆಡ್ ಸ್ಟಾರ್ಕ್ (ಬಣ್ಣದ ಕೊಕ್ಕರೆ) ಭೇಟಿ ನೀಡುತ್ತವೆ.

ಗ್ರಾಮದ ಸುತ್ತಮುತ್ತಲಿನ ತೈಲೂರು ಕೆರೆ, ಮದ್ದೂರುಕೆರೆ, ಸೂಳೆಕೆರೆ, ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಬ್ಯಾರೇಜ್ ಹಾಗೂ ಮಾದರಹಳ್ಳಿ ಕೆರೆ ಬತ್ತಿದೆ. ಕೆರೆಯಲ್ಲಿ ಮೀನುಗಳ ಸಾಕಣೆಯೂ ನಡೆಯದಿರುವುದರಿಂದ, ಕೊಕ್ಕರೆಗಳ ಪ್ರಮುಖ ಆಹಾರವೂ ಇಲ್ಲವಾಗಿದೆ.

ಡಿಸೆಂಬರ್‌ನಲ್ಲಿ ಬಂದು ಜೂನ್‌ವರೆಗೂ ಇಲ್ಲಿಯೇ ಬೀಡು ಬಿಡುತ್ತಿದ್ದ ಹೆಜ್ಜಾರ್ಲೆಗಳು ಈಗ ನಿರ್ಗಮಿಸಿವೆ. ಸದ್ಯ ಪಕ್ಷಿಧಾಮದಲ್ಲಿ ಸಾವಿರಾರು ಬಣ್ಣದ ಕೊಕ್ಕರೆಗಳು ಸಂಕಷ್ಟದಲ್ಲೇ ದಿನ ದೂಡುತ್ತಿವೆ. ಮರಿಗಳು ನೀರಿನ ಕೊರತೆಯಿಂದ ಮರದ ಮೇಲಿಂದ ಬೀಳುತ್ತಿವೆ. ನದಿಯ ಮರಳು ತೆಗೆಸಿ ನೀರಿನ ಬುಗ್ಗೆಗಾಗಿ ಅರಣ್ಯ ಇಲಾಖೆ ನಡೆಸಿದ ಹುಡುಕಾಟವೂ ವಿಫಲವಾಗಿದೆ.

'ಕೊಕ್ಕರೆಗಳ ಅನುಕೂಲಕ್ಕಾಗಿ ವನದಾಸಿ ಕಟ್ಟೆ ನಿರ್ಮಿಸಲಾಗಿತ್ತು. ಈಗ ಅಲ್ಲಿಯೂ ನೀರಿಲ್ಲ. ಸಮೀಪದ ಸರ್ಕಾರಿ ಶಾಲೆಯ ಕೊಳವೆ ಬಾವಿಯಿಂದ ನೀರು ತುಂಬಿಸಲು ಯೋಜಿಸಲಾಗಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ಬರಗಾಲ ಬಂದಾಗಲೆಲ್ಲಾ ಇದೇ ಪರಿಸ್ಥಿತಿ ಇರುತ್ತದೆ. 1998ರ ಬರ ಪರಿಸ್ಥಿತಿಯ ನಂತರ, ಇಲ್ಲಿಗೆ ಬರುತ್ತಿದ್ದ ಕೊಕ್ಕರೆಗಳ ಸಂಖ್ಯೆ ಕ್ಷೀಣಿಸಿತ್ತು. ಇದೇ ಪರಿಸ್ಥಿತಿ ಮುಂದುವರಿದರೆ ಕೊಕ್ಕರೆಗಳೇ ಬಾರದ ಪರಿಸ್ಥಿತಿ ಎದುರಾಗಬಹುದು' ಎಂದು ಪಕ್ಷಿಪ್ರಿಯರು ಹೇಳುತ್ತಾರೆ.

'ಪಕ್ಷಿಗಳಿಗೆ ನೀರು, ಆಹಾರ ಪೂರೈಸುವ ಶಾಶ್ವತ ಯೋಜನೆಯೊಂದನ್ನು ಜಾರಿಗೊಳಿಸಬೇಕು ಎಂಬ ನಮ್ಮ ಬೇಡಿಕೆಯು ವರ್ಷಗಳಾದರೂ ಸಾಕಾರಗೊಂಡಿಲ್ಲ. ಪಕ್ಷಗಳು ಬಳಲಿ ಮರದಿಂದ ಬೀಳುವುದನ್ನು ನೋಡಲು ಆಗುತ್ತಿಲ್ಲ. ಅವುಗಳಿಗೆ ಕುಡಿಯಲು ನೀರನ್ನಾದರೂ ಪೂರೈಸಬೇಕು' ಎಂದು ಹೆಜ್ಜಾರ್ಲೆ ಬಳಗದ ಮುಖ್ಯಸ್ಥ ಲಿಂಗೇಗೌಡ ಒತ್ತಾಯಿಸಿದರು.

ಮಂಡ್ಯ ಜಿಲ್ಲೆಯ ಕೊಕ್ಕರೆ ಬೆಳ್ಳೂರಿನಲ್ಲಿ ಸಂತಾನೋತ್ಪತ್ತಿಗಾಗಿ ಆಗಮಿಸಿರುವ ಪೈಂಟೆಡ್ ಸ್ಟಾರ್ಕ್ ಕೊಕ್ಕರೆಗಳು ಮರದಲ್ಲಿ ಆಶ್ರಯ ಪಡೆದಿರುವುದು

ಅತ್ಯಾಚಾರ; ಆರೋಪಿ ಕಾಲಿಗೆ ಗುಂಡೇಟು

ಹುಬ್ಬಳ್ಳಿ: ನಗರದ ಬಾಲಕಿ ಮೇಲೆ ಅತ್ಯಾಚಾರವೆಸಗಿ ಗರ್ಭ ಧರಿಸಲು ಕಾರಣನಾದ ಆರೋಪಿ ಸದ್ದಾಂ ಹುಸೇನ್ ಶುಕ್ರವಾರ ತಡರಾತ್ರಿ ಪೊಲೀಸ್ ವಶದಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ, ಆತನ ಕಾಲಿಗೆ ಗುಂಡು ಹಾರಿಸಲಾಗಿದೆ.

'ತನಿಖೆಗಾಗಿ ಠಾಣೆಗೆ ಕರೆದೊಯ್ಯುವಾಗ, ಸದ್ದಾಂ ಹುಸೇನ್ ಪೊಲೀಸರಿಗೆ ಇರಿದು ತಪ್ಪಿಸಿಕೊಳ್ಳಲು ಯತ್ನಿಸಿದ. ಆಗ ಗುಂಡು ಹಾರಿಸಲಾಯಿತು. ಗಾಯಾಳುಗಳಾದ ಸದ್ದಾಂ ಹುಸೇನ್, ಪೊಲೀಸ್ ಇನ್‌ಸ್ಪೆಕ್ಟರ್ ಸಂಗಮೇಶ ಹಾಗೂ ಕಾನ್‌ಸ್ಟೆಬಲ್ ಅರುಣ್ ಅವರನ್ನು ಕಿಮ್ಸ್‌ಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಬಂಧನ ಪ್ರಕ್ರಿಯೆಗೆ ಪೂರಕವಾಗಿ ರಾತ್ರಿ 12.10ಕ್ಕೆ ಸುತಗಟ್ಟಿ ಗ್ರಾಮಕ್ಕೆ ಪೊಲೀಸರು ತೆರಳಿದ ಸಂದರ್ಭದಲ್ಲಿ ಸದ್ದಾಂ ಹುಸೇನ್ ಬಟನ್ ಚಾಕುವಿನಿಂದ ಹಲ್ಲೆ ನಡೆಸಿ, ತಪ್ಪಿಸಿಕೊಳ್ಳಲು ಯತ್ನಿಸಿದ. ಆತ್ಮರಕ್ಷಣೆಗಾಗಿ ವಿದ್ಯಾಗಿರಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸಂಗಮೇಶ ಡಿಂಗಿನಾಳ ಒಂದು ಗುಂಡು ಗಾಳಿಯಲ್ಲಿ ಹಾರಿಸಿ, ಇನ್ನೊಂದು ಗುಂಡನ್ನು ಅವನ ಎಡಗಾಲಿಗೆ ಹೊಡೆದರು' ಎಂದು ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ತಿಳಿಸಿದ್ದಾರೆ.

ನಿದ್ರೆಗೆ ಜಾರಿದ ಸ್ಟೇಷನ್ ಮಾಸ್ಟರ್: ರೈಲು ಸಂಚಾರ ವಿಳಂಬ

ನವದೆಹಲಿ (ಪಿಟಿಐ): 'ಗ್ರೀನ್ ಸಿಗ್ನಲ್' ನೀಡಬೇಕಿದ್ದ ಸ್ಟೇಷನ್ ಮಾಸ್ಟರ್ ಕರ್ತವ್ಯದ ಅವಧಿಯಲ್ಲಿ ನಿದ್ರಿಸಿದ್ದ ಕಾರಣ, ಪಟ್ನಾ– ಕೋಟಾ ಎಕ್ಸ್‌ಪ್ರೆಸ್ ರೈಲು ಮೇ 3ರಂದು ಉತ್ತರ ಪ್ರದೇಶದ ಇಟಾವಾ ಬಳಿಯ ಉದಿ ಮೋರ್ ರೋಡ್ ನಿಲ್ದಾಣದಲ್ಲಿ ಸುಮಾರು ಅರ್ಧ ಗಂಟೆ ಕಾಯಬೇಕಾಯಿತು.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಆಗ್ರಾ ರೈಲ್ವೆ ವಲಯವು, ಈ ನಿರ್ಲಕ್ಷ್ಯಕ್ಕೆ ಕಾರಣ ನೀಡುವಂತೆ ಸ್ಟೇಷನ್ ಮಾಸ್ಟರ್‌ಗೆ ಸೂಚನೆ ನೀಡಿದೆ.

'ಸ್ಟೇಷನ್ ಮಾಸ್ಟರ್ ಅವರಿಂದ ವಿವರಣೆ ಕೇಳಲಾಗಿದ್ದು, ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಆಗ್ರಾ ರೈಲ್ವೆ ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ಪ್ರಶಸ್ತಿ ಶ್ರೀವಾಸ್ತವ ತಿಳಿಸಿದ್ದಾರೆ.

ಈಗಾಗಲೇ ಸ್ಟೇಷನ್ ಮಾಸ್ಟರ್ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದು, ಲೋಪಕ್ಕೆ ಕ್ಷಮೆಯಾಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಸಿಜೆ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಚೆನ್ನೈ: 'ದಿ ರಿಪೋರ್ಟರ್ಸ್ ಕಲೆಕ್ಟಿವ್'ನ ತಪಸ್ಯ. ಟಿ ಮತ್ತು ನಿತಿನ್ ಸೇಥಿ ಅವರು ತನಿಖಾ ಪತ್ರಿಕೋದ್ಯಮ ವಿಭಾಗದಲ್ಲಿ 'ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ' (ಎಸಿಜೆ) ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಖಿಲೇಶ್ ಪಾಂಡೆ ಅವರಿಗೆ ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ ವಿಭಾಗದಲ್ಲಿ ನೀಡಲಾಗುವ 'ಕೆ.ಪಿ. ನಾರಾಯಣ ಕುಮಾರ್ ಸ್ಮಾರಕ ಪ್ರಶಸ್ತಿ' ಸಂದಿದೆ.

ಅರಣ್ಯ ಸಂರಕ್ಷಣೆ ಮತ್ತು ಸ್ಥಳೀಯ ಹಕ್ಕುಗಳ ಮೇಲೆ ವಾಣಿಜ್ಯ ಹಿತಾಸಕ್ತಿಗಳಿಗೆ ಕೇಂದ್ರ ಸರ್ಕಾರ ಹೇಗೆ ಒಲವು ತೋರಿತ್ತು. ಕೇಂದ್ರ ಸರ್ಕಾರ ತಾನು ಹೇಳಿದ್ದ ಉದ್ದೇಶಗಳಿಂದ ಹೇಗೆ ಹಿಂದೆ ಸರಿಯಿತು ಎಂಬುದನ್ನು 'ದಿ ರಿಪೋರ್ಟರ್ಸ್ ಕಲೆಕ್ಟಿವ್'ನ ತಪಸ್ಯ. ಟಿ ಮತ್ತು ನಿತಿನ್ ಸೇಥಿ ಅವರ ತನಿಖಾ ವರದಿ 'ಫಾರೆಸ್ಟ್ಸ್ ಫಾರ್ ಪ್ರಾಫಿಟ್ಸ್' ಸರಣಿಯು ಬಹಿರಂಗಪಡಿಸಿತ್ತು.

ಅಖಿಲೇಶ್ ಪಾಂಡೆ ಅವರ 'ಡೇಂಜರಸ್ ವಾಟರ್ಸ್' ಲೇಖನವು 'ದಿ ಕ್ಯಾರವಾನ್' ಮ್ಯಾಗಜೀನ್‌ನಲ್ಲಿ ಪ್ರಕಟವಾಗಿತ್ತು.'ಫ್ರಂಟ್‌ಲೈನ್ ಮ್ಯಾಗಜೀನ್'ನಲ್ಲಿ ಪ್ರಕಟವಾದ 'ದಿ ಹಂಗ್ರಿ ರಿವರ್ ಇನ್ ವೆಸ್ಟ್‌ಬೆಂಗಾಲ್ ಈಟ್ಸ್ ಅಪ್ ಹೋಮ್ಸ್ ಓವರ್‌ನೈಟ್' ಶೀರ್ಷಿಕೆಯ ಚಿತ್ರಗಳ ಸರಣಿಗಾಗಿ ಛಾಯಾಚಿತ್ರ ಪತ್ರಕರ್ತ ಸುದೀಪ್ ಮೈತಿ ಅವರಿಗೆ 'ಆಶಿಶ್ ಯೆಚೂರಿ ಸ್ಮಾರಕ ಪ್ರಶಸ್ತಿ' ಸಂದಿದೆ.

ಸಮಿತಿ ಅಧ್ಯಕ್ಷರಾದ ರಾಹುಲ್ ಜೇಕಬ್, ಸದಸ್ಯರಾದ ಅಮ್ಮು ಜೋಸೆಫ್, ಗೌತಮ್ ಭಾಟಿಯಾ ಅವರಿದ್ದ ತೀರ್ಪುಗಾರರ ತಂಡವು ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡಿತು. ಎಸಿಜೆ ಆವರಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮ ದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತನಿಖಾ ಪತ್ರಿಕೋದ್ಯಮ ಪ್ರಶಸ್ತಿಗೆ ₹2 ಲಕ್ಷ, ಸಾಮಾಜಿಕ ಪರಿಣಾಮ ಪ್ರಶಸ್ತಿ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಿಗೆ ಫಲಕದೊಂದಿಗೆ ₹1 ಲಕ್ಷ ನಗದು ನೀಡಲಾಯಿತು. ಎಸಿಜೆ ಪ್ರಶಸ್ತಿಗಳ ಸಮಿತಿಗೆ 101 ಸುದ್ದಿ ಸಂಸ್ಥೆಗಳಿಂದ 275 ಅರ್ಜಿಗಳು ಸಲ್ಲಿಕೆಯಾಗಿದ್ದವು ಎಂದು ಪ್ರಕಟಣೆ ತಿಳಿಸಿದೆ.

ಸಿರಾಜ್ ಅಮೋಘ ಬೌಲಿಂಗ್ • ಫಫ್ ಮಿಂಚಿನ ಬ್ಯಾಟಿಂಗ್ • ಗುಜರಾತ್ ಟೈಟನ್ಸ್‌ಗೆ ಮತ್ತೊಂದು ಸೋಲು

ಏಳನೇ ಸ್ಥಾನಕ್ಕೆ ಜಿಗಿದ ಬೆಂಗಳೂರು

• ಗಿರೀಶ ದೊಡ್ಡಮನಿ

ವಿಕೆಟ್ ಗಳಿಸಿದ ಮೊಹಮ್ಮದ್ ಸಿರಾಜ್ ಅವರನ್ನು ಅಭಿನಂದಿಸಿದ ಸಹ ಆಟಗಾರರು – ಪ್ರಜಾವಾಣಿ ಚಿತ್ರಗಳು/ರಂಜು ಪಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 25 ರನ್‌ಗಳ ಅಂತರದಲ್ಲಿ 6 ವಿಕೆಟ್ ಕಳೆದುಕೊಂಡಾಗ ಮೌನ ಆವರಿಸಿತ್ತು. ಆತಿಥೇಯರಿಗೆ ಸೋಲುವ ಭಯ ಕಾಡಿತ್ತು.

ಮೊಹಮ್ಮದ್ ಸಿರಾಜ್, ಯಶ್ ದಯಾಳ್ ಮತ್ತು ವೈಶಾಖ ವಿಜಯಕುಮಾರ್ ಅವರ ಅಮೋಘ ಬೌಲಿಂಗ್ ಹಾಗೂ ಫಫ್ ಡುಪ್ಲೆಸಿಯ ಮಿಂಚಿನ ಅರ್ಧಶತಕ ವ್ಯರ್ಥವಾಗುವಂತೆ ಭಾಸವಾಗಿತ್ತು. ಗುಜರಾತ್ ಟೈಟನ್ಸ್ ತಂಡದ ಎಡಗೈ ವೇಗಿ ಜೋಶುವಾ ಲಿಟಲ್ (45ಕ್ಕೆ4) ಮಿಂಚಿನ ದಾಳಿಯಿಂದಾಗಿ ಬೆಂಗಳೂರಿನ ಅಭಿಮಾನಿಗಳ ಮುಖದಲ್ಲಿ ಆತಂಕ ಮನೆಮಾಡಿತ್ತು.

ಆದರೆ 'ಫಿನಿಷರ್' ದಿನೇಶ್ ಕಾರ್ತಿಕ್ ತಂಡವನ್ನು ಗೆಲುವಿನ ದಡ ಸೇರಿಸಿದರು. ಗುಜರಾತ್ ಟೈಟನ್ಸ್ ಎದುರು 4 ವಿಕೆಟ್‌ಗಳಿಂದ ಗೆದ್ದ ಆರ್‌ಸಿಬಿ ಅಂಕಪಟ್ಟಿಯಲ್ಲಿ ಏಳನೇ ಸ್ಥಾನಕ್ಕೇರಿತು. ಟೂರ್ನಿಯ ಆರಂಭದಿಂದಲೂ ಕೊನೆಯ ಸ್ಥಾನದಲ್ಲಿದ್ದ ಡುಪ್ಲೆಸಿ ಬಳಗವು ಮೂರು ಸ್ಥಾನಗಳ ಬಡ್ತಿ ಪಡೆದು ಅಭಿಮಾನಿಗಳಿಗೆ ಸಂತಸದ ಸವಿಯುಣಿಸಿತು.

ಸುಮಾರು 30 ಸಾವಿರ ಪ್ರೇಕ್ಷಕರು ಸೇರಿದ್ದ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬೆಂಗಳೂರು ತಂಡದ ಬೌಲರ್‌ಗಳು ಪಾರಮ್ಯ ಮೆರೆದರು. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಸ್ಥಾನ ಪಡೆದ ಖುಷಿಯಲ್ಲಿರುವ ವೇಗಿ ಮೊಹಮ್ಮದ್ ಸಿರಾಜ್ (29ಕ್ಕೆ2) ಅವರ ದಾಳಿಯಿಂದಾಗಿ ಗುಜರಾತ್ ಟೈಟನ್ಸ್ ಪವರ್‌ಪ್ಲೇನಲ್ಲಿ ದೊಡ್ಡ ಆಘಾತ ಅನುಭವಿಸಿತು. ಈ ವರ್ಷದ ಐಪಿಎಲ್ ಟೂರ್ನಿಯಲ್ಲಿ ಪಂದ್ಯವೊಂದರ ಪವರ್‌ಪ್ಲೇನಲ್ಲಿ ಅತ್ಯಂತ ಕನಿಷ್ಠ ಮೊತ್ತವನ್ನು (3ಕ್ಕೆ23) ಗುಜರಾತ್ ಟೈಟನ್ಸ್ ದಾಖಲಿಸಿತು.

ಗುಜರಾತ್ ಗಾಯದ ಮೇಲೆ ಕೊನೆಯ ಹಂತದ ಓವರ್‌ಗಳಲ್ಲಿ ಎಡಗೈ ವೇಗಿ ಯಶ್ ದಯಾಳ್ (21ಕ್ಕೆ2) ಹಾಗೂ ಬೆಂಗಳೂರು ಹುಡುಗ ವೈಶಾಖ ವಿಜಯಕುಮಾರ್ (23ಕ್ಕೆ3) ಬರೆ ಎಳೆದರು. ಇದರಿಂದಾಗಿ ಗುಜರಾತ್ ತಂಡವು 19.3 ಓವರ್‌ಗಳಲ್ಲಿ 147 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು.

ಇದಕ್ಕುತ್ತರವಾಗಿ ಆರ್‌ಸಿಬಿ ತಂಡವು 13.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 162 ರನ್ ಗಳಿಸಿತು. ಆರಂಭಿಕ ಜೋಡಿ ಫಫ್ ಡುಪ್ಲೆಸಿ (64; 23ಎ, 4X10, 6X3) ಮತ್ತು ವಿರಾಟ್ ಕೊಹ್ಲಿ (42; 27ಎ, 4X2, 6X4) ಮೊದಲ ವಿಕೆಟ್‌ಗೆ 92 ರನ್ ಸೇರಿಸಿದರು. ಈ ರನ್‌ಗಳು ಪವರ್ ಪ್ಲೇನಲ್ಲಿಯೇ ಬಂದಿದ್ದು ವಿಶೇಷ.

ಆದರೆ ಆರನೇ ಓವರ್‌ನಲ್ಲಿ ಜೋಶುವಾ ಎಸೆತದಲ್ಲಿ ಫಫ್ ಔಟಾಗುವುದರೊಂದಿಗೆ ಇನಿಂಗ್ಸ್ ನಾಟಕೀಯ ತಿರುವು ಪಡೆಯಿತು. ಗುಜರಾತ್ ತಂಡದ ಜೊಶುವಾ ತಮ್ಮ ಬಳಗದಲ್ಲಿ ಗೆಲುವಿನ ಭರವಸೆ ಮೂಡಿಸಿದರು.

ಪವರ್‌ಪ್ಲೇ ನಲ್ಲಿ ದಾಖಲಾದ ಕಡಿಮೆ ಮೊತ್ತಗಳು (2024)

ರನ್	ಪಂದ್ಯ	ಸ್ಥಳ
3ಕ್ಕೆ23	ಗುಜರಾತ್ ಟೈಟನ್ಸ್– ಆರ್‌ಸಿಬಿ	ಬೆಂಗಳೂರು
3ಕ್ಕೆ27	ಪಂಜಾಬ್ ಕಿಂಗ್ಸ್–ಸನ್‌ರೈಸರ್ಸ್	ಮುಲ್ಲನಪುರ
4ಕ್ಕೆ28	ಮುಂಬೈ ಇಂಡಿಯನ್ಸ್–ಲಖನೌ ಸೂಪರ್‌ಜೈಂಟ್ಸ್	ಲಖನೌ
4ಕ್ಕೆ30	ಗುಜರಾತ್ ಟೈಟನ್ಸ್–ಡೆಲ್ಲಿ ಕ್ಯಾಪಿಟಲ್ಸ್	ಅಹಮದಾಬಾದ್
2ಕ್ಕೆ31	ರಾಜಸ್ಥಾನ ರಾಯಲ್ಸ್–ಡೆಲ್ಲಿ ಕ್ಯಾಪಿಟಲ್ಸ್	ಜೈಪುರ

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ವಿಲ್ ಜ್ಯಾಕ್ಸ್ (1 ರನ್) ನೂರ್ ಅಹಮದ್ ಬೌಲಿಂಗ್‌ನಲ್ಲಿ ಔಟಾದರು. ರಜತ್ ಪಾಟೀದಾರ್, ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಬ್ಬರನ್ನೂ ಎಂಟನೇ ಓವರ್‌ನಲ್ಲಿ ಜೋಶುವಾ ಔಟ್ ಮಾಡಿದರು. ಕ್ಯಾಮರಾನ್ ಗ್ರೀನ್ ಅವರನ್ನು 10ನೇ ಓವರ್‌ನಲ್ಲಿ ಇದೇ ಜೋಶುವಾ ಡಗ್‌ಔಟ್‌ಗೆ ಕಳಿಸಿದರು. ಇನ್ನೊಂದು ಬದಿಯಲ್ಲಿ ಇನಿಂಗ್ಸ್‌ಗೆ ಬಲ ತುಂಬುತ್ತಿದ್ದ ವಿರಾಟ್ ಆಟಕ್ಕೆ ನೂರ್ ಅಹಮದ್ ತೆರೆ ಎಳೆದರು.

ವಿರಾಟ್ ನಿರ್ಗಮಿಸಿದಾಗ ತಂಡದ ಜಯಕ್ಕೆ 31 ರನ್‌ಗಳ ಅವಶ್ಯಕತೆ ಇತ್ತು. ಒಂಬತ್ತು ಓವರ್‌ಗಳು ಬಾಕಿಯಿದ್ದವು. ಆದರೆ ವಿಕೆಟ್ ಉಳಿಸಿಕೊಳ್ಳುವುದು ಮುಖ್ಯವಾಗಿತ್ತು. ದಿನೇಶ್ (ಔಟಾಗದೆ 21) ಮತ್ತು ಸ್ವಪ್ನಿಲ್ ಸಿಂಗ್ (ಔಟಾಗದೆ 15) ಬೌಲರ್‌ಗಳನ್ನು ನಿರ್ಭೀತಿಯಿಂದ ದಂಡಿಸಿದರು. ಟೈಟನ್ಸ್ ನಾಯಕ ಶುಭಮನ್ ಗಿಲ್ ಅವರು ಮಾಡಿದ ಕೊನೆಯ ಪ್ರಯತ್ನಗಳನ್ನು ವಿಫಲಗೊಳಿಸಿದರು.

ಆರ್‌ಸಿಬಿ ಮತ್ತು ಗುಜರಾತ್ ಬ್ಯಾಟಿಂಗ್‌ಗೆ ಅಜಗಜಾಂತರವಿತ್ತು. ಗಿಲ್ ಬಳಗದ ಬ್ಯಾಟರ್‌ಗಳು ಪರದಾಡಿದ್ದ ಪಿಚ್‌ನಲ್ಲಿಯೇ ಆತಿಥೇಯರು ಅಬ್ಬರಿಸಿದರು.

ಗುಜರಾತ್ ಬ್ಯಾಟಿಂಗ್‌ನಲ್ಲಿ ಮೊದಲ ಸಿಕ್ಸರ್ ದಾಖಲಾಗಿದ್ದು 10ನೇ ಓವರ್‌ನಲ್ಲಿ. ಕರ್ಣ ಶರ್ಮಾ ಹಾಕಿದ್ದ ಎಸೆತವನ್ನು ಡೇವಿಡ್ ಮಿಲ್ಲರ್ ಸಿಕ್ಸರ್‌ಗೆತ್ತಿದರು. ಮಿಲ್ಲರ್ (30; 20ಎ) ಹಾಗೂ ಶಾರೂಕ್ (37; 24ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 61 ರನ್ ಸೇರಿಸಿದರು.

ಗುಜರಾತ್ ತಂಡವು 17 ಬೌಂಡರಿ, 5 ಸಿಕ್ಸರ್ ಗಳಿಸಿತು. ಬೆಂಗಳೂರು ತಂಡವು 8 ಸಿಕ್ಸರ್ ಹಾಗೂ 18 ಬೌಂಡರಿ ಬಾರಿಸಿತು.

ವಿಕೆಟ್ ಕಬಳಿಸಿದ ವೈಶಾಖ ವಿಜಯಕುಮಾರ್ ಸಂಭ್ರಮ

ವೈಶಾಖ ಮಿಂಚು

ಕೊನೆಯ ಓವರ್ ಬೌಲಿಂಗ್ ಮಾಡುವ ಅವಕಾಶ ಪಡೆದ 'ಸ್ಥಳೀಯ ಹೀರೊ' ವೈಶಾಖ ಯಶಸ್ವಿಯಾದರು. ಅದೊಂದೇ ಓವರ್‌ನಲ್ಲಿ 'ಇಂಪ್ಯಾಕ್ಟ್ ಪ್ಲೇಯರ್' ವಿಜಯಶಂಕರ್ ಮತ್ತು ಮಾನವ ಸುತಾರ ಅವರ ವಿಕೆಟ್ ಕಬಳಿಸಿದರು. ಅಲ್ಲದೇ ಕೀಪರ್ ಕಾರ್ತಿಕ್ ಜೊತೆಗೂಡಿ ಮೋಹಿತ್ ಶರ್ಮಾ ಅವರನ್ನು ರನ್‌ಔಟ್ ಕೂಡ ಮಾಡಿದರು.

ಅರ್ಧಶತಕ ಗಳಿಸಿದ ಆರ್‌ಸಿಬಿ ತಂಡದ ನಾಯಕ ಫಫ್ ಡುಪ್ಲೆಸಿ

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್
147 (19.1 ಓವರ್‌ಗಳಲ್ಲಿ)
ವೃದ್ಧಿಮಾನ್ ಸಿ ಕಾರ್ತಿಕ್ ಬಿ ಸಿರಾಜ್ 1 (7ಎ)
ಗಿಲ್ ಸಿ ವೈಶಾಖ್ ಬಿ ಸಿರಾಜ್ 2 (7ಎ)
ಸುದರ್ಶನ್ ಸಿ ಕೊಹ್ಲಿ ಬಿ ಗ್ರೀನ್ 6 (14ಎ)
ಶಾರೂಕ್ ರನ್‌ಔಟ್ (ಕೊಹ್ಲಿ) 37 (24ಎ, 4X5, 6X1)
ಮಿಲ್ಲರ್ ಸಿ ಮ್ಯಾಕ್ಸ್‌ವೆಲ್ ಬಿ ಶರ್ಮಾ 30 (20ಎ, 4X3, 6X2)
ತೆವಾಟಿಯಾ ಸಿ ವೈಶಾಕ್ ಬಿ ಯಶ್ 35 (21ಎ, 4X5,6X1)
ರಶೀದ್ ಬಿ ಯಶ್ 18 (14ಎ, 4X2, 6X1)
ವಿಜಯ್ ಸಿ ಸಿರಾಜ್ ಬಿ ವೈಶಾಖ 10 (7ಎ, 4X2)
ಸುತಾರ್ ಸಿ ಸಿಂಗ್ ಬಿ ವೈಶಾಖ 1 (2ಎ)
ಮೋಹಿತ್ ರನ್‌ಔಟ್ (ಕಾರ್ತಿಕ್/ವೈಶಾಖ) 0 (1ಎ)
ನೂರ್ ಅಹ್ಮದ್ ಔಟಾಗದೇ 0
ಇತರೆ: 7 (ಬೈ2, ಲೆಗ್‌ಬೈ1, ವೈಡ್4)
ವಿಕೆಟ್ ಪತನ: 1-1 (ವೃದ್ಧಿಮಾನ್ ಸಹಾ, 1.3), 2-10 (ಶುಭಮನ್ ಗಿಲ್, 3.5), 3-19 (ಸಾಯಿ ಸುದರ್ಶನ್, 5.3), 4-80 (ಡೇವಿಡ್ ಮಿಲ್ಲರ್, 11.4), 5-87 (ಶಾರೂಕ್ ಖಾನ್, 12.4), 6-131 (ರಶೀದ್ ಖಾನ್, 17.3), 7-136 (ರಾಹುಲ್ ತೆವಾಟಿಯಾ, 17.6), 8-147 (ಮಾನವ ಸುತಾರ, 19.1), 9-147 (ಮೋಹಿತ್ ಶರ್ಮಾ, 19.2), 10-147 (ವಿಜಯ್ ಶಂಕರ್, 19.3)
ಬೌಲಿಂಗ್: ಸ್ವಪ್ನಿಲ್ ಸಿಂಗ್ 1–0–1–0, ಮೊಹಮ್ಮದ್ ಸಿರಾಜ್ 4–0–29–2, ಯಶ್ ದಯಾಳ್ 4–0–21–2, ಕ್ಯಾಮರಾನ್ ಗ್ರೀನ್ 4–0–28–1, ವೈಶಾಖ ವಿಜಯಕುಮಾರ್ 3.3.–0–23–2 ಕರ್ಣ ಶರ್ಮಾ 3–0–42–1

ರಾಯಲ್ ಚಾಲೆಂಜರ್ಸ್ ಬೆಂಗಳೂರು
6ಕ್ಕೆ 152 (13.4 ಓವರ್‌ಗಳಲ್ಲಿ)
ವಿರಾಟ್ ಸಿ ಸಹಾ ಬಿ ನೂರ್ 42 (27ಎ, 4x2, 6x4)
ಫಫ್ ಸಿ ಶಾರೂಕ್ ಬಿ ಜೋಶುವಾ 64 (23ಎ, 4x10, 6x3)
ವಿಲ್ ಸಿ ಶಾರೂಕ್ ಬಿ ನೂರ್ 1 (3ಎ)
ರಜತ್ ಸಿ ಮಿಲ್ಲರ್ ಬಿ ಜೋಶುವಾ 2 (3ಎ)
ಮ್ಯಾಕ್ಸ್‌ವೆಲ್ ಸಿ ಮಿಲ್ಲರ್ ಬಿ ಜೋಶುವಾ 4 (3ಎ, 4x1)
ಗ್ರೀನ್ ಸಿ ಶಾರೂಕ್ ಬಿ ಜೋಶುವಾ 1 (2ಎ)
ದಿನೇಶ್ ಕಾರ್ತಿಕ್ ಔಟಾಗದೇ 21 (13ಎ, 4x3)
ಸ್ವಪ್ನಿಲ್ ಸಿಂಗ್ ಔಟಾಗದೇ 15 (9ಎ, 4x2, 6x1)
ಇತರೆ:2 (ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1-92 (ಫಫ್ ಡುಪ್ಲೆಸಿ, 5.5), 2-99 (ವಿಲ್ ಜಾಕ್ಸ್, 6.5), 3-103 (ರಜತ್ ಪಾಟೀದಾರ್, 7.3), 4-107 (ಗ್ಲೆನ್ ಮ್ಯಾಕ್ಸ್‌ವೆಲ್, 7.6), 5-111 (ಕ್ಯಾಮರಾನ್ ಗ್ರೀನ್, 9.5), 6-117 (ವಿರಾಟ್ ಕೊಹ್ಲಿ, 10.4)
ಬೌಲಿಂಗ್: ಮೋಹಿತ್ ಶರ್ಮಾ 2–0–32–0, ಜೋಶುವಾ ಲಿಟಲ್ 4–0–45–4, ಮಾನವ ಸುತಾರ 2–0–26–0, ನೂರ್ ಅಹಮ್ಮದ್ 4–0–23–2, ರಶೀದ್ ಖಾನ್ 1.4–0–25–0
ಪಂದ್ಯದ ಆಟಗಾರ: ಮೊಹಮ್ಮದ್ ಸಿರಾಜ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ ನಾಲ್ಕು ವಿಕೆಟ್‌ಗಳ ಜಯ

ಧರ್ಮಶಾಲಾದಲ್ಲಿ ಇಂದು ಮುಖಾಮುಖಿ

ಚೆನ್ನೈಗೆ ಮತ್ತೆ ಪಂಜಾಬ್ ಕಿಂಗ್ಸ್ ಸವಾಲು

ಧರ್ಮಶಾಲಾ (ಪಿಟಿಐ): ಮೂರು ದಿನಗಳ ಹಿಂದಷ್ಟೇ ಚೆಪಾಕ್‌ನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್, ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿತ್ತು. ಭಾನುವಾರ ಮತ್ತೊಮ್ಮೆ ಈ ಎರಡು ತಂಡಗಳು ಮುಖಾಮುಖಿಯಾಗಲಿದ್ದು, ಧರ್ಮಶಾಲಾದಲ್ಲಿ ನಡೆಯುವ ಈ ಪಂದ್ಯ ಎರಡೂ ತಂಡಗಳಿಗೆ ಮಹತ್ವದ್ದು.

ಈ ಹಿಂದಿನ ಮೂರು ಪಂದ್ಯಗಳಲ್ಲಿ ಎರಡನ್ನು ಸೋತಿರುವುದು ಹಾಲಿ ಚಾಂಪಿಯನ್ ತಂಡವನ್ನು ಚಿಂತೆಗೆ ಹಚ್ಚಿದೆ. ಪಾಯಿಂಟ್ ಪಟ್ಟಿಯಲ್ಲಿ ಅದು 10 ಪಾಯಿಂಟ್‌ಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಪ್ಲೇ ಆಫ್ ಅವಕಾಶ ಜೀವಂತವಾಗಿರಿಸಲು ಗೆಲುವು ಅನಿವಾರ್ಯ. 10 ಪಂದ್ಯಗಳಿಂದ 8 ಪಾಯಿಂಟ್ಸ್ ಗಳಿಸಿ ಏಳನೇ ಸ್ಥಾನದಲ್ಲಿರುವ ಪಂಜಾಬ್ ಗೆದ್ದರೆ ಅದೂ ಕ್ಷೀಣ ಅವಕಾಶ ಉಳಿಸಿಕೊಳ್ಳಲಿದೆ.

ಚೆಪಾಕ್‌ನಲ್ಲಿ ಮೊನ್ನೆ ಮುಖಾಮುಖಿಯಾದಾಗ ಮಧ್ಯಮ ಹಂತದ ಓವರುಗಳಲ್ಲಿ ಪಂಜಾಬ್ ಸ್ಪಿನ್ನರ್‌ಗಳಾದ ಹರ್‌ಪ್ರೀತ್ ಬ್ರಾರ್ ಮತ್ತು ರಾಹುಲ್ ಚಾಹರ್, ಚೆನ್ನೈ ಬ್ಯಾಟರ್‌ಗಳನ್ನು ಕಟ್ಟಿಹಾಕಿದ್ದರು. ಹೀಗಾಗಿ ತಂಡ ನಿರೀಕ್ಷೆಗಿಂತ ಕಡಿಮೆ ಮೊತ್ತ ಗಳಿಸಿತು.

ನಾಯಕ ಋತುರಾಜ್ ಗಾಯಕವಾಡ ಒಬ್ಬರೇ ಸಿಎಸ್‌ಕೆ ಪರ ಸ್ಥಿರ ಪ್ರದರ್ಶನ ನೀಡಿದ್ದು, ತಂಡ ಅವರನ್ನು ಬಲವಾಗಿ ನೆಚ್ಚಿಕೊಂಡಿದೆ. ಅವರು ಐದು ಅರ್ಧ ಶತಕ ಗಳಿಸಿದ್ದಾರೆ. ಬೇಕಾದ ಹಾಗೆ ಸಿಕ್ಸರ್ ಸಿಡಿಸಬಲ್ಲ ಶಿವಂ ದುಬೆ ಕೆಲ ಪಂದ್ಯಗಳಲ್ಲಿ ಮಾತ್ರ ಮಿಂಚಿದ್ದಾರೆ. ಉಳಿದವರ ಕೊಡುಗೆ ಅಷ್ಟೇನೂ ಇಲ್ಲ.

ಋತುರಾಜ್ ಗಾಯಕವಾಡ ಎಎಫ್‌ಪಿ ಚಿತ್ರ

ಅರ್ಷದೀಪ್ ಸಿಂಗ್ ಪಿಟಿಐ ಚಿತ್ರ

ಆದರೆ ಅನುಭವಿ ಅಜಿಂಕ್ಯ ರಹಾನೆ ವಿಫಲರಾಗುತ್ತಿದ್ದಾರೆ. ರವೀಂದ್ರ ಜಡೇಜ ಮತ್ತು ಸಮೀರ್ ರಿಝ್ವಿ ಸ್ಪಿನ್ನರ್‌ಗಳೆದುರು ಪರದಾಡಿದ್ದಾರೆ.

ಅನಾರೋಗ್ಯ ಮತ್ತು ಫಿಟ್ನೆಸ್ ಸಮಸ್ಯೆಯೂ ತಂಡವನ್ನು ಬಾಧಿಸುತ್ತಿದೆ. ದೀಪಕ್ ಚಾಹರ್, ಪಂಜಾಬ್ ವಿರುದ್ಧ ಹಿಂದಿನ ಪಂದ್ಯದಲ್ಲಿ ಕೇವಲ ಎರಡು ಎಸೆತ ಮಾಡಿ ಹೊರನಡೆದಿದ್ದರು. ಮಥೀಶ ಪಥಿರಾಣ, ತುಷಾರ್ ದೇಶಪಾಂಡೆ ಈ ಹಿಂದಿನ ಪಂದ್ಯ ಆಡಿರಲಿಲ್ಲ. ತುಷಾರ್ ಫ್ಲೂನಿಂದ ಬಳಲುತ್ತಿದ್ದಾರೆ.

ಇನ್ನೊಂದು ಕಡೆ, ಸತತ ಎರಡು ಗೆಲುವಿನಿಂದ ಪಂಜಾಬ್ ಉತ್ಸಾಹದಲ್ಲಿದ್ದು, ಪ್ಲೇ ಆಫ್ ಮೇಲೆ ಕಣ್ಣಿಟ್ಟಿದೆ. ಅದರ ಪ್ರದರ್ಶನ ಹೀಗೇ ಎಂದು ಹೇಳುವಂತಿಲ್ಲ. ಚೆಪಾಕ್‌ನಲ್ಲಿ ಚೆನ್ನೈ ಮೇಲೆ, ಅಹಮದಾಬಾದಿನಲ್ಲಿ ಗುಜರಾತ್ ಮೇಲೆ, ಕೋಲ್ಕತ್ತದಲ್ಲಿ ಕೆಕೆಆರ್ ವಿರುದ್ಧ ದಾಖಲೆ ಮೊತ್ತ ಬೆನ್ನಟ್ಟಿ ಜಯಗಳಿಸಿದ್ದು ಅದರ ಸಾಧನೆ. ಆದರೆ ತವರಿನಲ್ಲಿ ಒದ್ದಾಡಿದೆ.

ಜಾನಿ ಬೆಸ್ಟೊ ಲಯಕ್ಕೆ ಮರಳಿದ್ದಾರೆ. ರೀಲಿ ರೂಸೊ, ಶಶಾಂಕ್ ಸಿಂಗ್, ಪ್ರಭಸಿಮ್ರನ್ ಸಿಂಗ್ ಕೂಡ ತಡವಾಗಿ ಲಯಕಂಡುಕೊಂಡಿದ್ದಾರೆ. ಬೌಲಿಂಗ್ ವಿಭಾಗ ಕಗಿಸೊ ರಬಾಡ, ಹರ್ಷಲ್ ಪಟೇಲ್, ಅರ್ಷದೀಪ್, ಸ್ಯಾಮ್ ಕರನ್ ಅಂಥ ಅನುಭವಿಗಳನ್ನು ಹೊಂದಿದೆ. ಸ್ಪಿನ್ನರ್‌ಗಳಾದ ಹರ್‌ಪ್ರೀತ್ ಮತ್ತು ರಾಹುಲ್ ಚಾಹರ್ ಕೂಡ ಪರಿಣಾಮಕಾರಿಯಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ರಾಹುಲ್ ಬಳಗಕ್ಕೆ ಪ್ಲೇ ಆಫ್ ಮೇಲೆ ಕಣ್ಣು

ಲಖನೌ ಸೂಪರ್ ಜೈಂಟ್ಸ್ –ಕೋಲ್ಕತ್ತ ನೈಟ್ ರೈಡರ್ಸ್ ಮುಖಾಮುಖಿ ಇಂದು

ಲಖನೌ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್‌ಜೈಂಟ್ಸ್ ತಂಡವು ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಬಲಿಷ್ಠ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಕೋಲ್ಕತ್ತ ಖಾತೆಯಲ್ಲಿ ಈಗ 14 ಅಂಕಗಳು ಇವೆ. ಶುಕ್ರವಾರದ ಪಂದ್ಯದಲ್ಲಿ ಕೋಲ್ಕತ್ತ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಜಯಿಸಿತ್ತು. ಇದರೊಂದಿಗೆ ಎರಡನೇ ಸ್ಥಾನಕ್ಕೇರಿತ್ತು. ಬ್ಯಾಟಿಂಗ್ ಅಥವಾ ಬೌಲಿಂಗ್ ವಿಭಾಗದಲ್ಲಿ ಕೋಲ್ಕತ್ತ ತಂಡವನ್ನು ಸೋಲಿನ ದವಡೆಯಿಂದ ತಪ್ಪಿಸಿ ಗೆಲುವಿನತ್ತ ಮುನ್ನಡೆಸುವ ಆಟಗಾರರು ಇದ್ದಾರೆ.

ಅದರಿಂದಾಗಿ ಮುಂಬೈ ಎದುರಿನ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ತಂಡವು ಬೌಲಿಂಗ್‌ನಲ್ಲಿ ಮಿಂಚಿತ್ತು. ಮಿಚೆಲ್ ಸ್ಟಾರ್ಕ್, ಸುನಿಲ್ ನಾರಾಯಣ್, ವರುಣ ಚಕ್ರವರ್ತಿ ಅವರು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕಿ ತಮ್ಮ ತಂಡವು ಗಳಿಸಿದ್ದ ಸಾಧಾರಣ ಮೊತ್ತವನ್ನೂ ರಕ್ಷಿಸಿಕೊಂಡಿದ್ದರು.

ಅವರ ಎದುರು ಈಗ ಲಖನೌ ತಂಡದಲ್ಲಿರುವ ಸ್ಫೋಟಕ ಶೈಲಿಯ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇದೆ. ಅದರಲ್ಲೂ ಕ್ವಿಂಟನ್ ಡಿಕಾಕ್, ಮಾರ್ಕಸ್ ಸ್ಟೊಯಿನಿಸ್, ನಿಕೊಲಸ್ ಪೂರನ್ ಮತ್ತು ಕೆ.ಎಲ್. ರಾಹುಲ್ ಅವರನ್ನು ನಿಯಂತ್ರಿಸಬೇಕಿದೆ. ಕೋಲ್ಕತ್ತ ತಂಡದ ಬ್ಯಾಟಿಂಗ್ ಕೂಡ ಬಲಿಷ್ಠವಾಗಿದೆ. ಕಳೆದ ಪಂದ್ಯದಲ್ಲಿ ತಂಡವು 57 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತ್ತು. ಆ ಹಂತದಲ್ಲಿ ಮನೀಷ್ ಪಾಂಡೆ, ವೆಂಕಟೇಶ್ ಅಯ್ಯರ್ ಅವರು ಮಿಂಚಿದ್ದರು. ಹೋರಾಟದ ಮೊತ್ತ ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಆದರೆ ತಂಡದಲ್ಲಿರುವ ಆ್ಯಂಡ್ರೆ ರಸೆಲ್, ರಮಣದೀಪ್ ಸಿಂಗ್, ಫಿಲ್ ಸಾಲ್ಟ್ ಹಾಗೂ ಯುವ ಆಟಗಾರ ಅಂಗಕ್ರಿಷ್ ರಘುವಂಶಿ ಅವರು ರನ್‌ಗಳ ಹೊಳೆ ಹರಿಸುವ ಸಮರ್ಥರಾಗಿದ್ದಾರೆ.

ಒಂದೊಮ್ಮೆ ಈ ಪಂದ್ಯದಲ್ಲಿ ಗೆದ್ದರೆ, ಲಖನೌ ತಂಡವು ಎರಡನೇ ಸ್ಥಾನಕ್ಕೆರಿ, ಕೋಲ್ಕತ್ತ ಮೂರಕ್ಕಿಳಿಯುವ ಸಾಧ್ಯತೆ ಇದೆ. ಒಂದೊಮ್ಮೆ ಲಖನೌ ಸೋತರೆ, ಶ್ರೇಯಸ್ ಅಯ್ಯರ್ ಬಳಗಕ್ಕೆ ಪ್ಲೇ ಆಫ್ ಸ್ಥಾನ ಬಹುತೇಕ ಖಚಿತವಾಗಲಿದೆ.

ಉಭಯ ತಂಡಗಳಿಗೂ ತಲಾ ನಾಲ್ಕು ಪಂದ್ಯಗಳು ಬಾಕಿ ಇವೆ.

ಲಖನೌ ಸೂಪರ್‌ಜೈಂಟ್ಸ್ ತಂಡದ ಕೆ.ಎಲ್. ರಾಹುಲ್ ಹಾಗೂ ಕೆ. ಗೌತಮ್ ಮಾತುಕತೆ –ಪಿಟಿಐ ಚಿತ್ರ

ಪಂದ್ಯ ಆರಂಭ: **ರಾತ್ರಿ 7.30**
ನೇರಪ್ರಸಾರ: **ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್.**

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟರ್ ಮನೀಷ್ ಪಾಂಡೆ –ಪಿಟಿಐ ಚಿತ್ರ

ಬಸವಳಿದಿರುವ ಹಾರ್ದಿಕ್: ಫಿಂಚ್

ಮುಂಬೈ (ಪಿಟಿಐ): ಭಾರತ ತಂಡದ ಉಪನಾಯಕ ಹಾರ್ದಿಕ್ ಪಾಂಡ್ಯ ಅವರು ಐಪಿಎಲ್ ಪಂದ್ಯಗಳಲ್ಲಿ ಸುಸ್ತಾದಂತೆ ಮತ್ತು ಒತ್ತಡಕ್ಕೆ ಒಳಗಾದಂತೆ ಕಾಣುತ್ತಿದ್ದಾರೆ. ಅವರ ನಾಯಕತ್ವ ದಡಿ ಮುಂಬೈ ಇಂಡಿಯನ್ಸ್ ತಂಡವೂ ಗೊಂದಲದಲ್ಲಿದ್ದಂತೆ ಭಾಸವಾಗುತ್ತಿದೆ ಎಂದು ಮಾಜಿ ಕ್ರಿಕೆಟಿಗರಾದ ಆರನ್ ಫಿಂಚ್ ಮತ್ತು ಗ್ರೇಮ್ ಸ್ಮಿತ್ ಹೇಳಿದ್ದಾರೆ.

ಐದು ಬಾರಿಯ ಚಾಂಪಿಯನ್ ಮುಂಬೈ ಇದುವರೆಗೆ ಆಡಿರುವ 11 ಪಂದ್ಯಗಳಲ್ಲಿ ಎಂಟನ್ನು ಸೋತಿದ್ದು, ಪ್ಲೇ ಆಫ್‌ನಿಂದ ಬಹುತೇಕ ಹೊರಬಿದ್ದಿದೆ. ಶುಕ್ರವಾರ, ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯವನ್ನು ಮುಂಬೈ 24 ರನ್‌ಗಳಿಂದ ಸೋತ ನಂತರ ಪಾಂಡ್ಯ ವಿರುದ್ಧ ವಾಂಖೆಡೆ ಕ್ರೀಡಾಂಗಣದ ಪ್ರೇಕ್ಷಕರು ಘೋಷಣೆಗಳನ್ನು ಕೂಗಿದರು.

ಪಾಂಡ್ಯ ಔಟಾಗುವ ಮೊದಲು ಎರಡು ಎಸೆತಗಳನ್ನಷ್ಟೇ ಆಡಿದ್ದರು. 'ಪಾಂಡ್ಯ ಬಳಲಿದಂತೆ ಕಾಣುತ್ತಿದ್ದಾರೆ. ಅವರು ಒತ್ತಡ ಅನುಭವಿಸುತ್ತಿದ್ದಾರೆ. ನನಗೂ ಈ ರೀತಿ ಆಗಿದೆ. ಕೆಲವೊಮ್ಮೆ ಹೀಗಾಗುತ್ತದೆ. ವೈಯಕ್ತಿಕವಾಗಿ ಏನೇ ಮಾಡಲು ಹೋದರೂ ಅದು ಕೆಲಸ ಮಾಡುವುದಿಲ್ಲ' ಎಂದು ಫಿಂಚ್ ಸ್ಟಾರ್ ಸ್ಪೋರ್ಟ್ಸ್ ಜತೆ ಮಾತನಾಡಿದ್ದಾರೆ.

'ಪಾಂಡ್ಯ ನೇತೃತ್ವದಲ್ಲಿ ಮುಂಬೈ ತಂಡ ಗೊಂದಲದಲ್ಲಿರುವಂತೆ ಕಾಣುತ್ತಿದೆ. ಅವರ ಬ್ಯಾಟಿಂಗ್ ಕ್ರಮಾಂಕ ನೋಡಿದಾಗಲೂ ಹೀಗೇ ಅನಿಸುತ್ತದೆ' ಎಂದು ಹೇಳಿದರು. 'ತಿಲಕ್ ವರ್ಮಾ ಮತ್ತು ನಮನ್ ಧೀರ್ ಮಧ್ಯಮ ಕ್ರಮಾಂಕದಲ್ಲಿ ಹೋರಾಡುತ್ತಿದ್ದಾರೆ. ಹಾರ್ದಿಕ್ ಪಾಂಡ್ಯ ಕ್ರಮಾಂಕ ಬದಲಾಗುತ್ತಲೇ ಇದೆ' ಎಂದು ಸ್ಮಿತ್ ಹೇಳಿದರು.

ಪಾಂಡ್ಯ ಅವರ ನಾಯಕತ್ವ ನಿಭಾವಣೆ ರೀತಿಯನ್ನು ಆಸ್ಟ್ರೇಲಿಯಾದ ಮಾಜಿ ಉಪನಾಯಕ ಶೇನ್ ವ್ಯಾಟ್ಸನ್ ಕೂಡ ಟೀಕಿಸಿದ್ದಾರೆ. 'ಕೆಕೆಆರ್ 57ಕ್ಕೆ5 ವಿಕೆಟ್ ಕಳೆದುಕೊಂಡಾಗ ತಂಡದ ಅತ್ಯುತ್ತಮ ಬೌಲರ್‌ಅನ್ನು ಬಳಸಲಿಲ್ಲ. ಎದುರಾಳಿಗೆ ಚೇತರಿಸಲು ಅವಕಾಶ ಮಾಡಿಕೊಟ್ಟಿತು' ಎಂದು ಅವರು ಜಿಯೊ ಸಿನಿಮಾ ಆ್ಯಪ್‌ಗೆ ತಿಳಿಸಿದರು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	10	8	2	16	0.622
ಕೋಲ್ಕತ್ತ ನೈಟ್ ರೈಡರ್ಸ್	10	7	3	14	1.098
ಲಖನೌ ಸೂಪರ್ ಜೈಂಟ್ಸ್	10	6	4	12	0.094
ಸನ್‌ರೈಸರ್ಸ್ ಹೈದರಾಬಾದ್	10	6	4	12	0.072
ಚೆನ್ನೈ ಸೂಪರ್ ಕಿಂಗ್ಸ್	10	5	5	10	0.627
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಆರ್‌ಸಿಬಿ (ಬೆಂಗಳೂರು)	11	4	7	8	-0.049
ಪಂಜಾಬ್ ಕಿಂಗ್ಸ್	10	4	6	8	-0.062
ಗುಜರಾತ್ ಟೈಟನ್ಸ್	11	4	7	8	-1.320
ಮುಂಬೈ ಇಂಡಿಯನ್ಸ್	11	3	8	6	-0.356

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (542)
ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (17 ವಿಕೆಟ್)

'ಉಳಿದ ಪಂದ್ಯಗಳಿಗೆ ಮಯಂಕ್ ಅಲಭ್ಯ'

ಲಖನೌ (ಪಿಟಿಐ): ಈ ಬಾರಿಯ ಐಪಿಎಲ್‌ನಲ್ಲಿ ಎರಡು ಪಂದ್ಯಗಳಲ್ಲಿ ಮಿಂಚಿದ್ದ ವೇಗದ ಬೌಲರ್ ಮಯಂಕ್ ಯಾದವ್ ಅವರು ಇನ್ನು ಲೀಗ್‌ನ ಯಾವುದೇ ಪಂದ್ಯಗಳಲ್ಲಿ ಆಡುವುದಿಲ್ಲ ಎಂದು ಲಖನೌ ಸೂಪರ್ ಜೈಂಟ್ಸ್ ಹೆಡ್ ಕೋಚ್ ಜಸ್ಟಿನ್ ಲ್ಯಾಂಗರ್ ಶನಿವಾರ ಖಚಿತಪಡಿಸಿದರು.

21 ವರ್ಷದ ಮಯಂಕ್ ಪದಾರ್ಪಣೆ ಪಂದ್ಯದಲ್ಲೇ 155 ಕಿ.ಮೀ. ವೇಗದಲ್ಲಿ ಬೌಲ್ ಮಾಡಿ ಗಮನ ಸೆಳೆದಿದ್ದರು.

ಏಷ್ಯಾ ಯುವ ಮತ್ತು 22 ವರ್ಷದೊಳಗಿನವರ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಭಾರತಕ್ಕೆ ದಾಖಲೆಯ 43 ಪದಕ ಖಚಿತ

ಅಸ್ತಾನಾ (ಕಜಕಸ್ತಾನ): ಆಕಾಶ್ ಗೋರ್ಖಾ, ವಿಶ್ವನಾಥ್ ಸುರೇಶ್, ನಿಖಿಲ್ ಮತ್ತು ಪ್ರೀತ್ ಮಲಿಕ್ ಇಲ್ಲಿ ನಡೆಯುತ್ತಿರುವ ಏಷ್ಯಾ 22 ವರ್ಷದೊಳಗಿನವರ ಮತ್ತು ಯುವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ 22 ವರ್ಷದೊಳಗಿನವರ ಫೈನಲ್ ತಲುಪಿದ್ದಾರೆ. ಇದರೊಂದಿಗೆ ವಿವಿಧ ವಿಭಾಗಗಳಲ್ಲಿ ಭಾರತಕ್ಕೆ 43 ಪದಕಗಳು ಖಚಿತವಾಗಿದೆ.

ಸೀನಿಯರ್ ರಾಷ್ಟ್ರೀಯ ಚಾಂಪಿಯನ್ ಆಕಾಶ್ 60 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಇಲ್ಯಾಸೊವ್ ಸಯಾತ್ ವಿರುದ್ಧ 5-0 ಅಂತರದಿಂದ ಜಯಗಳಿಸುವ ಮೂಲಕ ಪ್ರಾಬಲ್ಯ ಮುಂದುವರಿಸಿದರು.

ಹಾಲಿ ಯುವ ವಿಶ್ವ ಚಾಂಪಿಯನ್ ವಿಶ್ವನಾಥ್ (48 ಕೆಜಿ) ಅವರು 5–2 ಅಂತರದಲ್ಲಿ ಫಿಲಿಪ್ಪೀನ್ಸ್ ನ ಬರಿಕುವಾಟ್ರೊ ಬ್ರಿಯಾನ್ ವಿರುದ್ಧ ಗೆದ್ದರು.

ಇತರ ಇಬ್ಬರು ಸೆಮಿಫೈನಲ್ ಸ್ಪರ್ಧಿಗಳಾದ ನಿಖಿಲ್ (57 ಕೆಜಿ) ಮತ್ತು ಪ್ರೀತ್ (67 ಕೆಜಿ) ಕ್ರಮವಾಗಿ ಮಂಗೋಲಿಯಾದ ಡೊಜ್ಞ್ಯಾಂಬು ಗನ್ಬೋಲ್ಡ್ ಮತ್ತು ಕಿರ್ಗಿಸ್ತಾನದ ಅಲ್ಮಾಜ್ ಒರೋಜ್ಬೆಕೊವ್ ವಿರುದ್ಧ 5-2 ಅಂತರದಲ್ಲಿ ಗೆಲುವು ಸಾಧಿಸಿದರು.

ಜಾದುಮಣಿ ಸಿಂಗ್ (51 ಕೆಜಿ), ಅಜಯ್ ಕುಮಾರ್ (63.5 ಕೆಜಿ), ಅಂಕುಶ್ (71 ಕೆಜಿ), ಧ್ರುವ್ ಸಿಂಗ್ (80 ಕೆಜಿ), ಜುಗ್ನೂ (86 ಕೆಜಿ) ಮತ್ತು ಯುವರಾಜ್ (92 ಕೆಜಿ) ಅವರು 22 ವರ್ಷದೊಳಗಿನವರ ಸೆಮಿಫೈನಲ್‌ನಲ್ಲಿ ಸೋತು, ಕಂಚಿನ ಪದಕಗಳೊಂದಿಗೆ ತಮ್ಮ ಅಭಿಯಾನವನ್ನು ಕೊನೆಗೊಳಿಸಿದರು.

60 ಕೆ.ಜಿ ವಿಭಾಗದಲ್ಲಿ ಜಯಗಳಿಸಿದ ಆಕಾಶ್ ಗೋರ್ಖಾ (ನೀಲಿ)

ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಪ್ರೀತಿ (54 ಕೆಜಿ) ಸೇರಿದಂತೆ ಒಂಬತ್ತು ಮಹಿಳಾ ಬಾಕ್ಸರ್‌ಗಳು 22 ವರ್ಷದೊಳಗಿನವರ ಸೆಮಿಫೈನಲ್‌ನಲ್ಲಿ ಸ್ಪರ್ಧಿಸಲಿದ್ದಾರೆ. ಫೈನಲ್ ಪಂದ್ಯ ಮಂಗಳವಾರ ನಡೆಯಲಿದೆ.

ಶುಕ್ರವಾರ ರಾತ್ರಿ ನಡೆದ ಯುವ ಮಹಿಳಾ ಸೆಮಿಫೈನಲ್‌ನಲ್ಲಿ ಹಾಲಿ ಜೂನಿಯರ್ ವಿಶ್ವ ಚಾಂಪಿಯನ್ ನಿಶಾ (52 ಕೆಜಿ) ಮತ್ತು ಏಷ್ಯನ್ ಯುವ ಚಾಂಪಿಯನ್ ನಿಕಿತಾ ಚಂದ್ (60 ಕೆಜಿ) ಅವರು ಇತರ ಐವರು ಬಾಕ್ಸರ್‌ಗಳ ಜೊತೆ ಫೈನಲ್ ತಲುಪಿದರು.

ಯುವ ವಿಭಾಗದಲ್ಲಿ ಲಕ್ಷಯ್ ರಾಠಿ (92 + ಕೆಜಿ), ಅನ್ನು (48 ಕೆಜಿ), ಯಾತ್ರಿ ಪಟೇಲ್ (57 ಕೆಜಿ), ಪಾರ್ಥವಿ ಗ್ರೆವಾಲ್ (66 ಕೆಜಿ), ಆಕಾಂಕ್ಷಾ ಫಲಸ್ವಾಲ್ (70 ಕೆಜಿ) ಮತ್ತು ನಿರ್ಜಾರಾ ಬಾನಾ (+81 ಕೆಜಿ) ಸೋತು ಕಂಚಿನ ಪದಕಗಳೊಂದಿಗೆ ತಮ್ಮ ಅಭಿಯಾನವನ್ನು ಕೊನೆಗೊಳಿಸಿದರು.

ಯುವ ವಿಭಾಗದ ಫೈನಲ್‌ನಲ್ಲಿ ಭಾರತದ 14 ಬಾಕ್ಸರ್‌ಗಳು ಭಾಗವಹಿಸಲಿದ್ದು, ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ ಏಳು ಮಂದಿ ಚಿನ್ನಕ್ಕಾಗಿ ಸೆಣಸಲಿದ್ದಾರೆ. ಫೈನಲ್ ಪಂದ್ಯಗಳು ಸೋಮವಾರ ನಡೆಯಲಿವೆ.

ಒಟ್ಟಾರೆಯಾಗಿ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು 43 ಪದಕಗಳನ್ನು ಖಚಿತಪಡಿಸಿಕೊಂಡಿದ್ದಾರೆ. ಪ್ರಬಲ ಬಾಕ್ಸಿಂಗ್ ರಾಷ್ಟ್ರಗಳಾದ ಚೀನಾ, ಭಾರತ, ಕಜಕಿಸ್ತಾನ, ಉಜ್ಬೇಕಿಸ್ತಾನ ಸೇರಿದಂತೆ 24ಕ್ಕೂ ಹೆಚ್ಚು ದೇಶಗಳ 390ಕ್ಕೂ ಅಧಿಕ ಬಾಕ್ಸರ್‌ಗಳ 25 ತೂಕ ವಿಭಾಗಗಳಲ್ಲಿ ಪದಕಗಳಿಗೆ ಸೆಣಸಾಟ ನಡೆಸುವರು.

ಮಹಿಳಾ ಹಾಕಿ ಲೀಗ್ ಮಧ್ಯಪ್ರದೇಶ, ಹರಿಯಾಣಕ್ಕೆ ಜಯ

ರಾಂಚಿ (ಪಿಟಿಐ): ರಾಷ್ಟ್ರೀಯ ಮಹಿಳಾ ಹಾಕಿ ಲೀಗ್ (ಹಂತ 1) ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಹರಿಯಾಣ ಮತ್ತು ಮಧ್ಯಪ್ರದೇಶ ಕ್ರಮವಾಗಿ ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರವನ್ನು ಸೋಲಿಸಿವೆ.

ಹರಿಯಾಣ 4-3 ಗೋಲುಗಳಿಂದ ಬಂಗಾಳವನ್ನು ತಂಡವನ್ನು ಸೋಲಿಸಿ ಸತತ ಮೂರನೇ ಗೆಲುವು ದಾಖಲಿಸಿದರೆ, ಮತ್ತೊಂದು ಪಂದ್ಯ ದಲ್ಲಿ ಮಧ್ಯಪ್ರದೇಶ 2–1ರಿಂದ ಮಹಾರಾಷ್ಟ್ರವನ್ನು ಮಣಿಸಿತು.

ಹರಿಯಾಣ ಪರ ತಂಡದ ನಾಯಕಿ ನೀಲಂ (20ನೇ ನಿ), ನಂದಿನಿ (41ನೇ), ಶಶಿ ಖಾಸಾ (43ನೇ), ಪಿಂಕಿ (46 ನೇ) ಗೋಲು ತಂದಿತ್ತರು. ಬಂಗಾಳ ಪರ ಸಿಲ್ಬಿಯಾ ನಾಗ್ (2ನೇ ನಿಮಿಷ), ಸೆಲೆಸ್ಟಿನಾ ಹೊರೊ (19ನೇ) ಗೋಲು ಗಳಿಸಿದರು.

ಮಧ್ಯಪ್ರದೇಶದ ಪರ ಆಂಚಲ್ ಸಾಹು (45ನೇ) ಮತ್ತು ಸ್ವಾತಿ (54ನೇ) ಗೋಲು ಗಳಿಸಿದರು. ಮಹಾರಾಷ್ಟ್ರ ಪರ ತಂಡದ ನಾಯಕಿ ಅಶ್ವಿನಿ ಕೋಲೇಕರ್ (50ನೇ) ಏಕೈಕ ಗೋಲು ತಂದಿತ್ತರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹540
12 ಕ್ಕೆ	₹70
ಮೈಸೂರು	
100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1490)
ಸೋಯಾ (ರಿಫೈನ್ಡ್)	₹910 (915)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹887 (890)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹176.50
ಆರ್‌ಎಸ್‌ಎಸ್-5	₹169.50
ಗುಡ್ ಲಾಟ್	₹159.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹312-499
ದ್ವಿತಳಿ (ಬಿ.ವಿ)	₹335-615

ಟನ್‌ಗೆ ಕನಿಷ್ಠ ರಫ್ತು ದರ ₹45,860: ಶೇ 40ರಷ್ಟು ಸುಂಕ ನಿಗದಿ

ಈರುಳ್ಳಿ ರಫ್ತು ನಿಷೇಧ ವಾಪಸ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಈರುಳ್ಳಿ ರಫ್ತಿಗೆ ವಿಧಿಸಿದ್ದ ನಿಷೇಧವನ್ನು ಶನಿವಾರ ಹಿಂಪಡೆದಿದೆ. ಆದರೆ, ಕನಿಷ್ಠ ರಫ್ತು ದರವನ್ನು (ಎಂಇಪಿ) ಪ್ರತಿ ಟನ್‌ಗೆ ₹45,860ಕ್ಕೆ (550 ಡಾಲರ್) ನಿಗದಿಪಡಿಸಿದೆ.

ಬೆಲೆ ಕುಸಿತದಿಂದ ಕಂಗಾಲಾಗಿರುವ ಬೆಳೆಗಾರರ ಪಾಲಿಗೆ ಸರ್ಕಾರದ ಈ ನಿರ್ಧಾರವು ವರದಾನವಾಗಿದೆ.

ಸರ್ಕಾರವು ರಫ್ತು ನಿರ್ಬಂಧಿಸುವ ಉದ್ದೇಶದಿಂದ 'ಕನಿಷ್ಠ ರಫ್ತು ದರ' ವಿಧಿಸುವ ಮಾರ್ಗವನ್ನು ಅನುಸರಿಸುತ್ತದೆ. ಪರಿಣಾಮಕಾರಿಯಾಗಿ ಈರುಳ್ಳಿ ರಫ್ತು ನಿಯಂತ್ರಿಸಲು ಕಳೆದ ವರ್ಷದ ಆಗಸ್ಟ್‌ನಲ್ಲಿ ಶೇ 40ರಷ್ಟು ಸುಂಕ ವಿಧಿಸಿತ್ತು.

ಅದೇ ವರ್ಷದ ಡಿಸೆಂಬರ್ 31ರ ವರೆಗೆ ಈ ಆದೇಶ ಜಾರಿಯಲ್ಲಿತ್ತು. ಮತ್ತೆ ಇಷ್ಟೇ ಪ್ರಮಾಣದಲ್ಲಿ ಸುಂಕ ವಿಧಿಸಿದ್ದು, ಶುಕ್ರವಾರದಿಂದಲೇ ಜಾರಿಗೆ ಬಂದಿದೆ.

'ಈರುಳ್ಳಿ ರಫ್ತಿಗೆ ಹೇರಿದ್ದ ನಿಷೇಧವನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಾಪಸ್ ಪಡೆಯಲಾಗಿದೆ. ಮುಂದಿನ ಆದೇಶದವರೆಗೆ ಇದು ಜಾರಿಯಲ್ಲಿರುತ್ತದೆ' ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

'ಸದ್ಯ ಈರುಳ್ಳಿ ಮಂಡಿಗಳು ಮತ್ತು ಚಿಲ್ಲರೆ ಮಾರುಕಟ್ಟೆಯಲ್ಲಿ ದರ ಸ್ಥಿರವಾಗಿದೆ. ಅಲ್ಪ ಪ್ರಮಾಣದಲ್ಲಿ ದರ ಏರಿಕೆ ಆಗಬಹುದು. ಆದರೆ, ಗ್ರಾಹಕರು ಮತ್ತು ರೈತರ ಹಿತದೃಷ್ಟಿಯಿಂದ ಸರ್ಕಾರ ಈ ತೀರ್ಮಾನ ಕೈಗೊಂಡಿದೆ' ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

'ಅತಿಹೆಚ್ಚು ಈರುಳ್ಳಿ ಬೆಳೆಯುವ ಮಹಾರಾಷ್ಟ್ರಕ್ಕೆ ಇತ್ತೀಚೆಗೆ ಸಚಿವಾಲಯದ ತಜ್ಞರ ತಂಡವು ಭೇಟಿ ನೀಡಿತ್ತು. ಈರುಳ್ಳಿಯನ್ನು ದೀರ್ಘಕಾಲದವರೆಗೆ ಶೇಖರಿಸಿಡಲು ಆಗುವುದಿಲ್ಲ. ಮಧ್ಯಸ್ಥಗಾರರು ಮತ್ತು ತಂಡದ ಶಿಫಾರಸ್ಸಿನ ಮೇರೆಗೆ ಈ ತೀರ್ಮಾನ ಕೈಗೊಳ್ಳಲಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು 5 ಲಕ್ಷ ಟನ್ ಕಾಪು ದಾಸ್ತಾನು ಮಾಡಲಾಗುತ್ತಿದೆ' ಎಂದು ಹೇಳಿದ್ದಾರೆ.

ಕಳೆದ ತಿಂಗಳು ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ, ಯುಎಇ, ಭೂತಾನ್, ಬಹರೈನ್, ಮಾರಿಷಸ್ ಹಾಗೂ ಶ್ರೀಲಂಕಾಕ್ಕೆ ಈರುಳ್ಳಿ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿತ್ತು.

ಅಂಕಿಅಂಶ

191 ಲಕ್ಷ ಟನ್ — ರಾಬಿ ಅವಧಿಯಲ್ಲಿ ಈರುಳ್ಳಿ ಉತ್ಪಾದನೆಯ ಅಂದಾಜು

25 ಲಕ್ಷ ಟನ್ — ವಾರ್ಷಿಕ ಈರುಳ್ಳಿ ರಫ್ತು ಪ್ರಮಾಣ

17 ಲಕ್ಷ ಟನ್ — ದೇಶೀಯಮಟ್ಟದಲ್ಲಿನ ಮಾಸಿಕ ಬೇಡಿಕೆ ಪ್ರಮಾಣ

ಕ್ವಿಂಟಲ್‌ಗೆ ₹200 ದರ ಹೆಚ್ಚಳ

ನವದೆಹಲಿ (ಪಿಟಿಐ): ರಫ್ತು ನಿಷೇಧವನ್ನು ವಾಪಸ್ ಪಡೆದಿರುವ ಬೆನ್ನಲ್ಲೇ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ಲಾಸಲ್‌ಗಾಂವ್ ಎಪಿಎಂಸಿಯಲ್ಲಿ ಶನಿವಾರ ಪ್ರತಿ ಕ್ವಿಂಟಲ್‌ಗೆ ಸರಾಸರಿ ಈರುಳ್ಳಿ ದರವು ₹200 ಹೆಚ್ಚಳವಾಗಿದೆ.

ಲಾಸಲ್‌ಗಾಂವ್ ದೇಶದ ಅತಿದೊಡ್ಡ ಈರುಳ್ಳಿ ಸಗಟು ಮಾರುಕಟ್ಟೆಯಾಗಿದೆ. ಇಲ್ಲಿ ಗುಣಮಟ್ಟದ ಆಧಾರದ ಪ್ರತಿ ಕ್ವಿಂಟಲ್‌ಗೆ ₹801ರಿಂದ ₹2,551ರ ವರೆಗೆ ದರವಿದೆ.

'ಸರ್ಕಾರದ ನಿರ್ಧಾರದಿಂದ ರೈತರಿಗೆ ಅನುಕೂಲವಾಗಲಿದೆ. ಆದರೆ, ಸೋಮವಾರದಂದು ಇದರ ನೈಜ ಚಿತ್ರಣ ದೊರೆಯಲಿದೆ' ಎಂದು ಎಪಿಎಂಸಿ ಅಧ್ಯಕ್ಷ ಬಾಳಾಸಾಹೇಬ ಕ್ಷೀರಸಾಗರ್ ತಿಳಿಸಿದ್ದಾರೆ.

'ಸರ್ಕಾರದ ಈ ಆದೇಶವು ಕನಿಷ್ಠ ಒಂದು ವರ್ಷದ ವರೆಗೆ ಜಾರಿಯಲ್ಲಿದ್ದರೆ ಅನುಕೂಲವಾಗಲಿದೆ. ಆದರೆ, ನಿಗದಿಪಡಿಸಿರುವ ರಫ್ತು ಸುಂಕವು ಬೆಳೆಗಾರರ ಲಾಭವನ್ನು ನುಂಗಿ ಹಾಕಲಿದೆ' ಎಂದು ರೈತರು ಪ್ರತಿಕ್ರಿಯಿಸಿದ್ದಾರೆ.

ರೈತರ ಮತ ಸೆಳೆಯುವ ತಂತ್ರ?

ಕಳೆದ ವರ್ಷದ ಡಿಸೆಂಬರ್ 8ರಂದು ಕೇಂದ್ರ ಸರ್ಕಾರವು ಈರುಳ್ಳಿ ರಫ್ತಿಗೆ, ಪ್ರಸಕ್ತ ವರ್ಷದ ಮಾರ್ಚ್ 31ರ ವರೆಗೆ ನಿಷೇಧ ಹೇರಿತ್ತು. ಆ ನಂತರ ನಿಷೇಧವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿತ್ತು. ದೇಶೀಯ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಈ ಕ್ರಮ ಕೈಗೊಂಡಿತ್ತು.

ಕೇಂದ್ರದ ಈ ಕ್ರಮದ ವಿರುದ್ಧ ಮಹಾರಾಷ್ಟ್ರದಲ್ಲಿ ರೈತರು ತೀವ್ರ ಪ್ರತಿಭಟನೆ ನಡೆಸಿದ್ದರು. ಬೆಳೆಗಾರರ ಹಿತದೃಷ್ಟಿಯಿಂದ ಆದೇಶ ಹಿಂಪಡೆಯಲು ಆಗ್ರಹಿಸಿದ್ದರು.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಈರುಳ್ಳಿ ಬೆಳೆಯುವ ನಾಸಿಕ್, ಅಹಮದಾಬಾದ್, ಸೊಲ್ಲಾಪುರದಲ್ಲಿ ಮೂರನೇ ಹಂತದಲ್ಲಿ ಲೋಕಸಭೆಗೆ ಮತದಾನ ನಡೆಯುತ್ತಿದೆ. ಈ ಭಾಗದ ರೈತರ ಮತಗಳ ಮೇಲೆ ಕಣ್ಣಿಟ್ಟಿರುವ ಕೇಂದ್ರವು, ರಫ್ತು ನಿಷೇಧವನ್ನು ವಾಪಸ್ ಪಡೆದಿದೆ ಎಂದು ಹೇಳಲಾಗಿದೆ.

ಕಾಗದ ಕಾರ್ಖಾನೆ: ಕಚ್ಚಾ ಸರಕು ಕೊರತೆ

ನವದೆಹಲಿ (ಪಿಟಿಐ): ದೇಶದಲ್ಲಿರುವ ಕಾಗದ ಕೈಗಾರಿಕೆಗಳು ಕಚ್ಚಾ ಸರಕಿನ ಕೊರತೆ ಎದುರಿಸುತ್ತಿವೆ. ಹಾಗಾಗಿ, ಪಲ್ಪ್‌ವುಡ್ ಪ್ಲಾಂಟೇಷನ್‌ಗಾಗಿ ಸರ್ಕಾರಕ್ಕೆ ಸೇರಿದ ಪಾಳುಬಿದ್ದಿರುವ ಜಮೀನನ್ನು ದೀರ್ಘಕಾಲದವರೆಗೆ ಕಾರ್ಖಾನೆಗಳಿಗೆ ಗುತ್ತಿಗೆ ನೀಡಬೇಕು ಎಂದು ಭಾರತೀಯ ಕಾಗದ ತಯಾರಕರ ಸಂಘ (ಐಪಿಎಂಎ) ಒತ್ತಾಯಿಸಿದೆ.

ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪಾಳು ಭೂಮಿ ಇದೆ. ಇದರಲ್ಲಿ ಅಲ್ಪ ಪ್ರಮಾಣದಲ್ಲಿ ಕಾಗದ ಕಾರ್ಖಾನೆಗಳಿಗೆ ಗುತ್ತಿಗೆ ನೀಡಿದರೆ ಈ ವಲಯದ ಅಭಿವೃದ್ಧಿಯಾಗಲಿದೆ. ಜೊತೆಗೆ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಅವಕಾಶ ಸೃಷ್ಟಿಗೆ ನೆರವಾಗಲಿದೆ ಎಂದು ಹೇಳಿದೆ.

ಕಾಗದ ತಯಾರಿಕೆಗೆ ಬಳಸುವ ಮರದ ತಿರುಳಿನ ಕೊರತೆ ಇದೆ. ಇದನ್ನು ಅವಲಂಬಿಸಿರುವ ಕಾರ್ಖಾನೆಗಳು ಸಂಕಷ್ಟಕ್ಕೆ ಸಿಲುಕಿವೆ. ಕೃಷಿ ಅರಣ್ಯ ಅಭಿವೃದ್ಧಿಗೆ ಉತ್ತೇಜನ ನೀಡಿದರೆ ದೇಶೀಯಮಟ್ಟದಲ್ಲಿನ ಕಾಗದದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗಲಿದೆ ಎಂದು ತಿಳಿಸಿದೆ.

ಪ್ರತಿವರ್ಷ ದೇಶದಲ್ಲಿ ಕಾಗದದ ಬಳಕೆ ಪ್ರಮಾಣವು ವಾರ್ಷಿಕ ಶೇ 6ರಿಂದ 7ರಷ್ಟು ಏರಿಕೆಯಾಗುತ್ತಿದೆ ಎಂದು ಹೇಳಿದೆ.

'ಕಾರ್ಖಾನೆಗಳಿಗೆ ಪಾಳು ಬಿದ್ದಿರುವ ಜಮೀನನ್ನು ಗುತ್ತಿಗೆ ನೀಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಕಾಗದ ತಯಾರಿಕೆಗೆ ಅಗತ್ಯವಿರುವ ಮರಗಳನ್ನು ಬೆಳೆಸುವುದರಿಂದ ಮರ ಆಧಾರಿತ ಕಾರ್ಖಾನೆಗಳಿಗೂ ಅನುಕೂಲವಾಗಲಿದೆ. ಜೊತೆಗೆ, ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಜನರಿಗೆ ಉದ್ಯೋಗವೂ ದೊರೆಯಲಿದೆ' ಎಂದು ಸಂಘದ ಅಧ್ಯಕ್ಷ ಪವನ್ ಅಗರ್ವಾಲ್ ಹೇಳಿದ್ದಾರೆ.

16ರಿಂದ ಟೆಲ್ ಅವಿವ್‌ಗೆ ವಿಮಾನ ಸೇವೆ ಪುನರಾರಂಭ

ನವದೆಹಲಿ (ಪಿಟಿಐ): ನವದೆಹಲಿ ಮತ್ತು ಇಸ್ರೇಲ್‌ನ ಟೆಲ್ ಅವಿವ್ ನಗರದ ನಡುವೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಏರ್ ಇಂಡಿಯಾದ ವಿಮಾನ ಸೇವೆಯು ಮೇ 16ರಿಂದ ಪುನರಾರಂಭವಾಗಲಿದೆ.

ಇಸ್ರೇಲ್ ಮತ್ತು ಇರಾನ್ ನಡುವೆ ಪ್ರಕ್ಷುಬ್ಧ ಪರಿಸ್ಥಿತಿ ತಲೆದೋರಿದ್ದರಿಂದ ವಿಮಾನ ಸೇವೆಯನ್ನು ರದ್ದು-ಪಡಿಸಲಾಗಿತ್ತು. ಮತ್ತೆ ಸೇವೆ ಆರಂಭಿಸಲಾಗುತ್ತಿದ್ದು, ವಾರದಲ್ಲಿ ಐದು ವಿಮಾನಗಳು ಟೆಲ್ ಅವಿವ್‌ಗೆ ಹಾರಾಟ ನಡೆಸಲಿವೆ ಎಂದು ಕಂಪನಿಯು ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಹಮಾಸ್ ಬಂಡುಕೋರರು, ಇಸ್ರೇಲ್ ಮೇಲೆ ದಾಳಿ ನಡೆಸಿದ್ದರು. ಇದರಿಂದ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ನಡುವೆ ಬಿಕ್ಕಟ್ಟು ತಲೆದೋರಿದ್ದರಿಂದ ಟೆಲ್ ಅವಿವ್‌ಗೆ ಏರ್ ಇಂಡಿಯಾವು ವಿಮಾನ ಸೇವೆಯನ್ನು ಸ್ಥಗಿತಗೊಳಿಸಿತ್ತು. ಬಳಿಕ ಮಾರ್ಚ್ 3ರಿಂದ ಸೇವೆಯನ್ನು ಪುನರಾರಂಭಿಸಿತ್ತು.

ಮತ್ತೆ ಮಧ್ಯಪ್ರಾಚ್ಯ ಬಿಕ್ಕಟ್ಟು ಉಲ್ಬಣಗೊಂಡಿದ್ದರಿಂದ ಏಪ್ರಿಲ್ 30ರ ವರೆಗೆ ವಿಮಾನ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು. ಬಳಿಕ ಇದನ್ನು ಮೇ 15ರ ವರೆಗೂ ವಿಸ್ತರಿಸಿತ್ತು.

ಸುದ್ದಿ 2 ನಿಮಿಷ

ಕೋಟಕ್ ಬ್ಯಾಂಕ್‌ಗೆ ₹4,133 ಕೋಟಿ ಲಾಭ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್, ಒಟ್ಟು ₹4,133 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,496 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 18ರಷ್ಟು ಏರಿಕೆಯಾಗಿದೆ. ಕೊನೆಯ ತ್ರೈಮಾಸಿಕದಲ್ಲಿ ವರಮಾನ ₹15,285 ಕೋಟಿ ಆಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಮಾಹಿತಿ ನೀಡಿದೆ.

2022–23ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ₹10,939 ಕೋಟಿ ನಿವ್ವಳ ಲಾಭಗಳಿಸಿತ್ತು. 2023–24ರಲ್ಲಿ ₹13,782 ಕೋಟಿ ಗಳಿಸಿದೆ. ಒಟ್ಟಾರೆ ಲಾಭದಲ್ಲಿ ಶೇ 26ರಷ್ಟು ಏರಿಕೆಯಾಗಿದೆ. ವಾರ್ಷಿಕ ವರಮಾನವು ₹41,334 ಕೋಟಿಯಿಂದ ₹56,072 ಕೋಟಿಗೆ ತಲುಪಿದೆ.

ವಾರ್ಷಿಕ ನಿವ್ವಳ ಬಡ್ಡಿ ವರಮಾನದಲ್ಲಿ ಶೇ 21ರಷ್ಟು ಏರಿಕೆಯಾಗಿದೆ. ₹21,552 ಕೋಟಿಯಿಂದ ₹25,993 ಕೋಟಿ ಆಗಿದೆ. ಮಾರ್ಚ್ ತ್ರೈಮಾಸಿಕದಲ್ಲಿ ನಿವ್ವಳ ವರಮಾನವು ಶೇ 13ರಷ್ಟು ಹೆಚ್ಚಳವಾಗಿದ್ದು, ₹6,909 ಕೋಟಿ ಗಳಿಸಿದೆ.

ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 1.39ರಷ್ಟಿದ್ದರೆ, ನಿವ್ವಳ ಎನ್‌ಪಿಎ ಶೇ 0.34ರಷ್ಟಿದೆ. ₹5 ಮುಖಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ₹2 ಲಾಭಾಂಶ ನೀಡಲು ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಅಮೆರಿಕ ಅಧ್ಯಕ್ಷ ಬೈಡನ್ ಹೇಳಿಕೆಗೆ ಪ್ರತಿಕ್ರಿಯಿಸಲು ವಿಶ್ವಸಂಸ್ಥೆ ನಕಾರ

ವಿಶ್ವಸಂಸ್ಥೆ (ಪಿಟಿಐ): ಭಾರತ, ಜಪಾನ್, ರಷ್ಯಾ ಮತ್ತು ಚೀನಾ 'ಅನ್ಯ ದೇಶ'ದ ಪ್ರಜೆಗಳನ್ನು ದ್ವೇಷಿಸುವ ರಾಷ್ಟ್ರಗಳು ಎಂಬ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಹೇಳಿಕೆ ಬಗ್ಗೆ ಪತ್ರಿಕ್ರಿಯಿಸಲು ವಿಶ್ವಸಂಸ್ಥೆಯ ವಕ್ತಾರ ನಿರಾಕರಿಸಿದ್ದಾರೆ.

'ಅವರು (ಬೈಡನ್) ಏನು ಹೇಳಿಕೆ ನೀಡಿದ್ದಾರೋ ಅದರ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ಡೆಪ್ಯುಟಿ ವಕ್ತಾರ ಫರ್ಹಾನ್ ಹಕ್ ಹೇಳಿದ್ದಾರೆ.

'ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಅದರ ಮೂಲ ಆಶಯಗಳು ಹಾಗೂ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಒಪ್ಪಂದದಂತೆ ನಡೆದುಕೊಳ್ಳುವುದು ಮುಖ್ಯ' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ವಾಷಿಂಗ್ಟನ್‌ನಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ್ದ ಬೈಡನ್, 'ಭಾರತ, ಜಪಾನ್, ರಷ್ಯಾ ಮತ್ತು ಚೀನಾ ರಾಷ್ಟ್ರಗಳು ಅಮೆರಿಕದಂತೆ ವಲಸಿಗರನ್ನು ಸ್ವಾಗತಿಸುವುದಿಲ್ಲ' ಎಂದು ಹೇಳಿದ್ದರು.

ಪಾಕಿಸ್ತಾನದಲ್ಲೂ ಯೋಗ ತರಗತಿ

ಇಸ್ಲಾಮಾಬಾದ್ (ಪಿಟಿಐ): ಭಾರತ ಮೂಲದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸ 'ಯೋಗ' ನೆರೆಯ ಪಾಕಿಸ್ತಾನಕ್ಕೂ ಅಧಿಕೃತವಾಗಿ ಕಾಲಿಟ್ಟಿದೆ.

ಇಸ್ಲಾಮಾಬಾದ್ ಉಸ್ತುವಾರಿ ಹೊಣೆ ಹೊತ್ತ ರಾಜಧಾನಿ ಅಭಿವೃದ್ಧಿ ಮಂಡಳಿಯು (ಸಿಡಿಎ) ತನ್ನ ಅಧಿಕೃತ ಫೇಸ್‌ಬುಕ್ ಪೇಜ್‌ನಲ್ಲಿ, 'ಇಸ್ಲಾಮಾಬಾದ್ ಮಹಾನಗರ ಪಾಲಿಕೆ ಎಫ್–9 ಪಾರ್ಕ್‌ನಲ್ಲಿ ಉಚಿತ ಯೋಗ ತರಗತಿ ಆರಂಭಿಸಿದೆ' ಎಂದು ತಿಳಿಸಿದೆ.

ಹಲವರು ಈಗಾಗಲೇ ತರಗತಿಗೆ ಸೇರ್ಪಡೆಯಾಗಿದ್ದಾರೆ ಎಂದು ಸಿಡಿಎ ತಿಳಿಸಿದೆ. ಜೊತೆಗೆ ಜನರು ಯೋಗಾಭ್ಯಾಸ ಮಾಡುತ್ತಿರುವ ಚಿತ್ರವನ್ನು ಹಂಚಿಕೊಂಡಿದೆ.

ವಿಶ್ವಸಂಸ್ಥೆಯು 2014 ಡಿಸೆಂಬರ್ 11ರಂದು ಭಾರತ ಮೂಲದ ಯೋಗಕ್ಕೆ ಜಾಗತಿಕ ಮನ್ನಣೆ ನೀಡಿ ಜೂನ್ 21 ಅನ್ನು 'ಅಂತರರಾಷ್ಟ್ರೀಯ ಯೋಗ ದಿನ'ವೆಂದು ಘೋಷಿಸಿತು. ಈ ಕುರಿತ ಪ್ರಸ್ತಾವಕ್ಕೆ 175 ರಾಷ್ಟ್ರಗಳು ಅಂದು ಸಹಿ ಹಾಕಿವೆ.

ಎಂಆರ್‌ಪಿಎಲ್: ವರಮಾನ ಶೇ 36.32ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), 2023–24ನೇ ಆರ್ಥಿಕ ವರ್ಷದಲ್ಲಿ ತೆರಿಗೆ ಕಳೆದು ₹3,596 ಕೋಟಿ ವರಮಾನ ಗಳಿಸಿದೆ. 2022–23ನೇ ಸಾಲಿಗೆ ಹೋಲಿಸಿದರೆ, ಕಂಪನಿಯ ವಾರ್ಷಿಕ ವರಮಾನವು ₹958 ಕೋಟಿಯಷ್ಟು (ಶೇ 36.32) ಹೆಚ್ಚಾಗಿದೆ.

2022–23ನೇ ಸಾಲಿನಲ್ಲಿ ಕಂಪನಿಯು ₹2,638 ಕೋಟಿ ವರಮಾನ ಗಳಿಸಿತ್ತು.

ಕಂಪನಿಯು 2023–24ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ತೆರಿಗೆ ಕಳೆದು ₹1,137 ಕೋಟಿ ಲಾಭ ಗಳಿಸಿದೆ. 2022–23ರ ಇದೇ ಅವಧಿಯಲ್ಲಿ ₹1908 ಕೋಟಿ ಲಾಭ ಗಳಿಸಿತ್ತು.

ಕಂಪನಿಯು 2024ರ ಜನವರಿ 22ರಂದು ಪ್ರತಿ ಷೇರಿಗೆ ₹1ರಂತೆ ಮಧ್ಯಂತರ ಡಿವಿಡೆಂಡ್ (ಷೇರಿನ ಶೇ 10ರಷ್ಟು) ಪಾವತಿಸಿತ್ತು. ಪ್ರತಿ ಷೇರಿಗೆ ₹2 ಡಿವಿಡೆಂಡ್ ನೀಡುವ ಬಗ್ಗೆ ಇದೇ 3ರಂದು ನಡೆದ ಕಂಪನಿಯ ನಿರ್ದೇಶಕರ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ವಾರ್ಷಿಕ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

2023–24ರ ನಾಲ್ಕನೇ ತ್ರೈಮಾಸಿಕದಲ್ಲಿ ಪ್ರತಿ ಬ್ಯಾರೆಲ್ ಕಚ್ಚಾತೈಲದಿಂದ ಬರುವ ನಿವ್ವಳ ಸಂಸ್ಕರಣಾ ಲಾಭದ ಪ್ರಮಾಣವು ₹946.38ಕ್ಕೆ (11.35 ಡಾಲರ್) ಕುಸಿದಿದೆ. 2022–23ರ ಇದೇ ಅವಧಿಯಲ್ಲಿ ನಿವ್ವಳ ಸಂಸ್ಕರಣಾ ಲಾಭದ ಪ್ರಮಾಣ ₹1,260.73 ರಷ್ಟಿತ್ತು (15.12 ಡಾಲರ್).

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಾಲಿನ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವೂ ₹29,190 ಕೋಟಿಗೆ ಇಳಿಕೆಯಾಗಿದೆ. 2022–23ರ ನಾಲ್ಕನೇ ತ್ರೈಮಾಸಿಕದಲ್ಲಿ ಕಾರ್ಯಾಚರಣೆಯ ವರಮಾನವು ₹29,401 ಕೋಟಿ ಇತ್ತು. 2022–23ರಲ್ಲಿ ಕಾರ್ಯಾಚರಣೆಯಿಂದ ₹1,24,736 ಕೋಟಿ ವರಮಾನ ಗಳಿಸಿದ್ದ ಕಂಪನಿಯು, 2023–24ನೇ ಸಾಲಿನಲ್ಲಿ ₹1,05,223 ಕೋಟಿ ಗಳಿಸಿದೆ.

ಕಂಪನಿಯ ಸಾಲ- ಬಂಡವಾಳ ಹೂಡಿಕೆ ಅನುಪಾತದಲ್ಲಿ ಸುಧಾರಣೆಯಾಗಿದ್ದು, 2023ರ ಮಾರ್ಚ್ 31ರಂದು 1.70ರಷ್ಟಿದ್ದ ಈ ಅನುಪಾತವು, ಪ್ರಸಕ್ತ ವರ್ಷದ ಮಾರ್ಚ್ 31ಕ್ಕೆ 0.94ರಷ್ಟಾಗಿದೆ ಎಂದು ಕಂಪನಿ ತಿಳಿಸಿದೆ.

ಕಂಪನಿಯು ನಾಲ್ಕನೇ ತ್ರೈಮಾಸಿಕದಲ್ಲಿ 45.1 ಲಕ್ಷ ಟನ್ ಕಚ್ಚಾತೈಲ ಸಂಸ್ಕರಿಸುವ ಮೂಲಕ 2015–16ನೇ ಸಾಲಿನ ದಾಖಲೆಯನ್ನು (44.2 ಲಕ್ಷ ಟನ್) ಸುಧಾರಿಸಿಕೊಂಡಿದೆ.

ಇಂಡೊನೇಷ್ಯಾ: ಪ್ರವಾಹ, ಭೂಕುಸಿತದಿಂದ 14 ಸಾವು

ಜಕಾರ್ತ (ಇಂಡೊನೇಷ್ಯಾ) (ಎಪಿ): ಇಂಡೊನೇಷ್ಯಾದ ಸುಲವೆಸಿ ದ್ವೀಪದಲ್ಲಿ ಪ್ರವಾಹ ಮತ್ತು ಭೂಕುಸಿತ ಸಂಭವಿಸಿದ್ದು, ಸುಮಾರು 14 ಜನರು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗುರುವಾರದಿಂದ ಸುರಿಯುತ್ತಿದ್ದ ಧಾರಾಕಾರ ಮಳೆಯಿಂದಾಗಿ ದಕ್ಷಿಣ ಸುಲವೇಸಿ ಪ್ರಾಂತ್ಯದ ಲುವು ಜಿಲ್ಲೆಯಲ್ಲಿ ಭೂಕುಸಿತ ಉಂಟಾಗಿದೆ ಎಂದು ಸ್ಥಳೀಯ ರಕ್ಷಣಾ ಮುಖ್ಯಸ್ಥ ಮೆಕ್ಸಿಯಾನಸ್ ಬೆಕಾಬೆಲ್ ಹೇಳಿದ್ದಾರೆ.

ಜಿಲ್ಲೆಯ ಹಲವು ವಸತಿಪ್ರದೇಶಗಳಲ್ಲಿ ಪ್ರವಾಹದಿಂದಾಗಿ 10 ಅಡಿಗಳಷ್ಟು ಎತ್ತರಕ್ಕೆ ನೀರು ನಿಂತಿದ್ದ ಪರಿಣಾಮ ಸಾವಿರಕ್ಕೂ ಅಧಿಕ ಮನೆಗಳಿಗೆ ಧಕ್ಕೆಯಾಗಿದೆ. 42 ಮನೆಗಳು ಕೊಚ್ಚಿಕೊಂಡು ಹೋಗಿವೆ ಎಂದು ತಿಳಿಸಿದ್ದಾರೆ.

ಪ್ರವಾಹದಿಂದ ತೊಂದರೆ ಸಿಲುಕಿದವರನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳಿಸಿದ್ದಾರೆಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆಯ ವಕ್ತಾರ ಅಬ್ದುಲ್ ಮುಹಾರಿ ಶನಿವಾರ ತಿಳಿಸಿದ್ದಾರೆ.

ಇಂಡೊನೇಷ್ಯಾದ ದಕ್ಷಿಣ ಸುಲವೆಸಿ ದ್ವೀಪದ ವಾಜೊ ಎಂಬ ಪ್ರದೇಶದಲ್ಲಿ ಪ್ರವಾಹ ಪೀಡಿತ ಪ್ರದೇಶಗಳ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು —ಎಪಿ ಚಿತ್ರ

ಮುಂಬೈ ಧಾರಣೆ

ಶೇಂಗಾ	
4-5-2024	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495(1495)
ಸೋಯಾ ಕಚ್ಚಾ	857(857)
ಪಾಮ್ ವಾರದ ಡೆಲಿವರಿ	888 (888)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	₹71,000 (70,800)
ಬೆಳ್ಳಿ ಕೆ.ಜಿ	₹79,975 (79,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೆನಡಾದಿಂದ ಮಾಹಿತಿ ನಿರೀಕ್ಷೆ ಸಚಿವ ಜೈಶಂಕರ್

ಭುವನೇಶ್ವರ (ರಾಯಿಟರ್ಸ್): ಸಿಖ್ ಪ್ರತ್ಯೇಕವಾದಿ ಹತ್ಯೆ ಪ್ರಕರಣದಲ್ಲಿ ಮೂವರು ಭಾರತೀಯರ ಬಂಧನದ ಬಗ್ಗೆ ಕೆನಡಾ ಪೊಲೀಸರಿಂದ ಮಾಹಿತಿಗಾಗಿ ಕಾಯುತ್ತಿದ್ದೇವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಶನಿವಾರ ತಿಳಿಸಿದ್ದಾರೆ.

ಭುವನೇಶ್ವರದಲ್ಲಿ ಮಾತನಾಡಿದ ಅವರು, 'ಬಂಧನದ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡಿದ್ದೇನೆ. ಬಂಧಿತರು ಯಾವುದಾದರೂ ಗುಂಪಿನೊಂದಿಗೆ ನಂಟು ಹೊಂದಿದ್ದಾರೆ ಎಂಬ ಶಂಕೆ ಇದೆ. ಯಾವುದಕ್ಕೂ, ಕೆನಡಾ ಪೊಲೀಸರು ನೀಡುವ ಮಾಹಿತಿ ನಿರೀಕ್ಷಿಸುತ್ತಿದ್ದೇವೆ' ಎಂದರು.

ನಿಜ್ಜರ್ ಹತ್ಯೆ: ಮೂವರು ಭಾರತೀಯರ ಸೆರೆ

ಕೃತ್ಯದಲ್ಲಿ ಇನ್ನೂ ಹಲವರು ಭಾಗಿ: ಕೆನಡಾ ಅಧಿಕಾರಿಗಳ ಹೇಳಿಕೆ

ಒಟ್ಟಾವಾ/ನ್ಯೂಯಾರ್ಕ್ (ಪಿಟಿಐ): ಕೆನಡಾ ನಿವಾಸಿ, ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿ ಮೂವರು ಭಾರತೀಯ ಪ್ರಜೆಗಳನ್ನು ಕೆನಡಾ ಅಧಿಕಾರಿಗಳು ಬಂಧಿಸಿದ್ದಾರೆ.

'ಪ್ರಕರಣ ಕುರಿತ ತನಿಖೆ ಇನ್ನೂ ಪೂರ್ಣಗೊಂಡಿಲ್ಲ. ಈ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಇತರರನ್ನು ಶೀಘ್ರವೇ ಬಂಧಿಸಲಾಗುವುದು' ಎಂದು ಹೇಳಿದ್ದಾರೆ.

ಕರಣ್ ಬ್ರಾರ್ (22), ಕಮಲ್‌ಪ್ರೀತ್ ಸಿಂಗ್ (22) ಮತ್ತು ಕರಣ್‌ಪ್ರೀತ್ ಸಿಂಗ್ (28) ಬಂಧಿತರು. ಎಡ್ಮಂಟನ್‌ನಲ್ಲಿ ನೆಲೆಸಿರುವ ಈ ಮೂವರು ಭಾರತೀಯ ಪ್ರಜೆಗಳ ವಿರುದ್ಧ ಕೊಲೆ ಮತ್ತು ಕೊಲೆಗೆ ಸಂಚು ರೂಪಿಸಿದ ಆರೋಪ ಹೊರಿಸಲಾಗಿದೆ.

ನಿಜ್ಜರ್ ಹತ್ಯೆಗೆ ಸಂಬಂಧಿಸಿ ಈ ಮೂವರನ್ನು ಬ್ರಿಟಿಷ್ ಕೊಲಂಬಿಯಾ ಮತ್ತು ಆಲ್ಬರ್ಟಾ ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿಎಂಪಿ) ಹಾಗೂ ಎಡ್ಮಂಟನ್ ಪೊಲೀಸ್ ಸರ್ವಿಸ್ ಸದಸ್ಯರ ನೆರವಿನಿಂದ ಐಎಚ್‌ಐಟಿ ತನಿಖಾಧಿ-ಕಾರಿಗಳು ಶುಕ್ರವಾರ ಬೆಳಿಗ್ಗೆ ಬಂಧಿಸಿದರು.

ಈ ಮೂವರು, 2023ರ ಜೂನ್ 18ರಂದು ಬ್ರಿಟಿಷ್ ಕೊಲಂಬಿಯಾದ ಸರ್ರೆಯಲ್ಲಿನ ಗುರುದ್ವಾರದ ಹೊರಗೆ ನಿಜ್ಜರ್ (45) ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಆರೋಪ ಎದುರಿಸುತ್ತಿದ್ದಾರೆ. ಬಂಧಿತರು,ಈ ಕೃತ್ಯಕ್ಕೆ ಭಾರತ ಸರ್ಕಾರ ನಿಯೋಜಿಸಿದ್ದ ಹಂತಕ ತಂಡದ ಸದಸ್ಯರು ಎಂಬುದಾಗಿ ಕೆನಡಾ ಶಂಕಿಸಿದೆ.

ಕರಣ್ ಬ್ರಾರ್

ಕರಣ್‌ಪ್ರೀತ್

ಕಮಲ್‌ಪ್ರೀತ್

ನ್ಯಾಯಾಲಯದ ದಾಖಲೆಗಳ ಪ್ರಕಾರ, ಕೊಲೆಯ ಆರೋಪವನ್ನು ಬ್ರಾರ್ ಮೇಲೆ ಹೊರಿಸಲಾಗಿದೆ. ಬ್ರಾರ್, 2023ರ ಮೇ 1ರಂದು ಎಡ್ಮಂಟನ್ ಮತ್ತು ಸರ್ರೆಯಲ್ಲಿ ಕೊಲೆಗೆ ಸಂಚು ರೂಪಿಸಿದ ಆರೋಪವನ್ನು ಎದುರಿಸುತ್ತಿದ್ದಾರೆ ಎಂದು ವರದಿ ಹೇಳಿದೆ.

'ಕೆನಡಾ ಪ್ರಜೆ ನಿಜ್ಜರ್ ಹತ್ಯೆಯಲ್ಲಿ ಭಾರತ ಸರ್ಕಾರ ಭಾಗಿಯಾಗಿದೆಯೇ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಸಲಾಗುತ್ತಿದೆ' ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ (ಆರ್‌ಸಿಎಂಪಿ) ಹೇಳಿದೆ.

'ತನಿಖೆ ಇಲ್ಲಿಗೆ ಮುಗಿಯುವುದಿಲ್ಲ. ಈ ನರಹತ್ಯೆಯಲ್ಲಿ ಇತರರು ಪಾತ್ರ ವಹಿಸಿರುವುದು ನಮಗೆ ಗೊತ್ತಿದೆ. ಇದರಲ್ಲಿ ಭಾಗಿಯಾದ ಎಲ್ಲರನ್ನೂ ಗುರುತಿಸಿ ಬಂಧಿಸಲು ನಾವು ಬದ್ಧರಾಗಿದ್ದೇವೆ' ಎಂದು ತನಿಖಾ ತಂಡದ (ಐಎಚ್‌ಐಟಿ) ಸೂಪರಿಂಟೆಂಡೆಂಟ್ ಮಂದೀಪ್ ಮೂಕರ್ ಹೇಳಿದ್ದಾರೆ.

'ಪೊಲೀಸರು ಈ ವರೆಗೆ ಸಂಗ್ರಹಿಸಿದ ಸಾಕ್ಷ್ಯಗಳ ಸ್ವರೂಪದ ಬಗ್ಗೆ ಯಾವುದೇ ಮಾಹಿತಿ ನೀಡಲಾಗದು. ನಿಜ್ಜರ್ ಹತ್ಯೆಯ ಹಿಂದಿನ ಉದ್ದೇಶದ ಬಗ್ಗೆಯೂ ಪ್ರತಿಕ್ರಿಯಿ-ಸಲಾಗದು' ಎಂದು ಆರ್‌ಸಿಎಂಪಿ ಸಹಾಯಕ ಕಮಿಷನರ್ ಡೇವಿಡ್ ಟೆಬೌಲ್ ಹೇಳಿದ್ದಾರೆ.

ಕೆನಡಾದಲ್ಲಿ ಭಾರತೀಯ 'ಸ್ಲೀಪರ್ ಸೆಲ್ ಏಜೆಂಟ್' ಇದ್ದಾರೆಯೇ ಎಂಬ ಪ್ರಶ್ನೆಗೆ ಟೆಬೌಲ್, 'ಈ ಕುರಿತು ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ತನಿಖೆ ಪ್ರಗತಿಯಲ್ಲಿದೆ' ಎಂದು ಪ್ರತಿಕ್ರಿಯಿಸಿರುವುದಾಗಿ 'ಸಿಬಿಸಿ ನ್ಯೂಸ್' ವರದಿ ಮಾಡಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟ್‌ಗಳ ಸಂಭಾವ್ಯ ಪಾತ್ರವಿದೆ ಎಂದು ಆರೋಪಿಸಿದ ನಂತರ, ಭಾರತ ಮತ್ತು ಕೆನಡಾ ನಡುವಿನ ಸಂಬಂಧ ತೀವ್ರ ಬಿಗಡಾಯಿಸಿತ್ತು.

ವಿದ್ಯಾರ್ಥಿ ವೀಸಾ ಮೇಲೆ ಕೆನಡಾ ಪ್ರವೇಶ?

'ನಿಜ್ಜರ್ ಹತ್ಯೆ ಪ್ರಕರಣದ ಶಂಕಿತರು ವಿದ್ಯಾರ್ಥಿ ವೀಸಾಗಳ ಮೇಲೆ ಕೆನಡಾ ಪ್ರವೇಶಿಸಿದ್ದಾರೆ. ಆದರೆ, ಅವರು ನಿಜ್ಜರ್‌ಗೆ ಗುಂಡು ಹಾರಿಸಿದಾಗ ಭಾರತೀಯ ಗುಪ್ತಚರ ಸಂಸ್ಥೆಯ ನಿರ್ದೇಶನದಂತೆ ಕೆಲಸ ಮಾಡಿರಬಹುದು' ಎಂದು ಮೂಲಗಳನ್ನು ಉಲ್ಲೇಖಿಸಿ 'ಗ್ಲೋಬಲ್ ನ್ಯೂಸ್' ವರದಿ ಮಾಡಿದೆ.

'ಈ ಮೂವರೂ ಭಾರತೀಯ ಪ್ರಜೆಗಳಾಗಿದ್ದು, ಕಳೆದ 3 ಅಥವಾ 5 ವರ್ಷಗಳಿಂದ ಕೆನಡಾದಲ್ಲಿ ಕಾಯಂ ಅಲ್ಲದ ನಿವಾಸಿಗಳಾಗಿ ವಾಸಿಸುತ್ತಿದ್ದಾರೆ. ನಿಜ್ಜರ್ ಸಾವಿನ ತನಿಖೆಯ ಮೊದಲು ಶಂಕಿತರ ಬಗ್ಗೆ ಪೊಲೀಸರಿಗೆ ಮಾಹಿತಿ ಇರಲಿಲ್ಲ' ಎಂದು ಐಎಚ್‌ಐಟಿ ಉಸ್ತುವಾರಿ ಅಧಿಕಾರಿ ಸೂಪರಿಂಟೆಂಡೆಂಟ್ ಮಂದೀಪ್ ಮೂಕರ್ ಹೇಳಿದರು.

'ಐಎಚ್‌ಐಟಿ ತನ್ನ ತನಿಖೆ ಮುಂದುವರೆಸುವ ಭರವಸೆಯಲ್ಲಿ ಆರೋಪಿಗಳ ಭಾವಚಿತ್ರಗಳನ್ನು ಬಿಡುಗಡೆ ಮಾಡುತ್ತಿದೆ. ನಿಜ್ಜರ್ ಹತ್ಯೆಗೂ ವಾರಗಳ ಮೊದಲು ಅಥವಾ ನಂತರದಲ್ಲಿ ಈ ವ್ಯಕ್ತಿಗಳನ್ನು ಸರ್ರೆಯಲ್ಲಿ ಅಥವಾ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಾರಾದರೂ ನೋಡಿರಬಹುದು. ಈ ಬಗ್ಗೆ ಮಾಹಿತಿ ಇರುವ ಯಾರು ಬೇಕಾದರೂ ಐಎಚ್‌ಐಟಿಯನ್ನು ಸಂಪರ್ಕಿಸಲು ಮನವಿ ಮಾಡಿದ್ದೇವೆ. ಭಾರತದೊಂದಿಗೆ ಸಮನ್ವಯವು ಕಳೆದ ಹಲವಾರು ವರ್ಷಗಳಿಂದ ಸವಾಲಿನ ಮತ್ತು ಕಷ್ಟಕರವಾಗಿದೆ. ಸಿಖ್ ಸಮುದಾಯದ ಬೆಂಬಲ ಇಲ್ಲದೆಯೇ ತನಿಖೆಯು ಈ ಹಂತ ತಲುಪುತ್ತಿರಲಿಲ್ಲ' ಎಂದು ಅವರು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Accounts & Finance

ಕರ್ನಾಟಕದಲ್ಲಿ ಬ್ಯಾಂಕ್ ಗಳಿಗೆ ಗೋಲ್ಡ್ ಅಪ್ರೈಸರ್ ಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ (15 25 ಸಾವಿರ ರೂ) ಅನುಭವೀ ಅಪ್ರೈಸರ್ ಗಳು ಸಂಪರ್ಕಿಸಿ 99643 90467/ 9591621718

Drivers

ಪ್ರಸಿದ್ಧ ಟ್ರಾನ್ಸ್ ಪೋರ್ಟ್ ಆಫೀಸಿಗೆ ನುರಿತ ಟ್ರಕ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ: 9845351200/ 9845059742

Part-Time Jobs

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 18,000-20,000/- ವರೆಗೆ,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 8050064327, 8050064328.

Security & Detectives

RAXA SECURITY Services Pvt Ltd. is Hiring for security Guard positions in Bangalore for an MNC client. Good Opportunity for Basic English speaking and Writing Male and Female Candidates, Local language will be an Added advantage(Kannada). Qualification required 10th: pass, Age: should be between 18-35.For Registration Contact : N.K. Yadav - 6300676517 & Y.S. Shahid - 6281557937, Raxa Academy.

ರಕ್ಷಾ ಸೆಕ್ಯುರಿಟಿ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರಿನಲ್ಲಿ MNC ಕ್ಲೈಂಟ್‌ಗಾಗಿ ಭದ್ರತಾ ಸಿಬ್ಬಂದಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುತ್ತಿದೆ. ಮೂಲ ಇಂಗ್ಲಿಷ್ ಮಾತನಾಡುವ ಮತ್ತು ಬರೆಯುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಉತ್ತಮ ಅವಕಾಶ, ಸ್ಥಳೀಯ ಭಾಷೆ ಹೆಚ್ಚುವರಿ ಪ್ರಯೋಜನವಾಗಿದೆ (ಕನ್ನಡ).ವಿದ್ಯಾರ್ಹತೆ ಅಗತ್ಯ 10 ನೇ: ಉತ್ತೀರ್ಣ, ವಯಸ್ಸು: 18-35 ರ ನಡುವೆ ಇರಬೇಕು.ನೋಂದಣಿಗಾಗಿ ಸಂಪರ್ಕಿಸಿ: ಎನ್.ಕೆ. ಯಾದವ್- 6300676517 & ವೈ.ಎಸ್. ಶಾಹಿದ್- 6281557937, ರಕ್ಷಾ ಅಕಾಡೆಮಿ.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್-ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ-ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್-ದಾಮ್ ಯಾತ್ರಾ ವಿಶೇಷ, 24.05.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

08.06.2024 15 ದಿನಗಳ ಪುರಿ,ಕೋನಾರ್ಕ್ ಭುವನೇಶ್ವರ್ ಪುರಿಜಗನ್ನಾಥ್ ಗಯಾ,ಕಾಶಿ ಅಯೋಧ್ಯ ನೇಪಾಳ ಮುಕ್ತಿನಾಥ ಗಜೇಂದ್ರಮೋಕ್ಷ. 27.06.2024 7/13 ದಿನಗಳ ದೆಹಲಿ ವೈಷ್ಣೋದೇವಿ ಕಾಶ್ಮೀರ್ ಗುಲ್ಮಾರ್ಗ್ ಅಮರನಾಥ್ ಅಮೃತ್ಸರ್ ವಾಘಾಬಾರ್ಡರ್ ಐಷ್ವನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70. 9342287551 8050629305

14ದಿನಗಳ ಚಾರ್ಧಾಮ್ ಪ್ರವಾಸ 20.06.24 ಮತ್ತು 14ದಿನಗಳ ನೇಪಾಳ ಮುಕ್ತಿನಾಥ ಕಾಶಿ ಅಯೋಧ್ಯೆ ಪ್ರವಾಸ 21.05.24. Twite Holidays Call: 9742810701

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಹೊಣೆಯಲ್ಲ.
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ.ಸಿ. ಅಂಕಪ್ಪರೆಡ್ಡಿ
ನಿಧನ: 05.05.2021
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳು ಕಳೆದರೂ, ನಿಮ್ಮ ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಪ್ರತಿದಿನವೂ ನಿಮ್ಮ ನೆನಪಿನಲ್ಲಿರುವ....
ಶ್ರೀಮತಿ ಕಾಂತಮ್ಮ ಮತ್ತು ಚಂದ್ರ ಶೇಖರ್ ಎ. ಹಾಗೂ ಕುಟುಂಬದವರು,

13ನೇ ವರ್ಷದ ಪುಣ್ಯಸ್ಮರಣೆ



ಬಿ. ಮರಿಯಪ್ಪನವರು
(ಐಟಿಐ–ನಿವೃತ್ತ)
ನಿಧನ: 05–05–2011
ಕವಿತಾ ವೈನ್ ಸೆಂಟರ್
ವಿಜಯನಗರ, ಬೆಂಗಳೂರು–560040
ನಿಮ್ಮ ಪ್ರೀತಿ, ಆದರ್ಶಗಳೇ ನಮಗೆ ದಾರಿದೀಪ, ನಿಮ್ಮ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಆಶಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ...
ಧರ್ಮಪತ್ನಿ– ಶ್ರೀಮತಿ ಹೆಚ್. ಎಸ್. ಜಯಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು. ಫೋ: 23154164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸಂಕ್ಷಿಪ್ತ ಸುದ್ದಿ

ಕ್ರಿಮಿನಲ್ ಸಂಚು ಆರೋಪ ಸೇರ್ಪಡೆ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಷಣವನ್ನು ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗಿರುವ ವಿಡಿಯೊ ಪ್ರಕರಣದಲ್ಲಿ ಕಾಂಗ್ರೆಸ್ ಸಾಮಾಜಿಕ ಜಾಲತಾಣ ತಂಡದ ರಾಷ್ಟ್ರೀಯ ಸಂಚಾಲಕ ಅರುಣ್ ಬೀರೆಡ್ಡಿ ಅವರ ವಿರುದ್ಧ ಈಗಾಗಲೇ ಎಫ್‌ಐಆರ್ ದಾಖಲಾಗಿದ್ದು, ಈಗ ಅದರಲ್ಲಿ ಕ್ರಿಮಿನಲ್ ಸಂಚು ಆರೋಪವನ್ನು ಸೇರಿಸಲಾಗಿದೆ ಎಂದು ದೆಹಲಿ ಪೊಲೀಸರು ಶನಿವಾರ ತಿಳಿಸಿದರು.

ತೆಲಂಗಾಣ ಮೂಲದವರಾದ ಅರುಣ್ ಅವರನ್ನು ಪೊಲೀಸರು ಶುಕ್ರವಾರವೇ ಬಂಧಿಸಿದ್ದರು. ಅಮಿತ್ ಶಾ ಭಾಷಣ ತಿರುಚಿದ ಪ್ರಕರಣದಲ್ಲಿ ಬಂಧಿತರಾದ ಮೊದಲಿಗರು ಇವರು.

ಕಾಂಗ್ರೆಸ್‌ನ ಸಾಮಾಜಿಕ ಜಾಲತಾಣ ನಿರ್ವಹಿಸುವ ಪ್ರಮುಖರಲ್ಲಿ ಅರುಣ್ ಅವರೂ ಒಬ್ಬರು. ತಿರುಚಲಾಗಿರುವ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಆರೋಪಿಗಳಲ್ಲಿ ಪ್ರಮುಖರು.

ಹುಂಡಿಗೆ ₹102 ಕೋಟಿ ಕಾಣಿಕೆ

ತಿರುಪತಿ (ಆಂಧ್ರಪ್ರದೇಶ) (ಪಿಟಿಐ): ‘ತಿರುಪತಿಯ ವೆಂಕಟೇಶ್ವರ ದೇವಾಲಯದ ಹುಂಡಿಯಲ್ಲಿ ಏಪ್ರಿಲ್ ತಿಂಗಳಿನಲ್ಲಿ ₹102 ಕೋಟಿ ಕಾಣಿಕೆ ಸಂಗ್ರಹವಾಗಿದೆ’ ಎಂದು ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮಾರೆಡ್ಡಿ ತಿಳಿಸಿದ್ದಾರೆ.

‘20 ಲಕ್ಷಕ್ಕೂ ಅಧಿಕ ಭಕ್ತರು ಕಳೆದ ತಿಂಗಳು ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಇವರ ಪೈಕಿ ಎಂಟು ಲಕ್ಷಕ್ಕೂ ಅಧಿಕ ಭಕ್ತರು ಕೇಶಮುಂಡನ ಮಾಡಿಸಿಕೊಂಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಏಪ್ರಿಲ್‌ನಲ್ಲಿ 94 ಲಕ್ಷಕ್ಕೂ ಹೆಚ್ಚು ಲಡ್ಡುಗಳು ಮಾರಾಟವಾಗಿವೆ. 40 ಲಕ್ಷ ಭಕ್ತರು ಅನ್ನಪ್ರಸಾದ ಸ್ವೀಕರಿಸಿದ್ದಾರೆ’ ಎಂದಿದ್ದಾರೆ.

ರಾಜ್ಯಪಾಲ ಬೋಸ್ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಪ್ರಕರಣ

ತನಿಖೆಗೆ ತಂಡ ರಚಿಸಿದ ಪೊಲೀಸ್

ಕೋಲ್ಕತ್ತ (ಪಿಟಿಐ): ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ರಾಜಭವನದಲ್ಲಿ ಮಹಿಳಾ ಉದ್ಯೋಗಿ ಒಬ್ಬರಿಗೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಕುರಿತು ತನಿಖೆ ನಡೆಸಲು ಕೋಲ್ಕತ್ತ ಪೊಲೀಸರು ತನಿಖಾ ತಂಡ ರಚಿಸಿದ್ದಾರೆ.

ಆನಂದ ಬೋಸ್

ತಂಡವು ತನ್ನ ತನಿಖೆಯ ಭಾಗವಾಗಿ ಮುಂದಿನ ಕೆಲವು ದಿನಗಳಲ್ಲಿ ಸಾಕ್ಷಿಗಳ ಹೇಳಿಕೆ ಪಡೆಯಲಿದೆ. ಸಿ.ಸಿ.ಟಿವಿ ಕ್ಯಾಮೆರಾ ದೃಶ್ಯಗಳನ್ನು ಒದಗಿಸುವಂತೆ ರಾಜಭವನಕ್ಕೆ ಮನವಿ ಮಾಡಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಸಿ.ಸಿ ಟಿವಿ ಕ್ಯಾಮೆರಾ ದೃಶ್ಯಾವಳಿ ಒದಗಿಸುವಂತೆ ಪೊಲೀಸರ ಮನವಿ
- ಅಗತ್ಯಬಿದ್ದರೆ ರಾಜಭವನಕ್ಕೂ ಭೇಟಿ
- ಮಹಿಳಾ ಅಧಿಕಾರಿಯಿಂದ ತನಿಖೆ

ಸಂವಿಧಾನದ 361ನೇ ವಿಧಿಯ ಅಡಿಯಲ್ಲಿ, ರಾಜ್ಯಪಾಲರ ಅಧಿಕಾರಾವಧಿಯಲ್ಲಿ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸುವಂತಿಲ್ಲ.

ರಾಜ್ಯಪಾಲರಿಗೆ ಇರುವ ಇಂತಹ ಸಾಂವಿಧಾನಿಕ ವಿನಾಯಿತಿಯ ಹೊರತಾಗಿಯೂ ಪೊಲೀಸರು ತನಿಖೆಯನ್ನು ಹೇಗೆ ಪ್ರಾರಂಭಿಸುತ್ತಾರೆ ಎಂದು ಕೇಳಿದಾಗ, ಮತ್ತೊಬ್ಬ ಹಿರಿಯ ಪೊಲೀಸ್ ಅಧಿಕಾರಿ, ‘ಇಂತಹ ಯಾವುದೇ ದೂರು ಬಂದ ನಂತರ, ವಿಶೇಷವಾಗಿ ಮಹಿಳಾ ಅಧಿಕಾರಿಯಿಂದ ತನಿಖೆ ನಡೆಸುವುದು ಸಾಮಾನ್ಯ ಕ್ರಮ’ ಎಂದು ಹೇಳಿದರು.

‘ಯಾರಾದರೂ ಯಾವುದೇ ದೂರು ನೀಡಿದರೂ ಅದನ್ನು ನಾವು ತನಿಖೆ ಮಾಡಬೇಕು. ಇದು ಕ್ರಮಬದ್ಧತೆ. ನಾವು ಅದನ್ನು ಪಾಲಿಸುತ್ತಿದ್ದೇವೆ. ಅಗತ್ಯವಿದ್ದರೆ ನಾವು ರಾಜಭವನಕ್ಕೂ ಭೇಟಿ ನೀಡಬಹುದು’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ರಾಜ್ಯಪಾಲರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ರಾಜಭವನದ ಗುತ್ತಿಗೆ ಮಹಿಳಾ ಉದ್ಯೋಗಿ ಒಬ್ಬರು ಶುಕ್ರವಾರ ಕೋಲ್ಕತ್ತ ಪೊಲೀಸರಿಗೆ ಲಿಖಿತ ದೂರು ನೀಡಿದ್ದಾರೆ.

ರಾಜ್ಯಪಾಲರು, ಚುನಾವಣಾ ಸಮಯದಲ್ಲಿ ತಮ್ಮ ರಾಜಕೀಯ ನಾಯಕರನ್ನು ಮೆಚ್ಚಿಸಲು ರಾಜಭವನಕ್ಕೆ ತನಿಖಾ ನೆಪದಲ್ಲಿ ಅನಧಿಕೃತ ಅಥವಾ ಕಾನೂನುಬಾಹಿರವಾಗಿ ಪೊಲೀಸರು ಭೇಟಿ ನೀಡುವುದನ್ನು ನಿರ್ಬಂಧಿಸಿ ಆದೇಶ ಹೊರಡಿಸಿದ್ದಾರೆ ಎಂದು ರಾಜಭವನ ಈಗಾಗಲೇ ಹೇಳಿಕೆ ನೀಡಿದೆ.

ಅಭಿಯಾನ ಪಕ್ಷಿಗಳನ್ನು ಉಳಿಸಿ ಅಭಿಯಾನದಲ್ಲಿ ಭಾಗಿಯಾದ ಜಮ್ಮುವಿನ ಶಾಲೆಯೊಂದರ ಮಕ್ಕಳು ಶನಿವಾರ ಮಣ್ಣಿನ ಮಡಿಕೆಗಳಿಗೆ ನೀರು ತುಂಬಿಸಿದರು –ಪಿಟಿಐ ಚಿತ್ರ

ಶಿಶು ಕೊಲೆ: ತಾಯಿಗೆ ನ್ಯಾಯಾಂಗ ಬಂಧನ

ಕೊಚ್ಚಿ (ಪಿಟಿಐ): ನವಜಾತ ಶಿಶುವನ್ನು ಕೊಂದು ರಸ್ತೆಗೆ ಎಸೆದ ಆರೋಪದ ಮೇಲೆ 23 ವರ್ಷದ ತಾಯಿಯನ್ನು ಇಲ್ಲಿನ ಸ್ಥಳೀಯ ನ್ಯಾಯಾಲಯ ಶನಿವಾರ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಯುವತಿ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೆ ತೆರಳಿದ ಎರ್ನಾಕುಲಂನ ಹೆಚ್ಚುವರಿ ಮುಖ್ಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್, ಅವರನ್ನು ಇದೇ 18ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮರಣೋತ್ತರ ಪರೀಕ್ಷಾ ವರದಿಯ ಪ್ರಕಾರ, ಹೆರಿಗೆ ಬಳಿಕ ಮಗುವಿನ ಕತ್ತು ಹಿಸುಕಿ ಕೊಂದು ಕೊಚ್ಚಿಯ ರಸ್ತೆಯೊಂದರಲ್ಲಿ ಎಸೆಯಲಾಗಿದೆ. ಮಗುವಿನ ತಲೆಬುರುಡೆಗೂ ಹಾನಿಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವತಿಯನ್ನು ಶುಕ್ರವಾರ ಬಂಧಿಸಲಾಯಿತು ಎಂದು ಅವರು ತಿಳಿಸಿದ್ದಾರೆ.

ಪ್ರಕರಣದ ವಿವರ: ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂದು ಶಂಕಿಸಲಾಗಿರುವ ಯುವತಿಯು ಶುಕ್ರವಾರ ಮುಂಜಾನೆ ತನ್ನ ಅಪಾರ್ಟ್‌ಮೆಂಟ್ ಸ್ನಾನದ ಕೋಣೆಯಲ್ಲಿ ಮಗುವಿನ ಜನ್ಮ ನೀಡಿದ್ದಾರೆ. ನಂತರ ಫ್ಲಾಟ್ ಎದುರಿನ ರಸ್ತೆಯಲ್ಲಿ ನವಜಾತ ಶಿಶುವನ್ನು ಎಸೆದಿದ್ದಾರೆ ಎಂದು ಪೊಲೀಸರು ವಿವರಿಸಿದ್ದಾರೆ. ಯುವತಿಯು ತ್ರಿಶ್ಶೂರ್‌ನ ತನ್ನ ಸ್ನೇಹಿತನಿಗೆ ಸಂಬಂಧಿಸಿದಂತೆ ಕೆಲ ಮಾಹಿತಿ ನೀಡಿದ್ದು, ಈ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ತನ್ನ ಮನೆಯ ಸ್ನಾನದ ಕೋಣೆಯಲ್ಲಿ ಶುಕ್ರವಾರ ಬೆಳಿಗ್ಗೆ 5ರಿಂದ 5.30ರ ಸುಮಾರಿಗೆ ಮಗುವಿಗೆ ಜನ್ಮ ನೀಡಿರುವುದಾಗಿ ಯುವತಿ ತಿಳಿಸಿದ್ದಾರೆ. ತನ್ನ ತಾಯಿಯು ಕೋಣೆಯ ಬಾಗಿಲು ತಟ್ಟಿದಾಗ ಗಾಬರಿಗೊಂಡು ಮಗುವನ್ನು ಎಸೆದಿದ್ದಾಗಿ ಅವರು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಯುವತಿ ಗರ್ಭಿಣಿಯಾಗಿರುವ ಕುರಿತಾಗಲಿ, ಅವರಿಗೆ ಸ್ನಾನದ ಕೋಣೆಯಲ್ಲಿ ಹೆರಿಗೆಯಾದ ಬಗ್ಗೆಯಾಗಲಿ ಅವರ ಪೋಷಕರಿಗೆ ತಿಳಿದಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಉಳಿತಾಯ: ಕೇರಳದ ನಡೆ

ಸ್ವಯಂ ನಿಯಂತ್ರಣದ ಮೂಲಕ ಮೇ 3ರಂದು 200 ಮೆಗಾವಾಟ್ ಉಳಿಕೆ

ತಿರುವನಂತಪುರ (ಪಿಟಿಐ): ‘ರಾಜ್ಯದಾದ್ಯಂತ ಅತಿ ಹೆಚ್ಚು ವಿದ್ಯುತ್ ಬಳಸುವ ಸಮಯದಲ್ಲಿ ಸ್ವಯಂ ನಿಯಂತ್ರಿಸಲು ಕೆಲ ಸೂಚನೆಗಳನ್ನು ಹೊರಡಿಸಿದ್ದರಿಂದ ಮೇ 3ರಂದು 200 ಮೆಗಾವಾಟ್ ವಿದ್ಯುತ್ ಉಳಿತಾಯವಾಗಿದೆ’ ಎಂದು ಕೇರಳ ಸರ್ಕಾರವು ತಿಳಿಸಿದೆ.

ಗ್ರಾಹಕರು, ಅದರಲ್ಲೂ ದೊಡ್ಡ ಕೈಗಾರಿಕೆಗಳ ಸಹಕಾರದಿಂದ ಇದು ಸಾಧ್ಯವಾಗಿದೆ ಎಂದು ಇಂಧನ ಸಚಿವ ಕೆ. ಕೃಷ್ಣನ್‌ಕುಟ್ಟಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೇರಳ ರಾಜ್ಯ ವಿದ್ಯುತ್ ಮಂಡಳಿ (ಕೆಎಸ್‌ಇಬಿ) ಪ್ರಸ್ತಾಪಿಸಿರುವ ನಿರ್ಬಂಧಗಳು ಗೃಹ ವಿದ್ಯುತ್ ಗ್ರಾಹಕರ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಲು ಸರ್ಕಾರ ಯತ್ನಿಸುತ್ತಿದೆ ಎಂದು ಸಚಿವರು ಪ್ರತಿಕ್ರಿಯಿಸಿದರು.

‘ವಿದ್ಯುತ್ ಉಳಿತಾಯಕ್ಕೆ ಸಂಬಂಧಿಸಿದಂತೆ ಎಲ್ಲರೂ ಸ್ವಯಂ ನಿರ್ಬಂಧಗಳನ್ನು ಹೇರಿಕೊಂಡು, ಸಹಕಾರ ನೀಡಬೇಕು. ಮಾಧ್ಯಮಗಳು ಇದನ್ನು ಅಭಿಯಾನ ಆಗಿಸಬೇಕು. ಇಲ್ಲದಿದ್ದರೆ ನಾವೆಲ್ಲರೂ ವಿದ್ಯುತ್ ತೊಂದರೆಗಳನ್ನು ಎದುರಿಸಬೇಕಾಗುತ್ತದೆ’ ಎಂದು ಅವರು ಹೇಳಿದರು.

ರಾತ್ರಿ 10ರಿಂದ 2 ಗಂಟೆಯವರೆಗಿನ ಹೆಚ್ಚು ಬೇಡಿಕೆಯ ಅವಧಿಯಲ್ಲಿ ಕೆಲ ಪ್ರಸ್ತಾಪಿತ ನಿರ್ಬಂಧಗಳನ್ನು ಕೆಎಸ್‌ಇಬಿ ಹೊರತಂದಿದೆ. ರಾತ್ರಿ 9ರ ಬಳಿಕ ವಾಣಿಜ್ಯ ಸಂಸ್ಥೆಗಳು ದೀಪಗಳನ್ನು ಆರಿಸಬೇಕು ಮತ್ತು ಹವಾನಿಯಂತ್ರಿತ ತಾಪಮಾನವನ್ನು 26 ಡಿಗ್ರಿ ಸೆಲ್ಸಿಯಸ್ ಅಥವಾ ಅದಕ್ಕಿಂತ ಹೆಚ್ಚು ಹೊಂದಿಸುವಂತೆ ಸೂಚಿಸಿದೆ ಎಂದು ಸಚಿವರು ವಿವರಿಸಿದರು.

ಕೇರಳದಲ್ಲಿ ಬಿಸಿ ಗಾಳಿ: 12 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

ತಿರುವನಂತಪುರ (ಪಿಟಿಐ): ಕೇರಳದ 14 ಜಿಲ್ಲೆಗಳ ಪೈಕಿ 12 ಜಿಲ್ಲೆಗಳಲ್ಲಿ ಮೇ 6ರವರೆಗೆ ಬಿಸಿ ಗಾಳಿ ವಾತಾವರಣ ಮುಂದುವರಿಯಲಿದ್ದು, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಯೆಲ್ಲೋ ಅಲರ್ಟ್ ಘೋಷಿಸಿದೆ.

ಪಾಲಕ್ಕಾಡ್‌ನಲ್ಲಿ ಗರಿಷ್ಠ ತಾಪಮಾನ 39 ಡಿಗ್ರಿ ಸೆಲ್ಸಿಯಸ್, ಕೊಲ್ಲಂ, ತ್ರಿಶ್ಶೂರ್, ಕೋಯಿಕ್ಕೋಡ್‌ನಲ್ಲಿ 38 ಡಿಗ್ರಿ ಸೆಲ್ಸಿಯಸ್, ಅಲಪ್ಪುಳ, ಕೊಟ್ಟಾಯಂ, ಪತ್ತನಂತಿಟ್ಟ, ಕಣ್ಣೂರು ಜಿಲ್ಲೆಗಳಲ್ಲಿ 37 ಡಿಗ್ರಿ ಸೆಲ್ಸಿಯಸ್, ತಿರುವನಂತಪುರ, ಎರ್ನಾಕುಲಂ, ಮಲಪ್ಪುರಂ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ 36 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗುವ ಸಾಧ್ಯತೆ ಇದೆ ಎಂದು ಐಎಂಡಿ ಹೇಳಿದೆ.

ರಾತ್ರಿ ವೇಳೆಯು ಬಿಸಿ ವಾತಾವರಣದ ಸಾಧ್ಯತೆ ಇರುವುದರಿಂದ ಅಲಪ್ಪುಳ, ಕೋಯಿ ಕ್ಕೋಡ್ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಜೈಪುರ ವರದಿ: ರಾಜಸ್ಥಾನದ ಕೆಲವು ಭಾಗದಲ್ಲಿ ಮುಂದಿನ ಕೆಲವು ದಿನ ಗರಿಷ್ಠ ತಾಪಮಾನದಲ್ಲಿ 2ರಿಂದ 3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ರಾಜಸ್ಥಾನದ ಕೆಲವು ಸ್ಥಳಗಳಲ್ಲಿ ಮೇ 7ರಂದು ಗರಿಷ್ಠ ತಾಪಮಾನ 44ರಿಂದ 45 ಡಿಗ್ರಿ ಸೆಲ್ಸಿಯಸ್ ಆಗುವ ಸಾಧ್ಯತೆಯಿದೆ. ಜೋಧಪುರ ಮತ್ತು ಬೀಕಾನೆರ್ ವಿಭಾಗದಲ್ಲಿ ಶಾಖಾಘಾತದ ಬಿಸಿ ಗಾಳಿಯ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಜೈಸಲ್ಮೇರ್, ಜೋಧಪುರ, ಬಾರ್ಮರ್, ನಾಗೌರ್, ಬೀಕಾನೆರ್, ಚುರು, ಜುಂಜುನು, ಕೋಟಾ, ಬರಾನ್ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಮೇ 8ರಂದು ಶಾಖಾಘಾತದ ಬಿಸಿ ಗಾಳಿಯ ಸಾಧ್ಯತೆಯಿದೆ ಎಂದಿದ್ದಾರೆ.

‘ಪರಕೀಯರನ್ನು ದ್ವೇಷಿಸಲ್ಲ’

ನವದೆಹಲಿ (ಪಿಟಿಐ): ಭಾರತವು ಪರಕೀಯರನ್ನು ದ್ವೇಷಿಸುವ ದೇಶವಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಈಚೆಗೆ ವಾಷಿಂಗ್ಟನ್‌ನಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಭಾರತ, ಜಪಾನ್, ರಷ್ಯಾ, ಚೀನಾ ಪರಕೀಯರನ್ನು ದ್ವೇಷಿಸುವ ದೇಶಗಳಾಗಿವೆ. ಅವು ವಲಸಿಗರನ್ನು ಬಯಸುವುದಿಲ್ಲ. ಹೀಗಾಗಿ ಅವು ಆರ್ಥಿಕವಾಗಿ ಹೆಣಗಾಡುತ್ತಿವೆ ಎಂದು ಹೇಳಿದ್ದರು. ಅದಕ್ಕೆ ಭಾರತದ ವಿದೇಶಾಂಗ ಸಚಿವರು ಪ್ರತಿಕ್ರಿಯೆ ನೀಡಿದ್ದಾರೆ.

‘ಬೈಡನ್ ಹೇಳಿಕೆಗಳು ಭಾರತದ ವಾಸ್ತವಕ್ಕೆ ಹೊಂದಿಕೆ ಆಗುವುದಿಲ್ಲ. ವಿವಿಧ ಸಮಾಜಗಳ ವಿಭಿನ್ನ ಜನರು ಭಾರತಕ್ಕೆ ಬಂದಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

‘ಇನ್ನು ನಮ್ಮ ಆರ್ಥಿಕತೆಯೂ ಕುಂಠಿತವಾಗಿಲ್ಲ. ದೇಶವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ’ ಎಂದಿದ್ದಾರೆ.

ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ

ಪ್ರಧಾನ ಕಛೇರಿ: ಮೃತ್ಯುಂಜಯ ನಗರ, ಬೆಳಗಾವಿ ರಸ್ತೆ, ಬೈಲಹೊಂಗಲ–591102. ಫೋ: 08288–234219

ಸ್ಥಾಪನೆ: 01–01–1992

R.No: JRL/A/Regn-1105/2007-2008

KITTUR RANI CHANNAMMA URBAN CREDIT SOUHARD SAHAKARI LTD., BAILHONGAL

Head Office: Mrutyunjay Nagar, Belagavi Road, Bailhongal-591102. Ph.: 08288-234219.

ಸ್ವಾಧೀನತಾ ನೋಟೀಸು

ಸರ್ಫೇಸಿಯಾ ಕಾಯ್ದೆ– 2002ರ ಕಲಂ13(4)ರ ಅಡಿಯಲ್ಲಿ ಆರ್ಥಿಕ ಸ್ವತ್ತುಗಳ ಪುನರ್ ನಿರ್ಮಾಣ ಮತ್ತು ಭದ್ರತೆ ಹಾಗೂ ಹಿತಾಸಕ್ತಿಗಳ ಜಾರಿ ಕಾಯಿದೆ 2002ರ ಅಡಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು **ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ. ಬೈಲಹೊಂಗಲ, ಶಾಖೆ ಮುಖ್ಯ ಕಛೇರಿ, ಮೃತ್ಯುಂಜಯ ನಗರ ಕ್ರಾಸ್, ಬೆಳಗಾವಿ ರಸ್ತೆ, ಬೈಲಹೊಂಗಲ** ಇದರ ಸಕ್ಷಮ ಪ್ರಾಧಿಕಾರಿಯಾಗಿದ್ದು, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 3ನ್ನು ಓದಿಕೊಂಡಂತೆ ಸದರಿ ಕಾಯ್ದೆಯ ಕಲಂ 13(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 60 ದಿನಗಳ ಮಾಗಣಿ ನೋಟೀಸನ್ನು ವಿತರಿಸಿ, ಈ ಕೆಳಗೆ ಹೆಸರಿಸಿರುವವರ ಎದುರು ನಮೂದಿಸಿರುವ ಮೊತ್ತವನ್ನು ಸದರಿ ನೋಟೀಸ ಸ್ವೀಕರಿಸಿದ 60 ದಿನಗಳ ಒಳಗಾಗಿ ಸಂದಾಯ ಮಾಡುವಂತೆ ಕರೆ ನೀಡಿದ್ದರೂ ಸದರಿ ಮೊತ್ತವನ್ನು ಸಂದಾಯ ಮಾಡಲು ಸಾಲಗಾರರು ವಿಫಲರಾಗಿರುವುದರಿಂದ ಈ ಕೆಳಗೆ ಹೆಸರಿಸಿರುವ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ನೋಟೀಸಿನ ಮೂಲಕ ತಿಳಿಸುವುದೇನೆಂದರೇ, ಈ ಕೆಳಗೆ ಸಹಿ ಮಾಡಿರುವವರು ಸದರಿ ನಿಯಮಗಳ ನಿಯಮ 8ನ್ನು ಓದಿಕೊಂಡಂತೆ ಸದರಿ ಕಾಯ್ದೆಯ ಕಲಂ 13(4)ರ ಅಡಿಯಲ್ಲಿ ಪ್ರದತ್ತ ಅಧಿಕಾರವನ್ನು ಚಲಾಯಿಸಿ, ಇಲ್ಲಿ ಕೆಳಗೆ ವಿವರಿಸಿರುವ ಸಾಲಗಾರರ ವತ್ತಿ ಆಸ್ತಿಗಳನ್ನು ಸಹಕಾರಿಯ ತಾಬಾಕ್ಕೆ ತೆಗೆದುಕೊಂಡಿರುತ್ತಾರೆ. ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಈ ಕೆಳಗೆ ವಿವರಿಸಿರುವ ಆಸ್ತಿಗಳ ಕುರಿತು ಯಾವುದೇ ರೀತಿಯ ವ್ಯವಹಾರ ಮಾಡಬಾರದು, ಒಂದು ವೇಳೆ ವ್ಯವಹಾರ ಮಾಡಿದಲ್ಲಿ ಅವರು ಸಹಕಾರಿಗೆ ಪಾವತಿಸಬೇಕಾದ ಸಾಲದ ಮೊತ್ತ, ಅದರ ಮೇಲಿನ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಪಾವತಿಸಲು ಬಾಧ್ಯಸ್ಥರಾಗುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಅ. ನಂ.	ಸಾಲ ಖಾತೆ ಸಂಖ್ಯೆ	ಸಾಲಗಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ಬಾಕಿ ಇರುವ ಮೊತ್ತ	ಸಹಕಾರಿಗೆ ಒತ್ತೆ ಇಟ್ಟ ಆಸ್ತಿಗಳ ವಿವರ
1	1502/139	**ಶ್ರೀಮತಿ ಪೂಜಾ ಕಿರಣ ಸಾಧುನವರ** ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ. **ಜಾಮೀನುದಾರರು;** 1. ಶ್ರೀಮತಿ ತೃಪ್ತಿ ಸಂತೋಷ ಪಾಟೀಲ ಪ್ಲಾಟ ನಂ. 114, ಕಫೆ ಟ್ರಿಯೋದ ಹತ್ತಿರ ಜಾಧವನಗರ, ಬೆಳಗಾವಿ 2. ಶ್ರೀಮತಿ ಶೃತಿ ತಂದೆ ವಿರುಪಾಕ್ಷಿ ಸಾಧುನವರ 4ನೇ ಮಹಡಿ, ಪ್ರೇರಣಾಪಿಯು ಕಾಲೇಜ, ಹಿಂದವಾಡಿ, ಬೆಳಗಾವಿ	ರೂ. 26,86,23,957/–	ಬೆಳಗಾವಿ ಶಹರದ ಕಾರ್ಪೋರೇಶನ್ ಹದ್ದಿಯ ಸಿಟಿಎಸ್ ನಂ. 3327/1ಬಿ, 3327/ಬಿ & 3327/ಎ2 ಒಟ್ಟು ಕ್ಷೇತ್ರ 24534.20 ಚದರ ಅಡಿಗಳು ಚಕಬಂಧಿ; **ಪೂರ್ವಕ್ಕೆ** ಸಿಟಿಎಸ್ ನಂ. 4099 **ಪಶ್ಚಿಮಕ್ಕೆ** ಗೋಂಧಳಿ ಗಲ್ಲಿಯ ರಸ್ತೆ **ಉತ್ತರಕ್ಕೆ;** ಸಿಟಿಎಸ್ ನಂ. 3326, 3326/1 & 3327/ಎ1 **ದಕ್ಷಿಣಕ್ಕೆ** ಸಿಟಿಎಸ್ ನಂ. 3327/ಎ1 ನ ಉಳಿದ ಭಾಗ
2	1502/138	**ಪಾಲುದಾರರು ಮೆ. ರಿಲಯನ್ಸ್ ಎಸ್ಟೇಟ್ ಡೆವೆಲಪರ್ಸ್ ಹುಬ್ಬಳ್ಳಿ.** 1. ಶ್ರೀ ವಿರುಪಾಕ್ಷಪ್ಪ ಶಿ, ಸಾಧುನವರ #421/2, ಮೃತ್ಯುಂಜಯನಗರ. ಬೈಲಹೊಂಗಲ 2. ಶ್ರೀಮತಿ. ಉಷಾ ವಿರುಪಾಕ್ಷಿ ಸಾಧುನವರ # 421/2, ಮೃತ್ಯುಂಜಯನಗರ. ಬೈಲಹೊಂಗಲ. 3. ಶ್ರೀ ಕಿರಣ ವಿರುಪಾಕ್ಷಿ ಸಾಧುನವರ ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ. **ಜಾಮೀನುದಾರರು;** 1. ಶ್ರೀ ರುದ್ರಪ್ಪ ಶಿವಪ್ಪ ಮುರಗೋಡ ಮುಕ್ಕಾಂ ಪೋಸ್ಟ್; ಅಮಟೂರ ತಾ॥ ಬೈಲಹೊಂಗಲ, ಜಿಲ್ಲೆ; ಬೆಳಗಾವಿ 2. ಶ್ರೀ ಮಹಾವೀರ ನೇಮಣ್ಣ ಭಾವಿ ಮುಕ್ಕಾಂ ಪೋಸ್ಟ್; ಅಮಟೂರ ತಾ॥ ಬೈಲಹೊಂಗಲ, ಜಿಲ್ಲೆ; ಬೆಳಗಾವಿ	ರೂ. 85,41,92,750/–	ಹುಬ್ಬಳ್ಳಿ ನಗರದ ನಿಲಿಜಿನ್ ರಸ್ತೆಯಲ್ಲಿರುವ ಸಿಟಿಎಸ್ ನಂ. 171/ಎ+ಬಿ+ಸಿ+ಡಿ+ಐ ಒಟ್ಟು ಕ್ಷೇತ್ರ 120360 ಚದರ ಅಡಿಗಳು. ಚಕಬಂಧಿ; **ಪೂರ್ವಕ್ಕೆ;** ಕ್ಲಬ್ ರಸ್ತೆ **ಪಶ್ಚಿಮಕ್ಕೆ;** ನಿಲಿಜಿನ್ ರಸ್ತೆ **ಉತ್ತರಕ್ಕೆ;** ಶ್ರೀ ನೂಲ್ವಿಯವರ ಆಸ್ತಿ **ದಕ್ಷಿಣಕ್ಕೆ;** ಮಡಿಮನ್ ಕಾಂಪ್ಲೆಕ್ಸ್
3	1502/115	**ಶ್ರೀಮತಿ ಕೃಪಾ ರಾಜೇಶ ಕರಾಳೆ** #335,Karale building, Near Sangli High school, Mahaveer nagar, **Sangli**-416416 (Maharastra State) **ಜಾಮೀನುದಾರರು;** 1. ಶ್ರೀಮತಿ ಪೂಜಾ ಕಿರಣ ಸಾಧುನವರ ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ. 2. ಶ್ರೀ ವೀರನಗೌಡ ಶಿವನಗೌಡ ಪಾಟೀಲ ಮುಕ್ಕಾಂ ಪೋಸ್ಟ; ನೇರ್ಲಿ ತಾ॥ ಹುಕ್ಕೇರಿ. ಜಿಲ್ಲೆ; ಬೆಳಗಾವಿ	ರೂ. 10,04,44,020/–	ಬೆಳಗಾವಿ ತಾಲೂಕ ಪಂಥಬಾಳೆಕುಂದ್ರಿ ಗ್ರಾಮ ಪಂಚಾಯತ ವ್ಯಾಪ್ತಿಯ ಪಂಚಾಯತ ನಂ.625 ಮತ್ತು 626 ಅನುಕ್ರಮವಾಗಿ ಇ–ಸ್ವತ್ತು ನಂ. 150400301900101339ಮತ್ತು 150400301900101749 ಒಟ್ಟು ಕ್ಷೇತ್ರ 8000 ಚದರ ಅಡಿಗಳು **ಚಕಬಂಧಿ; ಆಸ್ತಿ ನಂ. 625ಕ್ಕೆ** **ಪೂರ್ವಕ್ಕೆ;** ಪ್ಲಾಟ್ ನಂ. 135 **ಪಶ್ಚಿಮಕ್ಕೆ;** ಪ್ಲಾಟ್ ನಂ. 137 **ಉತ್ತರಕ್ಕೆ;** ರಸ್ತೆ **ದಕ್ಷಿಣಕ್ಕೆ;** ಪ್ಲಾಟ್ ನಂ. 116 **ಆಸ್ತಿ ನಂ.626ಕ್ಕೆ** **ಪೂರ್ವಕ್ಕೆ;** ಪ್ಲಾಟ್ ನಂ. 115 **ಪಶ್ಚಿಮಕ್ಕೆ;** ಪ್ಲಾಟ್ ನಂ. 117 **ಉತ್ತರಕ್ಕೆ;** ಪ್ಲಾಟ್ ನಂ. 136 **ದಕ್ಷಿಣಕ್ಕೆ;** ರಸ್ತೆ
4	1502/144	**ಶ್ರೀಮತಿ ಶೃತಿ ತಂದೆ ವಿರುಪಾಕ್ಷಪ್ಪ ಸಾಧುನವರ** 4ನೇ ಮಹಡಿ, ಪ್ರೇರಣಾ ಪಿಯು ಕಾಲೇಜ, ಗೊಮಟೇಶ ವಿದ್ಯಾಪೀಠದ ಹತ್ತಿರ ಹಿಂದವಾಡಿ, ಬೆಳಗಾವಿ **ಜಾಮೀನುದಾರರು;** 1. ಶ್ರೀ ವೀರನಗೌಡ ಶಿವನಗೌಡ ಪಾಟೀಲ ಬಸವನಗರ, 6ನೇ ಅಡ್ಡ ರಸ್ತೆ, ಬೈಲಹೊಂಗಲ 2. ಶ್ರೀಮತಿ ಪೂಜಾ ಕಿರಣ ಸಾಧುನವರ ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ.	ರೂ. 23,19,22,936/–	ಬೆಳಗಾವಿ ಶಹರದ ಹಿಂದವಾಡಿ(ಭಾಗ್ಯನಗರ) ವ್ಯಾಪ್ತಿಯ ಆಸ್ತಿ ಸಿಟಿಎಸ್ ನಂ. 2975 ಕ್ಷೇತ್ರ 13423.65 ಚದರ ಅಡಿಗಳು. **ಚಕಬಂಧಿ;** **ಪೂರ್ವಕ್ಕೆ;** ಸಿಟಿಎಸ್ ನಂ. 2974 **ಪಶ್ಚಿಮಕ್ಕೆ;** ಸಿಟಿಎಸ್ ನಂ. 2976 **ಉತ್ತರಕ್ಕೆ;** ವಿದ್ಯಾಪೀಠ ರಸ್ತೆ **ದಕ್ಷಿಣಕ್ಕೆ;** ಸಿಟಿಎಸ್ ನಂ. 2976
5	1502/136	**ಶ್ರೀ ಕಿರಣ ವಿರುಪಾಕ್ಷಪ್ಪ ಸಾಧುನವರ** ಸಾ॥ ಬೈಲಹೊಂಗಲ. ಹಾಲಿ ವಸ್ತಿ, ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ. **ಜಾಮೀನುದಾರರು;** 1. ಶ್ರೀ ಮಲ್ಲಪ್ಪ ನಿಂಗಪ್ಪ ದಳವಾಯಿ, ಮುಕ್ಕಾಂ ಪೋಸ್ಟ; ಅಮಟೂರ ತಾ॥ಬೈಲಹೊಂಗಲ, ಜಿ॥ ಬೆಳಗಾವಿ 2. ಶ್ರೀ ಅಕ್ಬರಸಾಬ ಹಸನಸಾಬ ಮಕಾನದಾರ ಮುಕ್ಕಾಂ ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿ॥ ಬೆಳಗಾವಿ	ರೂ. 9,86,00,767/–	ಬೆಳಗಾವಿ ನಗರದ ಕಂಗ್ರಾಳಿ ಕೆಎಚ್(ಕುಮಾರೇಶ್ವರನಗರ) ವ್ಯಾಪ್ತಿಯ ರಿ.ಸ. ನಂ. 199/9 ರಲ್ಲಿಯ 30ಗುಂಟೆಗಳ ಆಸ್ತಿ ಚಕಬಂಧಿ; **ಪೂರ್ವಕ್ಕೆ;** ರಿ.ಸ. ನಂ. 199/10 **ಪಶ್ಚಿಮಕ್ಕೆ;** ರಿ.ಸ.ನಂ. 199/1 **ಉತ್ತರಕ್ಕೆ;** ರಿ.ಸ.ನಂ. 199/2ರ ಬೂಡಾ ಪ್ರಾಧಿಕಾರದಿಂದ ಸ್ವಾದೀನ ಪಡಿಸಿಕೊಂಡ ಕ್ಷೇತ್ರ
6	1502156	**ಶ್ರೀ ಕಿರಣ ವಿರುಪಾಕ್ಷಪ್ಪ ಸಾಧುನವರ** ಸಾಧುನವರ ಫಾರ್ಮ ಹೌಸ್, ಬೆಳಗಾವಿ ಪಬ್ಲಿಕ್ ಶಾಲೆಯ ಹತ್ತಿರ ಶಿಂಧೊಳ್ಳಿ ತಾ, ಜಿ॥ ಬೆಳಗಾವಿ. **ಜಾಮೀನುದಾರರು;** 1. ಶ್ರೀ ಅನೀಲಕುಮಾರ ಚನ್ನಪ್ಪ ಅಂಗಡಿ ಮೌನೇಶ್ವರನಗರ, ಬೈಲಹೊಂಗಲ ಜಿಲ್ಲೆ॥ ಬೆಳಗಾವಿ 2. ಶ್ರೀ ವೀರನಗೌಡ ರಾಮನಗೌಡ ಪಾಟೀಲ ಬಸವನಗರ, 7ನೇ ಕ್ರಾಸ್ ಬೈಲಹೊಂಗಲ ಜಿಲ್ಲೆ॥ ಬೆಳಗಾವಿ		ಧಾರವಾಡ ತಾಲೂಕನ ಮುಮ್ಮಿಗಟ್ಟಿ ಗ್ರಾಮದ ಕೃಷಿಯೇತರ ಜಮೀನು ರಿ.ಸ.ನಂ. 182/1 ಕ್ಷೇತ್ರ 6ಎಕರೆ 26 ಗುಂಟೆ ಆಸ್ತಿ. ಚಕಬಂಧಿ; **ಪೂರ್ವಕ್ಕೆ;** ರಿ.ಸ.ನಂ.183/1 & 183/5 **ಪಶ್ಚಿಮಕ್ಕೆ;** ರಿ.ಸ. ನಂ. 181 **ಉತ್ತರಕ್ಕೆ;** ರಿ.ಸ. ನಂ. 182/2 **ದಕ್ಷಿಣಕ್ಕೆ;** ರಿ.ಸ.ನಂ. 186 ಮತ್ತು ಧಾರವಾಡ ತಾಲೂಕನ ಮುಮ್ಮಿಗಟ್ಟಿ ಗ್ರಾಮದ ಕೃಷಿಯೇತರ ಜಮೀನು ರಿ.ಸ.ನಂ. 183/5 ಕ್ಷೇತ್ರ 1ಎಕರೆ 37 ಗುಂಟೆ ಆಸ್ತಿ. ಚಕಬಂಧಿ; **ಪೂರ್ವಕ್ಕೆ;** ರಿ.ಸ. ನಂ. 183/2 **ಪಶ್ಚಿಮಕ್ಕೆ;** ರಿ.ಸ. ನಂ. 182/1 & 182/2 **ಉತ್ತರಕ್ಕೆ;** ರಿ.ಸ. ನಂ. 183/1 **ದಕ್ಷಿಣಕ್ಕೆ;** ರಿ.ಸ.ನಂ. 183/6 ರಾಷ್ಟ್ರೀಯ ಹೆದ್ದಾರಿ 4 ಸ್ವಾಧೀನ ಕ್ಷೇತ್ರ
7	1502/167	**ಶ್ರೀಮತಿ. ತೃಪ್ತಿ ಸಂತೋಷ ಪಾಟೀಲ** ಪ್ಲಾಟ ನಂ. 114, ಕಫೆ ಟ್ರಿಯೋದ ಹತ್ತಿರ, ಜಾಧವನಗರ, ಬೆಳಗಾವಿ **ಜಾಮೀನುದಾರರು;** 1. ಶ್ರೀಮತಿ ಶೃತಿ ತಂದೆ ವಿರುಪಾಕ್ಷಪ್ಪ ಸಾಧುನವರ 4ನೇ ಮಹಡಿ, ಪ್ರೇರಣಾ ಪಿಯು ಕಾಲೇಜ, ಗೊಮಟೇಶ ವಿದ್ಯಾಪೀಠದ ಹತ್ತಿರ ಹಿಂದವಾಡಿ, ಬೆಳಗಾವಿ	ರೂ. 13,76,82,850/–	ಯರಗಟ್ಟಿ ಗ್ರಾಮ ಪಂಚಾಯತ ವ್ಯಾಪ್ತಿಯ ಪಂಚಾಯತ ನಂ. 1287/ಎ(ಇ–ಸ್ವತ್ತು ನಂ. 150401000300120169) ಒಟ್ಟು ಕ್ಷೇತ್ರ 5696 ಚದರ ಅಡಿಗಳು **ಚಕಬಂಧಿ;** **ಪೂರ್ವಕ್ಕೆ;** ಸಾರ್ವಜನಿಕ ಶೌಚಾಲಯ **ಪಶ್ಚಿಮಕ್ಕೆ;** ಶ್ರೀ ಈರಣ್ಣ ಈ ಗಡಾದ ಇವರ ಆಸ್ತಿ **ಉತ್ತರಕ್ಕೆ;** ರಸ್ತೆ **ದಕ್ಷಿಣಕ್ಕೆ;** ಶ್ರೀ ಬಾಳಾದ &
8	1502/173	**ಶ್ರೀಮತಿ. ತೃಪ್ತಿ ಸಂತೋಷ ಪಾಟೀಲ** ಪ್ಲಾಟ ನಂ. 114, ಕಫೆ ಟ್ರಿಯೋದ ಹತ್ತಿರ, ಜಾಧವನಗರ, ಬೆಳಗಾವಿ **ಜಾಮೀನುದಾರರು;** 1. ಶ್ರೀಮತಿ ಉಷಾ ವಿರುಪಾಕ್ಷಿ ಸಾಧುನವರ #421/2, ಮೃತ್ಯುಂಜಯನಗರ, ಬೈಲಹೊಂಗಲ ಜಿಲ್ಲೆ; ಬೆಳಗಾವಿ 2. ಶ್ರೀಮತಿ ಶೃತಿ ತಂದೆ ವಿರುಪಾಕ್ಷಪ್ಪ ಸಾಧುನವರ 4ನೇ ಮಹಡಿ,ಪ್ರೇರಣಾ ಪಿಯು ಕಾಲೇಜ, ಗೊಮಟೇಶ ವಿದ್ಯಾಪೀಠದ ಹತ್ತಿರ ಹಿಂದವಾಡಿ, ಬೆಳಗಾವಿ	ರೂ. 11,45,07,615/–	ಚನ್ನಮ್ಮ ಕಿತ್ತೂರ ಗ್ರಾಮ ಪಂಚಾಯತ ವ್ಯಾಪ್ತಿಯ ಪಂಚಾಯತ ನಂ. 1706/45 (ಇ–ಸ್ವತ್ತು ನಂ. 150400200700120087) ಒಟ್ಟು ಕ್ಷೇತ್ರ 30000ಚದರ ಅಡಿಗಳು (247.12ಚದರ.ಮೀಟರ) ಚಕಬಂಧಿ; **ಪೂರ್ವಕ್ಕೆ;** ಪ್ಲಾಟ ನಂ. 44 **ಪಶ್ಚಿಮಕ್ಕೆ;** ಸರಕಾರಿ ಶಾಲೆ **ಉತ್ತರಕ್ಕೆ;** ಶಿಕ್ಷಕರ ಸಹಕಾರಿ ಸಂಘದ ಕಟ್ಟಡ **ದಕ್ಷಿಣಕ್ಕೆ;** ರಸ್ತೆ
9	1502/132	**ಶ್ರೀ ಮಲ್ಲಪ್ಪ ನಿಂಗಪ್ಪ ದಳವಾಯಿ** ಮುಕ್ಕಾಂ, ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ **ಜಾಮೀನುದಾರರು;** 1. ಶ್ರೀ ಧೀರಜ ಚಂದ್ರಶೇಖರ ಸಾಧುನವರ, ವಿದ್ಯಾನಗರ, ಕೆಆರ್‌ಸಿ ಕಾಲೇಜ ಹತ್ತಿರ, ಬೆಳಗಾವಿ ರಸ್ತೆ, ಬೈಲಹೊಂಗಲ–591102 ಜಿಲ್ಲೆ॥ ಬೆಳಗಾವಿ 2. ಶ್ರೀ ರುದ್ರಪ್ಪ ಶಿವಪ್ಪ ಮುರಗೋಡ ಮುಕ್ಕಾಂ ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ	ರೂ. 11,19,89,649/–	ಧಾರವಾಡ ತಾಲೂಕ ನೀರಲಕಟ್ಟಿ ಗ್ರಾಮದ ಹದ್ದಿಯಲ್ಲಿಯ ಆಸ್ತಿ ರಿ.ಸ.ನಂ. 270/4 ಕ್ಷೇತ್ರ 4ಎಕರೆ. **ಚಕಬಂಧಿ;** **ಪೂರ್ವಕ್ಕೆ;** ರಿ.ಸ.ನಂ. 270/5 **ಪಶ್ಚಿಮಕ್ಕೆ;** ರಿ.ಸ.ನಂ. 270/3 **ಉತ್ತರಕ್ಕೆ** ರಿ.ಸ.ನಂ. 267&269 **ದಕ್ಷಿಣಕ್ಕೆ;** ನರೇಂದ್ರ ಗ್ರಾಮದ ಹದ್ದು & ರಸ್ತೆ
10	1502/131	**ಶ್ರೀ ಮಹಾವೀರ ನೇಮಣ್ಣ ಭಾವಿ** ಮುಕ್ಕಾಂ ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ **ಜಾಮೀನುದಾರರು;** 1. ಶ್ರೀ ಚಂದ್ರಶೇಖರ ಶಿವಲಿಂಗಪ್ಪ ಸಾಧುನವರ, ವಿದ್ಯಾನಗರ, ಕೆಆರ್‌ಸಿ ಕಾಲೇಜ ಹತ್ತಿರ, ಬೆಳಗಾವಿ ರಸ್ತೆ, ಬೈಲಹೊಂಗಲ–591102 2. ಶ್ರೀ ಮಲ್ಲಪ್ಪ ನಿಂಗಪ್ಪ ದಳವಾಯಿ, ಮುಕ್ಕಾಂ, ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ	ರೂ. 3,77,39,304/–	ಧಾರವಾಡ ತಾಲೂಕ ನೀರಲಕಟ್ಟಿ ಗ್ರಾಮದ ಹದ್ದಿಯಲ್ಲಿಯ ಆಸ್ತಿ ರಿ.ಸ.ನಂ. 270/8 ಕ್ಷೇತ್ರ 4ಎಕರೆ. ಚಕಬಂಧಿ; **ಪೂರ್ವಕ್ಕೆ;** ರಿ.ಸ.ನಂ. 285 **ಪಶ್ಚಿಮಕ್ಕೆ;** ರಿ.ಸ.ನಂ.270/5 &271 **ಉತ್ತರಕ್ಕೆ** ರಿ.ಸ.ನಂ. 273 **ದಕ್ಷಿಣಕ್ಕೆ;** ರಿ.ಸ.ನಂ. 270/9 & 272
11	1502/16	**ಶ್ರೀಮತಿ ಉಷಾ ವಿರುಪಾಕ್ಷಿ ಸಾಧುನವರ** #421/2, ಮೃತ್ಯುಂಜಯ ನಗರ, ಬೈಲಹೊಂಗಲ, ಜಿಲ್ಲೆ; ಬೆಳಗಾವಿ **ಜಾಮೀನುದಾರರು;** 1. ಶ್ರೀಮತಿ ಶೃತಿ ತಂದೆ ವಿರುಪಾಕ್ಷಪ್ಪ ಸಾಧುನವರ 4ನೇ ಮಹಡಿ, ಪ್ರೇರಣಾ ಪಿಯು ಕಾಲೇಜ, ಗೊಮಟೇಶ ವಿದ್ಯಾಪೀಠದ ಹತ್ತಿರ ಹಿಂದವಾಡಿ, ಬೆಳಗಾವಿ 2. ಶ್ರೀಮತಿ ಪೂಜಾ ಕಿರಣ ಸಾಧುನವರ, ಸಾಧುನವರ ಫಾರ್ಮಹೌಸ್, ಶಿಂಧೊಳಿ ಮಾಳ, ಬೆಳಗಾವಿ ಪಬ್ಲಿಕ್ ಸ್ಕೂಲ ಹತ್ತಿರ ಶಿಂಧೊಳ್ಳಿ ತಾ, ಜಿಲ್ಲೆ: ಬೆಳಗಾವಿ	ರೂ. 1,16,01,419/–	ಬೆಳಗಾವಿ ನಗರದ ಕಾರ್ಪೋರೇಶನ್ ಹದ್ದಿಯ ಕಂಗ್ರಾಳ ಗಲ್ಲಿಯಲ್ಲಿಯ ಆಸ್ತಿ ಸಿಟಿಎಸ್ ನಂ. 4099/ಎ ಕ್ಷೇತ್ರ 308.25 ಚದರ ಮೀಟರಗಳಲ್ಲಿ 184.73 ಚದರ ಮೀಟರಗಳು ಚಕಬಂಧಿ; **ಪೂರ್ವಕ್ಕೆ;** ಸಿಟಿಎಸ್ ನಂ. 4100 & ಸಿಟಿಎಸ್ ನಂ. 4099/ಎಯಲ್ಲಿಯ ಉಳಿದ ಭಾಗ **ಪಶ್ಚಿಮಕ್ಕೆ;** ಸಿಟಿಎಸ್ ನಂ. 3327/ಬಿಸಿಡಿಇಎಫ್ **ಉತ್ತರಕ್ಕೆ** ಸಿಟಿಎಸ್ ನಂ. 3327/ಎ & ಸಿಟಿಎಸ್ ನಂ. 4099/ಎಯ ಉಳಿದ ಭಾಗ **ದಕ್ಷಿಣಕ್ಕೆ;** ಸಿಟಿಎಸ್ ನಂ. 4102/1 & 4103
12	1502/1739	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; ಶ್ರೀ ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ, #421/2, ಮೃತ್ಯುಂಜಯನಗರ, ಬೈಲಹೊಂಗಲ–591102 ಜಿಲ್ಲೆ; ಬೆಳಗಾವಿ	ರೂ. 6,75,70,709/–	ಬೈಲಹೊಂಗಲ ಪಟ್ಟಣದ ಕುಲಕರ್ಣಿ ಗಲ್ಲಿಯಲ್ಲಿರುವ ರಿ.ಸ.ನಂ. 301/ಎ(301/3) & 301/2ರಲ್ಲಿಯ ಆಸ್ತಿ ಟಿಎಮ್‌ಸಿ ನಂ. 415/301/ಎ/1 ಕ್ಷೇತ್ರ 12ಗುಂಟೆಗಳ ಜಾಗೆ ಹಾಗೂ ಕಟ್ಟಡ. ಚಕಬಂಧಿ; **ಪೂರ್ವಕ್ಕೆ;** ಮುನಸಿಪಾಲಟಿ ರಸ್ತೆ **ಪಶ್ಚಿಮಕ್ಕೆ;** ಪ್ರೇರಣಾ ಇಂಗ್ಲೀಷ ಮಾದ್ಯಮ ಶಾಲೆ **ಉತ್ತರಕ್ಕೆ;** ಶ್ರೀ. ಎಮ್.ಜಿ. ಪಾಟೀಲ ಇವರ ಆಸ್ತಿ **ದಕ್ಷಿಣಕ್ಕೆ;** ಶ್ರೀ ಗಂಗಪ್ಪ ಬೋಳನ್ನವರ ಇವರ ಆಸ್ತಿ.
13	1502/96	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; 1. ಶ್ರೀ ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ, #421/2, ಮೃತ್ಯುಂಜಯನಗರ, ಬೈಲಹೊಂಗಲ–591102, ಜಿಲ್ಲೆ; ಬೆಳಗಾವಿ 2. ಶ್ರೀ ಕಿರಣ ವಿರುಪಾಕ್ಷಿ ಸಾಧುನವರ, ಸಾಧುನವರ ಫಾರ್ಮಹೌಸ್, ಶಿಂಧೊಳಿ ಮಾಳ, ಬೆಳಗಾವಿ ಪಬ್ಲಿಕ್ ಸ್ಕೂಲ ಹತ್ತಿರ ಶಿಂಧೊಳ್ಳಿ ತಾ, ಜಿಲ್ಲೆ: ಬೆಳಗಾವಿ	ರೂ. 9,44,76,075/–	ಬೈಲಹೊಂಗಲ ಪಟ್ಟಣದ ಬೈಪಾಸ ರಸ್ತೆಯಲ್ಲಿರುವ ರಿ.ಸ.ನಂ. 191/6 & 191/7ರಲ್ಲಿಯ ಆಸ್ತಿ ಕ್ಷೇತ್ರ 40ಗುಂಟೆಗಳ ಜಾಗೆ ಹಾಗೂ ಕಟ್ಟಡ. ಚಕಬಂಧಿ; **ಪೂರ್ವಕ್ಕೆ;** ರಿ.ಸ.ನಂ. 191/2 **ಪಶ್ಚಿಮಕ್ಕೆ;** ರಿ.ಸ.ನಂ. 192 & 193 **ಉತ್ತರಕ್ಕೆ;** ರಿ.ಸ.ನಂ. 192 & 191/1 **ದಕ್ಷಿಣಕ್ಕೆ;** ರಿ.ಸ.ನಂ. 191/7
14	1502/1738	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; 1. ಶ್ರೀ ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ #421/2, ಮೃತ್ಯುಂಜಯನಗರ, ಬೈಲಹೊಂಗಲ–591102 ಜಿಲ್ಲೆ; ಬೆಳಗಾವಿ	ರೂ. 1,50,79,410/–	ನೇಸರಗಿ ಗ್ರಾಮದಲ್ಲಿಯ ಆಸ್ತಿ ಪಂಚಾಯತ ನಂ. 1207/16(ಇ–ಸ್ವತ್ತು ನಂ. 150400202600220039) ಮತ್ತು 1207/17(ಇ–ಸ್ವತ್ತು ನಂ. 150400202600220040) ಒಟ್ಟು ಕ್ಷೇತ್ರ 181.16 ಚದರ ಮೀಟರಗಳ ಜಾಗೆ ಹಾಗೂ ಕಟ್ಟಡ. ಚಕಬಂಧಿ; **ಪೂರ್ವಕ್ಕೆ;** ಗ್ರಾಮ ಪಂಚಾಯತ ರಸ್ತೆ **ಪಶ್ಚಿಮಕ್ಕೆ;** ಶ್ರೀ ಉಮೇಶ ಕರಾಳೆ ಇವರ ಆಸ್ತಿ **ಉತ್ತರಕ್ಕೆ;** ಪ್ಲಾಟ ನಂ. 1207/15(ಪಂಡಿತಪ್ಪ ಸೋಮನ್ನವರ) **ದಕ್ಷಿಣಕ್ಕೆ;** ಪ್ಲಾಟ್ ನಂ. 1207/18(ಮೋಳ)
15	1502/1737	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; 1. ಶ್ರೀ ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ #421/2, ಮೃತ್ಯುಂಜಯನಗರ, ಬೈಲಹೊಂಗಲ–591102 ಜಿಲ್ಲೆ; ಬೆಳಗಾವಿ	ರೂ. 2,83,32,052/–	ಹಿರೇಬಾಗೇವಾಡಿ ಗ್ರಾಮದ ರಿಸ.ನಂ. 410/3ಬಿ ಯಲ್ಲಿಯ ಆಸ್ತಿ ಒಟ್ಟು ಕ್ಷೇತ್ರ 2ಎಕರೆ05ಗುಂಟೆ 09ಆಣೆ ಜಾಗೆ ಹಾಗೂ ಕಟ್ಟಡ. ಚಕಬಂಧಿ; **ಪೂರ್ವಕ್ಕೆ;** ಶ್ರೀ ಬಿ.ಜಿ.ಹಾದಿಮನಿ & ಬಸನಗೌಡ ಬಾರಿಗಿಡದ ಇವರ ಜಮೀನು **ಪಶ್ಚಿಮಕ್ಕೆ;** ಸರಕಾರಿ ರಸ್ತೆ **ಉತ್ತರಕ್ಕೆ;** ಶ್ರೀ ನಾಗಪ್ಪ ಹಾದಿಮನಿ ಇವರ ಜಮೀನು **ದಕ್ಷಿಣಕ್ಕೆ;** ಸರಕಾರಿ ರಸ್ತೆ
16	1502/100	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; 1. ಶ್ರೀಮತಿ. ತೃಪ್ತಿ ಸಂತೋಷ ಪಾಟೀಲ ಪ್ಲಾಟ ನಂ. 114, ಕಫೆ ಟ್ರಿಯೋದ ಹತ್ತಿರ, ಜಾಧವನಗರ, ಬೆಳಗಾವಿ 2. ಶ್ರೀ ವಿರುಪಾಕ್ಷಿ ಶಿವಲಿಂಗಪ್ಪ ಸಾಧುನವರ #421/2ಮೃತ್ಯುಂಜಯನಗರ, ಬೈಲಹೊಂಗಲ–591102 ಜಿಲ್ಲೆ; ಬೆಳಗಾವಿ	ರೂ. 5,12,96,355/–	ಬೈಲಹೊಂಗಲ ತಾಲೂಕ ಎಮ್.ಕೆ.ಹುಬ್ಬಳ್ಳಿ ಗ್ರಾಮದ ರಿ.ಸ.ನಂ. 448/3ರಲ್ಲಿ ಒಟ್ಟು ಕ್ಷೇತ್ರ 1(ಒಂದು)ಎಕರೆಯಲ್ಲಿಯ ಜಾಗೆ ಹಾಗೂ ಕಟ್ಟಡ. ಚಕಬಂಧಿ; **ಪೂರ್ವಕ್ಕೆ;** ರಿ.ಸ.ನಂ. 2 ಜಮೀನು **ಪಶ್ಚಿಮಕ್ಕೆ;** ರಿ.ಸ.ನಂ. 2 ಜಮೀನು **ಉತ್ತರಕ್ಕೆ;** ರಿ.ಸ.ನಂ. 1 ಜಮೀನು **ದಕ್ಷಿಣಕ್ಕೆ;** ರಿ.ಸ.ನಂ. 2
17	1502/147	**ಟ್ರಸ್ಟೀಗಳು, ಡಾ. ವ್ಹಿ. ಎಸ್, ಸಾಧುನವರ ಫೌಂಡೇಶನ(ರಿ) ಬೈಲಹೊಂಗಲ.** ಜಾಮೀನುದಾರರು; 1. ಶ್ರೀ ಮಹಾವೀರ ನೇಮಣ್ಣ ಭಾವಿ ಮುಕ್ಕಾಂ, ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ 2. ಶ್ರೀ ರುದ್ರಪ್ಪ ಶಿವಪ್ಪ ಮುರಗೋಡ ಮುಕ್ಕಾಂ ಪೋಸ್ಟ; ಅಮಟೂರ ತಾ॥ ಬೈಲಹೊಂಗಲ ಜಿಲ್ಲೆ; ಬೆಳಗಾವಿ	ರೂ. 30,17,73,200/–	ಸವದತ್ತಿ ತಾಲೂಕ ಕೆ.ಎಮ.ಬಸರಗಿ ಹಾಗೂ ತಡಸಲೂರ ಗ್ರಾಮಗಳಲ್ಲಿಯ ರಿಸ.ನಂ. 59 ಕ್ಷೇತ್ರ 22ಎಕರೆ 19ಗುಂಟೆ ಮತ್ತು ರಿ.ಸ.ನಂ. 231 ಕ್ಷೇತ್ರ 5ಎಕರೆ 27ಗುಂಟೆ ಆಸ್ತಿಯಲ್ಲಿಯ ಒಟ್ಟು ಕ್ಷೇತ್ರ 28ಎಕರೆ06ಗುಂಟೆ ಜಾಗೆ ಹಾಗೂ ಕಟ್ಟಡ. **ರಿ.ಸ.ನಂ. 59ಕ್ಕೆ ಚಕಬಂಧಿ;** **ಪೂರ್ವಕ್ಕೆ;** ಶ್ರೀ ಚಂದ್ರಪ್ಪ ಪತಂಗನವರ ಇವರ ಜಮೀನು **ಪಶ್ಚಿಮಕ್ಕೆ;** ಶ್ರೀ ಸಿದ್ದಪ್ಪ ಕಂಬಳಿ ಇವರ ಜಮೀನು **ಉತ್ತರಕ್ಕೆ;** ರಿ.ಸ.ನಂ. 231 ಜಮೀನು **ದಕ್ಷಿಣಕ್ಕೆ;** ಬಸರಗಿ ರಸ್ತೆ **ರಿ.ಸ.ನಂ. 231ಕ್ಕೆ ಚಕಬಂಧಿ;** **ಪೂರ್ವಕ್ಕೆ;** ಶ್ರೀ ಕುರಬೆಟ್ಟ ಇವರ ಜಮೀನು **ಪಶ್ಚಿಮಕ್ಕೆ;** ಶ್ರೀ ಬಂಡಿವಡ್ಡರ ಇವರ ಜಮೀನು **ಉತ್ತರಕ್ಕೆ;** ಬೆಳಗಾವಿ–ಬಾಗಲಕೋಟ ರಸ್ತೆ **ದಕ್ಷಿಣಕ್ಕೆ;** ರಿ.ಸ.ನಂ. 59

ದಿನಾಂಕ: 02.05.2024
ಸ್ಥಳ: ಬೈಲಹೊಂಗಲ

ಸಹಿ/–ಅಧೀಕೃತ ಅಧಿಕಾರಿ
ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ.

ಮಡಿಕೇರಿಯ ರಾಜಾಸೀಟ್‌ನಿಂದ ಸ್ಥಳಾಂತರಗೊಂಡ ಬ್ರಿಟಿಷರ ಗೋರಿಗಳಿರುವ ಸ್ಥಳವನ್ನು ದಶಕಗಳ ಹಿಂದೆ ಸ್ವಚ್ಛಗೊಳಿಸಿದ್ದು.

ಏಕವ್ಯಕ್ತಿಯ ವಿಭಿನ್ನ ರಂಗ ಪ್ರಯೋಗ 11

ಮಸಣದಲ್ಲಿ ಅರಳಿದ ಸುಂದರ ಉದ್ಯಾನ!

ಕೆ.ಎಸ್.ಗಿರೀಶ

ಇತಿಹಾಸಕ್ಕೂ ಮುನ್ನ...

ಪಡುವಣದಲ್ಲಿ ತನ್ನೆಲ್ಲ ಚೆಲುವನ್ನು ಚೆಲ್ಲುತ್ತಾ ಸೂರ್ಯ ಜಾರಿ ಹೋಗುತ್ತಿದ್ದಂತೆ, ಅದನ್ನೇ ದಿಟ್ಟಿಸುತ್ತಾ ಕುಳಿತವರಿಗೆ ತಮ್ಮ ಮನಸ್ಸಿನ ಒತ್ತಡಗಳ ಹೊರೆಯನ್ನು ಕೊಂಚವಾದರೂ ಕೆಳಗೆ ಇಳಿಸಿದಂತಹ ಭಾವನೆ. ಮತ್ತೆ ಕೆಲವರಿಗೆ ಸೂರ್ಯಾಸ್ತದ ವರ್ಣದೋಕುಳಿಯನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುವ ತವಕ. ಕೆಂಪು ಉಂಡೆಯಂತಾದ ಸೂರ್ಯನನ್ನು ತಮ್ಮ ಮಧ್ಯದಲ್ಲಿರಿಸಿ ಸೆಲ್ಫಿ ಕ್ಲಿಕ್ಕಿಸುವ ಸರ್ಕಸ್ ಜೋಡಿಗಳದ್ದು. ಆಕಾಶದ ಅಂಚಿನಲ್ಲಿ ಕಿರಿದಾದ ಸೂರ್ಯನನ್ನು ತಮ್ಮ ಅಂಗೈನಲ್ಲಿ ಹಿಡಿದಂತೆ ಫೋಟೊ ತೆಗೆಸಿಕೊಳ್ಳುವ ಪ್ರಯತ್ನ ಯುವತಿಯರದ್ದು...

ಹೀಗೆ ನೋಡುತ್ತಾ ಹೋದರೆ ಮಡಿಕೇರಿಯ ರಾಜಾಸೀಟ್‌ನ ಅಂಗಳದಲ್ಲಿ ಪ್ರತಿ ಸಂಜೆಯೂ ನಾನಾ ಬಗೆಯ ದೃಶ್ಯಗಳು ಕಣ್ಣಿಗೆ ಬೀಳುತ್ತವೆ. ಸೂರ್ಯ ಮುಳುಗಿ, ಪಡುವಣದ ಹೊಂಬಣ್ಣವನ್ನು ಮನಸಾರೆ ಅನುಭವಿಸಿ, ಬೀಸುವ ಕುಳಿರ್ಗಾಳಿಗೆ ಮೈಯೊಡ್ಡಿ ಕುಳಿತರೆ ಎದ್ದೇಳಲು ಮನಸ್ಸೇ ಆಗದು. ರಾಜಾಸೀಟ್‌ನ

> ನಾವು ನಿಂತ ನೆಲದೊಡಲಲ್ಲಿ ಏನೇನೋ ಕೌತುಕಗಳು ಅಡಗಿರುತ್ತವೆ. ಅವುಗಳನ್ನು ನೋಡಲು ಬರಿಗಣ್ಣು ಸಾಲದು, ಕೆಲವೊಮ್ಮೆ ಇತಿಹಾಸವನ್ನು ಅರಿಯುವ ಕುತೂಹಲಕರ ಮನಸ್ಸು, ಆಸಕ್ತಿಯೂ ಬೇಕಾಗುತ್ತದೆ. ಏಕೆಂದರೆ, ನಾವು ನಿಂತು ನೋಡುವ ಮಡಿಕೇರಿಯ ರಾಜಾಸೀಟ್ ಒಡಲು ಕೂಡ ಇಂತಹದೇ ಅಚ್ಚರಿಯನ್ನು ಇಟ್ಟುಕೊಂಡಿದೆ...

ರಾಜಾಸೀಟ್ ಉದ್ಯಾನದಲ್ಲಿ ಮಳೆಗಾಲದ ರಮ್ಯ ನೋಟ

ಚಿತ್ರಗಳು: ರಂಗಸ್ವಾಮಿ



ಚೆಲುವೆಲ್ಲಾ ತಮ್ಮದೆಂದು ಬೀಗುತ್ತಿರುವ ಹೂಗಳು

ಸೂರ್ಯಾಸ್ತವೇ ಹಾಗೆ. ಪ್ರತಿ ದಿನವೂ ಹೊಚ್ಚ ಹೊಸತು. ಈ ದಿನವಿದ್ದಂತೆ ಮರು ದಿನವಿಲ್ಲ. ಹತ್ತಿಯ ಉಂಡೆಗಳು ದಿಬ್ಬಣ ಹೊರಟಂತೆ ಸಾಗುವ ಬೆಳ್ಮೋಡಗಳ ಚೆಲುವು ಒಂದು ದಿನವಾದರೆ, ಮೋಡಗಳ ಮರೆ ಇಲ್ಲದೇ ನಿಗಿನಿಗಿ ಉರಿಯುವ ನೇಸರ ಮತ್ತೊಂದು ದಿನ. ಇದ್ದಕ್ಕಿದ್ದಂತೆ ಆವರಿಸಿದ ಮಂಜಿನಲ್ಲಿ ಸೂರ್ಯನೇ ಕಳೆದು ಹೋದ ಅನುಭವ ಮಗದೊಂದು ದಿನ. ನಿತ್ಯವೂ ಒಂದೊಂದು ಬಗೆಯ ದೃಶ್ಯವನ್ನು ಅರಳಿಸುವ ಈ ರಾಜಾಸೀಟ್ ಉದ್ಯಾನ ಪ್ರಕೃತಿ ಪ್ರಿಯರನ್ನು ಮೂಕವಿಸ್ಮಿತಗೊಳಿಸುತ್ತದೆ.

ಋತುಮಾನಗಳಿಗೆ ತಕ್ಕಂತೆ ತನ್ನದೇ ಆದ ಆಕರ್ಷಣೆಯನ್ನು ಹೊಂದಿರುವ ಈ ಉದ್ಯಾನ ಪ್ರವಾಸಿಗರಿಗೆ ಬಲು ಇಷ್ಟ. ಬೇಸಿಗೆಯಲ್ಲಿ ಕಾಣಸಿಗುವ ಸೂರ್ಯಾಸ್ತ, ಮುಂಗಾರಿನಲ್ಲಿ 'ಧೋ' ಎಂದು ಸುರಿಯುವ ಮಳೆಯಲ್ಲಿ ಸೂರ್ಯನನ್ನೇ ಹುಡುಕಬೇಕಾದ ಸ್ಥಿತಿ, ಕೆಲವೊಮ್ಮೆ ಕೈ ಅಳತೆಯಲ್ಲೇ ಸಾಗುತ್ತಿವೆ ಏನೋ ಎಂದೆನ್ನಿಸುವ ಮೋಡಗಳು, ಗುಡುಗುಡಿಸುವ ಶಬ್ದದೊಂದಿಗೆ ಫಳಾರ್ ಎನ್ನುವ ಕೋಲ್ಮಿಂಚುಗಳ ಸೊಬಗು.

ವರ್ಷದ ಕೊನೆಯ ದಿನ ಇಲ್ಲಿ ಕಾಲಿಡಲು ಜಾಗವಿಲ್ಲದಂತಹ ಸ್ಥಿತಿ. ಅಪಾರ ಜನಸ್ತೋಮ ಇಲ್ಲಿಗೆ ಬಂದು ಸೂರ್ಯಾಸ್ತವನ್ನು ಕಣ್ಮನ ತುಂಬಿಕೊಳ್ಳುತ್ತಾರೆ. ಈ ಅಪೂರ್ವ ಕ್ಷಣಗಳನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿಯಲು ಮಧ್ಯಾಹ್ನವೇ ಗುಡ್ಡದ ತುತ್ತತುದಿಯ ಕಲ್ಲುಬೆಂಚಿನ ಮೇಲೆ ಕಾದು ಕುಳಿತುಕೊಳ್ಳುತ್ತಾರೆ. ಜಾಗ ಸಿಗದವರು ತುದಿಯಲ್ಲಿ ನಿಂತು ಅಪೂರ್ವ ವಿಸ್ಮಯವನ್ನು ಕಣ್ತುಂಬಿಕೊಳ್ಳುತ್ತಾರೆ. ಆಕಾಶದ ತುತ್ತತುದಿಯಲ್ಲಿ ರಂಗನ್ನು ಚೆಲ್ಲಿ ನೇಸರ ಮುಳುಗುತ್ತಿದ್ದಂತೆ ಎಲ್ಲರೂ ಒಮ್ಮೆಗೆ ಚಪ್ಪಾಳೆ ತಟ್ಟಿ ಹಳೆಯ ವರ್ಷದ ಕಹಿ ಮರೆತು, ಹೊಸ ವರ್ಷವನ್ನು ಹೊಸ ಬಗೆಯಲ್ಲಿ ಸ್ವಾಗತಿಸಲು ಸನ್ನದ್ಧರಾಗುತ್ತಾರೆ.

ಇಷ್ಟೆಲ್ಲಾ ಅನನ್ಯ ದೃಶ್ಯಕಾವ್ಯಗಳಿಗೆ ಸಾಕ್ಷಿಯಾಗುವ ರಾಜಾಸೀಟ್ ಉದ್ಯಾನ ನೂರಾರು ಬ್ರಿಟಿಷರ ದೇಹಗಳನ್ನೂ ತನ್ನೊಳಗಿರಿಸಿಕೊಂಡಿದೆ!

ಇತಿಹಾಸದ ಪುಟಗಳಿಂದ...

ಹೌದು, ಪ್ರಕೃತಿಯ ಅದಮ್ಯ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಬರುವ ಪ್ರವಾಸಿಗರು ನಿಲ್ಲುವ ಈ ರಾಜಾಸೀಟ್‌ನ ಕೆಲವೇ ಅಡಿಗಳಷ್ಟು ಆಳದಲ್ಲಿ ಬ್ರಿಟಿಷರ ದೇಹಗಳನ್ನು ಹೂಳಲಾಗಿದೆ. ಈ ದೇಹಗಳ ಮೇಲೆ ಚಿಗುರಿರುವ ಹುಲ್ಲು 'ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು' ಎಂಬ ಕಗ್ಗದ ಸಾಲುಗಳಿಗೆ ಪ್ರತೀಕವಾಗಿದೆ. ಋತುಚಕ್ರ ತಿರುಗಿದೆ, ನೂರಾರು ಬ್ರಿಟಿಷರು ಚಿರನಿದ್ರೆಗೆ ಸರಿದಿದ್ದ, ಒಂದು ಕಾಲದಲ್ಲಿ ಯಾರೂ ಅತ್ತ ಸುಳಿಯದ ಮಸಣವೊಂದು ಕಾಲಾಂತರದಲ್ಲಿ ಪ್ರಕೃತಿಪ್ರಿಯರನ್ನು ಸೂಜಿಗಲ್ಲಿನಂತೆ ಸೆಳೆಯುವ ಸುಂದರ ಉದ್ಯಾನವಾಗಿದೆ!

12ನೇ ಪುಟಕ್ಕೆ...

ಹಾಳೆ ಹಳೆಯದಾದರೇನು? ಬರಹ ಹೊಸದೇ ಅಲ್ಲವೆ...



ಬೆಂಗಳೂರಿನ ಯೂಥ್ ಫಾರ್ ಪರಿವರ್ತನ್ ಸಂಸ್ಥೆಯ ಸ್ವಯಂಸೇವಕರು ರಿಸೈಕ್ಲಥಾನ್‌ನಲ್ಲಿ ನೋಟ್‌ಬುಕ್‌ಗಳಿಂದ ಖಾಲಿ ಹಾಳೆಗಳನ್ನು ಬೇರ್ಪಡಿಸುತ್ತಿರುವುದು

ಚಿತ್ರಗಳು: ರಂಜು ಪಿ.

ಅಭಿಲಾಷ್ ಪಿ.ಎಸ್.

ಅಮಿತ್ ಅಮರ್‌ನಾಥ್

ಅಲ್ಲಿ ಅಪಾರ್ಟ್‌ಮೆಂಟ್‌ನ ಗೇಟ್‌ಗೆ ತಾಗಿಕೊಂಡಂತೆ ನೋಟ್‌ಬುಕ್‌ಗಳ ರಾಶಿಯೇ ಇತ್ತು. ಅದು ಗುಜರಿ ಅಂಗಡಿಯಲ್ಲಿ ಪೇರಿಸಿ ಇಟ್ಟಂತೆ ಕಂಡಿತು. ಇಬ್ಬರು ಯುವಕರು ಬಂದು ಆ ರಾಶಿಯಿಂದ ಒಂದಿಷ್ಟು ನೋಟ್‌ಬುಕ್‌ಗಳನ್ನು ಹೊತ್ತು ನಡೆದರು. ನಾನು ಅವರನ್ನೇ ಹಿಂಬಾಲಿಸಿದೆ. ಅಲ್ಲಿ ರಸ್ತೆಯಲ್ಲೇ ನೋಟ್‌ಬುಕ್‌ಗಳನ್ನು ಹಿಡಿದು ಹತ್ತಾರು ಯುವಕ, ಯುವತಿಯರು ಕುಳಿತಿದ್ದರು. ನೋಡನೋಡುತ್ತಿದ್ದಂತೆಯೇ ನೂರಾರು ನೋಟ್‌ಬುಕ್‌ಗಳಲ್ಲಿನ ಖಾಲಿಹಾಳೆಗಳನ್ನು ಹರಿದು ಒಂದೆಡೆ ಜೋಡಿಸಿದರು. ಅವರಲ್ಲಿ ಬಹುತೇಕರು ಹಿಂದಿ ಭಾಷಿಕರು ಹಾಗೂ ಕಾಲೇಜೊಂದರ ವಿದ್ಯಾರ್ಥಿಗಳು. ಆಶ್ಚರ್ಯದಿಂದ ವಿಚಾರಿಸುತ್ತಿರುವಾಗ ಅಲ್ಲಿಗೆ ಅಮಿತ್ ಅಮರ್‌ನಾಥ್ ಬಂದರು.

ಅಮಿತ್ ಅಮರ್‌ನಾಥ್ ಯೂತ್ ಫಾರ್ ಪರಿವರ್ತನ್ (ವೈಎಫ್‌ಪಿ) ಸಂಸ್ಥೆಯ ಸಂಸ್ಥಾಪಕ, ಅಧ್ಯಕ್ಷ. 'ನಾವು ರಸ್ತೆಬದಿ ಕಸ ಬಿಸಾಡದಂತೆ ಗೋಡೆಗಳಿಗೆ ರಂಗು ತುಂಬಿ ಜಾಗೃತಿ ಮೂಡಿಸುತ್ತಿದ್ದೆವು. ಇದೀಗ ಮಕ್ಕಳ ಬಾಳಲ್ಲಿ ಅಕ್ಷರದ ರಂಗು ತುಂಬುವ ಕಾರ್ಯದಲ್ಲಿದ್ದೇವೆ' ಎಂದರು ಅಮಿತ್. ರಿಸೈಕ್ಲಥಾನ್-ಇದು ಈ ಯೋಜನೆಗೆ ಅವರಿಟ್ಟ ಹೆಸರು. 'ಈ ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಬಂದಿದ್ದಾರೆ. ವಾರಾಂತ್ಯದ ಚಟುವಟಿಕೆಗಳನ್ನು ಬದಿಗಿಟ್ಟು ನಮ್ಮ ಜೊತೆ ಕೈಜೋಡಿಸಿದ್ದಾರೆ' ಎಂದು ರಿಸೈಕ್ಲಥಾನ್ ಬಗ್ಗೆ ವಿವರಿಸುತ್ತಾ ಹೋದರು.

> **ವಾರಾಂತ್ಯದಲ್ಲಿ ಗೆಳೆಯರ ಜೊತೆ ತಿರುಗಾಡಲು ಹೋಗಬಹುದು. ಆದರೆ ರಿಸೈಕ್ಲಥಾನ್ ಮೂಲಕ ಸಮಾಜಕ್ಕೆ ಸಹಾಯ ಮಾಡುವ ಕನಸು ನನ್ನದು. ಈಗ ನಾನೊಬ್ಬ ಬಂದಿದ್ದು, ಮುಂದಿನ ವಾರದಿಂದ ಸ್ನೇಹಿತರನ್ನು ಕರೆದುಕೊಂಡು ಬರಲಿದ್ದೇನೆ.**
>
> **ನಾಗಭೂಷಣ್,** ಬಿಎಂಎಸ್ ಕಾಲೇಜು ಎಂಜಿನಿಯರಿಂಗ್ ವಿದ್ಯಾರ್ಥಿ

ಏನಿದು ರಿಸೈಕ್ಲಥಾನ್?

ವೈಎಫ್‌ಪಿ ಪ್ರಕಾರ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ನಗರದಲ್ಲೇ 100 ಕೋಟಿ ಖಾಲಿ ಹಾಳೆಗಳು ಬಳಕೆಯಾಗದೇ ವ್ಯರ್ಥವಾಗುತ್ತಿವೆ. ಇದು 472 ಟನ್ ಪೇಪರ್‌ಗೆ ಸಮ. ಇಷ್ಟೊಂದು ಪ್ರಮಾಣದ ಪೇಪರ್ ಮಾಡಲು ಎಂಟು ಸಾವಿರ ಮರಗಳು ಬೇಕಾಗುತ್ತವೆ. ಹೀಗೆ ವ್ಯರ್ಥವಾಗಿ ಗುಜರಿ ಸೇರುವ ನೋಟ್‌ಬುಕ್ ಹಾಳೆಗಳನ್ನು ಬಳಸಿಕೊಂಡೇ ಹೊಸ ನೋಟ್‌ಬುಕ್‌ಗಳನ್ನು ತಯಾರಿಸುವುದು ರಿಸೈಕ್ಲಥಾನ್. 2018-19ರಲ್ಲಿ ರಿಸೈಕ್ಲಥಾನ್ ಆರಂಭವಾಗಿತ್ತು. ಆಗ ಸಣ್ಣ ಪ್ರಮಾಣದಲ್ಲಿ ನಡೆದಿದ್ದ ಈ ಯೋಜನೆ ಕೋವಿಡ್ ಕಾರಣದಿಂದ ಮೂರು ವರ್ಷ ಸ್ಥಗಿತಗೊಂಡಿತ್ತು. 2023ರಲ್ಲಿ ರಿಸೈಕ್ಲಥಾನ್ ಪುನರಾರಂಭಿಸಿದ ಸಂದರ್ಭದಲ್ಲಿ ಏಳು ಸಂಗ್ರಹ ಕೇಂದ್ರಗಳಿಂದ ಎರಡೂವರೆ ಟನ್ ನೋಟ್‌ಬುಕ್‌ಗಳು ದಾನವಾಗಿ ಬಂದವು. ಅವುಗಳಲ್ಲಿ 1,350 ಕೆ.ಜಿ. ಬಳಕೆಯಾಗದ ಹಾಳೆಗಳು ಸಿಕ್ಕವು. ಅವನ್ನು ಬಳಸಿಕೊಂಡು 3,300 ಹೊಸ ನೋಟ್‌ಬುಕ್‌ಗಳನ್ನು ತಯಾರಿಸಲಾಗಿತ್ತು. ಈ ಅಂದಾಜಿನ ಪ್ರಕಾರ ಸುಮಾರು 17-20 ಮರಗಳಿಗೆ ಕೊಡಲಿ ಏಟು ಬೀಳುವುದು ತಪ್ಪಿತು. ಆ ನೋಟ್‌ಬುಕ್‌ಗಳು ಚಾಮರಾಜನಗರ ಜಿಲ್ಲೆಯ ಏಳು ಶಾಲೆಗಳು ಸೇರಿ ರಾಜ್ಯದ 26 ಸರ್ಕಾರಿ ಶಾಲೆಗಳ ಮಕ್ಕಳ ಕೈಸೇರಿದವು.

11ನೇ ಪುಟಕ್ಕೆ...

ಅಹಾ! ಧಾರವಾಡ ಆಲ್ಫಾನ್ಸೊ

ಬಿ.ಜೆ.ಧನ್ಯಪ್ರಸಾದ್

ಒಪ್ಪವಾಗಿ ಜೋಡಿಸಿದ್ದ ಆಕರ್ಷಕ ಬಾಕ್ಸ್‌ಗಳ ಮೇಲೆ 'ಧಾರವಾಡ ಆಲ್ಫಾನ್ಸೊ' ಹಣ್ಣಿನ ಚಿತ್ರ ಮನಸೆಳೆಯುತ್ತಿತ್ತು. ಅದು ಖರೇ, 'ಧಾರವಾಡ ಆಲ್ಫಾನ್ಸೊ' ಹೌದೋ, ಅಲ್ಲವೋ ಎನ್ನುವುದನ್ನು ಖಾತರಿ ಪಡಿಸಿಕೊಳ್ಳಲು ಬಾಕ್ಸ್ ಮೇಲಿದ್ದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದೆ. ಮಾವು ಬೆಳೆಗಾರನ ಹೆಸರು, ಮೊಬೈಲ್ ನಂಬರ್, ತೋಟದ ಹೆಸರು, ಮಾವಿನಮರಗಳ ಸಂಖ್ಯೆ ಹಾಗೂ ತೋಟದ ಲೊಕೇಷನ್ ಲಿಂಕ್‌ಗಳಿದ್ದ ವಿವರಗಳು ತೆರೆದುಕೊಂಡವು. ಕುತೂಹಲಕ್ಕಾಗಿ ಧಾರವಾಡ ಸಮೀಪವೇ ಇರುವ ಕಲಕೇರಿಯ ಪ್ರಮೋದ್ ಗಾಂವಕರ ಅವರ ತೋಟಕ್ಕೆ ಹೋದೆ. ಅಲ್ಲಿ ಕೆಲಸಗಾರರು ಮಾವಿನಕಾಯಿ ಕಟಾವು ಮಾಡಿ ಕ್ರೇಟ್‌ಗಳಲ್ಲಿ ತುಂಬಿಕೊಂಡು ಭತ್ತದ ಹುಲ್ಲಿನಲ್ಲಿ ಇಟ್ಟು ಹಣ್ಣಾಗಿಸಿ ಮಾರಾಟಕ್ಕೆ ಒಯ್ಯುವುದರಲ್ಲಿ ನಿರತರಾಗಿದ್ದರು. ಕೆಲವು ಗ್ರಾಹಕರು ತೋಟಕ್ಕೆ ಬಂದು ಮಾವು ಖರೀದಿಸುತ್ತಿದ್ದರು. ತೇಗೂರು, ನರೇಂದ್ರ ಸಹಿತ ವಿವಿಧ ಗ್ರಾಮಗಳ ಬೆಳೆಗಾರರು ತೋಟದಿಂದ ತಾಜಾ ಹಣ್ಣು ತಂದು ರಸ್ತೆಬದಿಗಳಲ್ಲಿ (ಬೆಳಗಾವಿ ಕಡೆ ಸಾಗುವ ಮಾರ್ಗ) ಮಾರಾಟ ಮಾಡುತ್ತಿದ್ದರು. ವಾಹನಗಳಲ್ಲಿ ಸಾಗುವ ಬಹಳಷ್ಟು ಮಂದಿ ಹಣ್ಣನ್ನು ಖರೀದಿಸುತ್ತಿದ್ದರು.

ಆಲ್ಫಾನ್ಸೊ ಮಾವಿನಹಣ್ಣು ಧಾರವಾಡದ ವೈಶಿಷ್ಟ್ಯ. ಬಂಗಾರ ಬಣ್ಣದ ಈ ಹಣ್ಣು ತುಂಬಾ ಸಿಹಿ. ಸುವಾಸನೆ, ಮೃದು ಮತ್ತು ಕಡುಕೇಸರಿ ಬಣ್ಣದ ತಿರುಳು, ವಾಟೆಯಲ್ಲಿ ನಾರುನಾರು ಇಲ್ಲದಿರುವುದು ವಿಶೇಷ. ಆಲ್ಫಾನ್ಸೊ ಸೀಕರಣೆ (ಮಾವಿನಹಣ್ಣಿನ ರಸಾಯನ) ಬಲು ಸ್ವಾದಿಷ್ಟ. ಏಪ್ರಿಲ್, ಮೇ ತಿಂಗಳು ಈ ಹಣ್ಣಿನ ಘಮಲಿನ ಸಮಯ. ಈ ತಿಂಗಳುಗಳಲ್ಲಿ ಬರುವ ಹಬ್ಬಗಳಲ್ಲಿ (ಯುಗಾದಿ, ಬಸವ ಜಯಂತಿ) ಹೋಳಿಗೆ–ಆಲ್ಫಾನ್ಸೊ ಸೀಕರಣೆ ಸವಿಯುವುದು ವಾಡಿಕೆ.

13ನೇ ಪುಟಕ್ಕೆ...

> **ಧಾರವಾಡ ಭಾಗದ ಆಲ್ಫಾನ್ಸೊ ಹಣ್ಣು ಜೇನಿನಷ್ಟು ಸಿಹಿ, ಬಾಯಿಗಿಟ್ಟರೆ ಕರುಗುತ್ತದೆ. ಈ ಮಾವಿನಹಣ್ಣಿನ ಸೀಕರಣೆ ಚೆನ್ನಾಗಿರುತ್ತದೆ. ಇದನ್ನು ಬಳಸಿ ತಯಾರಿಸುವ ಸೀಕರಣೆಗೆ ಸಕ್ಕರೆ ಬೆರೆಸುವ ಅಗತ್ಯವೇ ಇಲ್ಲ. ಈ ಹಣ್ಣು ಬಲು ಮಧುರ. ಪ್ರತಿವರ್ಷ ಬೇಸಿಗೆ ರಜೆಗೆ ತವರೂರು ಧಾರವಾಡಕ್ಕೆ ಬಂದು ಬೆಂಗಳೂರಿಗೆ ವಾಪಸಾಗುವಾಗ ಹಣ್ಣು ಒಯ್ಯುತ್ತೇನೆ**
>
> **ರೇಷ್ಮಾ ಪಾಟೀಲ,** ಸಾಫ್ಟ್‌ವೇರ್ ಎಂಜಿನಿಯರ್

ಪ್ರಮೋದ ಗಾಂವಕರ ಅವರ ತೋಟದ ಮನೆಯಲ್ಲಿ ಕಾರ್ಮಿಕರು ಆಲ್ಫಾನ್ಸೊ ಹಣ್ಣುಗಳನ್ನು ಬಾಕ್ಸ್‌ಗಳಿಗೆ ತುಂಬುತ್ತಿರುವುದು

ಚಿತ್ರಗಳು: ಬಿ.ಎಂ.ಕೇದಾರನಾಥ

ರಷ್ಯಾದ ಕಲುಗಾ ಪ್ರದೇಶದ ಬೊರೊವ್ಸ್ಕ್ ನಗರದಲ್ಲಿ ಏಪ್ರಿಲ್ 29 ರಿಂದ ಆರಂಭವಾಗಿದ್ದು ಮೇ 10ರವರೆಗೆ ನಡೆಯುವ ಅಂತರರಾಷ್ಟ್ರೀಯ ಕಲಾಶಿಬಿರ ಮತ್ತು ಕಲಾಕೃತಿಗಳ ಪ್ರದರ್ಶನದಲ್ಲಿ ಚಿತ್ರಕಲಾವಿದ ಕನ್ನಡಿಗ ರಮೇಶ ತೇರದಾಳ ಭಾಗವಹಿಸಿದ್ದು ಆ ಕಲಾಶಿಬಿರಕ್ಕೆ ಅವರು ಭಾರತದಿಂದ ಆಯ್ಕೆಯಾಗಿರುವ ಏಕೈಕ ಕಲಾವಿದರಾಗಿದ್ದಾರೆ. 'ಎಕ್ಸ್‌ಪ್ರೆಶನ್ಸ್' ಸರಣಿಯಡಿ ಚಿತ್ರಿಸಿದ ಎಂಟು ಪೇಂಟಿಂಗ್ಸ್‌ಗಳನ್ನು ಅವರು ಅಲ್ಲಿ ಪ್ರದರ್ಶಿಸುವರು...

ಪೇಂಟಿಂಗ್ಸ್‌ಗಳೆಂದರೆ ಕನಸಿನಂತೆ...

ರಾಮಕೃಷ್ಣ ಸಿದ್ರಪಾಲ

ಕಲೆ

ಮೀನಿನಂಥ ಮೀನೊಳಗೊಂದು ಬ್ರಹ್ಮಾಂಡಲೋಕ, ಬಟಾಬಯಲಿನಲ್ಲಿ ಒಂಟಿಮರದಂಥ ಮರದಲ್ಲಿ ಉಲಿಯುವ ಹಕ್ಕಿ, ಬೇಟೆಗೆ ಹೊಂಚು ಹಾಕಿದಂತೆ ಕಾಣುವ ಜೋಡಿರೆಕ್ಕೆಗಳ ಹೆಬ್ಬುಲಿ, ಬಾನಿಗೆ ಚಾಚಿದ ಹಕ್ಕಿಯ ಉದ್ದಕತ್ತಿನ ತುದಿಯಲ್ಲೊಂದು ಪುರುಷಾಕೃತಿ, ಭಾವಲೋಕದ ತೀರದಲ್ಲಿ ಯುವತಿಯೊಬ್ಬಳ ಅಸ್ಪಷ್ಟ ಮುಖ, ಬಲಿಷ್ಠ ಯೌವ್ವನಿಗನೊಳಗೆ ಕುದುರೆಯ ಹೇಷಾರವ... ಇಲ್ಲಿನ ಚಿತ್ರದೊಳಗಿನ ಆಕಾರಗಳೆಲ್ಲವೂ ಕನಸಿನಲ್ಲಿ ಕಂಡಂತೆ ಅಸ್ಪಷ್ಟ ಹಾಗೂ ಅಮೂರ್ತ. ಮನೋಲೋಕದ ಸಂಕೇತಗಳ ಚುಂಗು ಹಿಡಿದು ಪಳಗಿಸಿ ವಿನ್ಯಾಸಗೊಳಿಸಿದ ಕುಂಚಕಾವ್ಯ.

ಬೆನೆಡೆಟೊ ಕ್ರೋಚೆ ಎಂಬ ಪಾಶ್ಚಾತ್ಯ ಕಲಾಚಿಂತಕ ಹೇಳಿದಂತೆ, 'ಯಾವುದೇ ಆಕಾರ ನಮ್ಮ ಮನಸ್ಸಿನೊಳಗೆ ಅಸ್ಪಷ್ಟವಾಗಿರುತ್ತದೆ. ಅಸ್ಪಷ್ಟ ಅಮೂರ್ತ ಭಾವನೆಗಳೇ ಪರಿಪೂರ್ಣ ಅಭಿವ್ಯಕ್ತಿ. ಸ್ಪಷ್ಟವಾಗಿ ಅಭಿವ್ಯಕ್ತಿಸುವುದು ಕೇವಲ ದಾಖಲೆಗಾಗಿ ಮಾತ್ರ'. ಈ ಮಾತಿನಲ್ಲಿ ನಂಬಿಕೆಯಿಟ್ಟು, ಚಾಚೂ ತಪ್ಪದೇ ಅನುಸರಿಸುತ್ತ ಅಂತರರಾಷ್ಟ್ರೀಯ ಮಟ್ಟಕ್ಕೇರಿದವರು ಕಲಾವಿದ ರಮೇಶ ತೇರದಾಳ.

ರಿಯಲಿಸ್ಟಿಕ್ ಪೇಂಟರ್ ಆಗಿ ಚಿತ್ರಿಸುತ್ತಿದ್ದಾಗ ಅಮೂರ್ತ ಚಿತ್ರ ರಚನೆ ಹೇಗೆ? ಕನಸಿನಲ್ಲಿ ಕಂಡಂತೆ ಅಸ್ಪಷ್ಟವಾಗಿ ಚಿತ್ರಿಸಬಾರದೇಕೆ? ಎಂಬ ಜಿಜ್ಞಾಸೆ ಮನದಲ್ಲಿ. '20ನೇ ಶತಮಾನದ ಕಲಾವಿದರಾದ ಅಮೆರಿಕದ ಪಾಲ್ ಜಾಕ್ಸನ್ ಪೋಲಾಕ್ ಮತ್ತು ಸ್ಪೇನ್ ಕಲಾವಿದ ಆ್ಯಂಟೋನಿ ಟ್ಯಾಪೀಸ್ ಎಷ್ಟೋ ವರ್ಷಗಳಿಂದ ನನ್ನೊಳಗೆ ಕಾಡುತ್ತಿದ್ದರು. ಅವರು ಅಮೂರ್ತ ರೂಪದ ಆಕಾರಗಳನ್ನು ಸೃಷ್ಟಿಸಿ, ವಸ್ತುಗಳನ್ನು ಬಳಸಿ ಕಲಾಕೃತಿ ರಚಿಸಿದ್ದರು. ಅವರ ಬಣ್ಣ ಎರಚುವಿಕೆ ನೋಡುತ್ತ ನೋಡುತ್ತ ಅವರಂತೆ ನಾನೂ ಚಿತ್ರಿಸಬೇಕು ಎನ್ನುವ ತುಡಿತಕ್ಕೆ ಬಿದ್ದೆ. ಅವರಂತೆ ನಾನೂ ರಚಿಸಲು ಸಾಧ್ಯವೇ ನೋಡಿದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಪ್ರಯತ್ನಿಸಿದೆ. ಈಗ ನನ್ನದೇ ಆದ ದಾರಿಯಲ್ಲಿ ಒಂದಿಷ್ಟು ದೂರ ಸಾಗಿ ಬಂದಿದ್ದೇನೆ' ಎನ್ನುವ ಅವರ ಮಾತಲ್ಲಿ ಹೆಮ್ಮೆಯಿತ್ತು.

ಪ್ರಯೋಗಶೀಲತೆಯೇ ಜೀವಾಳ...

'ಯಾವುದೇ ಪೇಂಟಿಂಗ್ ಆರಂಭಿಸುವ ಕ್ಷಣದವರೆಗೂ ನನ್ನಲ್ಲಿ ಹೀಗೆಯೇ ಮಾಡಬೇಕೆನ್ನುವ ಸ್ಪಷ್ಟತೆ ಇರುವುದಿಲ್ಲ. ನನ್ನ ಉದ್ದೇಶ ಪ್ರಯೋಗಶೀಲತೆ. ಏನನ್ನೂ ಯಥಾವತ್ತಾಗಿ ಚಿತ್ರಿಸುವುದಿಲ್ಲ. ನನ್ನ ಚಿತ್ರಗಳೆಂದರೆ ಕನಸಿನಂತೆ. ಎಲ್ಲವನ್ನೂ ಇದ್ದ ಹಾಗೇ ಚಿತ್ರಿಸಿದರೆ ಪೋಸ್ಟರ್ ಅನ್ನಿಸುತ್ತವೆ. ಪೇಂಟಿಂಗ್‌ಗಳು ಪೋಸ್ಟರ್‌ಗಳಲ್ಲ! ಅವು ಕಲಾವಿದನ ಸೂಕ್ಷ್ಮ ಅಭಿವ್ಯಕ್ತಿ. ನೋಡುಗನಲ್ಲಿ ಕುತೂಹಲ ಮೂಡಿಸಬೇಕು, ಆಲೋಚನೆಗೆ ಹಚ್ಚಬೇಕು. ದೊಡ್ಡ ಕ್ಯಾನ್ವಾಸ್ ಹರಡಿಕೊಂಡು ಅದರ ಮೇಲೆಲ್ಲ ಬಣ್ಣಗಳನ್ನು ಸುರಿದು, ಹಂದರ ಸೃಷ್ಟಿಸಿ ಅದಕ್ಕೊಂದು ಆಕಾರ ಕೊಡುತ್ತ, ಮೈವಳಿಕೆ ಮೂಡಿಸಿ ಮೂರ್ತ-ಅಮೂರ್ತಗಳ ನಡುವೆ ಸೃಜಿಸುವ ಭ್ರಮಾಲೋಕ ನನ್ನ ಪೇಂಟಿಂಗ್!'

ಕಲೆಯೇ ಬದುಕು, ಅದುವೇ ಜೀವನ...

'ಬಾಲ್ಯದಲ್ಲಿ ನಾನಂತೂ ಕಲಾವಿದ ಆಗಬೇಕು ಅಂದುಕೊಂಡವನಲ್ಲ. ಆದರೆ ಈಗ ಪೂರ್ಣಾವಧಿ ಕಲಾವಿದ. ಇದೇ ನನ್ನ ಬದುಕು, ನನ್ನುಸಿರು. ಅಪ್ಪ, ಅಣ್ಣ ಕಲಾವಿದರಾಗಿದ್ದರಿಂದ ಮನೆಯಲ್ಲಿ ಕಲಾ ಪರಿಸರವಿತ್ತು. ಗದಗದ ವಿಜಯ ಕಲಾ ಮಂದಿರದಲ್ಲಿ ಬಿಎಫ್‌ಎ ಪದವಿ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಫೈನ್ ಆರ್ಟ್ಸ್ ನಲ್ಲಿ ಸ್ನಾತಕೋತ್ತರ ಪದವಿ, ಬಳಿಕ ಬೆಂಗಳೂರಿನಲ್ಲಿಯೇ ವಾಸ, ಹೊಸತನದ ಹುಡುಕಾಟ. ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ವಿಚಾರಸಂಕಿರಣಗಳಲ್ಲಿ ಭಾಗಿಯಾದೆ. ಹತ್ತಾರು ಪ್ರಶಸ್ತಿಗಳು, ಫೆಲೋಶಿಪ್‌ಗಳು ಸಂದವು. ನನ್ನ ಪರಿಶ್ರಮ, ತ್ಯಾಗ, ಬದ್ಧತೆ ಇಲ್ಲಿಯವರೆಗೆ ಕರೆತಂದಿದೆ' ಎನ್ನುವ ಅವರಿಗೆ 2016ರಲ್ಲಿ ಹಂಗೆರಿ ದೇಶದಿಂದ 'ಗ್ಲೋಬಲ್ ಆರ್ಟಿಸ್ಟ್' ಎಂಬ ಗೌರವವೂ ಸಂದಿದೆ.

'ನನ್ನದೇ ದಾರಿ; ನನ್ನದೇ ಬದುಕು. ಅಷ್ಟಾಗಿಯೂ ನಾನಷ್ಟೇ ಈ ಕ್ಷೇತ್ರದಲ್ಲಿ ಬೆಳೆಯುವುದಲ್ಲ, ನನ್ನೊಟ್ಟಿಗೆ ಯುವ ಕಲಾವಿದರನ್ನೂ ಬೆಳೆಸುವುದು ಗುರಿ. ನನ್ನದೇ 'ನಿರ್ವಾಣ ಆರ್ಟ್ ಫೌಂಡೇಷನ್' ಇದೆ. ಹತ್ತಾರು ಯುವ ಕಲಾವಿದರನ್ನು ಸೇರಿಸಿ ನನ್ನದೇ ಹಣ ಖರ್ಚು ಮಾಡಿ ಪ್ರದರ್ಶನ ಏರ್ಪಡಿಸುತ್ತೇನೆ. ವಿದೇಶಗಳ ಪ್ರದರ್ಶನಕ್ಕೂ ಅವರನ್ನು ಕರೆದೊಯ್ಯುತ್ತೇನೆ' ಎನ್ನುತ್ತಾರೆ ಅವರು.

'ರಿಯಲಿಸ್ಟಿಕ್ ಪೇಂಟರ್'

ಸುಮಾರು 30 ವರ್ಷಗಳಿಂದ ಪೂರ್ಣಾವಧಿ ಕಲಾವಿದರಾಗಿರುವ ಗದಗಿನ ರಮೇಶ ಈವರೆಗೆ ಸುಮಾರು 17 ರಾಷ್ಟ್ರಗಳನ್ನು ಸುತ್ತಿ, ಹತ್ತಾರು ಕಲಾಶಿಬಿರ, ಕಾರ್ಯಾಗಾರ, ಏಕವ್ಯಕ್ತಿ, ಸಮೂಹ ಚಿತ್ರಕಲಾ ಪ್ರದರ್ಶನಗಳನ್ನು ನೀಡಿದ್ದಾರೆ. ಯುವ ಕಲಾವಿದರನ್ನು ಪ್ರೋತ್ಸಾಹಿಸಲು ಬೆಂಗಳೂರಿನ ಜೆ.ಪಿ.ನಗರದಲ್ಲಿ 'ನಿರ್ವಾಣ ಆರ್ಟ್ ಫೌಂಡೇಷನ್' ಸ್ಥಾಪಿಸಿದ್ದಾರೆ. ಇವರು ಮೂಲತಃ 'ರಿಯಲಿಸ್ಟಿಕ್ ಪೇಂಟರ್'. ಇವರಿಗೆ ವಿದೇಶಿ ಕಲಾವಿದ ಸ್ನೇಹಿತರ ದೊಡ್ಡ ಬಳಗವಿದೆ. ಅವರೊಂದಿಗೆ ಒಡನಾಟ, ಅವರ ಕಲಾ ಬದುಕು, ಅವರ ವಿಚಾರಧಾರೆಗಳು ಪ್ರಭಾವಿಸಿವೆ. ಅವರ ಮೂಲಕವೇ ಅಂತರರಾಷ್ಟ್ರೀಯ ಕಲಾಶಿಬಿರಗಳ ಮಾಹಿತಿ ಪಡೆಯುತ್ತಾರೆ. ತಾವು ರಚಿಸಿದ ಚಿತ್ರಗಳನ್ನು ಅಂತರರಾಷ್ಟ್ರೀಯ ಮಟ್ಟದ ಕಲಾವಿದರ ಚಿತ್ರಗಳ ಪಕ್ಕದಲ್ಲಿಟ್ಟು ಅವರಿಂದ ಅಭಿಪ್ರಾಯ ಪಡೆಯುತ್ತಾರೆ, ಚರ್ಚಿಸುತ್ತಾರೆ. ಕಲಾವಿದರ ಪ್ರೊಫೈಲ್, ಕಲಾಕೃತಿಯ ಗುಣಮಟ್ಟ ನೋಡಿ ಆಯ್ಕೆ ಮಾಡುತ್ತಾರೆ. ಮೊದಲ ಬಾರಿಗೆ ರಷ್ಯಾದ ಕಲಾಶಿಬಿರ, ಕಲಾಪ್ರದರ್ಶನದಲ್ಲಿ ಪಾಲ್ಗೊಂಡಿದ್ದು, ಅಪಾರ ಕುತೂಹಲವನ್ನು ರಮೇಶ್ ಹೊಂದಿದ್ದಾರೆ.



ರಮೇಶ ತೇರದಾಳ ಅವರ 'ಎಕ್ಸ್‌ಪ್ರೆಶನ್ಸ್' ಸರಣಿ ಕಲಾಕೃತಿ

ಏಕವ್ಯಕ್ತಿಯ ವಿಭಿನ್ನ ರಂಗ ಪ್ರಯೋಗ

ಎಂ.ರಾಘವೇಂದ್ರ

ಕನ್ನಡ ರಂಗಭೂಮಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಏಕವ್ಯಕ್ತಿ ರಂಗ ಪ್ರಯೋಗಗಳು ಪ್ರದರ್ಶನಗೊಳ್ಳುತ್ತಿರುವ ದಿನಗಳಿವು. ಇಂಥ ಸಂದರ್ಭದಲ್ಲಿ ದೊಡ್ಡ ಸಂಗೀತ ಕಲಾವಿದನ ಬದುಕನ್ನು ಏಕವ್ಯಕ್ತಿ ರಂಗ ಪ್ರಯೋಗದ ಮೂಲಕ ಅನಾವರಣಗೊಳಿಸಿರುವುದು ವಿಶಿಷ್ಟ ಪ್ರಯತ್ನವಾಗಿದೆ.

ಹೆಗ್ಗೋಡಿನ ನೀನಾಸಂ ಸಂಸ್ಥೆಯು 75 ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದು, ಇದರ ಅಂಗವಾಗಿ ಪ್ರತಿ ತಿಂಗಳು ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ನಾಟಕಗಳು ಪ್ರದರ್ಶನವಾಗುತ್ತಿವೆ. ಈಚೆಗೆ ಅಲ್ಲಿ ಧಾರವಾಡದ ಆಟಮಾಟ ತಂಡವು 'ನಾ ರಾಜಗುರು' ಎನ್ನುವ ಏಕವ್ಯಕ್ತಿ ರಂಗ ಪ್ರಯೋಗ (ರಂಗರೂಪ, ಪರಿಕಲ್ಪನೆ: ಮಹಾದೇವ ಹಡಪದ, ಅಭಿನಯ: ವಿಶ್ವರಾಜ ರಾಜಗುರು) ಪ್ರದರ್ಶನಗೊಂಡಿತು.

ಸ್ವರ ಸಾಮ್ರಾಟ ಎಂದೇ ಪ್ರಸಿದ್ಧರಾಗಿದ್ದ ಪಂಡಿತ್ ಬಸವರಾಜ ರಾಜಗುರು ಅವರು ತಂದೆಯಿಂದಲೇ ಮೊದಲು ಸಂಗೀತದ ಪಾಠ ಹೇಳಿಸಿಕೊಂಡರು. ನಂತರ ವಾಮನ್ ರಾವ್ ಮಾಸ್ತರರ ನಾಟಕ ಕಂಪನಿ, ಶಿವಯೋಗ ಮಂದಿರ, ಪಂಚಾಕ್ಷರಿ ಗವಾಯಿಗಳು, ಸವಾಯಿ ಗಂಧರ್ವರು, ಪಂಡಿತ್ ನೀಲಕಂಠ ಮಿರಜಕರ ಬುವಾ, ಉಸ್ತಾದ್ ವಹೀದ್ ಖಾನ್-ಹೀಗೆ ಹಲವರ ಸಂಗೀತ ಗರಡಿಯಲ್ಲಿ ಪಳಗಿದ ಸ್ವಾರಸ್ಯಕರ ಕಥನ 90 ನಿಮಿಷಗಳ ಅವಧಿಯಲ್ಲಿ ರಂಗದ ಮೇಲೆ ಅನಾವರಣಗೊಳ್ಳುತ್ತದೆ. ರಾಜಗುರು ಅವರ ಬದುಕಿನ ಕತೆ, ನಾಟ್ಯ ಸಂಗೀತ, ಸಂಗೀತ ಸಾಧನೆಯ ಸ್ವರೂಪವನ್ನು ಇಟ್ಟುಕೊಂಡು ರೂಪುಗೊಂಡಿರುವ ಈ ಪ್ರಯೋಗವಿದು.

ಆತ್ಮಚರಿತ್ರೆಯ ವೃತ್ತಾಂತದ ರೂಪದಲ್ಲಿ ಒಂದೊಂದೆ ಘಟನೆಗಳು ರಂಗದ ಮೇಲೆ ಕುತೂಹಲ ಹುಟ್ಟುವ ರೀತಿಯಲ್ಲಿ ಸಾದರಪಡಿಸಿರುವುದು ಪ್ರಯೋಗದ ಹೆಗ್ಗಳಿಕೆ. ಸರಳ ರಂಗ ಸಜ್ಜಿಕೆಯಲ್ಲಿನ ಈ ಪ್ರಯೋಗಕ್ಕೆ ರಾಜಗುರುಗಳು ಹಾಡುತ್ತಿದ್ದ ರಂಗಗೀತೆ, ಚೀಜ್, ಖಯಾಲ್, ವಚನ, ನಾಟ್ಯಗೀತೆ-ಹೀಗೆ ಎಲ್ಲಾ ಪ್ರಕಾರಗಳನ್ನು ಬಳಸಿಕೊಂಡಿರುವುದು ಪ್ರಯೋಗಕ್ಕೆ ಕಳೆ ತಂದಿದೆ.

ಸಂಗೀತವೇ ನಾಟಕದ ಆತ್ಮವಾಗಿರುವುದರಿಂದ ಒಂದೇ ಪ್ರಯೋಗದಲ್ಲಿ ನಟನೆ, ರಂಗ ಕೌಶಲದ ಜೊತೆಗೆ ವಿಭಿನ್ನ ಪ್ರಕಾರದ ಸಂಗೀತವನ್ನೂ ಸವಿಯುವ ಅವಕಾಶ ಪ್ರೇಕ್ಷಕರಿಗೆ ಲಭ್ಯವಾಗುತ್ತದೆ. ರಾಜಗುರುಗಳ ಬದುಕಿನ ಘಟನೆಗಳ ನೆನಪಿನ ಬುತ್ತಿಬಿಚ್ಚಿಕೊಳ್ಳುವಾಗ ಏಕತಾನತೆ ಕಾಡಬಾರದು ಎನ್ನುವ ಕಾರಣಕ್ಕೆ ನಡುವೆ ಬಳಸಿರುವ ರಂಗ ಚಲನೆ, ತಿಳಿಹಾಸ್ಯ ಪ್ರಯೋಗದ ಜೀವಂತಿಕೆಯನ್ನು ಕಾಪಾಡುವಲ್ಲಿ ನಿರ್ದೇಶಕರ ಜಾಣ್ಮೆ ಎದ್ದು ಕಾಣುತ್ತದೆ.



'ನಾ ರಾಜಗುರು' ನಾಟಕದಲ್ಲಿ ವಿಶ್ವರಾಜ ರಾಜಗುರು ಚಿತ್ರ: ಅಪ್ಪು ಮೈಸೂರು

ಸಂಗೀತದಲ್ಲಿ ಉನ್ನತವಾದದ್ದನ್ನು ಸಾಧಿಸಬೇಕು ಎನ್ನುವ ಕಾರಣಕ್ಕೆ ರಾಜಗುರು ಅವಿಭಜಿತ ಪಾಕಿಸ್ತಾನದ ಲಾಹೋರ್, ಕರಾಚಿಯವರೆಗೂ ಗುರುಗಳನ್ನು ಹುಡುಕಿಕೊಂಡು ಹೋಗಿದ್ದು, ವಿಭಜನೆಯ ಹಿಂಸೆಯಿಂದ ಪ್ರಯಾಸದಿಂದ ಬದುಕಿ ಭಾರತಕ್ಕೆ ಬಂದಿದ್ದು, ಭಾರತದ ಯಾವುದೇ ಮೂಲೆಗೆ ಸಂಗೀತ ಕಛೇರಿ ನೀಡಲು ಹೋಗುವಾಗಲೂ ಧಾರವಾಡದ ನೀರನ್ನೆ ಕೊಂಡೊಯ್ಯುತ್ತಿದ್ದದ್ದು.... ಹೀಗೆ ಹತ್ತು ಹಲವು ಸ್ವಾರಸ್ಯಕರ ಸಂಗತಿಗಳನ್ನು ಪ್ರಯೋಗ ಒಳಗೊಂಡಿದೆ.

ಶಾಸ್ತ್ರೀಯ ಸಂಗೀತವನ್ನು ಅಭಿನಯ, ಚಲನೆಯ ಜೊತೆಗೆ ರಂಗದ ಮೇಲೆ ಪ್ರಸ್ತುತಪಡಿಸುವುದು ಒಂದು ಸವಾಲಿನ ಸಂಗತಿ. ಈ ಸವಾಲನ್ನು ಬಸವರಾಜ ರಾಜಗುರುಗಳ ಮೊಮ್ಮಗ ವಿಶ್ವರಾಜ ರಾಜಗುರು ಅತ್ಯಂತ ಸಮರ್ಥವಾಗಿ ನಿಭಾಯಿಸಿದ್ದಾರೆ. ತಬಲಾ, ಹಾರ್ಮೋನಿಯಂ ಸಾಥ್ ನೀಡುತ್ತಲೇ ಅಕ್ಷಯ ಜೋಶಿ ಹಾಗೂ ವೆಂಕಟೇಶ ರೆಡ್ಡಿ ರಂಗದ ಮೇಲೆ ರಾಜಗುರುಗಳ ಬದುಕಿನ ವೃತ್ತಾಂತದ ಘಟನೆಗಳಿಗೆ ಸಾಕ್ಷಿಯಾಗುತ್ತ ಸಾಗುವುದು ಪ್ರಯೋಗದ ಚಲನಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ.

ಪ್ರಯೋಗದ ಉದ್ದಕ್ಕೂ ರಂಗವನ್ನು ಸಂಗೀತ ಕಛೇರಿಯ ವೇದಿಕೆಯ ಮಾದರಿಯಲ್ಲೆ ಸಿದ್ಧಪಡಿಸಿರುವುದು ಬೆಳಕಿನ ವಿನ್ಯಾಸ (ಬೆಳಕು:ಚಂದ್ರು ಕಿಲ್ಲೇದಾರ) ದ ಪ್ರಭಾವಳಿಯನ್ನು ಹೆಚ್ಚಿಸಲು ಕಾರಣವಾಗಿದೆ. ನಾಟಕದ ಪ್ರಮುಖ ಘಟ್ಟಗಳಲ್ಲಿ ಧ್ವನಿಸುವ ಕಥಾ ವಸ್ತುವಿಗೆ ಬೆಳಕು ಸೂಕ್ತ ಆವರಣ ಕಲ್ಪಿಸಿದೆ.

ಕರ್ನಾಟಕದಲ್ಲಿ ಪ್ರಸಿದ್ಧಿ ಗಳಿಸಿರುವ ಹಲವು ಶಾಸ್ತ್ರೀಯ ಸಂಗೀತ ಕಲಾವಿದರ ಕುರಿತು ಆತ್ಮಚರಿತ್ರೆಯ ಕೃತಿ ಪ್ರಕಟವಾಗಿರುವ ಉದಾಹರಣೆಗಳಿವೆ. ಹಾಗೆ ನೋಡಿದರೆ ಪಂಡಿತ್ ಬಸವರಾಜ ರಾಜಗುರುಗಳ ಸಾಧನೆಗೆ ತಕ್ಕ ದಾಖಲೀಕರಣದ ಕೆಲಸ ಈವರೆಗೆ ಆಗಿರಲಿಲ್ಲ. ಈ ಕೊರತೆಯನ್ನು ಕೊಂಚವಾದರೂ 'ನಾ ರಾಜಗುರು' ಪ್ರಯೋಗ ತುಂಬುತ್ತದೆ.

ಸಂಗೀತ ಕಲಾವಿದನೊಬ್ಬನ ಬದುಕು ಅದೆಷ್ಟು ಕಷ್ಟ ಕಾರ್ಪಣ್ಯಗಳಿಂದ ಕೂಡಿರುತ್ತದೆ, ಮಹತ್ವದ್ದನ್ನು ಸಾಧಿಸಬೇಕು ಎಂಬ ಆಕಾಂಕ್ಷೆ ಕಲಾವಿದನನ್ನು ದೇಶ, ಭಾಷೆ, ಗಡಿರೇಖೆಗಳ ಆಚೆಗೂ ಹೇಗೆ ದಾಟಿಸುತ್ತದೆ, ಕಲಾವಿದನ ಉನ್ನತ ಸಾಧನೆಗೆ ವೈಯುಕ್ತಿಕ ಬದುಕಿನಲ್ಲಿ ಶಿಸ್ತು ಎಷ್ಟು ಮುಖ್ಯ, ಎಷ್ಟೆ ಎತ್ತರಕ್ಕೇರಿದರೂ ಕಲಾವಿದ ತನ್ನ ನೆಲದ 'ಮಣ್ಣಿನ ವಾಸನೆ' ಗೆ ಎಷ್ಟು ಹತ್ತಿರವಾಗಿರುತ್ತಾನೆ ಎಂಬ ಹಲವು ಸಂಗತಿಗಳು ನಾಟಕ ನೋಡಿದ ನಂತರ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುತ್ತದೆ.

ಹಾಳೆ ಹಳೆಯದಾದರೇನು?...



ಚಾಮರಾಜನಗರ ಜಿಲ್ಲೆಯ ಸಿದ್ದಯ್ಯನಪುರ ಸರ್ಕಾರಿ ಶಾಲೆಯ ಮಕ್ಕಳಿಗೆ ಕಳೆದ ವರ್ಷ ನೋಟ್‌ಬುಕ್‌ಗಳನ್ನು ನೀಡಿದ್ದ ಸಂದರ್ಭ

10ನೇ ಪುಟದಿಂದ...

'ನಾನು ವ್ಯವಸಾಯ ಮಾಡಿಕೊಂಡು ಇಬ್ಬರು ಹೆಣ್ಣುಮಕ್ಕಳನ್ನು ಓದಿಸುತ್ತಿದ್ದೇನೆ. ಹಿರಿಮಗಳು ಸಿದ್ಧಯ್ಯನಪುರದ ಪ್ರೈಮರಿ ಸ್ಕೂಲ್‌ನಲ್ಲಿ ಓದುತ್ತಿದ್ದಾಳೆ. ಕಳೆದ ವರ್ಷ ಆಕೆ ಕೈಸೇರಿದ ಉಚಿತ ನೋಟ್‌ಬುಕ್‌ನಿಂದಾಗಿ ಓದಿಗೆ ಅನುಕೂಲವಾಯಿತು, ನನಗೆ ಕೊಂಚ ಹಣ ಉಳಿತಾಯವಾಯಿತು' ಎಂದು ಚಾಮರಾಜನಗರ ಜಿಲ್ಲೆಯ ಕೆಂಪನಪುರದ ನಾಗಣ್ಣ ಕೃತಜ್ಞಾಭಾವದಿಂದ ಹೇಳುತ್ತಾರೆ.

ಮರುಬಳಕೆ ಹೇಗೆ?: ಬೆಂಗಳೂರು ನಗರದ ಹನ್ನೊಂದು ಕಡೆ ಇರುವ ಸಂಗ್ರಹ ಕೇಂದ್ರಗಳಿಗೆ ದಾನವಾಗಿ ನೀಡುರುವ ನೋಟ್‌ಬುಕ್‌ಗಳನ್ನು ಸಂಗ್ರಹಿಸಿ ಉತ್ತರಹಳ್ಳಿಯಲ್ಲಿರುವ ವೈಎಫ್‌ಪಿ ಕೇಂದ್ರಕ್ಕೆ ತರಲಾಗುತ್ತದೆ. ಅಲ್ಲಿ ಸ್ವಯಂ ಸೇವಕರು ದಿನಕ್ಕೆ ಎರಡು ಪಾಳಿಯಲ್ಲಿ ಖಾಲಿಹಾಳೆಗಳನ್ನು ಬೇರ್ಪಡಿಸುವ ಕೆಲಸ ಮಾಡುತ್ತಾರೆ. ಈ ಕೆಲಸ ಮುಂದಿನ ನಾಲ್ಕೈದು ವಾರಾಂತ್ಯಗಳಲ್ಲಿ ನಡೆಯಲಿದೆ.

ಈ ವರ್ಷ 5 ಸಾವಿರ ಪುಸ್ತಕ ಗುರಿ

ವೈಎಫ್‌ಪಿಗೆ ಈಗಾಗಲೇ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಿಂದ ಎರಡು ಟನ್ ನೋಟ್‌ಬುಕ್‌ಗಳು ಬಂದಿವೆ. ಈ ವರ್ಷ ಸಂಗ್ರಹ ಕೇಂದ್ರಗಳು ಹನ್ನೊಂದಕ್ಕೆ ಏರಿಕೆಯಾಗಿವೆ. ಈಗಾಗಲೇ ರಿಸೈಕ್ಲಥಾನ್ ಪ್ರಕ್ರಿಯೆ ಆರಂಭವಾಗಿದ್ದು, ಈ ಬಾರಿ ಅಂದಾಜು ಐದೂವರೆ ಟನ್ ನೋಟ್‌ಬುಕ್‌ಗಳನ್ನು ಸಿದ್ಧಪಡಿಸುವ ವಿಶ್ವಾಸ ಹೊಂದಲಾಗಿದೆ. ಅವುಗಳಲ್ಲಿ ಸುಮಾರು ಎರಡರಿಂದ ಮೂರು ಟನ್ ಬಳಕೆಯಾಗದ ಹಾಳೆಗಳು ದೊರೆಯಲಿವೆ. ಅವುಗಳೆಲ್ಲವುದರಿಂದ ತಲಾ 200 ಪುಟಗಳ ಐದು ಸಾವಿರಕ್ಕೂ ಅಧಿಕ ನೋಟ್‌ಬುಕ್‌ಗಳನ್ನು ತಯಾರಿಸುವ ಯೋಜನೆಯಿದೆ. ವೈಎಫ್‌ಪಿಯ ಸ್ವಯಂಸೇವಕರು ಕಲಿತ ಹಳ್ಳಿಗಳ ಸರ್ಕಾರಿ ಶಾಲೆಗಳಿಗೂ ಈ ನೋಟ್‌ಬುಕ್‌ಗಳನ್ನು ಹಂಚಲಾಗಿದೆ. ಈ ಬಾರಿ ನೋಟ್‌ಬುಕ್‌ಗಳನ್ನು ಕರಾವಳಿ ಭಾಗದ ಸರ್ಕಾರಿ ಶಾಲೆಗಳಿಗೆ ನೀಡಲು ನಿರ್ಧರಿಸಿದೆ.

'ಕಳೆದ ವರ್ಷ ಪುಟಾಣಿಗಳ ಕೈಯಲ್ಲಿ ನೋಟ್‌ಬುಕ್‌ಗಳನ್ನು ಇಟ್ಟಾಗ ಅವರಿಗಾದ ಸಂತೋಷ ಅವರ್ಣನೀಯ. ನೋಟ್‌ಬುಕ್‌ಗಳನ್ನು ಮೇಲಕ್ಕೆ ಎತ್ತಿಹಿಡಿದು ಕುಣಿದು ಕುಪ್ಪಳಿಸಿದಾಗ ಸತತ ನಾಲ್ಕೈದು ವಾರ ನಾವು ಪಟ್ಟ ಶ್ರಮ ಸಾರ್ಥಕ ಎನಿಸಿತು' ಎಂದು ಅಮಿತ್ ಖುಷಿಯಿಂದ ಹೇಳಿದರು.

ಈ ವರ್ಷ ಬೆಂಗಳೂರಿನ ಕೆಲವು ಅಪಾರ್ಟ್‌ಮೆಂಟ್‌ನಲ್ಲಿರುವ ಸಂಘಗಳೂ ಈ ಯೋಜನೆಗೆ ನೂರಾರು ಸಂಖ್ಯೆಯಲ್ಲಿ ನೋಟ್‌ಬುಕ್‌ಗಳನ್ನು ದಾನ ನೀಡಿರುವುದು ವಿಶೇಷ.

ನಗರ ಪ್ರದೇಶಗಳಲ್ಲಿ ಕಸ ಎಸೆಯುತ್ತಿದ್ದ ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಿ ರಂಗು ತುಂಬಿ ಬದಲಾವಣೆ ತರುತ್ತಿದ್ದ ವೈಎಫ್‌ಪಿ ಇದೀಗ ಪುಟಾಣಿಗಳ ಬದುಕಿನಲ್ಲಿ ಅಕ್ಷರದ ರಂಗು ತುಂಬುತ್ತಿರುವುದು ಶ್ಲಾಘನೀಯ.

ಕುಣಿದು ಕುಪ್ಪಳಿಸಿದ ಮಕ್ಕಳು

'ತಮಿಳುನಾಡು ಗಡಿಯಲ್ಲಿರುವ ನಮ್ಮ ಶಾಲೆಗೆ ಬರುವ ಶೇಕಡ 80ರಷ್ಟು ಮಕ್ಕಳ ಪೋಷಕರು ಕೂಲಿ ಕಾರ್ಮಿಕರು. ಅವರಿಗೆ ಒಮ್ಮೆಯೇ ನಾಲ್ಕೈದು ನೋಟ್‌ಬುಕ್‌ಗಳನ್ನು ಖರೀದಿಸುವ ಸಾಮರ್ಥ್ಯವಿಲ್ಲ. ಆದ್ದರಿಂದ ನಾವು ಹೇಳಿದ ಎರಡು ವಾರಗಳ ಬಳಿಕ ನೋಟ್‌ಬುಕ್ ತರುತ್ತಿದ್ದವು. ಅಷ್ಟು ದಿನ ಪಾಠ ಬರೆದುಕೊಳ್ಳುತ್ತಿರಲಿಲ್ಲ. ಹೀಗಿರುವಾಗ ಕಳೆದ ವರ್ಷ ವೈಎಫ್‌ಪಿಯಿಂದ ಶೈಕ್ಷಣಿಕ ವರ್ಷದ ಆರಂಭದಲ್ಲೇ ಉಚಿತವಾಗಿ 210 ವಿದ್ಯಾರ್ಥಿಗಳಿಗೆ ತಲಾ ಮೂರು ನೋಟ್‌ಬುಕ್‌ಗಳು ಸಿಕ್ಕವು. ಇದು ಅವರ ಶಿಕ್ಷಣದ ಮೇಲೂ ಸಕಾರಾತ್ಮಕ ಪರಿಣಾಮ ಬೀರಿದೆ. ಕೆಲ ಮಕ್ಕಳು ಅವುಗಳಲ್ಲಿ ಪೆನ್ಸಿಲ್‌ನಲ್ಲಿ ಬರೆದು, ಹಳೆಯದನ್ನು ಅಳಿಸಿ ಮತ್ತೆ ಮತ್ತೆ ಬಳಸುತ್ತಿದ್ದಾರೆ' ಎಂದು ಚಾಮರಾಜನಗರ ಜಿಲ್ಲೆಯ ಸಿದ್ಧಯ್ಯನಪುರದ ಹಿರಿಯ ಪ್ರಾಥಮಿಕ ಶಾಲೆ ದೈಹಿಕ ಶಿಕ್ಷಣ ಶಿಕ್ಷಕ ನಾರಾಯಣ್ ಹೇಳಿದರು.

ಮುನ್ನೋಟ 05-05-2024 ರಿಂದ 11-05-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮಲ್ಲಿ ಅಧಿಕಾರ ಮನೆ ಮಾಡಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಮಂತ್ರೋಪಾಸಕರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಗುರುಗಳು, ಪಂಡಿತರಿಗೆ ಗೌರವ ಸಿಗುತ್ತದೆ. ನಿಮ್ಮ ಕೆಲಸ ಕಾರ್ಯಗಳಲ್ಲಿ ಅನಿಶ್ಚಿತತೆ ಇರುತ್ತದೆ. ಸ್ಥಿರಾಸ್ತಿಯನ್ನು ಮಾಡುವ ಯೋಗವಿದ್ದರೂ ಅದರ ಬಗ್ಗೆ ದೃಢ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಗಾಂಭೀರ್ಯತೆ ನಿಮ್ಮಲ್ಲಿ ಇರುತ್ತದೆ. ದೈವಭಕ್ತಿ ಹೆಚ್ಚುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಕೆಲಸ ಕಾರ್ಯಗಳಿಂದ ಹಣ ಗಳಿಸಲು ಪ್ರಯತ್ನ ಪಡುವಿರಿ. ಆಸ್ತಿ ವಿಚಾರದಲ್ಲಿ ದಾಖಲೆಗಳಲ್ಲಿ ಮೋಸ ಆಗಬಹುದು ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಶ್ರಮಕ್ಕಿಂತ ಕಡಿಮೆ ಯಶಸ್ಸು ದೊರೆಯಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವ್ಯಾವಹಾರಿಕವಾಗಿ ಬಹಳ ಚತುರರಾಗಿರುವಿರಿ. ಆದಾಯವು ಮಧ್ಯಮ ಗತಿಯಲ್ಲಿ ಇರುತ್ತದೆ. ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಆಸ್ತಿ ಖರೀದಿಯ ವಿಚಾರದಲ್ಲಿ ಅಲ್ಪ ಪ್ರಗತಿಯನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಪ್ರಗತಿ ಇರುತ್ತದೆ. ತಲೆನೋವು ಕೆಲವರನ್ನು ಬಾಧಿಸಬಹುದು. ಸರ್ಕಾರಿ ಸಾಲಗಳಿಂದ ನಿಮಗೆ ಅನುಕೂಲವಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಪ್ರಮುಖ ನಿರ್ಧಾರಗಳನ್ನು ಮಾಡುವಾಗ ಎಚ್ಚರವಿರಲಿ. ಆದಾಯವು ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಬಂಧುಗಳ ನಡುವೆ ಭಿನ್ನಾಭಿಪ್ರಾಯ ಬಂದು ಕೆಲಸಗಳು ನಿಲ್ಲಬಹುದು. ಸಂಘ ಸಂಸ್ಥೆಗಳಲ್ಲಿ ಆಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶದ ಹತ್ತಿರ ಯಶಸ್ಸು ಸಿಗುವ ಯೋಗವಿದೆ. ವಾಯು ಪ್ರಕೋಪ ಕಾಣಿಸಬಹುದು. ಆರೋಗ್ಯಕ್ಕಾಗಿ ಹಣ ಖರ್ಚು ಮಾಡಬೇಕಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಒಂದು ರೀತಿಯ ಅಧಿಕಾರವಾಣಿ ನಿಮ್ಮಲ್ಲಿ ಇರುತ್ತದೆ. ಮಾತನಾಡುವಾಗ ಧರ್ಮ ಸೂಕ್ಷ್ಮದಂತೆ ಮಾತನಾಡಿ ಎದುರಾಳಿಯನ್ನು ಸಿಕ್ಕಿಸುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ನಿಮ್ಮ ಹಿರಿಯರು ಹಾಗೂ ಮಹಿಳೆಯರು ಸಹಕಾರವನ್ನು ನೀಡುವರು. ಭೂಮಿಯನ್ನು ಕೊಳ್ಳುವ ಉತ್ಸಾಹ ಬೇಡ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಆಸಕ್ತಿ ಮಾಡುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಗಟ್ಟಿ ಮನಸ್ಸು ಮಾಡಿಕೊಂಡು ಕೆಲಸ ಮಾಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಬಂಧುಗಳೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಸಾಕಷ್ಟು ಪ್ರಯತ್ನ ಪಡುವಿರಿ. ಆಸ್ತಿ ಖರೀದಿ ಮಾಡಲು ಹಣ ಒಗ್ಗೂಡಿಸುವಿರಿ. ಮಕ್ಕಳಿಂದ ನಿರೀಕ್ಷಿತ ಸಹಾಯಗಳು ದೊರೆಯದಿರಬಹುದು. ಈಗ ವಿದ್ಯಾರ್ಥಿಗಳಿಗೆ ಅಂತಹ ಶ್ರೇಯಸ್ಸು ಇರುವುದಿಲ್ಲ. ಸಾಲಗಾರರ ಕಾಟ ಹೆಚ್ಚುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ತಂತ್ರಗಳನ್ನು ರೂಪಿಸುವ ಶಕ್ತಿ ನಿಮಗೆ ಒದಗಿ ಬರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಗಳು ಸಮಾಜಕ್ಕೆ ಬೇಸರ ತರಿಸಬಹುದು. ಕೃಷಿಭೂಮಿಯನ್ನು ಕೊಳ್ಳುವ ಆಸೆ ಹೆಚ್ಚುತ್ತದೆ. ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಕಲಿಯುತ್ತಿರುವವರಿಗೆ ಅನುಕೂಲವಿರುತ್ತದೆ. ಕೆಲವರನ್ನು ಚರ್ಮರೋಗಗಳು ಕಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮಲ್ಲಿ ಸಾಮರ್ಥ್ಯವಿದ್ದರೂ ಅದನ್ನು ಹೊರತರಲು ಒದ್ದಾಡುವಿರಿ. ಆದಾಯವು ಚೇತರಿಕೆಯ ಹಾದಿಯಲ್ಲಿರುತ್ತದೆ. ಕೃಷಿಯಿಂದ ಸಾಕಷ್ಟು ಅನುಕೂಲವಿರುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯವಾದ ಫಲಿತಾಂಶ ಇರುತ್ತದೆ. ಪ್ರಸೂತಿ ತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಕಣ್ಣಿನ ವೈದ್ಯರಿಗೂ ಬೇಡಿಕೆ ಹೆಚ್ಚುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಸ್ವಲ್ಪ ಆಲಸ್ಯವಿರುತ್ತದೆ. ಆದಾಯವು ಕಡಿಮೆ ಇದ್ದರೂ ಹಣ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ಕೆಲವು ರಾಜಕಾರಣಿಗಳು ಬಳಸುವ ತಂತ್ರಗಳು ಸರಿಯಾಗಿ ಪರಿಣಾಮ ಬೀರುತ್ತವೆ. ಹಿರಿಯರಿಂದ ನಿಮಗೆ ಸೂಕ್ತ ಸಲಹೆಗಳು ಸಕಾಲದಲ್ಲಿ ದೊರೆಯುತ್ತವೆ. ಆಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಸಾಕಷ್ಟು ಗಲಿಬಿಲಿಗಳಿರುತ್ತವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಸಿಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಹೆಚ್ಚು ಶ್ರಮವಹಿಸಿ ಕೆಲಸ ಮಾಡಬೇಕಾಗುತ್ತದೆ. ಆದಾಯವು ಕಡಿಮೆ ಇದ್ದರೂ ಅದರಲ್ಲೇ ನಿಭಾಯಿಸುವಿರಿ. ನಿಮ್ಮ ಚಟುವಟಿಕೆಗಳಿಗೆ ಹಿತ ಶತ್ರುಗಳು ಅಡ್ಡ ಬರುವರು. ಜಮೀನು ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ನಿಮಗೆ ಜಮೀನು ಕೊಳ್ಳುವ ಯೋಗ ಬಂದಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅತಿ ಹೆಚ್ಚು ಯಶಸ್ಸು ಸಿಗುತ್ತದೆ. ಚರ್ಮದ ಕಾಯಿಲೆಗಳಿರುವವರು ಎಚ್ಚರವಹಿಸಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವಹಿಸಿಕೊಂಡ ಕೆಲಸವನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ಹಿರಿಯರು ತಮ್ಮ ಕಾರ್ಯ ಚಟುವಟಿಕೆಗಳಿಂದ ಸಮಾಜದಲ್ಲಿ ಗೌರವ ಪಡೆಯುವರು. ದೇವಾಲಯಗಳಿಗೆ ಅಥವಾ ಮಠಗಳಿಗೆ ಅಪೇಕ್ಷಿತ ಜಾಗ ಸಿಗುತ್ತದೆ. ಆಸ್ತಿ ಕೊಳ್ಳಲು ಹಣ ಒಟ್ಟು ಮಾಡಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಿರ್ಧಾರಗಳಲ್ಲಿ ಸಾಕಷ್ಟು ದ್ವಂದ್ವಗಳಿರುತ್ತವೆ. ಸ್ಥಿರ ನಿರ್ಧಾರಗಳು ಬಹಳ ಮುಖ್ಯ. ಹಣದ ಒಳಹರಿವು ಉತ್ತಮವಾಗಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಗುರು ಹಿರಿಯರ ಸಹಕಾರ ದೊರೆಯುತ್ತದೆ. ಸಂಸಾರದಲ್ಲಿ ಸಂತೋಷವಿದ್ದರೂ ಸ್ವಲ್ಪ ಮುನಿಸುಗಳು ಇರುತ್ತವೆ. ಆಸ್ತಿ ಮಾಡುವ ವಿಚಾರದಲ್ಲಿ ಎಚ್ಚರವಾಗಿರಿ, ನಷ್ಟವಾಗಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ.

ಪದಬಂಧ 2840



ಮೇಲಿನಿಂದ ಕೆಳಕ್ಕೆ

1. ಈ ಕಾಮತಜ್ಞನಿಂದ 'ಸ'ಕಾರ ತೆಗೆದರೆ ಬೆಳಕಿಂಡಿಯಾಗುತ್ತದೆ 4
2. ಇದು ಅತಿಯಾಯಿತು 4
3. ಚರ್ಚಾವಸ್ತು ತಲೆಕೆಳಗಾಗಿದೆ 3
4. ಉತ್ತರಭಾರತದ ಪಟ್ಟಣ 3
6. ಕುಪಿತ ಶಿವ ವೇದಿಕೆಯ ಮೇಲಾಡುವ ಆಟ 5
8. ಹೆದರಿದಾಗ ಎದೆಬಡಿತದ ಸದ್ದು 4
10. ಎಚ್ಚೆತ್ತುಕೊಂಡ ಸ್ಥಿತಿ 3
12. ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗಾಣಿಕೆ 3
13. ಕಣ್ಣು ಕಾಣದವನಿಗೆ ಅಲ್ಪಖಾರದಿಂದ ತುಂಬಿಕೊಳ್ಳುವ ಕತ್ತಲು 4
14. ಜ್ಯೋತಿಷ್ಯದಲ್ಲಿ ಅಂತರಂಗಕ್ಕೆ ಪ್ರೇರಣೆ ನೀಡುವವ 5
16. ಯಾರಾದರೂ ಇಹಲೋಕ ತ್ಯಜಿಸಿದಾಗ 'ಡಂ' ಎಂದು ಶಬ್ದವಾಗಬಹುದು 3
18. ಅರುಣನಂತೆ ಉದಯಿಸುವ ಯುವಕರು 4
19. ಕೃಷ್ಣವಂಶದ ಪರಾಕ್ರಮಿ ಮೈಸೂರಿನ ಅರಸು 4
20. ಅಲ್ಪಖಾರದಲ್ಲಿ ಕೊನೆಯಾಗುವ ದಕ್ಷಿಣಕನ್ನಡದ ಮನೆತನ 3
21. ವಸಂತದಲ್ಲಿ ಅರಳಿದ ಹೂವಿನ ಹೆಸರಿನವಳು 3

ಎಡದಿಂದ ಬಲಕ್ಕೆ

1. ಗಾಳಿಯನ್ನುಂಡು ಬದುಕುವ ಪ್ರಾಣಿ 4
3. ಯಶ ಪಡೆದ ಯೋಗಿ 3
5. ಪರವಾಸುದೇವನಂತೆ ಶ್ರೇಷ್ಠರಲ್ಲಿ ಶ್ರೇಷ್ಠನಾದವನನ್ನು ಯಶೋದೆ ಆಡಿಸಿದಳು 6
7. ಆರ್ಯರಲ್ಲದ ಇವರು ದಕ್ಷಿಣಭಾರತದಲ್ಲಿ ಹೆಸರುವಾಸಿ 4
9. ಆಗತಾನೇ ಹುಟ್ಟಿಬಂದದ್ದು 4
11. ಒಂದೇ ಸಮನೆ ರೋಗದಿಂದ ಒದ್ದಾಡುವುದು 4
13. ಇದೇ ಕೊನೆಯದು 3
15. ಸಾಲವಾಗಿ ಬರುವ ಈಚಲ ಮರ 3
17. ಬೇನೆ ಹೆಚ್ಚಾದಾಗ ಹಚ್ಚುವ ತೈಲ 4
18. ಅನಂತರ ಮರದಿಂದ ಮೂಡುತ್ತೆ 4
20. ಕರ್ನಾಟಕದ ಕಡಲಿನ ತೀರದಲ್ಲಿ ಸಪ್ತಾಹದ ಊರು 4
22. ವೆಂಕಟರಮಣ ಹೀಗೆ ದುಃಖ ನಿವಾರಕ 6
23. ತಪಶ್ಶಕ್ತಿಯಿಂದ ಹರಿವ ನದಿ 3
24. ನಾಲಿಗೆಗೆ ಸವಿಯಾದದ್ದು, ಬಾಯೂರಿಸುವಂತದ್ದು 4

ಪದಬಂಧ ಉತ್ತರ -2839

ಮೇಲಿಂದ ಕೆಳಕ್ಕೆ

1. ಗಗನಚುಕ್ಕಿ 2.ಕುಹೂ 3.ವೃತ್ತಿ 4.ಭಯಕಾರಕ 5.ಜಗದಂಬಾ 7.ಬವಣೆ 9.ನಾಮಪತ್ರ 11.ವಜ್ರಮುಕುಟ 12.ಪ್ರಚಾರಪ್ರಿಯ 14.ನಗರ 16.ಆರವಿ 18.ಪರಿಹಾಸ 19.ಮಕರರಾಶಿ 20.ಕರುಣಾಮಯಿ 21.ತರುಲತೆ 23.ನಾನಕ 25.ಬರ 26.ರಾಮ

ಎಡದಿಂದ ಬಲಕ್ಕೆ

1. ಗದಕು 3.ವೃಷಭ 5.ಜನಾಂಗ 6.ಹೂಬತ್ತಿ 8.ಯಮುನಾ 10.ಚುನಾವಣೆಪ್ರಚಾರ 13.ಬಾನಕ್ಕಿ 15.ಕಳತ್ರ 17.ಮುಕುರ 18.ಪರಮ 20.ಕವಿತ 22.ಕಪಟನಾಯಕರು 24.ಸಹಾರಾ 25.ಬಕರಾ 27.ಮಮತೆ 28.ಶಿಖರ 29.ಮಲಾಯಿ

‘ಸ್ವಂತ ಶೈಲಿಯಲ್ಲಿ ಹಾಡಲು ನನಗಿಷ್ಟ’

ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಮಧುರಾತಿಮಧುರವಾಗಿ ಹಾಡುವ ಗಾಯಕರಲ್ಲಿ **ವಿದ್ವಾನ್ ಸಂದೀಪ್ ನಾರಾಯಣ್** ಪ್ರಮುಖ ಹೆಸರು. ಅಮೆರಿಕದಲ್ಲಿ ಹುಟ್ಟಿ ಬೆಳೆದರೂ ಸಂಗೀತ ಸಾಧನೆಗಾಗಿ ಚೆನ್ನೈಗೆ ಬಂದು ನೆಲೆಸಿದ ಇವರು ನಾದದೊಂದಿಗೆ ತಮ್ಮ ಜೀವನ ರೂಪಿಸಿಕೊಂಡ ಪರಿ ಅನನ್ಯ. ಬೆಂಗಳೂರಿನ ಚಾಮರಾಜಪೇಟೆಯ ಕೋಟೆ ರಾಮನವಮಿ ಉತ್ಸವದಲ್ಲಿ ಹಾಡಲು ಬಂದಿದ್ದ ಸಂದೀಪ್, **‘ಭಾನುವಾರದ ಪುರವಣಿ’**ಯೊಂದಿಗೆ ತಮ್ಮ ಸಂಗೀತ ಪಯಣದ ಅನುಭವವನ್ನು ಹಂಚಿಕೊಂಡಿದ್ದಾರೆ.

ಸಂದರ್ಶನ: ಉಮಾ ಅನಂತ್

• ಅಮೆರಿಕದಲ್ಲಿ ಹುಟ್ಟಿ ಬೆಳೆದು ಕಾನೂನು ಪದವಿ ಪಡೆದ ನಿಮಗೆ, ಕರ್ನಾಟಕ ಶಾಸ್ತ್ರೀಯ ಸಂಗೀತದ ನಂಟು ಬೆಳೆದದ್ದು ಹೇಗೆ?

ನಾನು ಹುಟ್ಟಿ ಬೆಳೆದದ್ದು ಕ್ಯಾಲಿಫೋರ್ನಿಯಾದಲ್ಲಿ ಆದರೂ ನನ್ನ ಕುಟುಂಬ ತಂಜಾವೂರು ಮತ್ತು ಕುಂಭಕೋಣಂ ಮೂಲದ್ದು. ಸಂಗೀತದ ಮೊದಲ ಗುರು ತಾಯಿ ವಿದುಷಿ ಶುಭಾ ನಾರಾಯಣ್. ಚಿಕ್ಕವನಿರುವಾಗಲೇ ಮನೆಯಲ್ಲಿ ಸಂಗೀತದ ಆಲಾಪವನ್ನು ಆಸ್ವಾದಿಸುತ್ತಲೇ ಬೆಳೆದೆ. ತಂದೆ ಕೆ.ಎಸ್. ನಾರಾಯಣ್, ಸಂಗೀತ ಕಛೇರಿ ಆಯೋಜಿಸುತ್ತಿದ್ದರು. ತಾಯಿ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸಹೋದರ ಮೃದಂಗ ಮತ್ತು ಕೊಳಲು ನುಡಿಸುತ್ತಿದ್ದ. ಹೀಗಾಗಿ ನಾನೂ ನಾಲ್ಕು ವರ್ಷ ಇರುವಾಗಲೇ ‘ಸರಿಗಮಪ’ದ ತಾಲೀಮು ಆರಂಭಿಸಿದೆ. ಸಂಗೀತದ ಮೇಲಿನ ನನ್ನ ಅತೀವ ಆಸಕ್ತಿಯನ್ನು ಗಮನಿಸಿದ ತಂದೆ ತಾಯಿ ನನ್ನನ್ನು ಹನ್ನೊಂದನೇ ವಯಸ್ಸಿಗೆ ಅಮೆರಿಕದಿಂದ ಚೆನ್ನೈಗೆ ಕರೆದು ತಂದರು. ಚೆನ್ನೈಯಲ್ಲಿ ವಿದ್ವಾನ್ ಕೆ.ಎಸ್. ಕೇಶವಮೂರ್ತಿ ಅವರ ಬಳಿ ಸುಮಾರು ಮೂರು ವರ್ಷ ಅಭ್ಯಾಸ ಮಾಡಿದೆ. ಅವರು ನಿಧನರಾದ ಬಳಿಕ ವಿದ್ವಾನ್ ಸಂಜಯ್ ಸುಬ್ರಹ್ಮಣ್ಯನ್ ಅವರ ಬಳಿ ಹದಿನೈದು ವರ್ಷಗಳ ಕಾಲ ಸಂಗೀತ ಕಲಿತೆ. ಚೆನ್ನೈಗೆ ಬಂದ ನಂತರ ಸುಮಾರು ಒಂದೂವರೆ ವರ್ಷ ಶಾಲೆಗೆ ಹೋಗಲೇ ಇಲ್ಲ. ಬರೀ ಸಂಗೀತ ಕಲಿಕೆಯಲ್ಲಿಯೇ ತೊಡಗಿಕೊಂಡಿದ್ದೆ, ಮುಂದೆ ಅಮೆರಿಕದಲ್ಲಿ ಕಾನೂನು ಪದವಿ ಪಡೆದೆ. ಕಾಲೇಜು ಬಳಿಕ ಮತ್ತೆ ಚೆನ್ನೈಗೆ ಮರಳಿ 2006ರಿಂದ ಸಂಗೀತವನ್ನೇ ವೃತ್ತಿಯನ್ನಾಗಿಸಿದೆ. ಎಳೆಂಟು ವರ್ಷಗಳಿಂದ ನನ್ನದೇ ಶೈಲಿಯನ್ನು ಗಾಯನದಲ್ಲಿ ರೂಢಿಸಿಕೊಂಡಿದ್ದೇನೆ.

• ಹಿಂದೂಸ್ತಾನಿ ಸಂಗೀತದ ‘ದುರ್ಗಾ’ ರಾಗ ನಿಮಗೆ ಅಚ್ಚುಮೆಚ್ಚು ಎಂದಿರಿ. ಈ ಭಕ್ತಿ ಪ್ರಧಾನ ರಾತ್ರಿ ರಾಗದ ಮೇಲೆ ಇಷ್ಟೊಂದು ಮೋಹ ಏಕೆ?

ಔಡವ–ಔಡವ ಸ್ವರೂಪಕ್ಕೆ ಸೇರಿದ ಕರ್ನಾಟಕ ಸಂಗೀತದ ಸುಪ್ರಸಿದ್ಧ ರಾಗ ‘ಶುದ್ಧ ಸಾವೇರಿ’ಗೆ ಸಮನಾದ ಹಿಂದೂಸ್ತಾನಿ ರಾಗ ದುರ್ಗಾ. ಈ ರಾಗವನ್ನು ಪಂಡಿತ ವೆಂಕಟೇಶ್ ಕುಮಾರ್ ಅವರು ಹಾಡಿದ್ದನ್ನು ಕೇಳಿದಾಗ ನಾನು ರೋಮಾಂಚನಗೊಂಡೆ, ಪ್ರಭಾವಿತನಾದೆ. ಅದಾಗಿ ರಾಗ ‘ದುರ್ಗಾ’ ಎಂದರೆ ನನಗೆ ಎಲ್ಲಿಲ್ಲದ ಪ್ರೀತಿ. ಗಾಂಧಾರ ಮತ್ತು ನಿಷಾದ ಸ್ವರಗಳನ್ನು ಹೊರತುಪಡಿಸಿ ಇದರಲ್ಲಿ ಬರುವ ಎಲ್ಲ ಸ್ವರಗಳೂ ಶುದ್ಧ ಸ್ವರಗಳಾಗಿದ್ದು, ಇದೊಂದು ಪೂರ್ವಾಂಗ ಪ್ರಧಾನ ರಾಗ. ಇದೇ ರಾಗವನ್ನು ನಾನು ಬಹಳ ಸಲ ಕೇಳಿದ್ದೇನೆ. ಬೇರೆ ಬೇರೆ ಕಲಾವಿದರು ವಾದ್ಯಗಳಲ್ಲಿ ನುಡಿಸಿದ್ದನ್ನೂ ಆಲಿಸಿದ್ದೇನೆ. ದುರ್ಗಾ ರಾಗದಲ್ಲಿ ರಾಗ–ತಾನ–ಪಲ್ಲವಿ ಹಾಡಲು ಪ್ರಯತ್ನಿಸಿದ್ದೆ. ಈಗ ಹೆಚ್ಚಿನ ಕಡೆಗಳಿಂದ ಈ ರಾಗ ಹಾಡಲು ಬೇಡಿಕೆ ಬರುತ್ತಿದೆ. ಇದಲ್ಲದೆ ತೋಡಿ, ಭೈರವಿ, ಶಂಕರಾಭರಣ, ಕಾಂಬೋಧಿ, ಸಿಂಧು ಭೈರವಿ ಮುಂತಾದ ರಾಗಗಳನ್ನು ಸತತವಾಗಿ ಕೇಳುತ್ತೇನೆ. ಇವೇ ರಾಗಗಳಲ್ಲಿ ಸವಿಸ್ತಾರವಾದ ಆಲಾಪ ಮತ್ತು ಸ್ವರಪ್ರಸ್ತಾರ ಹಾಡಲು ನನಗಿಷ್ಟ. ಇಷ್ಟೇ ಅಲ್ಲದೆ, ಹಿಂದೂಸ್ತಾನಿ ಸಂಗೀತಗಾರರೊಂದಿಗೆ ಜುಗಲ್‌ಬಂದಿಯಲ್ಲೂ ಹಾಡಿದ್ದೇನೆ. ಮಹೇಶ್ ಕಾಳೆ, ಕೌಶಿಕಿ ಚಕ್ರವರ್ತಿ, ಜಯತೀರ್ಥ ಮೇವುಂಡಿ ಮುಂತಾದವರೊಂದಿಗೆ ನಾನು ಜುಗಲ್‌ಬಂದಿಯನ್ನೂ ನಡೆಸಿಕೊಟ್ಟಿದ್ದೇನೆ.

• ‘ಮನೋಧರ್ಮ ಸಂಗೀತ’ ಕಲಾವಿದರಿಂದ ಕಲಾವಿದರಿಗೆ ವಿಭಿನ್ನವಾಗಿರುತ್ತದೆ. ಗಾಯಕನ ಸಾಮರ್ಥ್ಯ, ಚಾಕಚಕ್ಯತೆ ಅನಾವರಣಗೊಳ್ಳುವುದೇ ಅವರ ‘ಮನೋಧರ್ಮ’ದಿಂದ. ನಿಮ್ಮ ಗಾಯನ ಚತುರತೆ ಬಗ್ಗೆ ಹೇಳುವುದಾದರೆ...

ಶಾಸ್ತ್ರೀಯ ಸಂಗೀತದಲ್ಲಿ ‘ಮನೋಧರ್ಮ’ ಬಹಳ ಮುಖ್ಯ. ಲಯ ಜ್ಞಾನದೊಂದಿಗೆ ರಾಗ–ತಾಳ ಎರಡನ್ನೂ ಬ್ಯಾಲೆನ್ಸ್ ಮಾಡುತ್ತಾ ಹಾಡಬೇಕು, ನೆರವಲ್, ಕಲ್ಪನಾಸ್ವರದಲ್ಲಿ ನಾವೀನ್ಯತೆ ಇರಬೇಕು. ಅದ್ಭುತ ಉಸಿರು ನಿಯಂತ್ರಣ ಸಾಮರ್ಥ್ಯಬೇಕು, ಕಛೇರಿಯಲ್ಲಿ ಕಳೆಕಟ್ಟುವ ಭಾಗವೇ ತನಿಯಾವರ್ತನ. ಇಲ್ಲಿ ಮುಖ್ಯ ಕಲಾವಿದನ ಜೊತೆಗೆ ಸಹಕಲಾವಿದರ ಸಾಮರ್ಥವನ್ನೂ ಒರೆಗೆ ಹಚ್ಚಲಾಗುತ್ತದೆ. ನಮ್ಮ ಮನೋಧರ್ಮಕ್ಕೆ ಅನುಗುಣವಾಗಿ ಪಕ್ಕವಾದ್ಯಗಾರರೂ ನುಡಿಸಬೇಕಾಗುತ್ತದೆ. ಕೃತಿಗಳನ್ನು ಹಾಡುವಾಗ ಸಂಗೀತದ ಎಲ್ಲ ಆಯಾಮಗಳನ್ನು ಗಮನಿಸಿ ಹಾಡಬೇಕಾಗುತ್ತದೆ. ರಾಗಾಲಾಪದಿಂದ ಹಿಡಿದು ಕೃತಿಯ ಕೊನೆಯವರೆಗೂ ನಮ್ಮ ಸ್ವಂತಿಕೆಯನ್ನು ಕಾಪಾಡುತ್ತಾ ಹಾಡಿದರೆ ಕೇಳುಗರ ಹೃದಯ ಗೆದ್ದಂತೆ.

• ಸಂಗೀತದಲ್ಲಿ ಯಶ ಸಾಧಿಸಬೇಕಾದರೆ ರಿಯಾಜ್ ಬಹಳ ಮುಖ್ಯ. ನಿಮ್ಮ ಸಂಗೀತ ತಾಲೀಮು ಹೇಗಿರುತ್ತದೆ?

ಪರಿಶ್ರಮ ಇಲ್ಲದೆ ಯಾವುದೂ ಫಲ ಕೊಡದು. ಸಂಗೀತದ ವಿಷಯದಲ್ಲೂ ಅಷ್ಟೆ. ಸತತ ಪರಿಶ್ರಮ, ಶ್ರದ್ಧೆ, ಸಂಗೀತದ ಬಗ್ಗೆ ಹೆಚ್ಚು ಹೆಚ್ಚು ತಿಳಿಯುವ ಹಸಿವು ಇದ್ದರೆ ಮಾತ್ರ ಈ ವಿದ್ಯೆ ಕೈಹಿಡಿಯುತ್ತದೆ. ಹೀಗಾಗಿ ನಾನು ದಿನದ ಯಾವ ಸಮಯದಲ್ಲಿಯಾದರೂ ರಿಯಾಜ್ ಮಾಡುತ್ತೇನೆ. ಚಿಕ್ಕವನಿರುವಾಗ ಐದಾರು ಗಂಟೆ ಅಭ್ಯಾಸ ಮಾಡ್ತಿದ್ದೆ. ಕೆಲವೊಮ್ಮೆ ಅರ್ಧ ಗಂಟೆ, ವಾರಾಂತ್ಯದಲ್ಲಿ ಎರಡು ಗಂಟೆ ಅಭ್ಯಾಸ ಮಾಡ್ತಿದ್ದೆ. 2006ರಲ್ಲಿ ಚೆನ್ನೈಗೆ ಬಂದ ಮೇಲೆ ನನ್ನ ಮನಸ್ಸು, ಗುರಿ ಎರಡೂ ಇದ್ದದ್ದು ಸಂಗೀತದ ಮೇಲೆ ಮಾತ್ರ. ಹೀಗಾಗಿ ನಾನು ದಿನಕ್ಕೆ ಐದಾರು ಗಂಟೆ ತಪ್ಪದೆ ಅಭ್ಯಾಸ ಮಾಡುತ್ತಿದ್ದೆ. ಕ್ಲಾಸ್‌ಗೆ ಹೋಗೋದು, ಅಭ್ಯಾಸ ಮಾಡೋದು, ಕಛೇರಿ ಕೇಳೋದು... ಒಟ್ಟಿನಲ್ಲಿ ಇಡೀ ದಿನ ಸಂಗೀತದಲ್ಲಿಯೇ ತೊಡಗಿಸಿಕೊಳ್ಳುತ್ತಿದ್ದೆ. ಈಗ ದಿನಕ್ಕೆ ಒಂದು ಗಂಟೆ ಅಭ್ಯಾಸ ಮಾಡುತ್ತೇನೆ. ಕಛೇರಿ ಇರುವಾಗ ಪ್ರಯಾಣ ಮಾಡೋದೇ ಹೆಚ್ಚು ಇರುವುದರಿಂದ ಕಠಿಣ ರಿಯಾಜ್ ಸಾಧ್ಯವಾಗುತ್ತಿಲ್ಲ ಅಷ್ಟೆ.

• ಸಂಗೀತವು ಅಭ್ಯಾಸ, ಕಲಿಕೆಯಷ್ಟೇ ಅಲ್ಲದೆ ಕೇಳ್ಮೆಯಿಂದಲೂ ಆಳವಾದ ಸಂಗೀತ ಜ್ಞಾನ ಪಡೆಯಬಹುದು. ಇದು ನಿಮ್ಮ ಅನುಭವವೂ ಹೌದಾ?

ಖಂಡಿತಾ. ನಾನು ಚಿಕ್ಕಂದಿನಿಂದಲೇ ಸಂಗೀತ ಆಲಿಸುತ್ತಾ ಬೆಳೆದವನು. ಶಾಲಾ, ಕಾಲೇಜುಗಳಲ್ಲಿ ಓದುತ್ತಿರುವಾಗಲೂ, ಎಲ್ಲಿಯೇ ಇರಲಿ ಹೆಡ್‌ಫೋನ್ ಹಾಕಿಕೊಂಡು ರಾಗಗಳನ್ನು ಕೇಳುತ್ತಿದ್ದೆ. ದಿಗ್ಗಜರ ಸಂಗೀತವನ್ನು ದಿನದ ಬಹುತೇಕ ಸಮಯ ಕೇಳುತ್ತಲೇ ರಾಗ, ತಾಳ, ಲಯದ ಬಗ್ಗೆ ತಿಳಿದುಕೊಂಡೆ. ಸ್ವರಾಲಾಪ, ಸಾಹಿತ್ಯ, ಚಿಟ್ಟೆಸ್ವರ ಸೇರಿದಂತೆ ಹಲವು ವಿಚಾರಗಳನ್ನು ಕಲಿತೆ. ಕರ್ನಾಟಕ ಸಂಗೀತದ ಜೊತೆಗೆ ಹಿಂದೂಸ್ತಾನಿ ಸಂಗೀತವನ್ನೂ ಕೇಳುತ್ತಿದ್ದೆ. ಪಂಡಿತ ಭೀಮಸೇನ ಜೋಶಿ, ರಶೀದ್ ಖಾನ್, ವೆಂಕಟೇಶ್ ಕುಮಾರ್ ಮುಂತಾದವರ ಗಾಯನವನ್ನು ಹೆಚ್ಚು ಇಷ್ಟಪಟ್ಟು ಕೇಳಿ ಆಸ್ವಾದಿಸಿದ್ದೇನೆ. ಇವೆಲ್ಲವೂ ನನಗೆ ಸಂಗೀತದಲ್ಲಿ ನನ್ನದೇ ಆದ ‘ಮನೋಧರ್ಮ’ವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಕಾರಿಯಾಯಿತು. ❖

ಮೊದಲ ಓದು

ಓದಿದ ಬಳಿಕವೂ ಗುಂಗು ಹಿಡಿಸುವ ಕತೆಗಳು



ಪು: 108 ₹125

ಕಾಗೆ ಮೇಷ್ಟ್ರು
ಲೇ: ವಿಕ್ರಮ್ ಹತ್ವಾರ
ಪ್ರ: ವೀರಲೋಕ
ಸಂ: 7022122121

ಆರು ಕತೆಗಳು, ನೂರಾರು ಎಳೆಗಳು. ಒಂದನ್ನು ಓದಿದ ನಂತರ ನಮ್ಮಲ್ಲಿಯೇ ಕಳೆದುಹೋಗುವಂತೆ ಮಾಡುವ ವಿಷಯ ವಸ್ತು. ಮೊದಲ ಕತೆಯ ಕೆಂಪು ಉಂಗುರದಿಂದ, ಕೊನೆಯ ಕತೆಯ ಮಂದಾರಳ ಗರ್ಭಾವಸ್ಥೆಯವರೆಗೂ ಪುಸ್ತಕ ಅದೇ ಆಗ ಹುಟ್ಟಿದ ಪ್ರೀತಿಯಂತೆ ಹಿಡಿದಿರಿಸಿಕೊಳ್ಳುತ್ತದೆ. ಓದುವಾಗಲೂ, ಓದಿದ ನಂತರವೂ ಗುಂಗು ಹಿಡಿಸುವಂಥ ಕತೆಗಳು.

ಕಾಗೆ ಕಂಡರೆ ಮೇಷ್ಟ್ರು ನೆನಪಾಗ್ತಾರೆ, ಮಗನ ನಿರಂತರ ಶೋಕದಲ್ಲಿ ತಮ್ಮ ಬದುಕನ್ನು ಹದಗೊಳಿಸುತ್ತಲೇ ಒಂಟಿಯಾಗಿ ಎಲ್ಲೆಲ್ಲಿಯೂ ಕಳೆದುಹೋಗುವ ಮೇಷ್ಟ್ರು, ನಮ್ಮೊಳಗೆ ಮಡುಗಟ್ಟಿದ ದುಃಖದ ಸರೋವರಕ್ಕೆ ಒಂದು ಕಲ್ಲೆಸೆದು ಹೋಗುತ್ತಾರೆ. ರಸ್ತೆಯಲ್ಲಿ ಪಾರ್ಕು ಮಾಡಿದ ಕಾರು ನೋಡಿದಾಗ ಮುನಿರಾಜು, ಮಗುವಿಗಾಗಿ ಹಂಬಲಿಸುವ ಸರಿತಾ ಆಗಿರಬಹುದು, ಪಾತ್ರಗಳು ಕಾಡತೊಡಗುತ್ತವೆ.

ಸಾವಿನ ಮನೆಯ ಮಾತುಗಳಲ್ಲಿಯಂತೂ ನಮ್ಮೊಳಗನ್ನ ನಾವೇ ಇಣುಕಿ ನೋಡಿದಂತೆ. ಸ್ಮಶಾನ ವೈರಾಗ್ಯ ತಾಳಿದಾಗಲೂ ಬದುಕಿನ ಲೆಕ್ಕಾಚಾರದತ್ತ ಹೊರಳುವ ಚಿತ್ತ, ಸಾವಿನ ಭೀತಿಯನ್ನು ಮೂಡಿಸುತ್ತಲೇ ಬದುಕಿನತ್ತ ವಾಲುವ ಸಹಜ ಜೀವನಕ್ರಮ, ಇವೆಲ್ಲ ನಮ್ಮನೆ, ನಿಮ್ಮನೆಯಲ್ಲಿ ಆದ ಮಾತುಗಳಂತೆಯೇ ಮನಸಿನೊಳಗೆ ಚಡಪಡಿಕೆ ಹುಟ್ಟಿಸುತ್ತವೆ. ಆ ತಳಮಳಕ್ಕೆ ಸಣ್ಣದೊಂದು ವಿರಾಮವೇ ಔಷಧಿಯಾಗಬಲ್ಲದು. ಆದರೆ... ಆ ವಿರಾಮವೂ ಓದುಗರು ಅದೇ ಕತೆಯಲ್ಲಿ ಉಳಿಯುವಂತೆ, ಆ ಪಾತ್ರಗಳು ಎಲ್ಲಿಯೂ ಅಳಿಯದಂತೆ ಮಾಡಿಡುತ್ತವೆ. ಕತೆಗಳಿಗೆ ಚಿತ್ರಕಶಕ್ತಿಯಷ್ಟೇ ಸಬಲವಾಗಿಲ್ಲ, ಅದರೊಳಗಿನ ಆಲೋಚನಾ ಕ್ರಮ ಓದುಗನೊಳಗೂ ಗುಂಗಿಹುಳ ಬಿಡುತ್ತದೆ.

ನಮ್ಮೊಳಗಿನ ಸಣ್ಣತನಗಳು, ಮೋಹ, ನಾಗರಿಕ ಬದುಕಿನಲ್ಲಿ ಮನಸಿನೊಂದಿಗೆ ಸೆಣಸುತ್ತಲೇ ದೇಹದ ಅಗತ್ಯಗಳಿಗೆ ಬಾಗುವ ನಮ್ಮೊಳಗಿನ ವಾಂಛೆ, ನಾವು ಶಾಶ್ವತವೆಂದು ಭಾವಿಸುತ್ತಲೇ ನಶ್ವರತೆಯ ಬಗ್ಗೆ ಚರ್ಚಿಸುವ ನಮ್ಮ ಮನ, ಜನರ ಒಳಹೊರಗಿನ ಸುಳಿಯೊಳಗಿನ ಸಂಘರ್ಷವನ್ನು ಕತೆಗಳು ಎತ್ತಿಹಿಡಿಯುತ್ತವೆ. ಪ್ರತಿಕತೆಯಲ್ಲಿಯೂ ದಟ್ಟವಾದ ವಿಷಾದ, ಸಣ್ಣದೊಂದು ಆಶಾಕಿರಣ ಒಟ್ಟೊಟ್ಟಿಗೆ ಸಾಗುತ್ತವೆ. ಅಭಿಮಾನ ಮತ್ತು ಅಹಂಕಾರ; ಪ್ರೀತಿ ಮತ್ತು ಮೋಹ ಎಲ್ಲವೂ ಓದುವ ಕ್ಷಣಕ್ಕೆ ಹೃದಯಕ್ಕಿಳಿಯುತ್ತವೆ. ನಂತರ ಆವರಿಸಿಕೊಳ್ಳುತ್ತವೆ. ಭಾವಕೋಶದಿಂದ ಬೌದ್ಧಿಕ ಕೋಶದವರೆಗೂ ಈ ಕತೆಗಳ ಯಾನ ಸಾಗುತ್ತದೆ. ❖

ಸಹಜ ಜೀವನಕ್ಕೆ ಆರೋಗ್ಯ ಸೂತ್ರ



ಪು: 136 ₹160

ಸಹಜ ಜೀವನ
ಲೇ: ರವಿ ಕೃಷ್ಣಾರೆಡ್ಡಿ
ಪ್ರ: ವೀರಲೋಕ ಬುಕ್ಸ್ ಪ್ರೈ.ಲಿ.
ಸಂ: 7022122121

ಯಾವ ಬಗೆಯ ಆಹಾರ ಸೇವಿಸಬೇಕು? ಯಾವ ರೀತಿಯ ವ್ಯಾಯಾಮ ಮಾಡುವುದು ಸೂಕ್ತ?- ದಿಕ್ಕು ತಪ್ಪಿರುವ ಇಂದಿನ ನಮ್ಮ ಜೀವನಶೈಲಿಯಲ್ಲಿ ಬಹುತೇಕರನ್ನು ಕಾಡುತ್ತಿರುವ ಪ್ರಶ್ನೆಗಳಿವು. ಆಹಾರ ಪದಾರ್ಥ, ದೈಹಿಕ ಕಸರತ್ತುಗಳೆಲ್ಲವೂ ವ್ಯಾಪಾರದ ಪರಿಧಿಯೊಳಗೆ ಸೇರಿಹೋಗಿರುವ ಈ ದಿನಮಾನಗಳಲ್ಲಿ ಇಂತಹ ಸರಳಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದೂ ಈಗ ಸುಲಭವಲ್ಲ.

ನಮ್ಮನ್ನು ಗೊಂದಲಕ್ಕೆ ದೂಡುವಷ್ಟು ಬಗೆಬಗೆಯ ಆಹಾರ ಪದಾರ್ಥಗಳು, ದೈಹಿಕ ವ್ಯಾಯಾಮದ ಮಾದರಿಗಳು ನಮಗೆ ಕಾಣಸಿಗುತ್ತವೆ. ಯಾವುದನ್ನು ಆಯ್ದುಕೊಳ್ಳುವುದು ಯಾವುದನ್ನು ಬಿಡುವುದು ಎಂಬ ಗೋಜಲಿಗೆ ಸಿಲುಕಿಸಿ ನಮ್ಮನ್ನು ಕಕ್ಕಾಬಿಕ್ಕಿಯಾಗಿಸುತ್ತವೆ. ಇಂತಹ ಪ್ರಶ್ನೆಗಳ ಬೆನ್ನಟ್ಟಿ ಹೋಗಿ ಉತ್ತರ ಕಂಡುಕೊಳ್ಳುವಲ್ಲಿ ಸಫಲರಾಗಿರುವ ಲೇಖಕ, ರಾಜಕಾರಣಿ ರವಿ ಕೃಷ್ಣಾರೆಡ್ಡಿ ಅವರ ಸ್ವಾನುಭವದಿಂದ ಒಡಮೂಡಿರುವ ಕೃತಿ ‘ಸಹಜ ಜೀವನ’.

ಆರೋಗ್ಯಪೂರ್ಣ ಜೀವನಕ್ಕೆ ಸತ್ವಪೂರ್ಣ ಆಹಾರದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ ಎಂದು ಪ್ರತಿಪಾದಿಸುವ ಅವರು, ಅನನ್ಯ ಚೇತನಗಳ ಜ್ವಲಂತ ಉದಾಹರಣೆಗಳ ಮೂಲಕ ಅದನ್ನು ಕಟ್ಟಿಕೊಟ್ಟಿದ್ದಾರೆ. ಅಚಲ ಆತ್ಮವಿಶ್ವಾಸ, ಅದಮ್ಯ ಚೈತನ್ಯ ಹಾಗೂ ರೋಗನಿರೋಧಕ ಶಕ್ತಿ ಬೆಳೆಸಿಕೊಳ್ಳುವ ಮಾನಸಿಕ ದೃಢತೆಗೆ ಹಿತಮಿತ ಆಹಾರದ ಮಹತ್ವ, ಯೋಗ, ಧ್ಯಾನದ ಸಚಿತ್ರ ವಿವರಣೆಯುಳ್ಳ ಈ ಪುಸ್ತಕ, ಆರೋಗ್ಯ ಭಾಗ್ಯದ ಫಲಾನುಭವಿಗಳಾಗ ಬಯಸುವವರಿಗೆ ಕೈಪಿಡಿಯಾಗಿ ಒದಗಿಬಂದಿದೆ. ಇದು ಲೇಖಕರ ಆಶಯವೂ ಹೌದು. ❖

ವರ್ತಮಾನದ ಸನ್ನಿವೇಶಗಳ ಚಿತ್ರಣ



ಪು: 304 ₹325

ವರ್ತಮಾನ ಭಾರತ
ಲೇ: ಪುರುಷೋತ್ತಮ ಬಿಳಿಮಲೆ
ಪ್ರ: ಚಿರಂತ್ ಪ್ರಕಾಶನ
ಸಂ: 8660966208

ಸಮಕಾಲೀನ ವಿದ್ಯಾಮಾನಗಳಿಗೆ ಪ್ರತಿಸ್ಪಂದಿಸುವ ವಿಷಯ ವಸ್ತುಗಳ ಮೇಲೆ ಲೇಖಕರ ಚಿಕಿತ್ಸಕ ನೋಟವೇ ಈ ಪ್ರಬಂಧ ಸಂಕಲನ. ಇಲ್ಲಿರುವ ಇಪ್ಪತ್ತೊಂದು ಬೇರೆ ಬೇರೆ ವಿಷಯಗಳ ಕುರಿತ ಪ್ರಬಂಧಗಳಲ್ಲಿ ತೌಲನಿಕ ದೃಷ್ಟಿಕೋನ ಕಾಣಿಸುತ್ತದೆ. ಇದರಲ್ಲಿ ‘ಐತಿಹಾಸಿಕ ರೈತ ಚಳುವಳಿ: ಒಂದು ನೋಟ’, ‘ಚರಿತ್ರೆಯ ಪುಟ ಸೇರುತ್ತಿರುವ ಜೆಎನ್‌ಯು’, ‘ಅಂಕಿ ಅಂಶಗಳು, ಸರಕಾರ ಮತ್ತು ಪ್ರಜಾಪ್ರಭುತ್ವ’, ‘ಹೆಚ್ಚುತ್ತಿರುವ ಯುದ್ಧೋನ್ಮಾದ’, ‘ಭಾರತಕ್ಕೊಂದು ಭಾಷಾ ನೀತಿ ಏಕಿಲ್ಲ?’ ಹೀಗೆ ಭಿನ್ನ ವಿಷಯಗಳ ಕುರಿತು ಅವುಗಳ ಸಾಧಕ ಬಾಧಕಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಲೇಖಕ ಎತ್ತುವ ಸಮಸ್ಯೆಗಳಿಗೆ ಪರಿಹಾರ ಮಾರ್ಗ ಮತ್ತು ಅದರ ಅಗತ್ಯವನ್ನು ಈ ಪ್ರಬಂಧಗಳು ವಿವರಿಸುತ್ತವೆ. ನಾಡು, ನುಡಿ, ಲಿಂಗ, ಜಾತಿ, ಜಾನಪದ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಧರ್ಮ, ಸಂಘರ್ಷ, ಉಗ್ರವಾದ ಎಲ್ಲವೂ ಇಲ್ಲಿ ಸೃಜನಶೀಲ ಆಯಾಮ ಪಡೆದಿವೆ.

ಸರ್ಕಾರ 2020ರಲ್ಲಿ ರೂಪಿಸಿದ ಮೂರು ಹೊಸ ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ಸುದೀರ್ಘ ರೈತ ಚಳವಳಿ ನಡೆಯಿತು. ಅದರ ಮೇಲೆ ರೂಪಿತವಾದ ‘ಐತಿಹಾಸಿಕ ರೈತ ಚಳುವಳಿ: ಒಂದು ನೋಟ’ ಪ್ರಬಂಧ ದೇಶದಲ್ಲಿ ರೈತ ಚಳುವಳಿಯ ಹುಟ್ಟು ಮೊಘಲ್ ದೊರೆಗಳ ಕಾಲದಲ್ಲಿಯೇ ಆಗಿತ್ತು. 1767ರಲ್ಲಿ ಜಾರ್ಖಂಡ್‌ನಲ್ಲಿ ಗೇಣಿ ವಿರುದ್ಧ ರೈತರು ಹೋರಾಟ ನಡೆಸಿದ್ದರು. 1781ರಲ್ಲಿ ಬಿಹಾರದಲ್ಲಿ ಬ್ರಿಟಿಷರ ವಿರುದ್ಧ ಗೆರಿಲ್ಲಾ ಹೋರಾಟದ ಸಂಗತಿ ಸೇರಿದಂತೆ ಗೋವಾ, ತಮಿಳುನಾಡು, ರಾಜಸ್ಥಾನಗಳಲ್ಲಿ ನಡೆದ ರೈತ ಹೋರಾಟದ ಉಲ್ಲೇಖವನ್ನೂ ಮಾಡುತ್ತಾರೆ. ಕರ್ನಾಟಕದಲ್ಲಿ ಟಿಪ್ಪೂ ರೈತ ಆದಾಯ ಹೆಚ್ಚಿಸಲು ಕ್ರಮಕೈಗೊಂಡಿದ್ದ ಬಗ್ಗೆ ಪ್ರಸ್ತಾಪಿಸುತ್ತಾರೆ. ಹೊಸ ಮೂರು ಕಾಯಿದೆಗಳಿಗೆ ಭಾರತೀಯ ರೈತರು ಒಡ್ಡಿದ ಪ್ರತಿರೋಧದ ವಿವರವನ್ನು ನೀಡುತ್ತಲೇ, ಜಾಗತೀಕರಣದ ಬದಲಾದ ಪರಿಸ್ಥಿತಿಯಲ್ಲಿ ಕೃಷಿಕ್ಷೇತ್ರದ ಸುಧಾರಣೆ ಅಗತ್ಯವನ್ನೂ ಉಲ್ಲೇಖಿಸುತ್ತಾರೆ.

‘ಜೆಎನ್‌ಯು’ ಪ್ರಬಂಧದಲ್ಲಿ ವಿಶ್ವವಿದ್ಯಾಲಯಗಳು ಮುಕ್ತ ಚರ್ಚೆಯ ಕೇಂದ್ರಗಳಾಗಿ ದೇಶವನ್ನು ವೈಜ್ಞಾನಿಕವಾಗಿ ಬೆಳೆಸಬೇಕೆಂಬ ಆಶಯವಿದೆ. ವಿವಿಗಳಲ್ಲಿ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗಿದ್ದರಿಂದ ಜಾತಿ ನುಸುಳಿ, ಶೈಕ್ಷಣಿಕ ಆದ್ಯತೆ ಕಡಿಮೆಯಾಗಿ, ಪಠ್ಯವನ್ನೂ ರಾಜಕೀಯ ಪ್ರೇರಿತವಾಗಿ ರೂಪಿಸುವ ಕ್ರಿಯೆಯ ಕುರಿತು ವಿಷಾದವೂ ಇದೆ. ದೆಹಲಿಯಲ್ಲಿರುವ ದೇಶದ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಂಸ್ಥಾಪನೆಯಾದ ಕಾಲದಿಂದ ಹಿಡಿದು ಇತ್ತೀಚಿನ ಘಟನೆಗಳವರೆಗಿನ ಅವಲೋಕನವನ್ನು ಇಲ್ಲಿ ಕಾಣಬಹುದು. ಸಂಕಲನದ ಶೀರ್ಷಿಕೆಯೇ ಹೇಳುವಂತೆ ವರ್ತಮಾನದ ಸನ್ನಿವೇಶಗಳೇ ಪ್ರಬಂಧದ ಹೂರಣ. ಪ್ರತಿ ಬರಹವೂ ವರ್ತಮಾನದ ಆಚೆಗೆ ಸತ್ಯ ದರ್ಶನಕ್ಕೆ ತುಡಿಯುತ್ತವೆ. ಅದಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಸಿಂಹಾವಲೋಕನ ನೋಟವನ್ನು ಬೀರುವ ಲೇಖಕರು ತಮ್ಮ ಓದಿನ ವಿಸ್ತಾರ ಮತ್ತು ಪಾಂಡಿತ್ಯವನ್ನು ಒಂದು ಆಕೃತಿಯಲ್ಲಿ ಕಟ್ಟಿಕೊಟ್ಟಿರುವ ಪ್ರಯೋಗವೇ ಈ ‘ವರ್ತಮಾನ ಭಾರತ’. ❖



ಮಸಣದಲ್ಲಿ ಅರಳಿದ ಸುಂದರ ಉದ್ಯಾನ!

10ನೇ ಪುಟದಿಂದ...

ಕೊಡಗಿನಲ್ಲಿ ಆಳ್ವಿಕೆ ಮಾಡಿದ ರಾಜರು ಇಲ್ಲಿ ನಿಂತು ನಿಸರ್ಗದ ಸೌಂದರ್ಯವನ್ನು ಆಸ್ವಾದಿಸುತ್ತಿದ್ದ ಕಾರಣದಿಂದ ಅಂದಿನಿಂದ ಇಂದಿನವರೆಗೂ ಈ ಎತ್ತರದ ಪ್ರದೇಶವನ್ನು ರಾಜಾಸೀಟ್ ಎಂದೇ ಕರೆಯಲಾಗುತ್ತಿದೆ. ಆದರೆ, ಇಲ್ಲಿನ ಕೊನೆಯ ದೊರೆ ಚಿಕ್ಕ ವೀರರಾಜೇಂದ್ರ ಅವರನ್ನು ಬ್ರಿಟಿಷರು 1834ರಲ್ಲಿ ಪದಚ್ಯುತಗೊಳಿಸಿ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿ ಪರಿಗಣಿಸಿ, ಫ್ರೇಸರ್ ಎಂಬುವವರನ್ನು ಮೊದಲ ಆಡಳಿತಾಧಿಕಾರಿಯಾಗಿ ನೇಮಕ ಮಾಡಿದರು. ಅಲ್ಲಿಂದ ಸ್ವಾತಂತ್ರ್ಯ ಬರುವವರೆಗೂ ಕೊಡಗಿನಲ್ಲಿ ಬ್ರಿಟಿಷರ ನೇರ ಆಡಳಿತ ಮುಂದುವರೆಯಿತು. ಈ 113 ವರ್ಷಗಳಷ್ಟು ಸುದೀರ್ಘ ಕಾಲದ ಬ್ರಿಟಿಷರ ಆಳ್ವಿಕೆಯು ಕೊಡಗನ್ನು ಸಂಪೂರ್ಣವಾಗಿ ಬದಲಾಯಿಸಿತು. ಹಾಗೆಯೇ, ಇಲ್ಲಿದ್ದ ರಾಜಾಸೀಟ್ ಪ್ರದೇಶವನ್ನು ಅವರು ಸ್ಮಶಾನವಾಗಿ ಮಾಡಿದರು.

ಆಗ ಇಲ್ಲಿ ನೆಲೆಸಿದ್ದ ನೂರಾರು ಬ್ರಿಟಿಷರು, ಸೈನಿಕರಿಗಾಗಿ ಕೋಟೆಯೊಳಗೆ ಪ್ರತ್ಯೇಕ ಚರ್ಚ್ ಅನ್ನು ನಿರ್ಮಿಸಲಾಯಿತು. ಸ್ವಾತಂತ್ರ್ಯ ಬಂದ ಮೇಲೆ ಅವರು ತಾಯ್ನಾಡಿಗೆ ಹೊರಟ ನಂತರ ಸೇಂಟ್ ಮಾರ್ಕ್ಸ್ ಚರ್ಚ್ ಅನ್ನು 1971ರಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯವಾಗಿ, ಬ್ರಿಟಿಷರ ಶವಗಳನ್ನು ಹೂತಿದ್ದ ಸ್ಮಶಾನವನ್ನು ಇದೇ ಕಾಲಘಟ್ಟದಲ್ಲಿ ರಾಜಾಸೀಟ್ ಉದ್ಯಾನವಾಗಿ ಪರಿವರ್ತಿಸಲಾಯಿತು. ಆದರೆ, ಚರಿತ್ರೆಯ ಈ ಯಾವ ಅಂಶಗಳೂ ವಸ್ತುಸಂಗ್ರಹಾಲಯವಾಗಿ ಬದಲಾದ ಚರ್ಚ್‌ನಲ್ಲಾಗಲಿ, ಉದ್ಯಾನವಾಗಿ ರೂಪಾಂತರಗೊಂಡ ರಾಜಾಸೀಟ್ ಸ್ಮಶಾನದಲ್ಲಾಗಲಿ ಪ್ರದರ್ಶಿಸಿಲ್ಲ.

ಗೋರಿಗಳ ಸ್ಥಳಾಂತರ: ರಾಜಾಸೀಟ್ ಉದ್ಯಾನದಲ್ಲಿದ್ದ ಗೋರಿಗಳು ಸ್ವಾತಂತ್ರ್ಯ ನಂತರ ಬ್ರಿಟಿಷರಿಲ್ಲದೇ ನಿರ್ವಹಣೆ ಮಾಯವಾಗಿ ಸೊರಗ ತೊಡಗಿದವು. ಮರಳಿ ಈ ಮಸಣವನ್ನು ಉದ್ಯಾನವನ್ನಾಗಿ ಮಾಡಲು 1969ರಲ್ಲಿ ನಿರ್ಧರಿಸಲಾಯಿತು. ಬ್ರಿಟಿಷರ ಶವಗಳನ್ನು ಹೂತಿದ್ದ ಸ್ಥಳದಲ್ಲಿ ಅಮೂಲ್ಯ ಶಿಲೆಗಳಿಂದ ನಿರ್ಮಿಸಲಾಗಿದ್ದ ಗೋರಿಗಳನ್ನು ಕಿತ್ತು ಐಟಿಐ ಕಾಲೇಜು ಹಿಂಭಾಗದಲ್ಲಿ ಒಂದು ಕಿಲೊಮೀಟರ್ ದೂರದ ಗುಡ್ಡವೊಂದರಲ್ಲಿ ಗೋರಿಗಳನ್ನು ಪುನರ್ ನಿರ್ಮಿಸಲಾಯಿತು. ಆದರೆ, ಅಂತ್ಯಸಂಸ್ಕಾರ ಮಾಡಿದ್ದ ಶವ ಹಾಗೂ ಶವಪೆಟ್ಟಿಗೆಗಳನ್ನು ರಾಜಾಸೀಟ್‌ನ ಮಣ್ಣಿನಡಿಯೇ ಬಿಡಲಾಯಿತು. ಅದರ ಮೇಲೆ ಸುಂದರವಾದ ಉದ್ಯಾನವನ್ನು ನಿರ್ಮಿಸಲಾಯಿತು.

> **“ಗೋರಿಗಳಿರುವ ಜಾಗದಲ್ಲಿ ಬೆಳೆದಿರುವ ಮುಳ್ಳುಕಂಟಿ ಗಿಡಗಳನ್ನು ತೆರವುಗೊಳಿಸಿದರೆ ಅಮೂಲ್ಯ ಗೋರಿಗಳನ್ನು ನೋಡಬಹುದು. ಅವುಗಳನ್ನು ವಿದೇಶಿ ಪ್ರವಾಸಿಗರಿಗೆ ತೋರಿಸುವ ಕೆಲಸ ಮಾಡಿದರೆ ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ. ಆಗ ಮಡಿಕೇರಿಗೆ ಮತ್ತೊಂದು ಪ್ರವಾಸಿತಾಣ ಸೇರ್ಪಡೆಯಾಗುತ್ತದೆ. ಸರ್ಕಾರ ಇತ್ತ ಗಮನ ಹರಿಸಬೇಕು”**
> **ಕೆ.ಟಿ.ಬೇಬಿ ಮ್ಯಾಥ್ಯೂ,** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕೊಡಗು ಜಿಲ್ಲಾ ಪ್ರಧಾನ ಆಯುಕ್ತ

ರಾಜಾಸೀಟ್ ಉದ್ಯಾನದಿಂದ ತೆರವುಗೊಳಿಸಿದ ಬ್ರಿಟಿಷರ ಗೋರಿಗಳನ್ನು ಇಟ್ಟಿರುವ ಸ್ಥಳ ಈಗ ಕಾಡಿನಂತಾಗಿದೆ. ಮುಳ್ಳುಗಿಡಗಳು, ದಟ್ಟವಾದ ಪೊದೆಗಳು ಬೆಳೆದಿವೆ. ಒಂದೆರಡು ಗೋರಿಗಳನ್ನು ಬಿಟ್ಟರೆ ಉಳಿದವು ಕಾಣಿಸುವುದೇ ಇಲ್ಲ.

ಈಗ ಕೊಡಗಿನಲ್ಲಿ ಆಂಗ್ಲೊ ಇಂಡಿಯನ್ನರು ಇಲ್ಲ. ಮೃತಪಟ್ಟವರ ಮಕ್ಕಳು, ಮೊಮ್ಮಕ್ಕಳೂ ಇಲ್ಲ. ಮಾರ್ಕ್ ಕಬ್ಬನ್ ತರಹವೋ, ಲಾರ್ಡ್ ಬೌರಿಂಗ್ ತರಹವೋ ಒಂದಿಷ್ಟು ಮಹತ್ವಪೂರ್ಣ ಕೆಲಸಗಳನ್ನೂ ಇಲ್ಲಿ ಆಳಿದ ಬ್ರಿಟಿಷ್ ಕಮಿಷನರ್‌ಗಳು ಮಾಡಲಿಲ್ಲ. ಹಾಗಾಗಿ, ಜನಮಾನಸದಲ್ಲಿ ಅವರ ನೆನಪುಗಳೂ ಉಳಿದಿಲ್ಲ. ಆದರೆ, ಕೊಡಗು ಸುಶಿಕ್ಷಿತವಾಗಿದೆ ಎಂದರೆ ಅದಕ್ಕೆ ಬ್ರಿಟಿಷರ ಆಳ್ವಿಕೆ ಕಾರಣ ಎನ್ನುವುದನ್ನು ಸ್ಥಳೀಯ ನೆನಪಿಸಿಕೊಳ್ಳುತ್ತಾರೆ. ಸ್ವಾತಂತ್ರ್ಯಪೂರ್ವದಲ್ಲೇ ಪಾಶ್ಚಾತ್ಯ ಶಿಕ್ಷಣ ನೀಡಿದರು. ಕರ್ನಾಟಕ ಪತ್ರಿಕೋದ್ಯಮದ ಹರಿಕಾರ ಹರ್ಮನ್ ಮೊಗ್ಲಿಂಗ್, ನಿಘಂಟು ತಜ್ಞ ಫರ್ಡಿನೆಂಟ್ ಕಿಟ್ಟೆಲ್ ಅವರು ಕೊಡಗಿನಲ್ಲಿ ಕೆಲಕಾಲ ಇದ್ದು, ತಮ್ಮ ಕನ್ನಡಪರ ಕೆಲಸಗಳನ್ನು ಮಾಡಿದ್ದರು. ಈ ಎಲ್ಲ ಕಾರಣಗಳಿಂದ ಆಳಿ, ಅಳಿದು ಹೋದ ಬ್ರಿಟಿಷರನ್ನು ನೆನಪಿಸಿಕೊಳ್ಳಬೇಕಿದೆ ಎಂಬುದು ಇಲ್ಲಿನ ಅನೇಕ ಹಿರಿಯರ ಅಭಿಪ್ರಾಯ.

ಇತಿಹಾಸ ಕೇವಲ ಯುದ್ಧ, ಸಾಮ್ರಾಜ್ಯಗಳ ವಶ, ಪತನ, ವಿಜಯ ದುಂದುಭಿ ಅಷ್ಟೇಅಲ್ಲ. ಕುತೂಹಲಕರ, ಆಸಕ್ತಿಕರ, ಹಲವು ಧರ್ಮ, ಸಂಸ್ಕೃತಿಗಳ ಸಮ್ಮಿಳನದ ಕಥನವೂ ಹೌದು. ಇದಕ್ಕೆ ರಾಜಾಸೀಟ್‌ಗಿಂತ ಉತ್ತಮ ನಿದರ್ಶನಬೇಕೆ? ❖

ಮಸಣ ಉದ್ಯಾನವಾಗಿದ್ದು ಸುಲಭದಲ್ಲಲ್ಲ

ಬ್ರಿಟಿಷರ ಸ್ಮಶಾನವಾಗಿದ್ದ ರಾಜಾಸೀಟ್ ಅನ್ನು ಉದ್ಯಾನವಾಗಿ ರೂಪಿಸಲು ಪುರಸಭೆ ಅಧ್ಯಕ್ಷರಾಗಿದ್ದ ಎಂ.ಸಿ.ನಾಣಯ್ಯ ಅಪಾರ ಶ್ರಮ ಹಾಕಿದರು. ಸ್ವಾತಂತ್ರ್ಯ ಬಂದ ನಂತರ ಎಲ್ಲಾ ಬ್ರಿಟಿಷರೂ ಇಲ್ಲಿಂದ ತಾಯ್ನಾಡಿಗೆ ತೆರಳಲಿಲ್ಲ. ಇಲ್ಲಿಯೇ ಉಳಿದುಕೊಂಡಿದ್ದ ಆಂಗ್ಲೊಇಂಡಿಯನ್ನರಿಂದ ಭಾರಿ ಪ್ರತಿರೋಧವೇ ವ್ಯಕ್ತವಾಯಿತು. ಆಗ ನಾಣಯ್ಯನವರು ಬ್ರಿಟಿಷ್ ಹೈಕಮಿಷನರ್ ಅವರೊಂದಿಗೆ ಪತ್ರ ವ್ಯವಹಾರ ನಡೆಸಿ, ಅವರ ಒಪ್ಪಿಗೆ ಪಡೆದೇ ಗೋರಿಗಳನ್ನು ಸ್ಥಳಾಂತರಿಸಿದರು ಎಂದು ಹಿರಿಯರು ನೆನಪಿಸಿಕೊಳ್ಳುತ್ತಾರೆ.

ತಮ್ಮ ಪೂರ್ವಜರ ಗೋರಿಗಳನ್ನು ತೆರವುಗೊಳಿಸಿದ್ದನ್ನು ತಿಳಿದು ಆಂಗ್ಲೋ ಇಂಡಿಯನ್ನರ ನಿಯೋಗ ಎಂ.ಸಿ. ನಾಣಯ್ಯ ಅವರ ಮನೆಗೆ ಬಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಆಗ ನಾಣಯ್ಯ ಅವರು ಗೋರಿಗಳನ್ನು ಸ್ಥಳಾಂತರಿಸಿದ್ದ ಜಾಗ ನೋಡಿಕೊಂಡು ಮತ್ತೆ ತಮ್ಮ ಬಳಿ ಬರುವಂತೆ ನಿಯೋಗಕ್ಕೆ ಹೇಳುತ್ತಾರೆ.

‘ನಿಯೋಗವು ಗೋರಿಗಳನ್ನು ಸ್ಥಳಾಂತರಿಸಿದ್ದ ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿ ಅವುಗಳನ್ನು ಶಿಸ್ತುಬದ್ಧವಾಗಿ ಇರಿಸಿದ್ದನ್ನು ಕಂಡು ತೃಪ್ತಿ ವ್ಯಕ್ತಪಡಿಸಿ, ವಾಪಸ್ ತೆರಳಿತು’ ಎಂದು ಎಂ.ಸಿ. ನಾಣಯ್ಯ ಅವರೇ ಹೇಳುತ್ತಾರೆ.

‘ನಾನು ಮಾಡಿದ ಕಾರ್ಯವನ್ನು ಎಲ್ಲೂ ಉಲ್ಲೇಖಿಸುವುದು ಬೇಡ ಎಂದು ಸುಮ್ಮನಿರುವೆ. ಬಹಳ ಪ್ರಯತ್ನಪಟ್ಟು ಗೋರಿಗಳನ್ನು ಸ್ಥಳಾಂತರಿಸಿ ರಾಜಾಸೀಟ್ ಉದ್ಯಾನವನ್ನು ನಿರ್ಮಿಸಲಾಯಿತು’ ಎಂದು ನೆನಪಿಸಿಕೊಳ್ಳುತ್ತಾರೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ತಿಂಗಳ್ವಕ್ಕಿ

ತಿಂಗಳ್ವಕ್ಕಿ (ನಾ). ಬೆಳುದಿಂಗಳನ್ನೇ ಆಹಾರವಾಗಿ ಉಪಯೋಗಿಸಿಕೊಳ್ಳುವುದೆಂದು ಭಾವಿಸಲಾದ ಒಂದು ಬಗೆಯ ಪಕ್ಷಿ; ಜೊನ್ನವಕ್ಕಿ; ಚಕೋರಪಕ್ಷಿ.

(ತಿಂಗಳ್ + ಪಕ್ಕಿ)

ಸೀತಾಪಹರಣವಾದ ಅನಂತರ ರಾಮಚಂದ್ರನ ಮನಸ್ಥಿತಿ, ಅವಳ ನೆನಹಿನಲ್ಲಿ ಹದಗೆಡುತ್ತದೆ. ಅವನಿಗೆ ನಿದ್ರೆ ಇನ್ನೆಲಿಯದು? ರಾಮಭದ್ರನಿಗೆ ನಿದ್ರೆ ಸತ್ತು ಹೋಗುತ್ತದೆ. ಅವನ ಉನ್ಮಾದಕ್ಕೆ ದಟ್ಟ ಬೆಳುದಿಂಗಳು ಮದಿರೆಯನ್ನು ಹೊಯ್ದಂತಾಗುತ್ತದೆ. ದೂರದ ಅಡವಿಯಲ್ಲಿ ಹುಲಿಯ ಅಬ್ಬರ ಕೇಳಿ ‘ಓ ಲಕ್ಷ್ಮಣಾ, ಅಸುರನು ಸತಿಯ ಕೊರಳು ಮುರಿಯುತ್ತಿದ್ದಾನೆ! ಅಯ್ಯೊ ಕೂಗುತ್ತಿದ್ದಾಳೆ! ಕೋಮಲೆ ಹೆದರದಿರು ಬಂದೆ’ ಎಂದು ಧನುಸ್ಸನ್ನು ಹುಡುಕುತ್ತಾನೆ. ಆಗ ಲಕ್ಷ್ಮಣನು ನಿಟ್ಟುಸಿರು ಬಿಡುತ್ತ ಅಳುತ್ತ ಅಣ್ಣನನ್ನು ಬಿಗಿದಪ್ಪಿ ಸಂತೈಸುತ್ತಾನೆ.

ಪ್ರಕೃತಿಯ ಸುಮಧುರ ಲೋಕದಲ್ಲಿ ತನ್ನ ಭಾವಲಹರಿಯನ್ನು ಮೇಳೈಸಿದಂತೆ- ಜೊನ್ನವಕ್ಕಿ ಜೊತೆಹಕ್ಕಿಯನ್ನು ಕೂಗಿ ಕರೆಯುವುದನ್ನು ರಾಮಚಂದ್ರನು ಆಲಿಸುತ್ತಾನೆ. ಕವಿಯು ಆ ಚಂದ್ರ ಸುಂದರ ರಾತ್ರಿಯ ಉಲಿತಕ್ಕೆ ಕಿವಿಯಾಗಿ ತನ್ಮಯತೆಯಿಂದ ‘ತಿಂಗಳ್ವಕ್ಕಿ’ ಎಂಬ ಅಚ್ಚ ಕನ್ನಡ ಪದ ಸೃಷ್ಟಿಸಿ ಚಕೋರ ಪಕ್ಷಿಯನ್ನು ಕರೆದಿದ್ದಾರೆ.

ಮಂಡ್ಯ ಮೈಸೂರು ಪ್ರದೇಶದಲ್ಲಿ ಈಗಲೂ ಚಂದ್ರನನ್ನು ‘ತಿಂಗಳು’ ಎಂದು ಜನಪದರು ಕರೆಯುವರು. ಅವನನ್ನು ಅಕ್ಕರೆಯಿಂದ ‘ತಿಂಗಳ ಮಾವ’ ಎಂದು ಮಕ್ಕಳಿಗೆ ತೋರಿಸಿ ಆಡಿಸಿ ಆನಂದಪಡುವರು. ತಿಂಗಳ ಇನ್ನೊಂದು ಅರ್ಥ ಚಂದ್ರನ ಬೆಳಕು.

ಪತ್ನಿ ಚಂದ್ರನಂತಹ ಶಾಂತ ಬೆಳಕು. ಅವಳು ‘ತಿಂಗಳ್ವಕ್ಕಿ’ಯಾಗಿ ಕರೆಯುತ್ತಿರುವಳು ಎಂಬುದು ಕಲ್ಪನಾ ಸೌಂದರ್ಯ. ಅದನ್ನು ಕೇಳಿ ರಾಮಚಂದ್ರನು ‘ಓ ಲಕ್ಷ್ಮಣಾ, ಕಲ್ಲೆದೆಯಾಗಿ ಏಕೆ ಸುಮ್ಮನಿರುವೆ ಓಡು’ ಎಂದು ಹೇಳಿ ಹಣೆ ಬಡಿದುಕೊಂಡು ಉರುಳಿ ಬೀಳುತ್ತಾನೆ. ಅಂತಹ ಮಧುರ ನೇಹ ಹೆಣೆದ ಮಹಾಕಾವ್ಯ ಒಂದು ಆಪ್ತ ಆನಂದ.

ಮತ್ತೆ ತಿಂಗಳ್ವಕ್ಕಿ,
ತೇನೆ, ತನ್ನೆಣೆವಕ್ಕಿಯಂ ಕರೆದು ಕೂಗುತ್ತೆ
ಜೊನ್ನಂಬರದೊಳಲೆವುದಂ ನಿಮಿರ್ದ್ದೆಳ್ದು: ‘ಓ
ಲಕ್ಷ್ಮಣಾ; ನಿನ್ನನಯ್ಯೋ ಕರೆವಳದೊ ದೇವಿ!
ಏಕೆ ಕಲ್ಲೆರ್ದೆಯಾಗಿ ಕೆಮ್ಮನಿಹೆ? ಓಡು ನಡೆ,
ಓಡುನಡೆ!’ ಎನುತೆ ಹಣೆಬಡಿದುಕೊಂಡುರುಳಿದಾ
ಅಗ್ರಜಗೆ, ಕೇಳ್, ಗಾಳಿಬೀಸುವ ಊರ್ಮಿಳೇಶನಾ
ಬಗೆಯ ಬಣ್ಣಿಸೆ ಬಾಯಿಹುದೆ ಹಾ ಕವಿಯ ಕಲ್ಪನೆಗೆ?’

ಬಿಲ್ದಿಂಗಳು

ಬಿಲ್ದಿಂಗಳು (ನಾ). ಬಿಲ್ಲಿನ ತಿಂಗಳು; ಬಿಲ್ಲಿನ ಚಂದ್ರ

(ಬಿಲ್ಲಿನ + ತಿಂಗಳು)

ಯುದ್ಧ ಸಂದರ್ಭದಲ್ಲಿ ಒಂದು ದಿನ ಸಂಜೆ ಕಳೆದು, ಚುಕ್ಕಿಗಳು ಕಿಕ್ಕಿರಿದು ರಾತ್ರಿ ಶೋಭಿಸುತ್ತಿರುತ್ತದೆ. ಆಗ ರಾಮಚಂದ್ರನು ಸೇನಾನಿ ನೀಲನೊಡನೆ ಆಪ್ತ ಸಮಾಲೋಚನೆಯಲ್ಲಿರುತ್ತಾನೆ. ಅವರ ಕಡೆಗೆ ಸೈನಿಕ ಸ್ನೇಹಿತರಾದ ವಹ್ನಿ ಮತ್ತು ರಂಹರು ಬರುತ್ತಿರುತ್ತಾರೆ. ಅವರೊಡನೆ ರಾಮನು ಅವರ ದಾಂಪತ್ಯದ ವೈಯಕ್ತಿಕ ವಿಚಾರ ಮಾತನಾಡಿ, ಅವರ ಧರ್ಮನಿಷ್ಠೆ ಕೇಳಿ ಸಂತೋಷಪಡುತ್ತಾನೆ. ಸೈನಿಕರು ಸೇನಾಪತಿಯ ಸನ್ನೆ ಅರಿತು ಕೈ ಮುಗಿದು ತೆರಳುತ್ತಾರೆ.

ಆಗಿನ ನಿಸರ್ಗವನ್ನು ಕುವೆಂಪು ಅವರು ಜೊನ್ನಿರುಳು ಬಿಲ್ದಿಂಗಳನ್ನು ಮುಡಿದು ಶೋಭಿಸುತ್ತಿತ್ತು ಎಂದು ಚಿತ್ರಿಸಿದ್ದಾರೆ. ಕವಿಯು ಸೃಜನಶೀಲ ಚಿಂತನೆಯಲ್ಲಿ ‘ಬಿಲ್ದಿಂಗಳು’ ಪದ ಸೃಷ್ಟಿಸಿ ವೃದ್ಧಿಯಾಗುವ ಬಾಲಚಂದ್ರನ ಸಹಜ ಲಕ್ಷಣವನ್ನು ಕಡೆದಿಟ್ಟಿದ್ದಾರೆ.

ಜೊನ್ನಿರುಳ್
ಭೂವ್ಯೋಮ ಸಾಗರಂಗಳನೊಂದು ಮಾಳ್ಪಂತೆ
ಬೆಸೆದಪ್ಪಿದುದು, ಮುಡಿದ ಬಿಲ್ದಿಂಗಳಿಂದೊಪ್ಪಿ.

ಕಣ್ಣೊಸಗೆ

ಕುವೆಂಪು ಅವರು ‘ದೀಪಾವಳಿ’ ಹಬ್ಬದಂದು ಮನೆಯನ್ನು ಸಿಂಗರಿಸಿ ಕವಿಗಳನ್ನು, ಋಷಿಗಳನ್ನು, ಮಹಾಪುರುಷರನ್ನು ಜಗದಖಿಲ ಮಹಿಮರನ್ನು ಕೃಪೆ ಮಾಡಿ ಬನ್ನಿ ಎಂದು ಆಹ್ವಾನಿಸಿದ್ದಾರೆ. ಅವರು ಮನೆಯಲ್ಲಿಯ ಹೂವಿನ ಅಲಂಕರಣವನ್ನು ಹೀಗೆ ಚಿತ್ರಿಸಿದ್ದಾರೆ:

‘ಬಣ್ಣ ಬಣ್ಣದ ಹೂವು ಕಣ್ಣೊಸಗೆಯಾಗಿದೆ;
ತರತರದ ಪರಿಮಳದ ಕಂಪು ಹೊಗೆ ತುಂಬಿದೆ.’ (ದೀಪಾವಳಿ ಕದರಡಕೆ)

ಕವಿಯು ಆ ಹೂಗಳು ಕಣ್ಣಿಗೆ ಶುಭ ಉತ್ಸವವಾಗಿ ಸಂತೋಷವನ್ನುಂಟು ಮಾಡಿರುವುದನ್ನು ‘ಕಣ್ಣೊಸಗೆ’ ಪದ ಸೃಷ್ಟಿಸಿ ಬಣ್ಣಿಸಿದ್ದಾರೆ.

ಕಥೆ
ಮೂಲ: ಅರ್ಚನಾ ಪೆನ್ಯುಲೀ
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್
ಅವರ
ಮರಳಿ ಮನೆಗೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಫಾಲ್ಗುಣ ಗೌಡ, ಅಚವೆ
ಅವರ
ಹಿತ್ತಿಲು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಟಾವು ಮಾಡಿದ ಮಾವಿನಕಾಯಿಗಳನ್ನು ಕ್ರೇಟ್‌ಗಳಿಗೆ ತುಂಬಿಸುತ್ತಿರುವುದು

ಅಹಾ! ಧಾರವಾಡ ಆಲ್ಫಾನ್ಸೊ

10ನೇ ಪುಟದಿಂದ...

ಧಾರವಾಡ ಭಾಗದ ಮಣ್ಣು, ನೀರು, ಹವೆ, ಗಾಳಿ, ವಾತಾವರಣ ಆಲ್ಫಾನ್ಸೊ ಹಣ್ಣಿನ ಸೊಗಡಿನ ಸೂತ್ರ.

ಅರೆ ಮಲೆನಾಡಿನ ಕಲಕೇರಿ, ತೇಗೂರು, ಕೆಲಗೇರಿ ತಡಸಿನಕೊಪ್ಪ ಸುತ್ತಲಿನ ಮಾವಿನತೋಟಗಳಲ್ಲಿ ಮಾವು ಕಟಾವು, ಸಾಗಣೆ, ಮಾರಾಟ ಬಿರುಸಾಗಿದೆ. ಹಾವೇರಿ, ಬೆಳಗಾವಿ ಜಿಲ್ಲೆಯ ಹಲವೆಡೆ ಈ ತಳಿಯ ಮಾವು ಬೆಳೆಯಲಾಗುತ್ತದೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು 8,400 ಹೆಕ್ಟೇರ್ ಪ್ರದೇಶದಲ್ಲಿ ಈ ತಳಿಯ ಮಾವಿನಮರಗಳು ಇವೆ. ಈ ವರ್ಷ ಸುಮಾರು 16 ಸಾವಿರ ಟನ್ ಫಸಲನ್ನು ನಿರೀಕ್ಷಿಸಲಾಗಿದೆ.

'ಮಹಾರಾಷ್ಟ್ರದ ರತ್ನಗಿರಿ ಭಾಗ ಮತ್ತು ಕರ್ನಾಟಕ ಧಾರವಾಡ ಭಾಗದ ಆಲ್ಫಾನ್ಸೊ ಮಾವಿನಹಣ್ಣು ಅತ್ಯಂತ ರುಚಿಕರ ಎಂದು ದೇಶದಲ್ಲಿ ಖ್ಯಾತಿ ಪಡೆದಿವೆ' ಎಂದು ಧಾರವಾಡ ಜಿಲ್ಲೆಯ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕಾಶಿನಾಥ ಭದ್ರಣ್ಣವರ್ ಹೇಳುತ್ತಾರೆ.

ಮಾವು ಬೆಳೆಗಾರರ ಸಂಘ

ಧಾರವಾಡ ಜಿಲ್ಲೆಯ ಬೆಳೆಗಾರರು 'ಮಾವು ಬೆಳೆಗಾರರ ಸಂಘ' ರಚಿಸಿಕೊಂಡಿದ್ದಾರೆ. ಮಾವಿನತೋಟದಿಂದ ಆಲ್ಫಾನ್ಸೊ ಮಾವಿನಹಣ್ಣನ್ನು ತಾವೇ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುತ್ತಾರೆ. ಸಂಘದಲ್ಲಿ ಸುಮಾರು 300 ಬೆಳೆಗಾರರು ಸದಸ್ಯರಾಗಿದ್ದಾರೆ. ರಾಸಾಯನಿಕ ಬಳಸದೆ ಹಣ್ಣು ಮಾಡಿದ ಉತ್ತಮ ಗುಣಮಟ್ಟದ ಸ್ವಾದಿಷ್ಟ ಹಣ್ಣುಗಳನ್ನು ಗ್ರಾಹಕರಿಗೆ ತಲುಪಿಸುವುದು ಸಂಘದ ಉದ್ದೇಶ. ಮಾವು ಮೇಳ ಆಯೋಜಿಸಿ ಗ್ರಾಹಕರನ್ನು ನೇರವಾಗಿ ತಲುಪುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಈ ಹಣ್ಣು ಅಮೆರಿಕ, ಇಂಗ್ಲೆಂಡ್, ದುಬೈಗೂ ರವಾನೆಯಾಗುತ್ತದೆ.

'ಧಾರವಾಡ ಭಾಗದಲ್ಲಿ ಉಷ್ಣಾಂಶ 30 ರಿಂದ 36 ಡಿಗ್ರಿ ಸೆಲ್ಸಿಯಸ್‌ವರೆಗೆ ಇರುತ್ತದೆ. ಆರ್ದ್ರತೆ ಶೇಕಡ 60 ರಿಂದ 70 ಇರುತ್ತದೆ. ಈ ಭಾಗದ ಅರೆ ಮಲೆನಾಡು ಸೀಮೆಯ ಮಣ್ಣು, ನೀರು, ಹವೆ ಆಲ್ಫಾನ್ಸೊ ತಳಿ ಬೆಳೆಯಲು ಪೂರಕವಾಗಿದೆ' ಎಂದು ಧಾರವಾಡದ ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಪ್ರಾಧ್ಯಾಪಕ ಜ್ಞಾನೇಶ್ವರ ಬಿ.ಗೋಪಾಲಿ ಹೇಳುತ್ತಾರೆ.

'ಬಹುತೇಕ ಸಾವಯವ ಪದ್ಧತಿಯಲ್ಲೇ ಮಾವು ಬೆಳೆಯುತ್ತೇವೆ. ಸಾವಯವ ವಿಧಾನದಲ್ಲೇ ಹಣ್ಣು ಮಾಡಿ ಮಾರಾಟ ಮಾಡುತ್ತೇವೆ. ಆಲ್ಫಾನ್ಸೊ ಹಣ್ಣಿನ ಎರಡೂವರೆಯಿಂದ ಮೂರು ಕೆ.ಜಿ ಬಾಕ್ಸ್‌ಗೆ ₹300 ರಿಂದ 500 ರವರೆಗೆ ದರ ಇದೆ. ಒಂದು ಬಾಕ್ಸ್‌ನಲ್ಲಿ 12 ರಿಂದ 14 ಹಣ್ಣುಗಳು ಇರುತ್ತವೆ' ಎಂದು ಕಲಕೇರಿಯ ಮಾವು ಬೆಳೆಗಾರ ಪ್ರಮೋದ್ ಗಾಂವಕರ ಹೇಳುತ್ತಾರೆ.

• ಎಂ.ಎಸ್.ಪೂಜಾರ

ಮೋಜಿನ ಇಂಗ್ಲಿಷ್

ಕೊನೆಗೆ 'LE' ಅಕ್ಷರಗಳಿಂದ ಕೊನೆಗೊಳ್ಳುವ 10 ಪದಗಳನ್ನು ಪಟ್ಟಿ ಮಾಡಿ

1.______LE 6.______LE
2.______LE 7.______LE
3.______LE 8.______LE
4.______LE 9.______LE
5.______LE 10.______LE

ಪೇಚಿನ ಪ್ರಶ್ನೆ

ಎರಡು ಬೆಸಸಂಖ್ಯೆಗಳ ಗುಣಲಬ್ಧ 7 ಆದರೆ ಆ ಬೆಸಸಂಖ್ಯೆಗಳು ಯಾವುವು?

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಆಯುಷ್ ಕುಂದರಗಿ
ಧಾರವಾಡ

ಪೂರ್ವಿ ಜಿ.
ಹಾವೇರಿ

ಚೈತನ್ಯ ಕುಮಾರ್
ಬೆಂಗಳೂರು ಉತ್ತರ

ಶ್ರಾವ್ಯ ಡಿ.ಪಿ.
ಮಳವಳ್ಳಿ

ಧನ್ಯತಾ
ಚಳ್ಳಕೆರೆ

ಸನೀಕ್ಷ ವೈ.ಎಸ್.
ಚಿಕ್ಕಬಳ್ಳಾಪುರ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಎರಡಕ್ಷರ ಆರಿಸಿಕೊಂಡು ಒಂದು ಪದ ರಚಿಸಿ. ಆ ಪದವನ್ನು ಕೆಳಗೆ ಕೊಟ್ಟಿರುವ ಅನುಸ್ವಾರದ ಆಚೀಚೆ ಹಿಗ್ಗಿಸಿ ತುಂಬಿದರೆ ಅನುಸ್ವಾರಯುಕ್ತ ಇನ್ನೊಂದು ಪದ ರಚನೆಯಾಗುತ್ತದೆ. ಉದಾ: ಮ,ಗ ಅಕ್ಷರದ ಮಗ ಪದವನ್ನು ಅನುಸ್ವಾರದ ಆಚೀಚೆ ತುಂಬಿದರೆ ಮಂಗ ಪದ ಆಗುವುದು.

ಕ	ಉ	ದ	ಡಿ	ಬ
ದಿ	ಮ	ಕ	ಗ	ಕ
ನ	ಡ	ಬ	ಡಿ	ಡಿ
ಪು	ದ	ಡಿ	ತೆ	ಗು

1		ಂ	
2		ಂ	
3		ಂ	
4		ಂ	
5		ಂ	
6		ಂ	
7		ಂ	
8		ಂ	
9		ಂ	
10		ಂ	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

1. ಜೀವನ ಗಣಿತ

ಜೀವನ + ಪ್ರೀತಿ = ಸಂತೋಷ
ಜೀವನ - ಪ್ರೀತಿ = ದುಃಖ
2 ಜೀವನ = ಸಂತೋಷ + ದುಃಖ

$$2 \text{ ಜೀವನ} = \frac{\text{ಸಂತೋಷ} + \text{ದುಃಖ}}{2}$$

ಆದ್ದರಿಂದ ಜೀವನ = 1/2 ಸಂತೋಷ + 1/2 ದುಃಖ

2.ಲೆಕ್ಕ ಮಾಡು–ಮೋಜು ನೋಡು

ಕೆಳಗಿನ ಗುಣಕಾರ ಮಾಡು ಇಂದಿನ ದಿನಾಂಕ ನೋಡು

61336X9 =__________

ತಿಳಿ–ಸಾರು

ನವಧಾನ್ಯಗಳು

1.ಗೋದಿ 2.ಭತ್ತ 3.ತೊಗರಿ 4.ಕಡಲೆ 5.ಹೆಸರು 6.ಅವರೆ 7.ಎಳ್ಳು 8.ಉದ್ದು 9.ಹುರುಳಿ

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ

ಅಕ್ಷರ ಪಟ್ಟಿ			
ಉ	ಜೋ	ಚಿ	ಖ
ಜ	ಉ	ಸ	ದ
ಅ	ಕ	ಉಂ	ಬಿ

1

	ಗು	ರು
	ಗು	ರು

2

	ಮ	ರ
	ಮ	ರ

3

	ವ	ಡೆ
	ವ	ಡೆ

4

	ಪಾ	ನ
	ಪಾ	ನ

5

	ಡಾ	ಡಿ
	ಡಾ	ಡಿ

6

	ಚಿ	ತ
	ಚಿ	ತ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಕೊರಡು–ಹೊರಡು 2.ಹಗಲು–ತೊಗಲು 3.ನೇಗಿಲು–ಬಾಗಿಲು 4.ಕತ್ತಲು–ಸುತ್ತಲು 5.ಅರಿವು–ಹರಿವು 6. ಪುಸ್ತಕ–ಮಸ್ತಕ

ಮೋಜಿನ ಇಂಗ್ಲಿಷ್: 1.SEVEN, 2.ELEVEN, 3.TWELVE 4.SEPTEMBER 5.DECEMBER 6.REMEMBER 7.NEVER 8.REFER

ಜಾಣಪದ ಆಟ: 1.ಭಗವತಿ 2.ನೇತ್ರಾವತಿ 3.ಗಂಗಾವತಿ 4.ಭದ್ರಾವತಿ 5.ಕಲಾವತಿ 6.ಪ್ರಭಾವತಿ 7.ಗುಣವತಿ 8.ಶರಾವತಿ

ಆಲೋಚನೆಗೆ ಆಹಾರ: PONDICHERRY

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಡಣ್ಣ ಚಿಕ್ಕ ಕೀಶ್ರಷ್ಣ ಕಥೆಯ — ಕೆಂಪಾದ ಬಿಳಿ ಬೆಕ್ಕು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಬೆಕ್ಕಿನ ಜೊತೆ ಆಟವಾಡುತ್ತಿದ್ದ. ಆಡುತ್ತಾ ಬೆಕ್ಕಿನತ್ತ ಒಂದು ಕೆಂಪು ಬಣ್ಣದ ನೂಲಿನ ಚೆಂಡು ಉರುಳಿಸಿದ ಗುಂಡ. ಬೆಕ್ಕು ನೂಲಿನ ಎಳೆಯನ್ನು ಬಾಯಲ್ಲಿ ಹಿಡಿದು ಉರುಳತೊಡಗಿತು. ಹೀಗೆ ಉರುಳುತ್ತಾ ಉರುಳುತ್ತಾ ನೂಲು ಸಂಪೂರ್ಣವಾಗಿ ಬೆಕ್ಕಿನ ಮೈ ಸುತ್ತಾ ಸುತ್ತಿತು. ಗುಂಡ ನೋಡ ನೋಡುತ್ತಿದ್ದಂತೆಯೇ ಬಿಳಿ ಬೆಕ್ಕು ಕೆಂಪಾಯಿತು!



"We know that YOUR PU is only ONCE in YOUR LIFE TIME"
An exclusive institute for the ASPIRANTS of COMPETITIVE EXAMS at PU level
CONSORTIUM OF EXPERTS IN THE TEACHING & TRAINING

Prof Shriram — Masters from IIT Roorki, Senior Physics Faculty, Expert in JEE Advanced & NEET, 24 yrs of experience
Prof Ranganatha R — Senior Maths Faculty, Expert in JEE Advanced. 21 yrs of experience
Prof Prathap Babu DM — Senior Chemistry Faculty, Expert in JEE Advanced & NEET, 18 yrs of experience
Prof S N Bhat — Senior Physics Faculty, Expert in JEE & NEET, 20 yrs of experience
Prof Anil Susarapu — Senior Zoology Faculty, Expert in NEET - Medical, 14 yrs experience
Prof Suryawamshi Vijaykumar — Senior Botany Faculty, Expert in NEET - Medical, 15 yrs of experience
Prof Deekshitha — Senior Chemistry Faculty, Expert in JEE & NEET, 9 yrs of experience
Prof Jayendra Bandyan — Senior Computer Science Resource person and Academician. 25 yrs of experience

Integrated with Multiple Exams
➢ NEET- Medical - Integrated with K-CET/ ICAR/CUET/ AIPVT
➢ JEE - IIT Advanced and mains - Integrated with K-CET/ ICAR/ IISER/ IIIT/ NIT/ NDA/ CUET/ IIST/ VIT/ MET/ HSc/ ISI
➢ Exclusive K-CET with JEE Mains - Integrated with CUET/ IISc / ICAR / AIFSET / Olympiad / Vet Sc/ B.Sc Ag / Engg
➢ CA - Commerce - Integrated with ICO / CMA/ CLAT / GK & EPT

Courses Offered: SCIENCE - PCMB | PCMC
COMMERCE - EBAC
LANGUAGES - English | Kannada | Hindi | Sanskrlth

Kashinath M K — Trustee
Subashchandra Shetty — Chairman
Prajwal Rai — Trustee

Fees Concession On Merit
Starts from 95% + for State Board Students
90% + for CBSE ICSE IGCSE Students

Under the leadership of Mr Gangadhara E Mandagalale
Academic Director & Head of Counselling Cell

NEET / JEE long term batchs start from June-2024
With 75% scholarship on those Who score 450+ marks in NEET- 2024

VIDVATH Education Foundation — Ennobling Minds, Inspiring the Youth
VIDVATH Residential & Semi Residential PU College
ವಿದ್ವತ್ ಪಿಯು ಕಾಲೇಜು
FOUNDATION to DESTINATION
Shakthinagara, Kuvettu Village, Guruvayanakere Post, Belthangady Taluk, D.K. Dist Karnataka – 574217 (Dharmasthala - Moodubidire road)
7618718791; 8050902319; 7618718794 ; 7618718795
www.vidvath.org
Vidvath Achievers Destination

ಚೆಸ್: ಅರ್ಜುನ್ ಇರಿಗೇಶಿಗೆ ಎರಡನೇ ಸ್ಥಾನ

ಮಾಲ್ಮೊ (ಸ್ವೀಡನ್): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ, ಶುಕ್ರವಾರ ಮುಕ್ತಾಯಗೊಂಡ ಟೇಪೆ ಸಿಗೆಮನ್ ಅಂಡ್ ಕೊ ಚೆಸ್ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದರು. ಅಗ್ರಸ್ಥಾನ ಹಂಚಿಕೊಂಡ ಮೂವರು ಆಟಗಾರರ ನಡುವೆ ಟೈಬ್ರೇಕರ್ ಪಂದ್ಯಗಳು ನಡೆದು, ಅಂತಿಮವಾಗಿ ಉಜ್ಬೇಕಿಸ್ತಾನದ ಆಟಗಾರ ನಾಡಿರ್ಬೆಕ್ ಅಬ್ದುಸತ್ತಾರೋವ್ ಚಾಂಪಿಯನ್ ಆದರು.

ಏಳನೇ ಸುತ್ತಿನ ನಂತರ ರಷ್ಯಾದ ಪೀಟರ್ ಸ್ವಿಡ್ಲರ್, ಅರ್ಜುನ್ ಇರಿಗೇಶಿ ಮತ್ತು ಅಬ್ದುಸತ್ತಾರೋವ್ ತಲಾ 4.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದರು. ವಿಜೇತರನ್ನು ನಿರ್ಧರಿಸಲು ಮೂವರ ನಡುವೆ ಟೈಬ್ರೇಕ್ ಪಂದ್ಯಗಳು ನಡೆದವು. ಟೈಬ್ರೇಕರ್‌ನಲ್ಲಿ ಸ್ವಿಡ್ಲರ್ ಎರಡೂ ಪಂದ್ಯಗಳಲ್ಲಿ (ಅರ್ಜುನ್ ಮತ್ತು ಅಬ್ದುಸತ್ತಾರೋವ್ ವಿರುದ್ಧ) ಸೋಲನುಭವಿಸಿದರು. ಅರ್ಜುನ್– ಅಬ್ದುಸತ್ತಾರೋವ್ ನಡುವಣ ಪಂದ್ಯ ಡ್ರಾ ಆಯಿತು.

ಫೈನಲ್ ಟೈಬ್ರೇಕ್ ಆಡಿದ ಅಬ್ದುಸತ್ತಾರೋವ್ 1.5–0.5 ರಿಂದ ಅರ್ಜುನ್ ಅವರನ್ನು ಮಣಿಸಿದರು. ಆದರೆ ಬಹುಮಾನ ಹಣವನ್ನು ಮೂವರಿಗೆ ಸಮಾನವಾಗಿ ಹಂಚಲಾಯಿತು.

ಇದಕ್ಕೆ ಮೊದಲು ನಡೆದ ಏಳನೇ ಸುತ್ತಿನ ಪಂದ್ಯಗಳಲ್ಲಿ ಅಬ್ದುಸತ್ತಾರೋವ್, ಫ್ರಾನ್ಸ್‌ನ ಮಾರ್ಕ್ ಆಂಡ್ರಿಯಾ ಮೌರಿಝಿ (1.5) ಅವರನ್ನು ಸೋಲಿಸಿದರೆ, ಸ್ವಿಡ್ಲರ್ ಮತ್ತು ಜರ್ಮನಿಯ ವಿನ್ಸೆಂಟ್ ಕೀಮರ್ (3.5) ನಡುವಣ ಪಂದ್ಯ 'ಡ್ರಾ' ಆಯಿತು. ಇರಿಗೇಶಿ ಮತ್ತು ಆತಿಥೇಯ ಸ್ವೀಡನ್‌ನ ನಿಲ್ಸ್ ಗ್ರಾಂಡೇನಿಯಸ್ (2) ನಡುವಣ ಪಂದ್ಯವೂ ಅದೇ ಹಾದಿ ಹಿಡಿಯಿತು. ಕಣದಲ್ಲಿದ್ದ ಏಕೈಕ ಆಟಗಾರ್ತಿ, ಚೀನಾದ ಜು ವೆನ್‌ಜುನ್ (3.5) ಅವರು ಉಕ್ರೇನಿನ ಆ್ಯಂಟನ್ ಕೊರೊಬೊವ್ (4) ವಿರುದ್ಧ ಜಯಗಳಿಸಿದರು. ವಿವಿಧ ದೇಶಗಳ 8 ಆಟಗಾರರು ಟೂರ್ನಿಯಲ್ಲಿ ಭಾಗವಹಿಸಿದ್ದರು.

ಫಿಫಾ ವಿಶ್ವಕಪ್ ಅರ್ಹತಾ ಸುತ್ತು: ಸಂಭಾವ್ಯರ ಪಟ್ಟಿಯಲ್ಲಿ 26 ಮಂದಿ

ಸುನಿಲ್ ಚೆಟ್ರಿ

